ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಭಾನುವಾರ, 15 ಮಾರ್ಚ್ 2026

ಸಂಪುಟ 47, ಸಂಚಿಕೆ 346, ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital



ಬಿಜೆಪಿಯಿಂದ ಮಾದಕದ್ರವ್ಯ ಮುಕ್ತ ಪಂಜಾಬ್ ಗುರಿ: ಅಮಿತ್ ಶಾ

೦೨

ಮೊಜ್ತಬಾ ಮಾಹಿತಿ ನೀಡಿ, 92 ಕೋಟಿ ರೂ. ಪಡೆದುಕೊಳ್ಳಿ!

೦೨



ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಶ್ರವಣ

ದಿನದ ಮಾತು

ಆರೋಗ್ಯಕರ ಶರೀರದಲ್ಲಿ ಆರೋಗ್ಯಕರ ಮನಸ್ಸಿರಲೆಂಬುದೇ ನಮ್ಮ ಪ್ರತಿದಿನದ ಪ್ರಾರ್ಥನೆಯಾಗಬೇಕು.

▲ಸುಭಾಷಿತ

ಗ್ಯಾಸ್ ಟ್ರಬಲ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಯುಗಾದಿ, ರಂಜಾನ್ ಹಿನ್ನೆಲೆ: 2 ಸಾವಿರ ಹೆಚ್ಚುವರಿ ಬಸ್

• **ಬೆಂಗಳೂರು:** ಯುಗಾದಿ ಹಾಗೂ ರಂಜಾನ್ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ 2 ಸಾವಿರ ಹೆಚ್ಚುವರಿ ಕೆಎಸ್ಆರ್‌ಟಿಸಿ ವಾಹನಗಳ ವಿಶೇಷ ಸಾರಿಗೆ ವ್ಯವಸ್ಥೆ ಮಾಡಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಮಾ.18, 19 ಹಾಗೂ 20ರಂದು ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ ಹೆಚ್ಚುವರಿ ಬಸ್ ಹಾಗೂ ರಾಜ್ಯವಲ್ಲದೆ ಹೊರ ರಾಜ್ಯಗಳ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಮಾ.22ರಂದು ವಿಶೇಷ ಬಸ್‌ಗಳು ಸಂಚರಿಸಲಿವೆ. ➡ಪುಟ ೪

ಭಾರತ ನಮ್ಮ ಆಪ್ತ ರಾಷ್ಟ್ರ, ಅದಕ್ಕೇ ಭಾರತದ ಹಡಗುಗಳಿಗೆ ಅನುಮತಿ: ಇರಾನ್ ರಾಯಭಾರಿ

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಬಿಕ್ಕಟ್ಟಿನ ನಡುವೆಯೂ, ಭಾರತಕ್ಕೆ ಹೋಗುವ ಹಡಗುಗಳಿಗೆ ಇರಾನ್ ಹಾರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತ ಮಾರ್ಗವನ್ನು ಒದಗಿಸಲಿದೆ ಎಂದು ಭಾರತಕ್ಕೆ ಇರಾನ್ ರಾಯಭಾರಿಯಾಗಿರುವ ಮೊಹಮ್ಮದ್ ಫಥಾಲಿ ಹೇಳಿದ್ದಾರೆ.

ಅವರು ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಎರಡೂ ದೇಶಗಳ ನಡುವಿನ ದೀರ್ಘಕಾಲದ ಸ್ನೇಹ ಮತ್ತು ಹಂಚಿಕೆಯ ಹಿತಾಸಕ್ತಿಗಳನ್ನು ಉಲ್ಲೇಖಿಸಿದರು.ಜಾಗತಿಕ ಇಂಧನ ವ್ಯಾಪಾರಕ್ಕೆ ನಿರ್ಣಾಯಕ ಮಾರ್ಗಗಳಲ್ಲಿ ಒಂದಾದ ಹಾರ್ಮೋಜ್ ಜಲಸಂಧಿಯ ಮೂಲಕ ಭಾರತಕ್ಕೆ ಹೋಗುವ ಹಡಗುಗಳಿಗೆ ಸುರಕ್ಷಿತ ಸಾಗಣೆಯನ್ನು ಇರಾನ್ ಅನುಮತಿಸುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಹೌದು. ಏಕೆಂದರೆ ಭಾರತ ಮತ್ತು ನಾವು ಉತ್ತಮ ಸ್ನೇಹಿತರು. ಎರಡು ಅಥವಾ ಮೂರು ಗಂಟೆಗಳ ನಂತರ ಭವಿಷ್ಯದಲ್ಲಿ ಈ ಸ್ನೇಹವನ್ನು ನೀವು ನೋಡಬಹುದು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ನಾವು ಅದನ್ನು ನಂಬುತ್ತೇವೆ. ಇರಾನ್ ಮತ್ತು ಭಾರತ ಸ್ನೇಹಿತರು ಎಂದು ನಾವು ನಂಬುತ್ತೇವೆ. ನಮಗೆ ಸಾಮಾನ್ಯ ಹಿತಾಸಕ್ತಿಗಳಿವೆ ಎಂದರು.

'ಭಾರತದ ಜನರ ನೋವು ನಮ್ಮ ನೋವು ಮತ್ತು ಪ್ರತಿಯಾಗಿ ಭಾರತ ಸರ್ಕಾರ ನಮಗೆ ಸಹಾಯ ಮಾಡುತ್ತದೆ ಮತ್ತು ನಾವು ಭಾರತ ಸರ್ಕಾರಕ್ಕೆ ಸಹಾಯ ಮಾಡಬೇಕು. ನಮಗೆ ಸಾಮಾನ್ಯ ಹಿತಾಸಕ್ತಿ ಇದೆ . ಅಲ್ಲಿನ ಸಂಘರ್ಷದ ನಡುವೆ ಭಾರತ ಸರಕಾರದ ಕಾರ್ಯಾಚರಣೆಯನ್ನು ಸುಗಮಗೊಳಿಸಲು ನೆರವಾಗುವಂತೆಯೂ ಇರಾನ್ ತನ್ನ ರಾಯಭಾರ ಕಚೇರಿಗೆ ಸೂಚಿಸಿದೆ ಎಂದರು.

ಜನಸಾಮಾನ್ಯರ ರಕ್ಷಣೆಗೆ ಕೇಂದ್ರ ಬದ್ಧ: ಮೋದಿ

• ಪುಟ ೨

ಐಎಸ್ಐ ಬೆಂಬಲಿತ ಶಸ್ತ್ರಾಸ್ತ್ರ ಜಾಲ ಪತ್ತೆ, ಇಬ್ಬರ ಸೆರೆ

• ಪುಟ ೨

ಯುಕೆಪಿ ಹಂತ 3ರ ಭೂಪರಿಹಾರ ಒಂದೇ ಬಾರಿಗೆ ಪಾವತಿ
ಪೂರಕ ಬಜೆಟ್‌ನಲ್ಲಿ ಮತ್ತೆ 5 ಸಾವಿರ ಕೋಟಿ: ಮುಖ್ಯಮಂತ್ರಿ

ಒಂದೇ ಬಾರಿ ಪರಿಹಾರ

• **ಬಾಗಲಕೋಟೆ:** ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಭೂಸ್ವಾಧೀನವಾಗುವ ರೈತರಿಗೆ ಪರಿಹಾರ ನೀಡಲು ಈ ಬಾರಿಯ ಬಜೆಟ್‌ದಲ್ಲಿ 3 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದು ಬರುವ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಮತ್ತೆ 5 ಸಾವಿರ ಕೋಟಿ ರೂ.ಗಳನ್ನು ರೈತರಿಗೆ ಪರಿಹಾರ ನೀಡಲು ತೆಗೆದಿಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಯುಕೆಪಿ ಮೂರನೇ ಹಂತದ ಭೂಸ್ವಾಧೀನವಾಗುವ ರೈತರಿಗೆ ಹಣ ಇಟ್ಟಿಲ್ಲ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿರುವುದು ಸತ್ಯಕ್ಕೆ ದೂರವಾಗಿದೆ. 8 ಗ್ರಾಮಗಳ 951 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ರೈತರಿಗೆ 446 ಕೋಟಿ ರೂ. ಪರಿಹಾರವನ್ನು ಈಗ ನೀಡಲಾಗುತ್ತಿದೆ ಎಂದರು.

ಬಿಜೆಪಿಯವರು ತಮ್ಮ ಅವಧಿಯಲ್ಲಿ ಯುಕೆಪಿ ಯೋಜನೆಗೆ ಪರಿಹಾರ ನೀಡಲು ಆಸಕ್ತಿ ವಹಿಸಲಿಲ್ಲ. ಆದ್ದರಿಂದ ರೈತರು ಭೂಮಿ ನೀಡಲು ಮುಂದೆ ಬರಲಿಲ್ಲ. ಈಗ ರೈತರಿಗೆ ಭೂ ಪರಿಹಾರವನ್ನು ಒಂದೇ ಬಾರಿಗೆ ನೀಡಲು ಕಾಂಗ್ರೆಸ್ ಸರ್ಕಾರ ನಿರ್ಣಯಿಸಿದೆ. ಸ್ವಯಂಪ್ರೇರಣೆಯಿಂದ ಭೂಮಿ ನೀಡುವ ರೈತರಿಗೆ ನೀರಾವರಿ ಜಮೀನಿಗೆ 40 ಲಕ್ಷ ರೂ, ಹಾಗೂ ಖುಷ್ಕಿ ಜಮೀನಿಗೆ 30 ಲಕ್ಷ ರೂ. ನೀಡಲು ಸರ್ಕಾರ ನಿರ್ಣಯಿಸಿದೆ. ಆದರೆ, ಈ ಬಗ್ಗೆ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು.

ಅನುಮತಿ ದೊರಕಿಲ್ಲ: ಕಾಂಗ್ರೆಸ್ ಸರ್ಕಾರ ಎಂದಿಗೂ ನುಡಿದಂತೆ ನಡೆಯುತ್ತದೆ. ಕೇಂದ್ರಕ್ಕೆ ಹಲವು ಮನವಿಗಳ ನಂತರವೂ ಯುಕೆಪಿ, ಮಹದಾಯಿ ಸೇರಿದಂತೆ ಹಲವು ನೀರಾವರಿ ಯೋಜನೆಗೆ ಬೇಕಾದ ಅಗತ್ಯ ಅನುಮತಿಗಳನ್ನು ಕೇಂದ್ರ ಸರ್ಕಾರ ಇದುವರೆಗೆ ನೀಡಿಲ್ಲ. ಆದರೆ, ನಮ್ಮ ಸರ್ಕಾರ ಉತ್ತರ ಕರ್ನಾಟಕದ ಜನತೆಗೆ ನ್ಯಾಯ ಒದಗಿಸಲು ಪ್ರಯತ್ನಿಸಲಾಗುತ್ತಿದೆ. ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಸರ್ಕಾರ ಬದ್ಧವಾಗಿದೆ ಎಂದರು.



ಉಪಚುನಾವಣೆ ಗಿಮಿಕ್ ಅಲ್ಲ

ಬಾಗಲಕೋಟೆ ಸರ್ಕಾರಿ ಮೆಡಿಕಲ್ ಕಾಲೇಜಿನ ಶಂಕುಸ್ಥಾಪನೆಯಾಗಲು ಎಚ್.ವೈ.ಮೇಟಿಯವರೇ ಕಾರಣ. ಮೇಟಿಯವರ ಕನಸು ಇಂದು ನನಸಾಗಿದೆ. ಈ ಭಾಗದ ಜನರಿಗೆ ಆರೋಗ್ಯ ಸೇವೆ ನೀಡಲು ಅವರು ಕಾಳಜಿ ತೆಗೆದುಕೊಂಡಿದ್ದರು. ಅವರ ಆಶಯದಂತೆ ಇವತ್ತು ಮೆಡಿಕಲ್ ಕಾಲೇಜ್ ಆರಂಭವಾಗುತ್ತಿದೆ. ಇದು ಉಪ ಚುನಾವಣೆಯ ಕಾರಣಕ್ಕಾಗಿ ಅಲ್ಲ ಎಂದು ಸ್ಪಷ್ಟಪಡಿಸಿದರು. ಪ್ರತಿ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಹಾಗೂ ಟ್ರಾಮಾ ಸೆಂಟರ್ ಸ್ಥಾಪನೆಯ ಉದ್ದೇಶವಿದ್ದು, ಈಗಾಗಲೇ ಸುಮಾರು 25 ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ವರ್ಷ ಇಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಬಿಜೆಪಿ ಆರೋಪ ಸುಳ್ಳು

ಗ್ಯಾರಂಟಿ ಯೋಜನೆಗಳಿಂದಾಗಿ ಸರ್ಕಾರದಲ್ಲಿ ಅಭಿವೃದ್ಧಿಗೆ ಹಣವಿಲ್ಲ ಎಂದು ಬಿಜೆಪಿಯವರು ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಸತ್ಯಕ್ಕೆ ದೂರವಾದ ಮಾತು. ನಮ್ಮ ಸರ್ಕಾರ ಗ್ಯಾರಂಟಿ ಹಾಗೂ ಅಭಿವೃದ್ಧಿಯನ್ನು ಸಮಾನ ಆದ್ಯತೆ ನೀಡುತ್ತಿದ್ದೇವೆ. ಪ್ರತಿ ವರ್ಷ ಗ್ಯಾರಂಟಿಗಳಿಗೆ ಸುಮಾರು 50 ಸಾವಿರ ಕೋಟಿ ವೆಚ್ಚ ಮಾಡಲಾ ಗುತ್ತಿದ್ದು, ಇದುವರೆಗೆ 1.22 ಲಕ್ಷ ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಬಿಜೆಪಿಯ ವರು ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ, ಬಾಗಲಕೋಟೆ ಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಲಿಲ್ಲ. ಜಾತಿ ಧರ್ಮಗಳ ಮಧ್ಯೆ ವೈಮನಸ್ಸು ತರುವುದು ಅವರ ದುರಾಲೋಚನೆಯಾಗಿದೆ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವ ಎಂ.ಬಿ.ಪಾಟೀಲ, ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶರಣ ಪ್ರಕಾಶ ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ. ನಂಜಯ್ಯನಮಠ, ಗ್ಯಾರಂಟಿ ಯೋಜನೆ ಅಧ್ಯಕ್ಷ ಅನಿಲ ದಡ್ಡಿ ಇದ್ದರು.

ಇರಾನ್‌ನ ಕುದ್ಸ್ ಮೆರವಣಿಗೆ ವೇಳೆ ಘಟನೆ

ಟೆಹ್ರಾನ್ ಸ್ಫೋಟ ಹೆಚ್ಚಿದ ಉದ್ವಿಗ್ನತೆ

• **ಟೆಹ್ರಾನ್:** ಇರಾನ್ ಮತ್ತು ಅಮೆರಿಕ-ಇಸ್ರೇಲ್ ಮೈತ್ರಿಕೂಟದ ನಡುವಿನ ಸಂಘರ್ಷವು ಎರಡನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಶುಕ್ರವಾರ ಇರಾನ್ ರಾಜಧಾನಿ ಟೆಹ್ರಾನ್‌ನ ಕೇಂದ್ರಭಾಗದಲ್ಲಿ ಭೀಕರ ಸ್ಫೋಟ ಸಂಭವಿಸಿದೆ. ಸಾವಿರಾರು ಜನರು ಜಮಾಯಿಸಿದ್ದ ಫಿರ್ದೋಸಿ ಚೌಕದ ವಾರ್ಷಿಕ ಕುದ್ಸ್ ದಿನದ ಮೆರವಣಿಗೆ ವೇಳೆ ಈ ಸ್ಫೋಟ ಸಂಭವಿಸಿದೆ ಎಂದು ತಿಳಿದುಬಂದಿದೆ.

ಫಿರ್ದೋಸಿ ಚೌಕದ ಮೇಲೆ ದಾಳಿ: ದಾಳಿಗೂ ಮುನ್ನ ಇಸ್ರೇಲ್ ತನ್ನ ಫಾರ್ಸಿ ಸಾಮಾಜಿಕ ಮಾಧ್ಯಮ ಖಾತೆಯ ಮೂಲಕ ಎಚ್ಚರಿಕೆ ನೀಡಿತ್ತು. ಮೆರವಣಿಗೆಯಲ್ಲಿ ಇರಾನ್ ನ್ಯಾಯಾಂಗ ಮುಖ್ಯಸ್ಥ ಗುಲಾಮ್ ಹೊಸೈನ್ ಮೊಹ್ಸೇನಿ ಎಜೆ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಸ್ಫೋಟದ ನಂತರ ಈ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿದ್ದು ಕಂಡುಬಂದರೂ, ಯಾವುದೇ ಪ್ರಾಣ ಹಾನಿಯ ಬಗ್ಗೆ ತಕ್ಷಣದ ಮಾಹಿತಿ ಲಭ್ಯವಾಗಿಲ್ಲ. ➡ಪುಟ ೪



ದುಬೈ ಅಮೆರಿಕ ರಾಯಭಾರ ಕಚೇರಿ ಮೇಲೂ ದಾಳಿ

ದುಬೈ ಮತ್ತು ಇರಾಕ್‌ನ ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ಮೇಲೆ ಭೀಕರ ದಾಳಿಗಳು ನಡೆದಿವೆ ಎಂದು ಶನಿವಾರ ವರದಿಯಾಗಿದೆ. ದುಬೈ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರದ ಹೃದಯಭಾಗದಲ್ಲಿರುವ ಕಟ್ಟಡವೊಂದಕ್ಕೆ ಆಕಾಶದಲ್ಲಿ ಹೊಡೆದುರುಳಿಸಲಾದ ಕ್ಷಿಪಣಿಯ ಅವಶೇಷಗಳು ಬಂದು ಬಡಿದಿವೆ. ಕಳೆದ 24 ಗಂಟೆಗಳಲ್ಲಿ ದುಬೈ ಮೇಲೆ ನಡೆದ ಎರಡನೇ ದಾಳಿ ಇದಾಗಿದೆ. ಯಾವುದೇ ಪ್ರಾಣಹಾನಿ ಅಥವಾ ಬೆಂಕಿ ಅವಘಡ ಸಂಭವಿಸಿಲ್ಲ ಎಂದು ಮಾಧ್ಯಮ ಕಚೇರಿ ಖಚಿತಪಡಿಸಿದೆ.

ತೈಲ ಖರೀದಿ: ಅಮೆರಿಕ ನಡೆಗೆ ಇರಾನ್ ವ್ಯಂಗ್ಯ

• ಪುಟ ೪

ಅಮೆರಿಕ-ಉತ್ತರ ಕೊರಿಯಾ ಕ್ಷಿಪಣಿ ಸಂಘರ್ಷ

• **ವಾಷಿಂಗ್ಟನ್:** ಇರಾನ್ ಸಂಘರ್ಷದ ನಡುವೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉನ್ನತ ಮಟ್ಟದ ಶೃಂಗಸಭೆ ನಡೆಸಲು ಪ್ರಯತ್ನಿಸುತ್ತಿರುವ ಬೆನ್ನಲ್ಲೇ, ಶನಿವಾರ ಉತ್ತರ ಕೊರಿಯಾ ಹತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉಡಾ ವಣೆ ಮಾಡುವ ಮೂಲಕ ಸವಾಲು ಹಾಕಿದೆ.

ಕ್ಷಿಪಣಿ ಪ್ರಚೋದನೆ: ಅಮೆರಿಕ ಮತ್ತು ದಕ್ಷಿಣ ಕೊರಿಯಾದ ಜಂಟಿ ಮಿಲಿಟರಿ ವ್ಯಾಯಾಮದ ಸಮಯದಲ್ಲಿ ಈ ಉಡಾವಣೆ ಮಾಡಲಾಗಿದೆ ಎಂದು ವರದಿಯಾಗಿದೆ. ಒಂದು ಕ್ಷಿಪಣಿ ಟೋಕಿಯೊದ ವಿಶೇಷ ಆರ್ಥಿಕ ವಲಯದ ಹೊರಗಿನ ಸಮುದ್ರದಲ್ಲಿ ಬಿದ್ದಿದೆ ಎಂದು ವರದಿಯಾಗಿದೆ. ಈ ಪರೀಕ್ಷೆಗಳು ಪೆಂಟಗನ್‌ನ 'ಗೋಲ್ಡನ್ ಡೋಮ್' ರಕ್ಷಣಾ ವ್ಯವಸ್ಥೆಗೆ ನೇರ ಸವಾಲು ಎಂದು ವಿಶ್ಲೇಷಿಸಲಾಗುತ್ತಿದೆ. ➡ಪುಟ ೪

₹18,680 ಕೋಟಿ ಸಂಪರ್ಕ ಯೋಜನೆಗೆ ಮೋದಿ ಚಾಲನೆ

ನುಸುಳುಕೋರರಿಗೆ ಟಿಎಂಸಿ ರಕ್ಷಕ

• **ಕೋಲ್ಕತಾ:** ಆಡಳಿತಾರೂಢ ಟಿಎಂಸಿಯ ಆಡಳಿತದಲ್ಲಿ ಅನಿಯಂತ್ರಿತ ಅಕ್ರಮ ವಲಸೆಯು ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಜನಸಂಖ್ಯಾ ಚಿತ್ರಣವನ್ನೇ ಬದಲಾಯಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಕಳವಳ ವ್ಯಕ್ತಪಡಿಸಿದ್ದಾರೆ. ನುಸುಳುಕೋರರ ಮತ ಬ್ಯಾಂಕ್ ರಕ್ಷಿಸಲು ಎಸ್ಐಆರ್‌ನ್ನೂ ವಿರೋಧಿಸುತ್ತಲೇ ಬಂದಿದೆ ಎಂದು ಆರೋಪಿಸಿದ್ದಾರೆ. ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಮೋದಿ, ಟಿಎಂಸಿ ಸಾಂವಿಧಾನಿಕ ಸಂಸ್ಥೆಗಳನ್ನು ಅವಮಾನಿಸುತ್ತಿದೆ ಎಂದು ಆರೋಪಿಸಿದರು. ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ಕೌಂಟ್‌ಡೌನ್ ಪ್ರಾರಂಭವಾಗಿದೆ ಎಂದು ಹೇಳಿದರು. ➡ಪುಟ ೪



ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ, ಘರ್ಷಣೆ

ಪಶ್ಚಿಮಬಂಗಾಳದಲ್ಲಿ ಆಳುವ ಟಿಎಂಸಿಯ ಗೂಂಡಾಗಿರಿ ಮುಂದು ವರಿದಿದ್ದು, ಶನಿವಾರ ಕೇಂದ್ರ ಕೋಲ್ಕತಾದಲ್ಲಿ ಬಿಜೆಪಿ ಬೆಂಬಲಿಗರ ಮೇಲೆ ಟಿಎಂಸಿ ಗೂಂಡಾಗಳು ಕಲ್ಲು ತೂರಾಟ ನಡೆಸಿದಾಗ ಘರ್ಷಣೆ ಸ್ಫೋಟಿಸಿದೆ. ➡ಪುಟ ೪

ಪಾಕ್, ಬಾಂಗ್ಲಾ ವಲಸಿಗರಿಂದ ದೇಶಕ್ಕೆ ಅಪಾಯ: ಅಶೋಕ

ಬಿಜೆಪಿಯಿಂದ ಎಸ್‌ಐಆರ್ ಕಚೇರಿ

• **ಬೆಂಗಳೂರು:** ರಾಜ್ಯ ಬಿಜೆಪಿ ಕಚೇರಿಯಲ್ಲಿ ಶನಿವಾರ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿದ ಕಚೇರಿ ಉದ್ಘಾಟಿಸಲಾಯಿತು. ಈ ವೇಳೆ ಎಸ್‌ಐಆರ್ ಕುರಿತ ರಾಜ್ಯ ಕಾರ್ಯಾಗಾರ ನಡೆಯಿತು. ಎಸ್‌ಐಆರ್ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗ್ರತೆಗಳ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಯಿತು.

ಈ ವೇಳೆ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಪಾಕಿಸ್ತಾನ, ಬಾಂಗ್ಲಾ ದೇಶದವರು ಬಹಳಷ್ಟು ಜನರು ಕರ್ನಾಟಕಕ್ಕೆ ಬಂದಿದ್ದಾರೆ. ಅವರು ಈ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡರೆ ಕಾಯಂ ನಾಗರಿಕರಾಗುತ್ತಾರೆ. ➡ಪುಟ ೪



ಔಟ್ ಗೋಯಿಂಗ್ ಸಿಎಂ: ಛಲವಾದಿ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆಗೆ ಸಿದ್ಧರಾಗುತ್ತಿದ್ದಾರೆ, ಅವರು ಔಟ್ ಗೋಯಿಂಗ್ ಸಿಎಂ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು. ➡ಪುಟ ೪

ಮಂಡ್ಯದಲ್ಲಿ ವಾಹನ ಪರೀಕ್ಷೆ

• **ಮಂಡ್ಯ:** ಜಿಲ್ಲೆಯಲ್ಲಿ ಸ್ಥಾಪಿಸಲುದ್ದೇಶಿಸಿರುವ ಆಟೊಮೋಟಿವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾದಿಂದ ವಾಹನಗಳ ಪರೀಕ್ಷೆ, ಪ್ರಮಾಣೀಕರಣ ಮತ್ತು ತಾಂತ್ರಿಕ ಸಂಶೋಧನೆಗಳನ್ನು ಇಲ್ಲಿಯೇ ನಡೆಸಲಾಗುವುದು ಎಂದು ಕೇಂದ್ರ ಭಾರೀ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಆಟೊಮೋಟಿವ್ ಇಂಡಿಯಾದಿಂದ ಸಂಶೋಧನೆ: ಎಚ್‌ಡಿಕೆ

ತಾಲೂಕಿನ ವಿ.ಸಿ.ಫಾರಂನಲ್ಲಿ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಲ್ಲಿ ನಿರ್ಮಾಣವಾಗಲಿರುವ ಒಳಾಂಗಣ ಕ್ರೀಡಾಂಗಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಕರ್ನಾಟಕದಲ್ಲಿ ವಾಹನಗಳ ಪರೀಕ್ಷಾ ಕೇಂದ್ರದ ಕೊರತೆ ಇತ್ತು. ಇಲ್ಲಿ ಉತ್ಪಾದನೆಯಾದ ವಾಹನಗಳನ್ನು ಪರೀಕ್ಷೆಗಾಗಿ ಪೂನಾ ಅಥವಾ ಚೆನ್ನೈಗೆ ಕೊಂಡೊಯ್ಯಬೇಕಿತ್ತು. ➡ಪುಟ ೪



ಎಲ್‌ಪಿಜಿ ಅಭಾವ ಹಿನ್ನೆಲೆ | ಹೋಟೇಲ್‌ಗಳಿಗೆ ಪೂರೈಕೆ

ಬಯೋ ಗ್ಯಾಸ್‌ಗೆ ಜಿಬಿಎ ಕ್ರಮ

• **ಬೆಂಗಳೂರು:** ಗ್ಯಾಸ್ ಬಿಕ್ಕಟ್ಟಿನ ನಡುವೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯಲ್ಲಿ ಜೈವಿಕ ಅನಿಲ ಘಟಕಗಳನ್ನು ಸ್ಥಾಪಿಸಿ, ಬಯೋಗ್ಯಾಸ್ ಉತ್ಪಾದನೆ ಚಿಂತನೆ ಮುನ್ನೆಲೆಗೆ ಬಂದಿದೆ. ಇದನ್ನೇ ನಗರದ ಹೋಟೆಲ್‌ಗಳಿಗೆ ಸರಬರಾಜು ಮಾಡುವ ಕ್ರಮಕ್ಕೆ ಮುಂದಾಗಿದೆ.

ಕೋರಮಂಗಲದಲ್ಲಿರುವ ಜೈವಿಕ ಅನಿಲ ಘಟಕ(ಕಸ-ರಸ ಘಟಕ)ದಲ್ಲಿ 10 ಟನ್ ಬಯೋ ಗ್ಯಾಸ್ ಉತ್ಪಾದಿಸಿ ಪೈಪ್ ಮೂಲಕ ನೇರವಾಗಿ ಹತ್ತಿರದ ಹೋಟೆಲ್‌ಗೆ ವಿತರಣೆ ಮಾಡಲಾಗುತ್ತಿದೆ. ಆ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲು ಜಿಬಿಎ ಮುಂದಾಗಿದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲು ವಿವಿಧ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಿ ನಿರ್ವಹಿಸಲಾಗುತ್ತಿದೆ. 12 ಬಯೋಗ್ಯಾಸ್ ಘಟಕಗಳಲ್ಲಿ 6 ಘಟಕಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಘಟಕದಲ್ಲಿ ದಿನಕ್ಕೆ 5 ಟನ್ ಹಸಿ ತ್ಯಾಜ್ಯ ಸಂಸ್ಕರಿಸಿ ಒಟ್ಟಾರೆ ಸುಮಾರು 30 ಟನ್ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲಾಗುತ್ತಿದೆ. ಉಳಿದ 6 ಘಟಕಗಳಲ್ಲಿ ನವೀಕರಣ ಕಾಮಗಾರಿ ನಡೆಯುತ್ತಿದೆ. ➡ಪುಟ ೪



- ಪ್ರಸ್ತುತ ಪರಿಸ್ಥಿತಿಯಲ್ಲಿ ಸಾರ್ವಜನಿಕರು ಹಾಗೂ ಹೋಟೆಲ್ ಮಾಲಿಕರು ತಮ್ಮ ಆವರಣದಲ್ಲಿಯೇ ವಿಕೇಂದ್ರೀಕೃತ ಬಯೋಗ್ಯಾಸ್ ಘಟಕಗಳನ್ನು ಸ್ಥಾಪಿಸಿಕೊಳ್ಳಲು ಜಿಬಿಎ ಮನವಿ
- ಮನೆಯಲ್ಲೇ ಉತ್ಪತ್ತಿಯಾಗುವ ಹಸಿ ತ್ಯಾಜ್ಯದಿಂದ ಗ್ಯಾಸ್ ಉತ್ಪಾದಿಸಿ ಅಡುಗೆ ಇಂಧನವಾಗಿ ಬಳಸಬಹುದು
- ಮನೆಮಟ್ಟದ ಘಟಕ ನಿರ್ಮಾಣಕ್ಕೆ ಸುಮಾರು ರೂ.20,000 ವೆಚ್ಚ ವಾಗಬಹುದು.

ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಲಭ್ಯ

• **ಹೊಸದಿಲ್ಲಿ:** ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ನಾಗರಿಕರಿಗೆ ಭರವಸೆ ನೀಡಿದೆ.

• ಪುಟ ೨

ಆಫ್ಘನ್ ಮೇಲೆ ಪಾಕ್ ಕ್ಷಿಪಣಿ ದಾಳಿ

• **ಕಾಬೂಲ್:** ಕಳೆದ 48 ಗಂಟೆಗಳಲ್ಲಿ ಪಾಕಿಸ್ತಾನಿ ಪಡೆಗಳಿಂದ ಅಫ್ಘಾನಿಸ್ತಾನದ ಕುನಾರ್ ಪ್ರಾಂತ್ಯದ ಮೇಲೆ 270ಕ್ಕೂ ಹೆಚ್ಚು ರಾಕೆಟ್ ಮತ್ತು ಫಿರಂಗಿ ಗುಂಡುಗಳನ್ನು ಹಾರಿಸಲಾಗಿದ್ದು, ಗಡಿ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ.


• ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,63,500(2,70,500) ಅಪರಂಜಿ ಚಿನ್ನ: 15,800(15,900) ಆಭರಣ ಚಿನ್ನ: 14,635(14,780) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹92.54

ಭಾರತೀಯರೆಂಬ ಸಂದೇಶ ಪ್ರದರ್ಶಿಸಿದರೆ ತೆರೆಯುತ್ತೆ ಜಲಸಂಧಿ | ನಾವು ಭಾರತಕ್ಕೆ ಸಂಬಂಧಪಟ್ಟ ಹಡಗುಗಳೆಂಬ ಸಂದೇಶ

ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯರಿಗಷ್ಟೇ ಅವಕಾಶ!



ಮಧ್ಯಪ್ರಾಚ್ಯ ಯುದ್ಧ ಆರಂಭವಾದಾಗಿನಿಂದ ಇದೇ ಮೊದಲ ಬಾರಿಗೆ ಇರಾನ್, ಹಾರ್ಮುಜ್ ಜಲಸಂಧಿಯಿಂದ ಹಾದುಹೋಗಲು ಭಾರತೀಯ ಮತ್ತು ಭಾರತಕ್ಕೆ ಸಂಬಂಧಪಟ್ಟ ಇತರ ಹಡಗುಗಳಿಗೆ ಮಾತ್ರ ಅವಕಾಶ ಮಾಡಿಕೊಟ್ಟಿದೆ. ಭಾರತದ ರಾಷ್ಟ್ರಧ್ವಜ ಹಾಕಿರುವ ಹಡಗುಗಳು, ಇಂಡಿಯನ್ ಆನ್‌ಬೋರ್ಡ್ (ಹಡಗಿನಲ್ಲಿ ಭಾರತೀಯರಿದ್ದಾರೆ) ಎಂಬ ಸಂದೇಶ ಪ್ರದರ್ಶಿಸುವ ಮೂಲಕ ತಾವು ಭಾರತೀಯರು, ತಮ್ಮದು ಭಾರತೀಯ ಹಡಗುಗಳು ಎಂದು ಗುರುತಿಸಿಕೊಂಡರೆ ಮಾತ್ರ ಹಾರ್ಮುಜ್ ಜಲಸಂಧಿ ಮೂಲಕ ಹಾದುಹೋಗಲು ಇರಾನ್ ಅವಕಾಶ ಮಾಡಿಕೊಡುತ್ತಿದೆ.

ವಿಶ್ವದ ಯಾವುದೇ ರಾಷ್ಟ್ರದ ಹಡಗುಗಳಿಗೂ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಇರಾನ್ ಅನುಮತಿಸಿಲ್ಲ. ಆದರೆ ಭಾರತೀಯರಿಗೆ ಅನುಮತಿಸಿದೆ ಎಂಬುದು ಜಾಗತಿಕವಾಗಿ ಭಾರತ ಎಷ್ಟು ಪ್ರಭಾವ ಬೀರಿದೆ, ಭಾರತದ ನಾಯಕತ್ವದ ಶಕ್ತಿ ಮತ್ತು ಇಂತಹ ಸಂಘರ್ಷದ ಸಮಯದಲ್ಲೂ ಭಾರತ ಮತ್ತು ಭಾರತೀಯರನ್ನು ಇರಾನ್ ಗೌರವದಿಂದ ನಡೆಸಿಕೊಳ್ಳುತ್ತಿರುವುದರ ಹಿಂದೆ ಭಾರತದ ರಾಜತಾಂತ್ರಿಕ ಶಕ್ತಿಯನ್ನು ತೋರಿಸುತ್ತದೆ.

ಭಾರತೀಯರಿದ್ದಾರೆ, ದಾರಿ ಬಿಡಿ! ಹಾರ್ಮುಜ್ ಜಲಸಂಧಿಯಲ್ಲಿ ಹಾದುಹೋಗುವ ಹಡಗುಗಳು ಭಾರತೀಯ ಹಡಗುಗಳೆಂದು ಗುರುತಿಸಿಕೊಳ್ಳಲು ಇಂಡಿಯನ್ಸ್ ಆನ್‌ಬೋರ್ಡ್ (ಹಡಗಿನಲ್ಲಿ ಭಾರತೀಯರಿದ್ದಾರೆ), ಆಲ್ ಇಂಡಿಯನ್ ಆನ್‌ಬೋರ್ಡ್ (ಹಡಗಿನಲ್ಲಿ ಎಲ್ಲರೂ ಭಾರತೀಯರೇ ಇದ್ದಾರೆ) ಮತ್ತು ಆಲ್ ಇಂಡಿಯಾ ಕ್ರೂ (ಭಾರತೀಯ ಸಿಬ್ಬಂದಿ) ಎಂಬ ಡಿಸ್‌ಪ್ಲೇ ಸಂದೇಶಗಳನ್ನು ಪ್ರದರ್ಶಿಸುವ ಮೂಲಕ ಜಲಸಂಧಿ ಹಾದುಹೋಗಲು ಅನುಮತಿ ಪಡೆಯುತ್ತಿವೆ.

ತ್ರಿವರ್ಣ ಧ್ವಜವಿದ್ದರೆ ಮಾತ್ರ ಅನುಮತಿ: ಮಾಧ್ಯಮ ವರದಿಗಳ ಪ್ರಕಾರ, ಇರಾನ್ ಈಗ ಭಾರತದ ರಾಷ್ಟ್ರಧ್ವಜ ನೆಟ್ಟಿರುವ ಹಡಗುಗಳಿಗೆ ಮಾತ್ರ ಹಾರ್ಮುಜ್ ಅನ್ನು ಸುರಕ್ಷಿತವಾಗಿ ದಾಟಲು ಅನುಮತಿ ನೀಡುತ್ತಿದೆ. ಶುಕ್ರವಾರ ಬೆಳಗ್ಗಿನೊಳಗೆ ಕನಿಷ್ಠ ಐದು ಭಾರತೀಯ ಹಡಗುಗಳು ಈ ಜಲಸಂಧಿಯನ್ನು ದಾಟಿವೆ. ಇನ್ನೂ ಕೆಲವು ಹಡಗುಗಳು ಶಿಪ್ ಟ್ರ್ಯಾಕಿಂಗ್ ನಕ್ಷೆಗಳಲ್ಲಿ ಕಾಣಿಸಿಕೊಂಡಿವೆ. ಇತರ ಧ್ವಜ ಇರುವ ಭಾರತಕ್ಕೆ ಸಂಬಂಧಿಸಿದ ಹಡಗುಗಳಿಗೂ ಅವಕಾಶ ನೀಡಲಾಗಿದೆ.

ಹಾರ್ಮುಜ್ ತೆರೆಯದಿದ್ದರೆ ತೈಲ ಘಟಕಗಳ ನಾಶ ಶತಃಸಿದ್ಧ

ಖಾರ್ಗ್ ದ್ವೀಪದಲ್ಲಿರುವ ಇರಾನ್ ಸೇನಾ ನೆಲೆಗಳ ಮೇಲೆ ಬಾಂಬ್ ದಾಳಿ ನಡೆಸಿದ್ದು, ಸೇನಾ ಮೂಲಸೌಕರ್ಯಗಳನ್ನು ಸಂಪೂರ್ಣ ನಾಶ ಮಾಡಿದ್ದೇವೆ. ಹಾರ್ಮುಜ್ ಜಲಸಂಧಿಯನ್ನು ತೆರೆಯದಿದ್ದರೆ ಖಾರ್ಗ್‌ನ ತೈಲ ಘಟಕಗಳನ್ನೂ ಸಂಪೂರ್ಣ ನಾಶ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಎಚ್ಚರಿಕೆ ನೀಡಿದ್ದಾರೆ. ಇರಾನ್ ಮೇಲೆ ಅಮೆರಿಕ-ಇಸ್ರೇಲ್ ನಡೆಸುತ್ತಿರುವ ಯುದ್ಧ ಮೂರನೇ ವಾರ ಪ್ರವೇಶಿಸಿದ್ದು, ಈಗಾಗಲೇ ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಏರಿಕೆ ಆಗುತ್ತಿರುವುದನ್ನು ಕಾಣಬಹುದು.ಯುದ್ಧ ಆರಂಭವಾದಲ್ಲಿಂದ ತೈಲ ಬೆಲೆಯಲ್ಲಿ ಶೇ.40 ಏರಿಕೆಯಾಗಿದೆ. ಇದರ ಬೆನ್ನಲ್ಲೇ ಖಾರ್ಗ್ ದ್ವೀಪದ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಬೆದರಿಕೆಯೊಡ್ಡಿದೆ. ಇಲ್ಲಿಂದಲೇ ಇರಾನ್ ತನ್ನ ಶೇ.90ರಷ್ಟು ತೈಲ ರಫ್ತು ಮಾಡುತ್ತದೆ. ಅಧ್ಯಕ್ಷ ಟ್ರಂಪ್ ಎಚ್ಚರಿಕೆಗೆ ಇರಾನ್ ಪ್ರತಿಕ್ರಿಯಿಸಿದ್ದು, ಒಂದು ವೇಳೆ ಖಾರ್ಗ್ ದ್ವೀಪದಲ್ಲಿರುವ ತೈಲ ಘಟಕಗಳ ಮೇಲೆ ಅಮೆರಿಕ ದಾಳಿ ನಡೆಸಿದರೆ, ಅಮೆರಿಕ ಸಂಪರ್ಕದಲ್ಲಿ ವ್ಯವಹರಿಸುವ ತೈಲ ಘಟಕಗಳನ್ನು ಸುಟ್ಟು ಬೂದಿ ಮಾಡುತ್ತೇವೆ ಎಂದು ಹೇಳಿದೆ.

ಖಾರ್ಗ್‌ನಲ್ಲಿ 15 ಸ್ಫೋಟ?

ಅಮೆರಿಕದ ದಾಳಿ ವೇಳೆ ಖಾರ್ಗ್ ದ್ವೀಪದಿಂದ 15ಕ್ಕೂ ಹೆಚ್ಚು ಸ್ಫೋಟಗಳ ಶಬ್ದ ಕೇಳಿದೆಯೆಂದು ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ, ವಾಯು ರಕ್ಷಣಾ ವ್ಯವಸ್ಥೆಗಳು, ನೌಕಾ ನೆಲೆ ಮತ್ತು ವಿಮಾನ ನಿಲ್ದಾಣಗಳು ನಾಶಗೊಂಡಿವೆ. ಆದರೆ ತೈಲ ಮೂಲ ಸೌಕರ್ಯಗಳಿಗೆ ಯಾವುದೇ ಹಾನಿ ಆಗಿಲ್ಲ ಎಂದು ವರದಿ ಯಾಗಿದೆ.

ಇರಾನ್ ನಾಯಕರ ಮಾಹಿತಿ ನೀಡಿದವರಿಗೆ ಭಾರೀ ನಗದು ಬಹುಮಾನ ಘೋಷಿಸಿದ ಅಮೆರಿಕ

ಮೊಜ್ತಬಾ ಮಾಹಿತಿ ನೀಡಿ, ₹92 ಕೋಟಿ ಪಡೆದುಕೊಳ್ಳಿ!



ವಾಷಿಂಗ್ಟನ್: ಇರಾನ್‌ನ ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಸಹಿತ ನಾಯಕರ ಬಗ್ಗೆ ಇಂಚಿಂಚೂ ಮಾಹಿತಿ ನೀಡುವವರಿಗೆ 10 ದಶಲಕ್ಷ ಡಾಲರ್ (ಅಂದಾಜು 92,47,48,000 ರೂ.) ಭಾರೀ ಬಹುಮಾನವನ್ನು ಅಮೆರಿಕ ಸರ್ಕಾರದ ಭದ್ರತಾ ಇಲಾಖೆ ಘೋಷಿಸಿದೆ.

ಇಸ್ರೇಲ್ ದಾಳಿಗೆ ಗಾಯಗೊಂಡಿದ್ದಾರೆ ಎನ್ನಲಾದ ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಸೇರಿದಂತೆ ಯಾವುದೇ ಇರಾನ್ ನಾಯಕರ ಮಾಹಿತಿ ಸಂಗ್ರಹಿಸಲು ಅಮೆರಿಕ ಪ್ರಯತ್ನಿಸುತ್ತಿದ್ದು, ಇವರ ಬಗ್ಗೆ ಯಾವುದೇ ಮಾಹಿತಿ ನೀಡುವವರಿಗೆ ಭಾರೀ ನಗದು ಬಹುಮಾನ ನೀಡುವುದಾಗಿ ಟ್ರಂಪ್ ಸರ್ಕಾರ ಘೋಷಿಸಿದೆ. ಇರಾನ್ ಉಗ್ರ ನಾಯಕರು ಎಂಬ ಶೀರ್ಷಿಕೆಯಲ್ಲಿ ಇರಾನ್ ಸರ್ವೋಚ್ಚ ನಾಯಕ ಮತ್ತು ಇತರ ನಾಯಕರ ಫೋಟೋ ಸಹಿತ ಹೆಸರುಗಳ ಪಟ್ಟಿಯನ್ನು ಅಮೆರಿಕದ ನ್ಯಾಯಕ್ಕಾಗಿ ರಾಜತಾಂತ್ರಿಕ ಭದ್ರತಾ ಸೇವೆಗಳ ಬಹುಮಾನ ಇಲಾಖೆ ತನ್ನ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಹಂಚಿಕೊಂಡಿದೆ.

ಪಟ್ಟಿಯಲ್ಲಿನ ಪ್ರಮುಖರು: ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಸರ್ವೋಚ್ಚ ನಾಯಕನ ಕಚೇರಿ (ಎಸ್‌ಎಲ್‌ಒ) ಉಪ ಮುಖ್ಯಸ್ಥ ಅಲಿ ಅಸ್ಗರ್ ಹೆಜಾಜಿ, ಎಸ್‌ಎಲ್‌ಒ ಸೇನಾ ಸಲಹೆಗಾರ ಮೇಜರ್ ಜನರಲ್ ವೈಆರ್ ಸಫಾವಿ ಮತ್ತು ಗುಪ್ತಚರ ಸಚಿವ ಇಸ್ಮಾಯಿಲ್ ಖಾತಿಬ್ ಅವರ ಹೆಸರುಗಳು ಪಟ್ಟಿಯಲ್ಲಿವೆ.

ಜೈಶಂಕರ್ ಚತುರ ವಿದೇಶಾಂಗ ನೀತಿ

ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಈ ವರದಿಗಳನ್ನು ದೃಢಪಡಿಸಲೂ ಇಲ್ಲ, ನಿರಾಕರಿಸಲೂ ಇಲ್ಲ. ಜೈಸ್ವಾಲ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಇತ್ತೀಚೆಗೆ ಇರಾನ್ ಸಚಿವರೊಂದಿಗೆ ಮೂರು ಬಾರಿ ಮಾತನಾಡಿದ್ದಾರೆ. ಮಾತುಕತೆ ವೇಳೆ ಸಾಗಣೆ ಮತ್ತು ಭಾರತದ ಇಂಧನ ಭದ್ರತೆಯ ಕುರಿತು ಚರ್ಚಿಸಲಾಗಿದೆ. ಸದ್ಯ ಇದಕ್ಕಿಂತ ಹೆಚ್ಚೇನೂ ಹೇಳುವುದು ಬಹಳ ಮುಂಚಿತವಾಗುತ್ತದೆ ಎಂದು ವಕ್ತಾರ ಜೈಸ್ವಾಲ್ ಹೇಳಿದ್ದರು. ಇದಾದ ಬಳಿಕ ಭಾರತದ ಹಡಗುಗಳಿಗಾಗಿ ಮಾತ್ರ ಜಲಸಂಧಿ ದಾಟಲು ಇರಾನ್ ಅವಕಾಶ ನೀಡಿದೆ.

ಮಿಲಿಟರಿ ಸನ್ನದ್ಧತೆ ಮತ್ತು ಸೈನ್ಯ ನಿಯೋಜನೆ

ಈ ಬೆನ್ನಲ್ಲೇ ಅಮೆರಿಕ 2,500 ಮರೀನ್ ಸೈನಿಕರು ಮತ್ತು ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯನ್ನು ಮಧ್ಯಪ್ರಾಚ್ಯಕ್ಕೆ ರವಾನಿಸಿದೆ. ಯುದ್ಧ ಆರಂಭವಾದ ದಿನದಿಂದ ಇರಾನ್‌ನ 15,000ಕ್ಕೂ ಹೆಚ್ಚು ಗುರಿಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ಪಡೆಗಳು ದಾಳಿ ನಡೆಸಿವೆ, ಎಂದು ವರದಿಯಾಗಿದೆ. ಕಳೆದ 24 ಗಂಟೆಗಳಲ್ಲಿ ಕ್ಷಿಪಣಿ ಉಡಾವಣಾ ಕೇಂದ್ರಗಳು ಸೇರಿದಂತೆ 200ಕ್ಕೂ ಹೆಚ್ಚು ನೆಲೆಗಳನ್ನು ಧ್ವಂಸಗೊಳಿಸಲಾಗಿದೆ. ಪ್ರತೀಕಾರವಾಗಿ ಇರಾನ್ ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡಿದ್ದು, ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ ಸುಮಾರು 100 ಡಾಲರ್‌ಗೆ ಏರಿಕೆಯಾಗಿದೆ.



ಸಾವು-ನೋವು ಮತ್ತು ರಾಜತಾಂತ್ರಿಕ ಆತಂಕ: ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಇದುವರೆಗೆ 773 ಜನರು ಮೃತಪಟ್ಟಿದ್ದು, 8.5 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಇರಾನ್‌ನಲ್ಲಿ ಸಾವಿನ ಸಂಖ್ಯೆ 1,300 ದಾಟಿದೆ ಎಂದು ವರದಿ ಯಾಗಿದೆ. ಇರಾಕ್‌ನಲ್ಲಿ ಅಮೆರಿಕದ ಇಂಧನ ಮರುಪೂರಣ ವಿಮಾನ ಪತನಗೊಂಡು ಆರು ಮಂದಿ ಸಿಬ್ಬಂದಿ ಮೃತಪಟ್ಟಿದ್ದಾರೆ. ಜರ್ಮನಿ ಸೇರಿದಂತೆ ಹಲವು ದೇಶಗಳು ಯುದ್ಧ ನಿಲ್ಲಿಸಲು ತಕ್ಷಣದ ಯೋಜನೆಯ ಅಗತ್ಯವಿದೆ, ಎಂದು ಪ್ರತಿಪಾದಿಸಿವೆ.

ಹಾರ್ಮುಜ್ ಜಲಸಂಧಿಯಲ್ಲಿನ ಪರಿಸ್ಥಿತಿ

ಇರಾನ್ ರಾಜತಾಂತ್ರಿಕರು ಜಲಸಂಧಿ ತಾಂತ್ರಿಕವಾಗಿ ತೆರೆದಿದೆ ಎಂದು ಹೇಳಿಕೊಂಡಿದ್ದರೂ, ನೌಕಾ ಸಂಚಾರ ಶೇ.90ರಷ್ಟು ಕುಸಿದಿದೆ. ವಿಮಾ ಕಂಪನಿಗಳು ರಕ್ಷಣೆ ಹಿಂಪಡೆದಿರುವುದರಿಂದ ಮತ್ತು ಡ್ರೋನ್ ದಾಳಿಯ ಭೀತಿಯಿಂದಾಗಿ ವಾಣಿಜ್ಯ ಹಡಗುಗಳು ಸಂಚಾರ ಸ್ಥಗಿತಗೊಳಿಸಿವೆ. ಈ ಜಲಸಂಧಿಯ ಮೂಲಕ ಸಾಗುವ ವಿಶ್ವದ ಶೇ.20 ರಷ್ಟು ತೈಲ ಮತ್ತು ವಾರ್ಷಿಕ 80 ಮಿಲಿಯನ್ ಟನ್ ಎಲ್‌ಪಿಜಿ ಪೂರೈಕೆಗೆ ಅಡ್ಡಿಯಾಗಿದ್ದು, 1970ರ ದಶಕದ ಮಾದರಿಯ ಇಂಧನ ಬಿಕ್ಕಟ್ಟು ಎದುರಾಗುವ ಆತಂಕ ಮೂಡಿದೆ.





ಮಧ್ಯಪ್ರಾಚ್ಯ ಇತಿಹಾಸದಲ್ಲೇ ಅತಿ ದೊಡ್ಡ ದಾಳಿ

ಖಾರ್ಗ್ ತೈಲ ರಫ್ತು ಕೇಂದ್ರದ ಸೇನಾ ಮೂಲಸೌಕರ್ಯಗಳನ್ನು ಸಂಪೂರ್ಣ ನಾಶ ಮಾಡಿದ್ದೇವೆ ಎಂದು ಟ್ರಂಪ್ ಹೇಳಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಮಾಡಿದ ಪೋಸ್ಟ್‌ನಲ್ಲಿ ಅವರು, ಇದನ್ನು ಮಧ್ಯಪ್ರಾಚ್ಯದ ಇತಿಹಾಸದಲ್ಲೇ ಅತಿ ಶಕ್ತಿಶಾಲಿ ಬಾಂಬ್ ದಾಳಿಗಳಲ್ಲೊಂದು ಎಂದು ಹೇಳಿಕೊಂಡಿದ್ದಾರೆ. ಆದರೆ ಈ ದಾಳಿಗೆ ಸಂಬಂಧಿಸಿ ಯಾವುದೇ ಸಾಕ್ಷ್ಯವನ್ನು ಅವರು ನೀಡಿಲ್ಲ.

ಹಾರ್ಮುಜ್ ತೆರೆಯಲು ಟ್ರಂಪ್ ತಾಕೀತು

ಖಾರ್ಗ್‌ನಲ್ಲಿರುವ ತೈಲ ಮೂಲಸೌಕರ್ಯಗಳನ್ನೂ ಸಂಪೂರ್ಣ ನಾಶ ಮಾಡುವುದಕ್ಕೂ ಮುನ್ನ ಇರಾನ್ ಎಚ್ಚತ್ತುಕೊಂಡು ಹಾರ್ಮುಜ್ ಜಲಸಂಧಿಯನ್ನು ತೆರಯಬೇಕು. ಹಾರ್ಮುಜ್ ಜಲಸಂಧಿ ಮೂಲಕ ಹಾದುಹೋಗುವ ಹಡಗುಗಳಿಗೆ ಮುಕ್ತ ಮತ್ತು ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಇರಾನ್ ಇದನ್ನು ಮಾಡಿದರೆ ನಾನೂ ನನ್ನ ನಿರ್ಧಾರ ಮರುಪರಿಶೀಲಿಸುವೆ ಎಂದು ಅಧ್ಯಕ್ಷ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಕಿರುಸುದ್ದಿ

ಮಾತುಕತೆ ಮೂಲಕ ಸಂಘರ್ಷ ಪರಿಹಾರ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಮಾತುಕತೆ ಮೂಲಕ ಪರಿಹರಿಸಲು ಭಾರತವು ಬ್ರಿಕ್ಸ್ ಸದಸ್ಯ ರಾಷ್ಟ್ರಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.ದಿಲ್ಲಿಯಲ್ಲಿ ಅಂತರ ಸಚಿವಾಲಯದ ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಜೈಸ್ವಾಲ್, ಕೆಲವು ಬ್ರಿಕ್ಸ್ ಸದಸ್ಯರು ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಯಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದಾರೆ. ಸದಸ್ಯ ರಾಷ್ಟ್ರಗಳ ನಡುವಿನ ಭಿನ್ನಾಭಿಪ್ರಾಯಗಳು ಈ ಗುಂಪಿಗೆ ಒಮ್ಮತವನ್ನು ರೂಪಿಸಲು ಕಷ್ಟವಾಗಿಸಿವೆ ಎಂದು ಅವರು ಗಮನಿಸಿದರು.

ಪಾಕ್ ಸರ್ಕಾರಿ ನೌಕರರ ವೇತನ ಶೇ.30 ಕಡಿತ!

ಇಸ್ಲಾಮಾಬಾದ್: ಮಧ್ಯಪ್ರಾಚ್ಯ ಯುದ್ಧದಿಂದ ತೈಲ ಕೊರತೆ ಹಿನ್ನೆಲೆ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ನೌಕರರ ವೇತನವನ್ನು ಶೇ.5ರಿಂದ ಶೇ.30ರವರೆಗೆ ಕಡಿತಗೊಳಿಸಲು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅನುಮೋದನೆ ನೀಡಿದ್ದಾರೆ. ಅಮೆರಿಕ-ಇಸ್ರೇಲ್-ಇರಾನ್ ನಡುವಿನ ಸಂಘರ್ಷದಿಂದ ತೈಲ ಬೆಲೆ ಏರಿಕೆಯಾಗಿದ್ದಲ್ಲದೆ, ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಹಡಗುಗಳನ್ನು ದಾಟಲು ಅನುಮತಿಸದ ಕಾರಣ ಜಾಗತಿಕ ತೈಲ ಪೂರೈಕೆ ಮೊಟಕುಗೊಂಡಿದೆ. ಈ ಹಿನ್ನೆಲೆ ಚರ್ಚಿಸಲು ಶನಿವಾರ ಉನ್ನತಮಟ್ಟದ ಸಭೆ ಕರೆದಿದ್ದ ಪಾಕ್ ಪ್ರಧಾನಿ, ಸರ್ಕಾರದ ಅನಗತ್ಯ ಖರ್ಚು ಕಡಿಮೆಗೊಳಿಸಲು ಸರ್ಕಾರಿ ನೌಕರರ ವೇತನ ಕಡಿತಗೊಳಿಸುವುದಾಗಿ ಪ್ರಕಟಿಸಿದ್ದಾರೆ.

ಆ್ಯಂಸ್ಟರ್‌ಡ್ಯಾಮ್ ಯಹೂದಿ ಶಾಲೆ ಮೇಲೆ ಬಾಂಬ್ ದಾಳಿ!

ಆ್ಯಂಸ್ಟರ್‌ಡ್ಯಾಮ್: ನೆದರ್‌ಲೆಂಡ್ ರಾಜಧಾನಿಯಲ್ಲಿ ಶನಿವಾರ ಮುಂಜಾನೆ ಭಯೋತ್ಪಾದಕ ಬಾಂಬ್ ದಾಳಿ ನಡೆದಿದ್ದು, ಯಹೂದಿ ಶಾಲೆಯೊಂದಕ್ಕೆ ಭಾರೀ ಹಾನಿಯಾಗಿದೆ. ಯಹೂದಿ ಸಮುದಾಯವನ್ನು ಗುರಿಯಾಗಿಸಿ ನಡೆಸಲಾದ ಉಗ್ರ ದಾಳಿಯೆಂದು ಆ್ಯಂಸ್ಟರ್‌ಡ್ಯಾಮ್ ಮೇಯರ್ ಫೆಮ್ಕೆ ಹಲ್ಸೆಮಾ ತಿಳಿಸಿದ್ದಾರೆ. ಸ್ಫೋಟದ ಬಳಿಕ ಪೊಲೀಸ್ ಮತ್ತು ಅಗ್ನಿಶಾಮಕ ಸಿಬ್ಬಂದಿ ತಕ್ಷಣವೇ ದುರಂತ ಸ್ಥಳಕ್ಕಾಗಮಿಸಿ ಹೆಚ್ಚಿನ ಹಾನಿ ಆಗುವುದನ್ನು ತಡೆದರು. ಇದು ಕಳೆದ ಎರಡು ದಿನಗಳಲ್ಲಿ ಎರಡನೇ ದಾಳಿಯಾಗಿದೆ. ಶುಕ್ರವಾರ ಬಂದರು ನಗರ ರೋಟರ್‌ಡ್ಯಾಮ್‌ನಲ್ಲಿ ಸ್ಫೋಟ ಸಂಭವಿಸಿತ್ತು. ರೋಟರ್‌ಡ್ಯಾಮ್‌ನಲ್ಲಿ ನಾಲ್ವರು ಅಪ್ರಾಪ್ತ ಬಾಲಕರನ್ನು ಬಂಧಿಸಲಾಗಿತ್ತು. ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ಯಹೂದಿಗಳನ್ನು ಗುರಿಯಾಗಿಸಿ ದಾಳಿ ನಡೆದಿದೆಯೆಂದು ವರದಿಯಾಗಿದೆ.

ಮಾದಕದ್ರವ್ಯ ಮುಕ್ತ ಪಂಜಾಬ್ ಗುರಿ: ಶಾ

ಮೊಗಾ(ಬಿಹಾರ): ಯಾರಾದರೂ ರಾಜ್ಯವನ್ನು ಮಾದಕದ್ರವ್ಯಗಳಿಂದ ಮುಕ್ತಗೊಳಿಸಲು ಸಾಧ್ಯ ಎಂದರೆ ಅದು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

2027ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಶನಿವಾರ ಪಂಜಾಬ್ ಜನತೆಗೆ ಮನವಿ ಮಾಡಿದ್ದಾರೆ. ಇಂದು, ಸಾಲ, ಮಾದಕ ದ್ರವ್ಯಗಳು, ಧಾರ್ಮಿಕ ಮತಾಂತರಗಳು, ಭ್ರಷ್ಟಾಚಾರ ಮತ್ತು ದರೋಡೆಕೋರರ ದಾಳಿಯಿಂದ ಪಂಜಾಬ್ ನಾಶವಾಗಿದೆ ಎಂದು ಶಾ ಹೇಳಿದರು.



ಪಂಜಾಬ್ ಕಾಂಗ್ರೆಸ್, ಅಕಾಲಿಗಳು ಮತ್ತು ಆಪ್‌ಗೆ ಅನೇಕ ಅವಕಾಶಗಳನ್ನು ನೀಡಿದೆ. ಈಗ ಬಿಜೆಪಿಗೆ ಅವಕಾಶ ನೀಡಬೇಕು ಎಂದು ಹೇಳಿದರು. ನಾವು ಪಂಜಾಬ್‌ನಲ್ಲಿ ಬದಲಾವಣೆಯನ್ನು ತರುತ್ತೇವೆ ಎಂದು ಹೇಳಿದರು. ಭಗವಂತ್ ಮಾನ್ ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರಿಗೆ ಎಟಿಎಂ ಆಗಿ ಮಾರ್ಪಟ್ಟಿದೆ ಎಂದು ಶಾ ಹೇಳಿದರು. 2027ರಲ್ಲಿ ಚುನಾವಣೆಗಳು ನಡೆಯಲಿದ್ದು, ಮೊಗಾವಿನಿಂದ ಬಿಜೆಪಿ ಒಂದು ರೀತಿಯಲ್ಲಿ ತನ್ನ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಿದೆ ಎಂದು ಶಾ ಹೇಳಿದರು.

ನಾನು ಪಂಜಾಬಿನ ಜನರಿಗೆ ಮನವಿ ಮಾಡಲು ಬಂದಿದ್ದೇನೆ ಎಂದು ತಮ್ಮ ಪಕ್ಷಕ್ಕೆ ಬೆಂಬಲ ಕೋರಿದರು. ನಾನು ತಾಯಂದಿರು, ಸಹೋದರಿಯರು ಮತ್ತು ವೃದ್ಧರು ಸೇರಿದಂತೆ ಪಂಜಾಬಿನ ಜನರಿಂದ ಆಶೀರ್ವಾದ ಪಡೆಯಲು ಬಂದಿದ್ದೇನೆ ಎಂದು ಹೇಳಿದರು.

ಎನ್‌ಎಸ್‌ಎ ಬಂಧನದಿಂದ ವಾಂಗ್‌ಚುಕ್ ಬಿಡುಗಡೆ

ಜೋಧ್‌ಪುರ: ರಾಷ್ಟ್ರೀಯ ಭದ್ರತಾ ಕಾಯ್ದೆಯಲ್ಲಿ (ಎನ್‌ಎಸ್‌ಎ) ಲಭ್ಯವಿರುವ ಅಧಿಕಾರ ಬಳಸಿಕೊಂಡು ಬಂಧಿಸಲಾಗಿದ್ದ ಹವಾಮಾನ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಲು ಕೇಂದ್ರ ಆದೇಶಿಸಿದೆ. ಈ ಬೆನ್ನಲ್ಲೇ ಜೋಧ್‌ಪುರ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರ ಅಧಿಕೃತ ಆದೇಶ ಹೊರಡಿಸಿದ ಬೆನ್ನಲ್ಲೇ, ಮಧ್ಯಾಹ್ನ ಸುಮಾರು 1:30 ಗಂಟೆಗೆ ಬಿಡುಗಡೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಯಿತು. 2025ರ ಸೆಪ್ಟೆಂಬರ್ 26 ರಿಂದ ಬಂಧನದಲ್ಲಿದ್ದ ವಾಂಗ್‌ಚುಕ್, ಎನ್‌ಎಸ್‌ಎ ಅನ್ವಯದಲ್ಲಿ ನಿಗದಿಪಡಿಸಲಾದ ಗರಿಷ್ಠ ಅವಧಿಯ ಸುಮಾರು ಅರ್ಧದಷ್ಟು ಕಾಲ ಜೈಲು ಶಿಕ್ಷೆ ಅನುಭವಿಸಿದ್ದಾರೆ. ಸ್ಥಳೀಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ, ಪತ್ನಿ ಗೀತಾಂಜಲಿ ಆಂಗ್ಮೋ ಬಿಡುಗಡೆಯ ಔಪಚಾರಿಕ ಪ್ರಕ್ರಿಯೆಗಳನ್ನು ಪೂರೈಸಿದರು.

ಬಂಧನದ ಹಿನ್ನೆಲೆ: ಲಡಾಖ್‌ನಲ್ಲಿ ತೀವ್ರ ಪ್ರತಿಭಟನೆಗಳು ನಡೆದ ನಂತರ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಲೇಹ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಆದೇಶದ ಮೇರೆಗೆ ವಾಂಗ್‌ಚುಕ್ ಅವರನ್ನು ಬಂಧಿಸಲಾಗಿತ್ತು.

ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡಬೇಕು ಮತ್ತು ಸಂವಿಧಾನದ ಆರನೇ ಅನುಸೂಚಿಗೆ ಸೇರಿಸಬೇಕು ಎಂಬ ಬೇಡಿಕೆಗಳಿಗಾಗಿ ನಡೆದ ಈ ಪ್ರತಿಭಟನೆಗಳಲ್ಲಿ 22 ಪೊಲೀಸರು ಸೇರಿದಂತೆ 45ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ವಾಂಗ್‌ಚುಕ್ ಬಂಧನವನ್ನು ಹಿಂಪಡೆಯುವ ಕೇಂದ್ರದ ನಿರ್ಧಾರವನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಸ್ವಾಗತಿಸಿದ್ದಾರೆ.

ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಸಮರ್ಪಕ ಲಭ್ಯ

ಹೊಸದಿಲ್ಲಿ: ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ನಾಗರಿಕರಿಗೆ ಭರವಸೆ ನೀಡಿದೆ. ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಯಿಂದಾಗಿ ಇಂಧನ ಪೂರೈಕೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳ ನಡುವೆ ಈ ಬಗ್ಗೆ ಆತಂಕ ಬೇಡ ಎಂದಿದೆ.



ಎಕ್ಸ್ ನಲ್ಲಿ ಪೋಸ್ಟ್ ಮಾಡಿದ ಸಚಿವಾಲಯವು, ದೇಶದಾದ್ಯಂತ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಸಾಕಷ್ಟು ಲಭ್ಯವಿದೆ. ಕೊರತೆ ಇದೆ ಎಂದು ಇಂಧನವನ್ನು ಸಡಿಲವಾದ ಕಂಟೈನರ್‌ಗಳಲ್ಲಿ ಸಂಗ್ರಹಿಸಬೇಡಿ.ಇದರಿಂದ ಅಪಾಯ ಹೆಚ್ಚಿದೆ ಎಂದು ಗ್ರಾಹಕರಿಗೆ ಸೂಚಿಸಿದೆ. ತಮಿಳುನಾಡಿನಲ್ಲಿ ಚಿಲ್ಲರೆ ಮಾರಾಟದ ಅಂಗಡಿಯೊಂದರಲ್ಲಿ ಪೆಟ್ರೋಲ್ ಅನ್ನು ಸಡಿಲವಾದ ಧಾರಕದಲ್ಲಿ ವಿತರಿಸಲಾಗುತ್ತಿದ್ದು, ಇದು ಸುರಕ್ಷತಾ ಮಾನದಂಡಗಳನ್ನು ಉಲ್ಲಂಘಿಸುವ ಪ್ರಕರಣವನ್ನು ಅಧಿಕಾರಿಗಳು ಪತ್ತೆ ಮಾಡಿದ ಬೆನ್ನಲ್ಲೇ ಈ ಸಲಹೆ ಬಂದಿದೆ.

ಉಲ್ಲಂಘನೆಗಳಿಗೆ ಕಟ್ಟುನಿಟ್ಟಾದ ಕ್ರಮದ ಬಗ್ಗೆ ಸರ್ಕಾರವು ಎಚ್ಚರಿಕೆ ನೀಡಿದೆ. ಈ ವಿಷಯದಲ್ಲಿ ಈಗಾಗಲೇ ಕಠಿಣ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ಹೇಳಿದೆ. ಸಂಬಂಧಿತ ಪೆಟ್ರೋಲ್ ಪಂಪ್ ಅನ್ನು ಸ್ಥಗಿತಗೊಳಿಸಲಾಗಿದೆ. ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಪೆಟ್ರೋಲ್ ಮತ್ತು ಡಿಸೇಲ್ ಅನ್ನು ವಿತರಿಸುವಾಗ ಸುರಕ್ಷತಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ದೇಶದಾದ್ಯಂತದ ಎಲ್ಲಾ ಇಂಧನ ಚಿಲ್ಲರೆ ವ್ಯಾಪಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಐಎಸ್‌ಐ ಬೆಂಬಲಿತ ಉಗ್ರ ಶಸ್ತ್ರಾಸ್ತ್ರ ಜಾಲ ಪತ್ತೆ, ಇಬ್ಬರ ಸೆರೆ

ಅಮೃತಸರ: ಪಾಕಿಸ್ತಾನಿ ಗುಪ್ತಚರ ಸಂಸ್ಥೆ ಐಎಸ್‌ಐ ಬೆಂಬಲಿತ ಭಯೋತ್ಪಾದಕ ಶಸ್ತ್ರಾಸ್ತ್ರ ಜಾಲವೊಂದನ್ನು ಪಂಜಾಬ್ ಪೊಲೀಸರು ಬೇಧಿಸಿದ್ದು, ಭಾರೀ ಶಸ್ತ್ರಾಸ್ತ್ರ ಸಹಿತ ಇಬ್ಬರು ಉಗ್ರರನ್ನು ಬಂಧಿಸಿದ್ದಾರೆ.



ರಾಜ್ಯ ಪೊಲೀಸ್ ಮಹಾನಿರ್ದೇಶಕರ ಮಾರ್ಗದರ್ಶನದಲ್ಲಿ ಅಮೃತಸರ ಗ್ರಾಮೀಣ ಪೊಲೀಸರು ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಅವರಿಂದ ರೈಫಲ್‌ಗಳು, ಪಿಸ್ತೂಲ್‌ಗಳು, ಕಾಟ್ರಿಜ್‌ಗಳನ್ನು ವಶಪಡಿಸಲಾಗಿದೆ. ಪಂಜಾಬ್ ರಾಜ್ಯದೆಲ್ಲೆಡೆ ಭಾರತ ವಿರೋಧಿ ಮತ್ತು ಪೊಲೀಸ್ ವಿರೋಧಿ ಆಖ್ಯಾನವನ್ನು ಹರಡುವುದು ಇವರ ಉದ್ದೇಶವಾಗಿತ್ತು. ಸಾಮಾಜಿಕ ಜಾಲತಾಣದ ಮೂಲಕ ಪಾಕಿಸ್ತಾನಿ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಗಡಿ ಸಂಘರ್ಷ ತೀವ್ರ | ಕುನಾರ್ ಪ್ರಾಂತ್ಯ ಪ್ರದೇಶಕ್ಕೆ ಭಾರೀ ಹಾನಿ

ಕುನಾರ್ ಪ್ರಾಂತ್ಯದ ಮೇಲೆ ಪಾಕ್ ಕ್ಷಿಪಣಿ ದಾಳಿ

ಕಾಬೂಲ್: ಕಳೆದ 48 ಗಂಟೆಗಳಲ್ಲಿ ಪಾಕಿಸ್ತಾನಿ ಪಡೆಗಳಿಂದ ಅಫ್ಘಾನಿಸ್ತಾನದ ಕುನಾರ್ ಪ್ರಾಂತ್ಯದ ಮೇಲೆ 270ಕ್ಕೂ ಹೆಚ್ಚು ರಾಕೆಟ್ ಮತ್ತು ಫಿರಂಗಿ ಗುಂಡುಗಳನ್ನು ಹಾರಿಸಲಾಗಿದ್ದು, ಗಡಿ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ.

ಹಲವು ಜಿಲ್ಲೆಗಳ ಮೇಲೆ ನಡೆದ ಈ ಭೀಕರ ದಾಳಿಯನ್ನು ಕುನಾರ್‌ನ ಮಾಹಿತಿ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಜಿಯಾವುರ್ ರಹಮಾನ್ ಸ್ಪಿನ್ ಘರ್ ಖಚಿತಪಡಿಸಿದ್ದಾರೆ. ಪ್ರಾಂತ್ಯದಾದ್ಯಂತ ಭಾರೀ ಹಾನಿಯಾಗಿದೆ ಎಂದು ವರದಿಯಾಗಿದ್ದರೂ, ಯಾವುದೇ ಪ್ರಾಣಹಾನಿ ವರದಿಯಾಗಿಲ್ಲ. ಫೆಬ್ರವರಿ 21 ರಂದು ತಾಲಿಬಾನ್ ಶಿಬಿರಗಳ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯ ನಂತರ ಆರಂಭವಾದ ಈ ಸಂಘರ್ಷ ಸತತವಾಗಿ ಮುಂದುವರಿದಿದೆ.

ವೈಮಾನಿಕ ದಾಳಿ ಮತ್ತು ಪ್ರತೀಕಾರ: ಪಾಕಿಸ್ತಾನ ವಾಯುಪಡೆ (ಪಿಎಎಫ್) ಕಂದಹಾರ್ ಪಕ್ತಿಯಾ ಮತ್ತು ಕಾಬೂಲ್‌ನಲ್ಲಿರುವ ಪ್ರಮುಖ ಗುರಿಗಳ ಮೇಲೆ ಸಮನ್ವಯದ ದಾಳಿಗಳನ್ನು ನಡೆಸಿದೆ. ಕಂದಹಾರ್ ನಗರದಲ್ಲಿರುವ ತಾಲಿಬಾನ್‌ನ 'ಅಲ್-ಬದರ್ ಕಾರ್ಪ್ಸ್' ಪ್ರಧಾನ ಕಚೇರಿಯನ್ನು ಗುರಿಯಾಗಿಸಿಕೊಂಡು ಹಿರಿಯ ಕಮಾಂಡರ್‌ಗಳನ್ನು ಹತ್ಯೆಗೆ ಪ್ರಯತ್ನಿಸಲಾಗಿದೆ, ಎಂದು ಗುಪ್ತಚರ ಮೂಲಗಳು ತಿಳಿಸಿವೆ.

ಈ ಕಾರ್ಯಾಚರಣೆಗಳನ್ನು ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ವಿರುದ್ಧ ನಡೆಸಲಾಗುತ್ತಿದೆ ಎಂದು ಪಾಕಿಸ್ತಾನ ಹೇಳಿಕೊಂಡರೆ, ಅಫ್ಘಾನ್ ಅಧಿಕಾರಿಗಳು, ಪಾಕಿಸ್ತಾನ ನಾಗರಿಕರನ್ನು ಹತ್ಯೆ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಈ ಆಕ್ರಮಣಗಳಿಗೆ ತಕ್ಕ ಉತ್ತರ ನೀಡಲಾಗುವುದು ಎಂದು ತಾಲಿಬಾನ್ ನಾಯಕತ್ವ ಎಚ್ಚರಿಕೆ ನೀಡಿದ್ದು, ಗಡಿ ಭಾಗದಲ್ಲಿ ಡ್ರೋನ್ ದಾಳಿ, ಘರ್ಷಣೆಗಳು ಮುಂದುವರಿದಿವೆ.



ದಕ್ಷಿಣ ಏಷ್ಯಾದಲ್ಲಿ ಅಸ್ಥಿರತೆ

ಪಾಕಿಸ್ತಾನ-ಅಫ್ಘಾನಿಸ್ತಾನ ಸಂಘರ್ಷದಿಂದ ದಕ್ಷಿಣ ಏಷ್ಯಾದಲ್ಲಿ ಅಸ್ಥಿರತೆ ಹೆಚ್ಚಿದ್ದು, ಭಯೋತ್ಪಾದನೆ ಹರಡುವಿಕೆ ಮತ್ತು ನಿರಾಶ್ರಿತರು ಬಿಕ್ಕಟ್ಟು ಎದುರಿಸಬಹುದು. ಭಾರತ ಈ ಭಾಗದಲ್ಲಿ ಶಾಂತಿ ಸ್ಥಾಪಕನಾಗಿ ಮತ್ತು ಅಫ್ಘಾನಿಸ್ತಾನಕ್ಕೆ ಮಾನವೀಯ ನೆರವು ನೀಡುತ್ತಿದೆ. ಈಗ, ಪಾಕಿಸ್ತಾನದ ಪಶ್ಚಿಮ ಗಡಿಯಲ್ಲಿನ ಈ ಉದ್ವಿಗ್ನತೆ ಭಾರತದ ಭದ್ರತಾ ಕಾರ್ಯತಂತ್ರದ ಮೇಲೆ ಪ್ರಭಾವ ಬೀರಲಿದ್ದು, ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವಲ್ಲಿ ಭಾರತದ ಪಾತ್ರ ನಿರ್ಣಾಯಕವಾಗಲಿದೆ.

ಕಾಂಗ್ರೆಸ್‌ನಿಂದ ಭೀತಿ ಸೃಷ್ಟಿ: ಪ್ರಧಾನಿ ಮೋದಿ ಟೀಕೆ

ಜನಸಾಮಾನ್ಯರ ರಕ್ಷಣೆಗೆ ಕೇಂದ್ರ ಬದ್ಧ

ಸಿಲ್ಚಾರ್: ಜಾಗತಿಕ ಸಂಘರ್ಷಗಳಿಂದ ಭಾರತೀಯ ಜನತೆಯ ಮೇಲಾಗುವ ಪರಿಣಾಮಗಳನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರವು ಆದ್ಯತೆ ನೀಡುತ್ತಿದೆ. ಆದರೆ ವಿರೋಧ ಪಕ್ಷ ಕಾಂಗ್ರೆಸ್ ದೇಶಾದ್ಯಂತ ಭೀತಿ ಹುಟ್ಟಿಸುವ ಮೂಲಕ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಶನಿವಾರ ಅಸ್ಸಾಂನ ಸಿಲ್ಚಾರ್‌ನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಕಾಂಗ್ರೆಸ್ ಉದ್ದೇಶಪೂರ್ವಕವಾಗಿ ವದಂತಿ ಹಬ್ಬಿಸುತ್ತಿದೆ. ಸುಳ್ಳು ವಿಡಿಯೋಗಳ (ರೀಲ್ಸ್) ಮೂಲಕ ಜನರ ದಿಕ್ಕುತಪ್ಪಿಸುತ್ತಿದೆ ಎಂದು ಪ್ರತಿಪಾದಿಸಿದರು. ಜಾಗತಿಕ ಯುದ್ಧದ ಸಂದರ್ಭದಲ್ಲಿ ಜವಾಬ್ದಾರಿಯುತ ರಾಜಕೀಯ ಪಕ್ಷವಾಗಿ ಕಾರ್ಯನಿರ್ವಹಿಸುವಲ್ಲಿ ವಿರೋಧ ಪಕ್ಷ ವಿಫಲವಾಗಿದೆ ಎಂದು ಅವರು ಟೀಕಿಸಿದರು.

ನಿರ್ಲಕ್ಷ್ಯ ಮತ್ತು ಪರಿಣಾಮಗಳು: ಈಶಾನ್ಯ ಭಾರತದ ಐತಿಹಾಸಿಕ ನಿರ್ಲಕ್ಷ್ಯದ ಬಗ್ಗೆ ಮಾತನಾಡಿದ ಪ್ರಧಾನಿ, ದಶಕಗಳ ಕಾಲ ಈ ಪ್ರದೇಶವನ್ನು ದಿಲ್ಲಿ ಮತ್ತು ಕೇಂದ್ರದ ಆಡಳಿತಗಾರರ ಹೃದಯದಿಂದ ದೂರ ಇಡಲಾಗಿತ್ತು. ಸ್ವಾತಂತ್ರ್ಯದ ಸಮಯದಲ್ಲಿ ಬರಾಕ್ ಕಣಿವೆಯ ಸಮುದ್ರ ಮಾರ್ಗದ ಸಂಪರ್ಕವನ್ನು ಕಡಿತಗೊಳಿಸುವಂತೆ ಗಡಿ ಗುರುತಿಸಲು ಕಾಂಗ್ರೆಸ್ ಅವಕಾಶ ಮಾಡಿಕೊಟ್ಟಿತ್ತು. ಇದು ಈ ಭಾಗದ ಕೈಗಾರಿಕಾ ಸಾಮರ್ಥ್ಯವನ್ನು ಕುಂದಿಸಿತು ಎಂದು ಪ್ರಧಾನಿ ಆರೋಪಿಸಿದರು. ಪ್ರಸ್ತುತ ಬಿಜೆಪಿ ಸರ್ಕಾರ ರೈತರಿಗೆ 20,000 ಕೋಟಿ ರೂ.ಗೂ ಹೆಚ್ಚು ಹಣವನ್ನು ನೇರವಾಗಿ ತಲುಪಿಸಿದೆ ಎಂದು ಅವರು ತಿಳಿಸಿದರು.



ಮೂಲಸೌಕರ್ಯ ಯೋಜನೆಗಳ ಅನಾವರಣ: ಅಸ್ಸಾಂನಲ್ಲಿ ಶುಕ್ರವಾರದಿಂದ ಒಟ್ಟು 47,800 ಕೋಟಿ ರೂ. ವೆಚ್ಚದ ಯೋಜನೆಗಳಿಗೆ ಚಾಲನೆ ನೀಡಲಾಗಿದ್ದು, ಶನಿವಾರ ಸಿಲ್ಚಾರ್‌ನಲ್ಲಿ 23,550 ಕೋಟಿ ರೂ.ಗಳ ಯೋಜನೆಗಳನ್ನು ಅನಾವರಣಗೊಳಿಸಲಾಯಿತು. ಸಿಲ್ಚಾರ್ ಮತ್ತು ಮೇಘಾಲಯದ ಶಿಲ್ಲಾಂಗ್ ನಡುವೆ 22,864 ಕೋಟಿ ರೂ. ವೆಚ್ಚದ 'ಎಕ್ಸ್ ಪ್ರೆಸ್‌ವೇ' ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ಅಜಾನೂರಿನಲ್ಲಿ ಪ್ರವಾಸೋದ್ಯಮ ಯೋಜನೆಗೆ ಶಿಲಾನ್ಯಾಸ

ಕಾಸರಗೋಡು ಪ್ರವಾಸೋದ್ಯಮಕ್ಕೆ ಬೇಕಲ ಬೃಹತ್ ಶಕ್ತಿ: ಸಚಿವ ರಿಯಾಸ್



ಕಾಸರಗೋಡು: ಕಾಸರಗೋಡು ಜಿಲ್ಲೆಯ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿಗೆ ನಾಂದಿ ಹಾಡಲಿರುವ ಬೇಕಲ ಪ್ರವಾಸೋದ್ಯಮ ಗ್ರಾಮ ಯೋಜನೆಯ ಶಿಲಾನ್ಯಾಸ ಸಮಾರಂಭವನ್ನು ಕೇರಳ ಲೋಕೋಪಯೋಗಿ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಪಿ.ಎ.ಮುಹಮ್ಮದ್ ರಿಯಾಸ್ ಆನ್‌ಲೈನ್ ಮೂಲಕ ನೆರವೇರಿಸಿದರು.

ಕಳೆದ ಕೆಲವು ವರ್ಷಗಳಲ್ಲಿ ಕೇರಳದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮಹತ್ತರವಾದ ಪ್ರಗತಿಯಾಗಿದೆ ಎಂದು ಸಚಿವರು ಹೇಳಿದರು. ಪ್ರವಾಸಿಗರ ಸಂಖ್ಯೆಯಲ್ಲಿನ ಹೆಚ್ಚಳ ಮತ್ತು ಹೊಸ ಪ್ರವಾಸೋದ್ಯಮ ಕೇಂದ್ರಗಳ ಸ್ಥಾಪನೆ ಯಿಂದಾಗಿ ಇಡೀ ವಲಯದಲ್ಲಿ ಪ್ರಮುಖ ಬದಲಾವಣೆ ಗಳಾಗಿವೆ. ಎಡರಂಗ ಸರಕಾರ ಅಧಿಕಾರಕ್ಕೆ ಬಂದಾಗ ಕೋವಿಡ್ ಸಾಂಕ್ರಾಮಿಕ ರೋಗವು ಗಂಭೀರ ಪರಿಸ್ಥಿತಿಯಾಗಿದ್ದರೂ ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ಚರ್ಚೆ ನಡೆಸಿದ ನಂತರ ಪ್ರವಾಸೋದ್ಯಮ ಕ್ಷೇತ್ರವನ್ನು ಪುನರುಜ್ಜೀವನಗೊಳಿಸಲು ಹಲವಾರು ಯೋಜನೆಗಳನ್ನು ರೂಪಿಸಲಾಯಿತು ಎಂದು ಸಚಿವರು ತಿಳಿಸಿದರು.

2025ರಲ್ಲಿ 2,50,52,366 ದೇಶೀಯ ಪ್ರವಾಸಿಗರು ಕೇರಳಕ್ಕೆ ಆಗಮಿಸಿದ್ದರು. ಒಂದು ವರ್ಷದಲ್ಲಿ 28 ಲಕ್ಷಕ್ಕೂ ಹೆಚ್ಚು ಪ್ರವಾಸಿಗರ ಹೆಚ್ಚಳವಾಗಿದೆ ಮತ್ತು ಒಟ್ಟಾರೆ ಪ್ರವಾಸಿಗರ ಸಂಖ್ಯೆಯಲ್ಲಿ ಶೇಕಡಾ 11.30 ರಷ್ಟು ಹೆಚ್ಚಳವಾಗಿದೆ ಎಂದು ಅವರು ಮಾಹಿತಿ ನೀಡಿದರು. ಅಂತಾರಾಷ್ಟ್ರೀಯ ಮಾಧ್ಯಮಗಳ ಮಾನ್ಯತೆ ಲಭಿಸಿರುವುದು ಕೇರಳದ ಪ್ರವಾಸೋದ್ಯಮ ಸಾಮರ್ಥ್ಯವು ಜಾಗತಿಕ ಗಮನ ಸೆಳೆಯುತ್ತಿದೆ ಎಂಬುದಕ್ಕೆ ಪುರಾವೆಯಾಗಿದೆ ಎಂದು ಅವರು ಉಲ್ಲೇಖಿಸಿದರು.

ನ್ಯೂಯಾರ್ಕ್ ಟೈಮ್ಸ್ ಕೇರಳವನ್ನು ವಿಶ್ವದ 50 ಭೇಟಿ ನೀಡಲೇಬೇಕಾದ ಸ್ಥಳಗಳಲ್ಲಿ ಒಂದಾಗಿ ಆಯ್ಕೆ ಮಾಡಿದೆ ಮತ್ತು ಟೈಮ್ಸ್ ನಿಯತಕಾಲಿಕೆಯು ಕೇರಳವನ್ನು ವಿಶ್ವದ ನೋಡಲೇಬೇಕಾದ ಸ್ಥಳಗಳಲ್ಲಿ ಸೇರಿಸಿದೆ. ಬೇಕಲ ರೆಸಾರ್ಟ್ಸ್ ಅಭಿವೃದ್ಧಿ ನಿಗಮ (ಬಿಆರ್‌ಡಿಸಿ) ಜಾರಿಗೆ ತರುತ್ತಿರುವ ಆರನೇ ರೆಸಾರ್ಟ್ ತಾಣವಾದ ಬೇಕಲ ಪ್ರವಾಸೋದ್ಯಮ ಗ್ರಾಮ ಯೋಜನೆಯನ್ನು ಅಜಾನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ 33.18 ಎಕರೆ ಭೂಮಿಯಲ್ಲಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಇದೊಂದು ಜಿಲ್ಲಾ ಪ್ರವಾಸೋದ್ಯಮವಲಯಕ್ಕೆ ಬೃಹತ್ ಶಕ್ತಿಯಾಗಲಿದೆ ಎಂದು ಅವರು ನುಡಿದರು.

ಕಾಞಂಗಾಡು ಶಾಸಕ ಇ.ಚಂದ್ರಶೇಖರನ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉದುಮ ಶಾಸಕ ಸಿ.ಎಚ್.ಕುಂಞಂಬು ಮತ್ತು ಅಮರಾವತಿ ಗ್ರೂಪ್ ಎಂಡಿ ಸಿ.ಚಂದ್ರಶೇಖರನ್ ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದರು. ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಕೆ.ಕೆ.ಸೋಯಾ, ಕಾಞಂಗಾಡು ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಕೆ.ಸುಜಾತ, ಕಾಞಂಗಾಡು ನಗರಸಭೆಯ ಅಧ್ಯಕ್ಷ ವಿ.ವಿ.ರಮೇಶನ್, ಅಜಾನೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ವಿ.ವಿ.ತುಳಸಿ, ಉಪಾಧ್ಯಕ್ಷ ಮೂಲಕಂಡಂ ಪ್ರಭಾಕರನ್, ಜಿಲ್ಲಾ ಪಂಚಾಯತ್ ಸದಸ್ಯ ಸಬೀಶ್, ಬ್ಲಾಕ್ ಪಂಚಾಯತ್ ಸದಸ್ಯ ರತೀಶ್ ವೆಳ್ಳಮತ್ತಟ್ಟ, ವಾರ್ಡ್ ಸದಸ್ಯರಾದ ಟಿ.ವಿ.ಕಾವ್ಯ, ಕೆ.ರತೀಶ್, ಬಿಆರ್‌ಡಿಸಿ ಪ್ರಧಾನ ವ್ಯವಸ್ಥಾಪಕ ಕೆ.ಎಂ.ರವೀಂದ್ರನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇದೇ ವೇಳೆ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ಶಾಸಕ ಇ.ಚಂದ್ರಶೇಖರನ್ ಮತ್ತು ಶಾಸಕ ಸಿ.ಎಚ್.ಕುಂಞಂಬು ಅವರು ಅಮರಾವತಿ ಸಮೂಹ ಕಂಪೆನಿಗಳ ವ್ಯವಸ್ಥಾಪಕ ನಿರ್ದೇಶಕ ಸಿ.ಚಂದ್ರಶೇಖರನ್ ಅವರಿಗೆ ತಿಳುವಳಿಕೆ ಪತ್ರವನ್ನು ಹಸ್ತಾಂತರಿಸಿದರು. ಬಿಆರ್‌ಡಿಸಿ ಎಂಡಿ ಶಿಜಿನ್ ಪಿ. ಸ್ವಾಗತಿಸಿದರು. ಯೋಜನಾ ಸಂಯೋಜಕಿ ಸುಕನ್ಯಾ ನಂಬಿಯಾರ್ ವರದಿ ಮಂಡಿಸಿದರು. ನಿರ್ದೇಶಕ ಭರತ್ ಧನ್ಯವಾದವಿತ್ತರು.

ಉದ್ದೇಶಿತ ಯೋಜನೆಗೆ 200 ಕೋಟಿ ರೂಪಾಯಿ

ಚಿತ್ತಾರಿ ಮತ್ತು ಅಜಾನೂರು ಗ್ರಾಮಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರಗಳ ಅಭಿವೃದ್ಧಿಗಾಗಿ (ಬೇಕಲ ಪ್ರವಾಸೋದ್ಯಮ ಗ್ರಾಮ) ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ರಾಜ್ಯ ಪ್ರವಾಸೋದ್ಯಮ ಇಲಾಖೆ ಆಯೋಜಿಸಿದ್ದ ಪ್ರವಾಸೋದ್ಯಮ ಹೂಡಿಕೆದಾರರ ಸಭೆ (ಟಿಐಎಂ)ಯಲ್ಲಿ ಈ ಯೋಜನೆಯನ್ನು ಪರಿಗಣಿಸಲಾಗಿತ್ತು. ಕರ್ನಾಟಕದ ಮಂಡ್ಯದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಅಮರಾವತಿ ಎಂಟರ್ ಪ್ರೈಸಸ್ ಕಂಪೆನಿಯನ್ನು ಕೇರಳ ಸರಕಾರದ ಇ-ಟೆಂಡರ್ ಪೋರ್ಟಲ್ ಮೂಲಕ ಬಿಆರ್ ಡಿಸಿ ನಡೆಸಿದ ಟೆಂಡರ್ ಪ್ರಕ್ರಿಯೆಯಲ್ಲಿ ಗುತ್ತಿಗೆದಾರರಾಗಿ ಆಯ್ಕೆ ಮಾಡಲಾಗಿದೆ. ಮೊದಲ ಹಂತದಲ್ಲಿ 200 ಕೋಟಿ ರೂ. ವೆಚ್ಚದಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುವ ನಿರೀಕ್ಷೆಯಿದೆ.

ತಿಂಗಳೆಯಲ್ಲಿ ಸಾಹಿತ್ಯೋತ್ಸವ | ಮುರುಳಿ ಕಡೇಕಾರ್‌ಗೆ ಪ್ರಶಸ್ತಿ ಪ್ರದಾನ

ಶ್ರೀರಾಮ ನಡೆದ ಹಾದಿ ಎಲ್ಲರಿಗೂ ಆದರ್ಶ



ಹೆಬ್ರಿ: ನಮ್ಮಲ್ಲಿರುವ ಶಕ್ತಿಯು ನಮ್ಮನ್ನು ರಕ್ಷಿಸಿಕೊಳ್ಳಲು ಅಲ್ಲ, ಬದಲಾಗಿ ಸಮಾಜದ ಒಳಿತಿಗಾಗಿ. ಲೋಕ ಕಲ್ಯಾಣಕ್ಕಾಗಿ ಸೇವೆಯನ್ನು ಮಾಡಬೇಕು ಎಂದು ಜಗತ್ತಿಗೆ ಸಂದೇಶವನ್ನು ಸಾರಿದ ಶ್ರೀರಾಮ. ಭಾರತೀಯ ಪರಂಪರೆಯಲ್ಲಿ ಜೀವನ ಮೌಲ್ಯದ ಮೊದಲ ಉದಾಹರಣೆ ಶ್ರೀರಾಮ ಎಂದು ಚಿಂತಕಿ ವೀಣಾ ಬನ್ನಂಜೆ ಅಭಿಪ್ರಾಯಪಟ್ಟರು.

ಅವರು ಮಾ.8 ರಂದು ತಿಂಗಳೆ ಪ್ರತಿಷ್ಠಾನದ ವತಿಯಿಂದ ತಿಂಗಳೆಯಲ್ಲಿ ನಡೆದ ಸಾಹಿತ್ಯೋತ್ಸವದಲ್ಲಿ ಮಾತನಾಡಿದರು.

ಭಾರತೀಯ ಪರಂಪರೆಯಲ್ಲಿ ಇನ್ನೊಂದು ಚ್ಯುತಿ ಬಾರದಂತೆ ಬದುಕ ಬಹುದಾದ ಏಕಮಾತ್ರ ವ್ಯಕ್ತಿತ್ವ ಶ್ರೀರಾಮನದ್ದು. ವಾಲ್ಮೀಕಿಯವರು ಆರಂಭದ 15 ವರ್ಷವನ್ನು ಉಲ್ಲೇಖಿಸಿಲ್ಲ. ರಾಮನ ಬಾಲ್ಯದ ಬಗ್ಗೆ ಎಲ್ಲಿಯೂ ದಾಖಲೆ ಇಲ್ಲ. ಆದರೆ 15 ವರ್ಷದ ನಂತರ ನಡೆದ ಹಾದಿ ಇಂದು ಎಲ್ಲರಿಗೂ ಆದರ್ಶವಾಗಿದೆ ಎಂದರು.

ಇಂತಹ ರಾಮ ಭಕ್ತರು ಆರ್‌ಎಸ್‌ಎಸ್ ಸಂಘಟನೆಯನ್ನು ಕಟ್ಟಿಕೊಂಡು ಸೇವೆಯನ್ನು ನೀಡುತ್ತಿದ್ದಾರೆ. ಆದರೆ ಹೆಸರನ್ನು ನೊಂದಾಯಿಸಿಲ್ಲ ಎಂದು ರಾವಣ ಪರಂಪರೆಯವರು ಮುಗಿಬಿದ್ದಿದ್ದಾರೆ. ಸೇವೆಯೇ ಅಂತಿಮ ಎಂದು ನಿರ್ಧರಿಸಿ ರಾಮನ ತತ್ವವನ್ನು ಅಳವಡಿಸಿಕೊಂಡ ಸಂಸ್ಥೆಯೂ, ವಾನರ ಸೇನೆಯಂತೆ ಗಣ ಮೌನದಿಂದ ಟೀಕೆಗಳ ನಡುವೆಯೂ ತನ್ನ ಕೆಲಸದಲ್ಲಿ ನಿರತವಾಗಿರುವುದು ಶ್ಲಾಘನೀಯ ಎಂದು ನುಡಿದರು.

ಮಾಹೆ ಮಣಿಪಾಲದ ಸಹಕುಲಾಪತಿ ಡಾ.ಹೆಚ್.ಎಸ್.ಬಲ್ಲಾಳ್ ಅಧ್ಯಕ್ಷತೆ ವಹಿಸಿದ್ದರು.

ಆರ್‌ಎಸ್‌ಎಸ್ ಮುಖಂಡರಾದ ಬಾಲಕೃಷ್ಣ ಭಂಡಾರಿ ಕುಂಬ್ಳೆ, ರವೀಂದ್ರ ಶೆಟ್ಟಿ ಕೊಲ್ಲಬೆಟ್ಟು, ಪ್ರಸಾದ್ ನೇತ್ರಾಲಯದ ನಿರ್ದೇಶಕ ಡಾ.ಕೃಷ್ಣಪ್ರಸಾದ್ ಕೂಡ್ಲು ಉಪಸ್ಥಿತರಿದ್ದರು.

ತಿಂಗಳೆ ಪ್ರತಿಷ್ಠಾನದ ಅಧ್ಯಕ್ಷ ತಿಂಗಳೆ ವಿಕ್ರಮಾರ್ಜುನ ಹೆಗ್ಗಡೆ ಸ್ವಾಗತಿಸಿದರು. ಅಮಿತಾಂಜಲಿ ಕಿರಣ್ ಹಾಗೂ ಡಾ.ಪ್ರಶಾಂತ್ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ತಿಂಗಳೆ ಪ್ರಶಸ್ತಿಯನ್ನು ನಿವೃತ್ತ ಶಿಕ್ಷಕ ಹಾಗೂ ಯಕ್ಷ ಕಲಾರಂಗದ ಕಾರ್ಯದರ್ಶಿ ಮುರುಳಿ ಕಡೆಕಾರ್ ಅವರಿಗೆ ನೀಡಿ ಗೌರವಿಸಲಾಯಿತು.

ಅರೆಭಾಷೆ ಅಕಾಡೆಮಿಯಿಂದ ಸಾಧಕರಿಗೆ ಗೌರವ ಪ್ರಶಸ್ತಿ ಪ್ರದಾನ

ಸರ್ಕಾರದ ಸರ್ವ ಪ್ರೋತ್ಸಾಹ: ದಿನೇಶ್



ಮಂಗಳೂರು: ಭಾಷಾ ಪರಂಪರೆಯನ್ನು ರಕ್ಷಿಸುವಲ್ಲಿ ಮತ್ತು ಅದನ್ನು ಭವಿಷ್ಯದ ಪೀಳಿಗೆಗೆ ರವಾನಿಸುವ ನಿಟ್ಟಿನಲ್ಲಿ ಭಾಷಾ ಅಕಾಡೆಮಿಗಳು ನಿರ್ಣಾಯಕ ಪಾತ್ರ ವಹಿಸಲಿವೆ. ಈ ಹಿನ್ನೆಲೆಯಲ್ಲಿ ಅಕಾಡೆಮಿಯ ಕಾರ್ಯ ಚಟುವಟಿಕೆಗಳಿಗೆ ಸರ್ಕಾರ ಸದಾ ಪ್ರೋತ್ಸಾಹ ನೀಡಲಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮಂಗಳೂರಿನ ಅಂಬೇಡ್ಕರ್ ಭವನದಲ್ಲಿ ಶನಿವಾರ ಅರೆಭಾಷೆ ಅಕಾಡೆಮಿ ವತಿಯಿಂದ ಮೂವರು ಸಾಧಕರಿಗೆ ಗೌರವ ಪ್ರಶಸ್ತಿ ಪ್ರದಾನ ನೆರವೇರಿಸಿ ಅವರು ಮಾತನಾಡಿದರು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಚಟುವಟಿಕೆಗಳನ್ನು ಬೆಂಬಲಿಸಲು, ಅರೆಭಾಷೆ ಮತ್ತು ಅದರ ಶ್ರೀಮಂತ ಸಾಂಸ್ಕೃತಿಕ ಸಂಪ್ರದಾಯಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದರು.

ಅರೆಭಾಷೆ ಕೆಲವು ಪ್ರದೇಶಗಳಿಗೆ ಸೀಮಿತವಾಗಿದ್ದರೂ, ಯಾವುದೇ ನಿರ್ದಿಷ್ಟ ಜಾತಿ ಅಥವಾ ಸಮುದಾಯಕ್ಕೆ ಸೀಮಿತವಾಗಿಲ್ಲ. ಒಕ್ಕಲಿಗ ಗೌಡ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿ ಈ ಭಾಷೆಯನ್ನು ಮಾತನಾಡುತ್ತಿದ್ದರೆ, ಇತರ ಸಮುದಾಯಗಳಿಗೆ ಸೇರಿದವರೂ ತಮ್ಮ ದೈನಂದಿನ ಜೀವನದಲ್ಲಿ ಅರೆಭಾಷೆಯನ್ನು ಬಳಸುತ್ತಾರೆ. ಅರೆಭಾಷೆ ಸಾಹಿತ್ಯ, ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ಸರ್ಕಾರ ಅಕಾಡೆಮಿ ಸ್ಥಾಪಿಸಿದೆ ಎಂದವರು ಹೇಳಿದರು.

ಭಾಷೆ ಅಥವಾ ಜಾತಿಯ ಆಧಾರದ ಮೇಲೆ ಸಮಾಜವನ್ನು ವಿಭಜಿಸಲು ಯಾರೂ ಪ್ರಯತ್ನಿಸಬಾರದು. ನಮ್ಮ ಸಂವಿಧಾನವನ್ನು ಪ್ರತಿಯೊಬ್ಬ ಭಾರತೀಯನನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ ಮತ್ತು ಅದು ಸಮಾನತೆ ಮತ್ತು ಒಳಗೊಳ್ಳುವಿಕೆಯ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ನಾವು ಎಲ್ಲ ಭಾಷೆಗಳನ್ನು ಪ್ರೀತಿಸಬೇಕು ಮತ್ತು ಉತ್ತೇಜಿಸಬೇಕು ಮತ್ತು ನಮ್ಮ ಭಾಷಾ ಪರಂಪರೆ ನಿರಂತರವಾಗಿ ಅಭಿವೃದ್ಧಿ ಹೊಂದುವುದನ್ನು ಖಚಿತಪಡಿಸಿಕೊಳ್ಳಲು ಸಾಮೂಹಿಕವಾಗಿ ಕೆಲಸ ಮಾಡಬೇಕು ಎಂದು ಸಚಿವರು ಹೇಳಿದರು.

ಕಾರ್ಯಕ್ರಮದಲ್ಲಿ ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಎ.ಗಫೂರ್, ಪ್ರಮುಖರಾದ ಎಂ.ಬಿ.ಸದಾಶಿವ, ಟಿ.ಎಂ. ಶಾಹೀದ್ ತೆಕ್ಕಿಲ್, ಶಾಲೆಟ್ ಪಿಂಟೋ, ಮಮತಾಡಿ. ಎಸ್.ಗಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ರಾಜೇಶ್ ಜಿ ಮತ್ತಿತರರು ಉಪಸ್ಥಿತರಿದ್ದರು.

ಸಾಧಕರಿಗೆ ಪ್ರಶಸ್ತಿ

ಸಂಶೋಧನೆ ಮತ್ತು ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಅನಂತರಾಜ ಗೌಡ, ಅರೆಭಾಷಿಕರ ಸಂಘಟನೆ ಮತ್ತು ಸಾಮಾಜ ಸೇವೆಗಾಗಿ ಲೋಕೇಶ್ವರಿ ವಿನಯಚಂದ್ರ, ಅರೆಭಾಷೆ ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಕಟ್ರತನ ಲಲಿತಾ ಅಯ್ಯಣ್ಣ ಅವರಿಗೆ ಅಕಾಡೆಮಿಯ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರತಿ ಪ್ರಶಸ್ತಿಯು 50 ಸಾವಿರ ರೂ. ನಗದು ಬಹುಮಾನ ಮತ್ತು ಪ್ರಶಂಸಾ ಪತ್ರವನ್ನು ಒಳಗೊಂಡಿದೆ.


4,824 ಕೋಟಿ ಬಂಡವಾಳ ಹೂಡಿಕೆಗೆ ಅನುಮೋದನೆ



• **ಬೆಂಗಳೂರು:** ರಾಜ್ಯದ 13 ಜಿಲ್ಲೆಗಳಲ್ಲಿ 37 ಹೊಸ ಕೈಗಾರಿಕೆಗಳು ಮತ್ತು ಹೆಚ್ಚುವರಿ ಹೂಡಿಕೆಯ 2 ಯೋಜನೆಗಳ ಒಟ್ಟು 4,824.31 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ 158ನೇ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಐಟಿ ಮೂಲಸೌಲಭ್ಯ, ಸಕ್ಕರೆ ಕಾರ್ಖಾನೆ, ಟೆಕ್ನಿಕಲ್ ಟೆಕ್ಸ್‌ಟೈಲ್, ಕಂಪ್ರೆಸ್ಡ್ ಗ್ಯಾಸ್, ವೈಮಾಂತರಿಕ್ಷ, ಚಿನ್ನಾಭರಣ ತಯಾರಿಕೆ,ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಹಾಗೂ ಪಂಚತಾರಾ ಹೋಟೆಲ್ ನಿರ್ಮಾಣ ಯೋಜನೆಗಳಿಗೆ ನೀಡಿರುವ ಅನುಮೋದನೆಗಳಿಂದ ರಾಜ್ಯದಲ್ಲಿ ಹೊಸದಾಗಿ 14,525 ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ. ಶುಕ್ರವಾರ ನಡೆದ ಸಭೆಯ ಬಗ್ಗೆ ಮಾಹಿತಿ ನೀಡಿರುವ ಸಚಿವ ಎಂ.ಬಿ ಪಾಟೀಲ ಅವರು, 50 ಕೋಟಿಗೂ ಹೆಚ್ಚು ಹೂಡಿಕೆಯ 22 ಪ್ರಮುಖ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿರುವುದರಿಂದ ರಾಜ್ಯದಲ್ಲಿ 3908.68 ಕೋಟಿ ಹೂಡಿಕೆ ಆಗಲಿದೆ. 12,475 ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದು ತಿಳಿಸಿದ್ದಾರೆ. ಇನ್ನೂ 15 ಕೋಟಿಗಳಿಂದ 50 ಕೋಟಿ ಒಳಗಿನ ಹೂಡಿಕೆಯ 15 ಹೊಸ ಯೋಜನೆಗಳಿಗೆ ನೀಡಿರುವ ಅನುಮೋದನೆ ಫಲವಾಗಿ 350.60 ಕೋಟಿ ಹೂಡಿಕೆ ಆಗಲಿದ್ದು, 1,750 ಜನರಿಗೆ ಉದ್ಯೋಗಾವಕಾಶಗಳು ಸಿಗಲಿವೆ. ಹೆಚ್ಚುವರಿ ಹೂಡಿಕೆಯ 2 ಯೋಜನೆಗಳಿಗೆ ನೀಡಿರುವ ಅನುಮೋದನೆಯಿಂದ 565.03 ಕೋಟಿ ಹೂಡಿಕೆಯಾಗಲಿದ್ದು, 300 ಜನರಿಗೆ ಉದ್ಯೋಗಾವಕಾಶ ಸಿಗಲಿವೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ರಾಮ ಬಾಣ



ನುಸುಳುಕೋರರಿಗೆ ಟಿಎಂಸಿ ರಕ್ಷಕ

ಪುಟ ೧ ➜ ಇಲ್ಲಿ ಬಂಗಾಳಿ ಹಿಂದುಗಳನ್ನು ಉದ್ದೇಶಪೂರ್ವಕವಾಗಿ ಅಲ್ಪಸಂಖ್ಯಾತರನ್ನಾಗಿ ಮಾಡಲಾಗುತ್ತಿದೆ. ಕಿರುಕುಳಕ್ಕೊಳಗಾದ ಹಿಂದು ನಿರಾಶ್ರಿತರಿಗೆ ಪೌರತ್ವ ನೀಡುವುದನ್ನು ಟಿಎಂಸಿ ವಿರೋಧಿಸಿದೆ ಎಂದು ಮೋದಿ ಹೇಳಿದ್ದಾರೆ.

ಇದೇ ವೇಳೆ, ಪಶ್ಚಿಮ ಬಂಗಾಳಕ್ಕೆ 18,680 ಕೋಟಿ ರೂ. ಮೊತ್ತದ ಬೃಹತ್ ರಸ್ತೆ ಸಂಪರ್ಕ ಯೋಜನೆಗಳನ್ನು ಅನಾವರಣಗೊಳಿಸಿದರು. ಇದರಲ್ಲಿ 231ಕಿ.ಮೀ. ದೀರ್ಘ ವ್ಯಾಪ್ತಿಯ ಖರಗ್‌ಪುರ-ಮೋರೆಗ್ರಾಮ್ ಆರ್ಥಿಕ ಕಾರಿಡಾರ್ ಚತುಷ್ಪಥ ಯೋಜನೆಗೆ ಶಿಲಾನ್ಯಾಸವೂ ಸೇರಿದೆ. ಈ ಮಾರ್ಗದಿಂದಾಗಿ ಪ್ರಯಾಣ ದೂರ 120ಕಿ.ಮೀ.ಗಳಷ್ಟು ಇಳಿಕೆಯಾಗಲಿದ್ದು, ಪ್ರಯಾಣದ ಅವಧಿ ಕೂಡ 7ರಿಂದ 8 ಗಂಟೆಗಳಷ್ಟು ಕಡಿಮೆಯಾಗಲಿದೆ. ಈ ರಸ್ತೆ ಯೋಜನೆಯು ಖರಗ್‌ಪುರ -ಸಿಲಿಗುರಿ ನಡುವಣ ಆರ್ಥಿಕ ಕಾರಿಡಾರ್‌ನ ಭಾಗವಾಗಿದ್ದು, ಇದು ಪಶ್ಚಿಮ ಮೇದಿನಿಪುರ, ಬಂಕುರ, ಹೂಗ್ಲಿ, ಪೂರ್ವ ಬರ್ಧಮಾನ್, ಬೀರ್‌ಭೂಮ್ ಮತ್ತು ಮುರ್ಷಿದಾಬಾದ್ ಜಿಲ್ಲೆಗಳ ಮೂಲಕ ಹಾದುಹೋಗಲಿದ್ದು, ಲಕ್ಷಾಂತರ ಜನರಿಗೆ ಪ್ರಯೋಜನವಾಗಲಿದೆ. ಹಾಗೆಯೇ , 5.6ಕಿ.ಮೀ. ಉದ್ದದ ದುಬ್ರಜ್‌ಪುರ್‌ನ ಚತುಷ್ಪಥ ಬೈಪಾಸ್ ಮತ್ತು ಕಂಗಸಬಾತಿ ಮತ್ತು ಶಿಲಾಬತಿ ನದಿಗಳಿಗೆ ಎನ್‌ಎಚ್-14ರಲ್ಲಿ ಪ್ರಮುಖ ಹೆಚ್ಚುವರಿ ಚತುಷ್ಪಥ ಸೇತುವೆಗಳೂ ಪ್ರಧಾನಿಯವರು ಶಿಲಾನ್ಯಾಸಗೈದರು. ಜತೆಗೆ ಎನ್ ಎಚ್-19 ಮತ್ತು ಎನ್‌ಎಚ್-14ರ ಭಾಗಗಳನ್ನೂ ಉದ್ಘಾಟಿಸಿದರು.

ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ

ಪುಟ ೧ ➜ ಈ ಸಂದರ್ಭ ಬಿಜೆಪಿ ನಾಯಕರೊಬ್ಬರು ಹಾಗೂ ಪೊಲೀಸ್ ಅಧಿಕಾರಿ ಗಾಯಗೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುವ ಕೆಲ ಗಂಟೆಯ ಮೊದಲು ಈ ಘಟನೆ ನಡೆದಿದೆ. ಬಿಜೆಪಿ ಕಾರ್ಯಕರ್ತರು ಪ್ರಧಾನಿ ಮೋದಿಯವರನ್ನು ಸ್ವಾಗತಿಸಲು ತೆರಳುತ್ತಿದ್ದ ವೇಳೆ ಇದ್ದಕ್ಕಿದ್ದಂತೆ ಹಲವೆಡೆಗಳಲ್ಲಿ ಕಲ್ಲು ತೂರಾಟ ಆರಂಭಗೊಂಡಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜ

◈ ಕಸಾಪ ಜೊತೆ ಸಂಘರ್ಷ, ನಟ್ ಬೋಲ್ಟ್ ಟೈಟ್ ಮಾಡ್ತೀನಿ ಎಂದು ಸಿನಿಮಾದವರೊಂದಿಗೆ ಸಂಘರ್ಷ , ಜಗ್ ಬಾಸ್ ಜತೆಗೂ ಜಗಳ, ರಸ್ತೆ ಸರಿಯಿಲ್ಲ ಎಂದಿದ್ದಕ್ಕಾಗಿ ಉದ್ಯಮಿಗಳೊಂದಿಗೆ ಸಂಘರ್ಷ, ಬ್ಯಾಲೆಟ್ ಪೇಪರ್ ಬೇಕು ಎಂದು ಚುನಾವಣಾ ಆಯೋಗದೊಂದಿಗೆ ಸಂಘರ್ಷ ,ಇದು ಕರ್ನಾಟಕ ಸರಕಾರ

-ವಿ.ಸುನಿಲ್ ಕುಮಾರ್

- ಸಂಘರ್ಷವಿದ್ದಲ್ಲಿ ಸುದ್ದಿಯಾಗುತ್ತೆ, ಸುದ್ದಿ ಇದ್ದಲ್ಲಿ ಸ್ವಾರಸ್ಯವಿರುತ್ತೆ , ಮಾಧ್ಯಮಗಳಿಗೆ ಆಹಾರ ಲಭಿಸುತ್ತೆ, ರಾಜಕಾರಣಿಗಳಿಗೆ ಉಚಿತ ಪ್ರಚಾರ ಸಿಗುತ್ತೆ, ಸರ್ವೇ ಜನಾ: ಸುಖಿನೋ ಭವಂತು!

ದಿನ ಭವಿಷ್ಯ

ಮೇಷ ಆತ್ಮೀಯರ ವರ್ತನೆಯಲ್ಲಿ ಬದಲಾವಣೆ ಕಂಡೀತು. ವಾಗ್ವಾದದಿಂದ ದೂರವಿರಿ. ಪ್ರವಾಸ ಅವಕಾಶ. ಬೆನ್ನು ನೋವು ಇದ್ದವರಿಗೆ ನಿರಾಳತೆ.

ವೃಷಭ ಉದ್ಯೋಗದ ಹುಡುಕಾಟ ಅಂತ್ಯ. ಶುಭ ಸುದ್ದಿ ಸಿಗಲಿದೆ. ದಂಪತಿ ಮಧ್ಯೆ ಕಲಹವಾದೀತು. ಬಿಪಿ, ಮಧುಮೇಹ ಇದ್ದವರು ಎಚ್ಚರ ವಹಿಸಿ.

ಮಿಥುನ ವೃತ್ತಿ ಮತ್ತು ಪ್ರೀತಿ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ. ಸರಿಯಾದ ಹೆಜ್ಜೆ ಇಟ್ಟರೆ ಸಫಲತೆ. ಆತ್ಮೀಯ ವ್ಯಕ್ತಿಗಳ ಮನ ನೋಯಿಸಬೇಡಿ.

ಕಟಕ ಸರಿಯಾದ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಸಾಗುತ್ತಿದೆ. ಕುಟುಂಬಸ್ಥರ ಮಧ್ಯೆ ಹೆಚ್ಚು ಸಮಯ ಕಳೆಯಿರಿ. ಅವರ ಮನಸ್ಸಿಗೆ ನೋವು ಉಂಟುಮಾಡಬೇಡಿ.

ಸಿಂಹ ನಿಮ್ಮ ಧೋರಣೆಗೆ ಮನೆಯವರಿಂದ ವಿರೋಧ. ಬಾಕಿ ಉಳಿದ ಕಾರ್ಯ ಮುಗಿಸಲು ಆದ್ಯತೆ ಕೊಡಿ. ಕ್ರೀಡಾಳುಗಳಿಗೆ ಸಾಧನೆಯ ಯಶ.

ಕನ್ಯಾ ಆತಿಯಾದ ನಿರೀಕ್ಷೆ ಫಲ ನೀಡದು. ಖಾಸಗಿ ಬದುಕಿನ ಕುರಿತು ಅನವಶ್ಯ ಚಿಂತಿಸುವಿರಿ. ನಿರಾಸೆಗೆ ಸಮಸ್ಯೆ ಕಾಡದು. ವಿವಾದ ವೊಂದು ಪರಿಹಾರ.

ತುಲಾ ವ್ಯಕ್ತಿಯೊಬ್ಬರು ನಿಮ್ಮ ಬದುಕಿನಲ್ಲಿ ಪ್ರವೇಶಿಸುವರು. ಅವರ ಜತೆ ಸಖ್ಯ ವೃದ್ಧಿ. ಸಂಭಾವಿತ ಕಾರ್ಯದಿಂದ ವ್ಯವಹಾರ ಬೆಳವಣಿಗೆ ಕಾಣುವುದು.

ವೃಶ್ಚಿಕ ಎಲ್ಲ ಕಾರ್ಯ ಸುಸೂತ್ರವಾಗಿ ಸಾಗಲಿದೆ. ಅಡ್ಡಿಗಳ ನಿವಾರಣೆ. ವೃತ್ತಿ ಸಂಬಂಧಿ ಉದ್ವೇಗ ಶಮನ. ಆಪ್ತರ ಜತೆಗಿನ ವಿರಸ ಅಂತ್ಯ.

ಧನು ಸಾಮಾಜಿಕ ಕಾರ್ಯದಲ್ಲಿ ಹೆಚ್ಚು ವ್ಯಸ್ತ. ಉಳಿದವರ ಜತೆ ಹೊಂದಾಣಿಕೆ ಇರಲಿ. ಸಣ್ಣ ಗಾಯದ ಸಾಧ್ಯತೆಯಿದೆ, ಎಚ್ಚರ ವಹಿಸಿ.

ಮಕರ ಬದುಕನ್ನು ಗಂಭೀರವಾಗಿ ಪರಿಗಣಿಸಿ. ಬೇಜಾಬ್ದಾರಿ ಧೋರಣೆ ಪ್ರತಿಕೂಲವಾದೀತು. ಇತರರಿಗೆ ಮಾನಸಿಕ ನೋವು ನೀಡಬೇಡಿ.

ಕುಂಭ ಖಾಸಗಿ ಸಮಸ್ಯೆ ಮನಸ್ಸಿಗೆ ಕಿರಿಕಿರಿ ತರಲಿದೆ. ಸಣ್ಣ ವಿಷಯವನ್ನೂ ತಪ್ಪು ಗ್ರಹಿಸುವಿರಿ. ವಿರಸ ಉಂಟಾದೀತು. ಅನಿರೀಕ್ಷಿತ ಧನಲಾಭ ಸಂಭವ.

ಮೀನ ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ನಷ್ಟ ಆಗದಂತೆ ನೋಡಿಕೊಳ್ಳಿ. ಮನೆಯವರ ಬೆಂಬಲ ವಿಶ್ವಾಸ ಹೆಚ್ಚಿಸಲಿದೆ. ಪ್ರವಾಸ ಸಂಭವ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30
ಅದೃಷ್ಟ ಸಂಖ್ಯೆ 0,5,9.1

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಮತ

ಸಂತ ರವಿದಾಸಗೆ ವಿಶಿಷ್ಟ ಸ್ಥಾನ



• **ಸಮಾಲ್ಖಾ (ಹರಿಯಾಣ):** ನಮ್ಮ ಶ್ರೇಷ್ಠ ಸಂತ ಪರಂಪರೆಯು ಭಾರತಕ್ಕೆ ದೇವರು ನೀಡಿದ ವಿಶೇಷ ಕೊಡುಗೆಯಾಗಿದೆ. ನಮ್ಮ ಸುದೀರ್ಘ ಇತಿಹಾಸದ ಪ್ರವಾಹದಲ್ಲಿ ಮಹಾನ್ ಸಂತ ಪರಂಪರೆಯು ಯಾವ ಸಮಾಜದಲ್ಲಿ ದೇವರ ಉಪಾಸನೆ ಮತ್ತು ಭಕ್ತಿಭಾವದ ಜಾಗರಣವನ್ನು ಮಾಡಿತೋ, ಅಲ್ಲಿಯೇ ಸಾಮಾಜಿಕ ರೀತಿಗಳು ಮತ್ತು ಬೇಧಭಾವವನ್ನು ನಿರ್ಮೂಲನೆ ಮಾಡುವ ಮೂಲಕ ಸಾಮರಸ್ಯದ ಸಮಾಜವನ್ನು ಬಲಪಡಿಸುವ ಪ್ರಯತ್ನಗಳನ್ನು ಮಾಡಿತು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಹರಿಯಾಣದ ಸಮಾಲ್ಖಾದಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರತಿನಿಧಿ ಸಭೆ - 2026ರಲ್ಲಿ ಸಂತ ಶಿರೋಮಣಿ ಸದ್ಗುರು ರವಿದಾಸ್ ಅವರ 650ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದ ಅವರು, ಸಂತ ಶಿರೋಮಣಿ ಸದ್ಗುರು ರವಿದಾಸ್ ಅವರ 650ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಆರ್ ಎಸ್ ಎಸ್ ಅವರಿಗೆ ಶ್ರದ್ಧೆಯ ಸುಮನಗಳನ್ನು ಅರ್ಪಿಸುತ್ತದೆ. ಮಹಾನ್ ಸಂತ ಪರಂಪರೆಯಲ್ಲಿ ಸಂತ ರವಿದಾಸ ಅವರಿಗೆ ವಿಶಿಷ್ಟ ಸ್ಥಾನವಿದೆ. ಅವರ ಕ್ರಿಯಾಶೀಲ ಜೀವನ ಮತ್ತು ಕಾರ್ಯ ನಮಗೆಲ್ಲರಿಗೂ ಪ್ರೇರಣೆಯಾಗಿದೆ. ಗೃಹಸ್ಥರಾಗಿ ದ್ದರೂ, ಸಾಂಸಾರಿಕ ವಿಷಯಗಳಲ್ಲಿ ಅಲಿಪ್ತರಾಗಿದ್ದು ಸಾಧು-ಸಂತರ ಮೇಲಿನ ಶ್ರದ್ಧೆ ಮತ್ತು ದೀನ-ಹೀನರ ಸೇವೆ ಅವರ ಸಹಜ ಸ್ವಭಾವವಾಗಿತ್ತು. ಆಧ್ಯಾತ್ಮಿಕ ದೃಷ್ಟಿಯಿಂದ ಪರಿಪೂರ್ಣವಾಗಿತ್ತು. ತಮ್ಮ ಜೀವನದ ಮೂಲಕ ಅವರು ಶ್ರಮದ ಘನತೆ ಮತ್ತು ಸಮಾಜದಲ್ಲಿ ಶುದ್ಧ, ಸಾತ್ವಿಕ ಮತ್ತು ಪಾರದರ್ಶಕ ಆಚರಣೆಯ ಮಹತ್ವವನ್ನು ಪುನಃಸ್ಥಾಪಿಸಿದರು ಎಂದರು.

ಭಕ್ತಿಪ್ರಜ್ಞೆಯ ಮಹಾನ್ ಸಂತ: ರವಿದಾಸ್ ಅವರು ಸಮಾಜದಲ್ಲಿ ಒಂದು ಹೊಸ ಚೇತನವನ್ನು ಪ್ರವಹಿಸಿದ ಭಕ್ತಿಪ್ರಜ್ಞೆಯ ಮಹಾನ್ ಸಂತರಾಗಿದ್ದರು. ಕಾಲಬಾಹ್ಯ ಪರಂಪರೆಯ ತ್ಯಾಗ ಹಾಗೂ ಕಾಲ ಸುಸಂಗತ ಸಾಮಾಜಿಕ ಪರಿವರ್ತನೆಯ ಆಂಗೀಕಾರ ಮಾಡುವಲ್ಲಿ ಸಮಾಜದ ಮನಸ್ಸನ್ನು ರೂಪಿಸುವಲ್ಲಿ ಅವರು ಐತಿಹಾಸಿಕ ಪಾತ್ರವನ್ನು ವಹಿಸಿದ್ದಾರೆ. ಅವರ ಚಿಂತನೆಗಳ ಮಹತ್ವವನ್ನು ಅರ್ಥೈಸಿಗೊಂಡು ಅವರ 41 ವಾಣಿಗಳನ್ನು ಗುರು ಗ್ರಂಥ ಸಾಹಿಬ್‌ನಲ್ಲಿ ಶಾಬಾದ್ ರೂಪದಲ್ಲಿ ಸೇರಿಸಲಾಗಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ರವಿದಾಸರು, ಅವರ ಶಿವಭಕ್ತಿ, ಸೇವಾ ಮನೋಭಾವ ಹಾಗೂ ಸಮಾಜದ ಮೇಲಿನ ನಿಶ್ಚಲಪ್ರೇಮದ ಕಾರಣ ಕಾಶಿಯ ವಿದ್ವತ್ ಜನರ ಸಹಿತ ಸಮಾಜದ ಎಲ್ಲಾ ವರ್ಗಗಳ ಜನರು ಅವರ ಮಹಾನತೆಯನ್ನು ಸ್ವೀಕರಿಸಿದರು. ಕಾಶಿ ನರೇಶ, ಹಾಗೂ ಮೀರಾಬಾಯಿಯಂತಹ ರಾಜಮನೆತನದ ಸದಸ್ಯರು ಕೂಡ ಅವರನ್ನು ತಮ್ಮ ಗುರು ಎಂದು ಪರಿಗಣಿಸಿದರು. ಗುರು ಮತ್ತು ಶಿಷ್ಯರ ರೂಪದಲ್ಲಿ ರವಿದಾಸ ಮತ್ತು ಮೀರಾಬಾಯಿಯವರ ಬಾಂಧವ್ಯವು ನಿರ್ಗುಣ ಮತ್ತು ಅನುಕರಣೀಯ ಕಲಿಕೆಯೂ ಆಗಿದೆ ಎಂದರು.

ಮತಾಂತರಕ್ಕೆ ಬಂದವರು ಅನುಯಾಯಿಗಳಾದರು



ಮುಸ್ಲಿಂ ಆಕ್ರಮಣಕಾರರ ಭಯೋತ್ಪಾದನೆಯ ಆ ಕಠಿಣ ಸಮಯದಲ್ಲಿ, ಭಕ್ತಿಯ ನಿರ್ಮಲ ಧಾರೆಯ ಪ್ರವಹಿಸುತ್ತಾ ರವಿದಾಸರು ಧರ್ಮದ ಶ್ರೇಷ್ಠತೆಯನ್ನು ಉದ್ಘೋಷಿಸಿದರು ಮತ್ತು ಜನರಿಂದ ಧರ್ಮಪಾಲನೆ ಮಾಡುವುದಕ್ಕೆ ಆಗ್ರಹಿಸಿದರು. ಇವರನ್ನು ಇಸ್ಲಾಂಗೆ ಮತಾಂತರಿಸಿ ಮುಸ್ಲಿಮರನ್ನಾಗಿಸುವುದಕ್ಕೆ ಹಲವಾರು ಪ್ರಯತ್ನಗಳು ನಡೆದವು. ಆದರೆ ಅವರ ಭಕ್ತಿ ಮತ್ತು ಆಧ್ಯಾತ್ಮಿಕ ಸಾಧನೆಯಿಂದ ಪ್ರಭಾವಿತರಾಗಿ ಅವರನ್ನು ಮತಾಂತರಗೊಳಿಸಬೇಕೆಂದವರು ಅವರ ಅನುಯಾಯಿಗಳಾದರು. ವರ್ತಮಾನದ ಸಮಯದಲ್ಲಿ ವಿವಿಧ ವಿಭಜನಕಾರಿ ಶಕ್ತಿಗಳು ಜನಮಾನಸವನ್ನು ವರ್ಗ ಮತ್ತು ಜಾತಿಯ ಆಧಾರದ ಮೇಲೆ ವಿಭಜಿಸಲು ಪ್ರಯತ್ನಿಸುತ್ತಿರುವಾಗ, ರವಿದಾಸ್ ಅವರ ಜೀವನ ಸಂದೇಶದ ಸಾರವನ್ನು ಅರ್ಥಮಾಡಿಕೊಳ್ಳುವ ಮೂಲಕ, ನಾವೆಲ್ಲರೂ ದೇಶ ಮತ್ತು ಸಮಾಜದ ಏಕತೆಗಾಗಿ ಕಾರ್ಯಮಾಡುವ ಸಂಕಲ್ಪವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ ಎಂದು ದತ್ತಾತ್ರೇಯ ಹೊಸಬಾಳೆ ತಿಳಿಸಿದರು.

ಮಾದಕವಸ್ತುಗಳ ನಿರ್ಮೂಲನೆಗೆ ಕ್ರಮ

• **ಬೆಂಗಳೂರು:** ರಾಜ್ಯದ ಕಾರಾಗೃಹಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕಾರಾಗೃಹ ಇಲಾಖೆ ಈಗ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.



ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರ ವಿಶೇಷ ಸೂಚನೆಯ ಮೇರೆಗೆ, ರಾಜ್ಯಾದ್ಯಂತ ಇರುವ ಎಲ್ಲಾ ಜೈಲುಗಳಲ್ಲಿ ಕೈದಿಗಳನ್ನು ಮಾದಕ ವಸ್ತು ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆ ಚುರುಕಿನಿಂದ ಸಾಗಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇತ್ತೀಚೆಗೆ ಸಿಬ್ಬಂದಿಯೇ ಒಳ ಉಡುಪಿನಲ್ಲಿ ಗಾಂಜಾ ಸರಬರಾಜು ಮಾಡಲು ಯತ್ನಿಸಿ ಸಿಕ್ಕಿಬಿದ್ದ ಘಟನೆ ಇಲಾಖೆಯನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕಾರಾಗೃಹಗಳನ್ನು ಸಂಪೂರ್ಣವಾಗಿ ಮಾದಕ ದ್ರವ್ಯ ಮುಕ್ತಗೊಳಿಸುವ ಉದ್ದೇಶದಿಂದ ನಿಷ್ಠುರ

ವಿಶೇಷ ಕಿಟ್ ಮೂಲಕ ಪರೀಕ್ಷೆ

ಕೈದಿಗಳು ಗಾಂಜಾ, ಹೆರಾಯಿನ್, ಕೊಕೈನ್ ಸೇರಿದಂತೆ ವಿವಿಧ ಮಾದಕ ವಸ್ತುಗಳನ್ನು ಸೇವಿಸಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಇಲಾಖೆಯು ವಿಶೇಷ ವೈದ್ಯಕೀಯ ಕಿಟ್‌ಗಳನ್ನು ಒದಗಿಸಿದೆ. ಜೈಲು ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಈ ತಪಾಸಣೆ ನಡೆಯುತ್ತಿದ್ದು, ಅನುಮಾನಾಸ್ಪದ ನಡವಳಿಕೆ ಹೊಂದಿರುವ ಅಥವಾ ಮೊದಲೇ ಚಟಕ್ಕೆ ಬಿದ್ದಿರುವ ಕೈದಿಗಳ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ.

ಆಸ್ಪತ್ರೆಯ ತಾಂತ್ರಿಕ ಸಹಯೋಗದೊಂದಿಗೆ ಈ ಯೋಜನೆಯನ್ನು ರೂಪಿಸಲಾಗಿದ್ದು, ಮೊದಲ ಹಂತದಲ್ಲಿ ರಾಜ್ಯದ ಎಲ್ಲಾ ಜೈಲುಗಳಲ್ಲಿ ಸುಮಾರು ಶೇ. 10ರಷ್ಟು ಕೈದಿಗಳನ್ನು ಆಯ್ದುಕೊಂಡು ಪರೀಕ್ಷೆ ನಡೆಸಲಾಗುತ್ತಿದೆ.

ಶಿಕ್ಷೆಯಲ್ಲ, ಸುಧಾರಣೆಯೇ ಗುರಿ

ಈ ಅಭಿಯಾನದ ವಿಶೇಷವೆಂದರೆ, ಪರೀಕ್ಷೆಯಲ್ಲಿ ಮಾದಕ ವಸ್ತು ಸೇವನೆ ದೃಢಪಟ್ಟ ಕೈದಿಗಳ ಮೇಲೆ ತಕ್ಷಣಕ್ಕೆ ಯಾವುದೇ ಹೊಸ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದಿಲ್ಲ. ಬದಲಿಗೆ ಅವರನ್ನು ಸುಧಾರಿಸುವ ಹಾದಿಯನ್ನು ಇಲಾಖೆ ಆರಿಸಿಕೊಂಡಿದೆ. ಪಾಸಿಟಿವ್ ಬಂದ ಕೈದಿಗಳಿಗೆ ತಜ್ಞರ ವೈದ್ಯರ ಕೌನ್ಸೆಲಿಂಗ್ ನೀಡಲಾಗುತ್ತದೆ. ತೀವ್ರವಾಗಿ ಚಟಕ್ಕೆ ಅಡಿಕ್ಟ್ ಆಗಿರುವವರನ್ನು ಗುರುತಿಸಿ, ಅವರಿಗೆ ಆಸ್ಪತ್ರೆಗಳಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸುವ ಮೂಲಕ ಮುಖ್ಯವಾಹಿನಿಗೆ ತರಲು ಇಲಾಖೆ ನಿರ್ಧರಿಸಿದೆ.

ಯುಗಾದಿ, ರಂಜಾನ್ ಹಿನ್ನೆಲೆ: ಎರಡು ಸಾವಿರ ಹೆಚ್ಚುವರಿ ಬಸ್

ಪುಟ ೧ ➜ ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ. ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ವಿಶೇಷ ಕಾರ್ಯಾಚರಣೆ. ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಮತ್ತಿತರ ಸ್ಥಳಗಳಿಗೆ ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ.

ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ. ಇ-ಟಿಕೆಟ್ ಬುಕಿಂಗ್ www.ksrtc.karnataka.gov.in ವೆಬ್‌ಸೈಟ್ ಮುಖಾಂತರ ಮಾಡಬಹುದಾಗಿದೆ ಎಂದು ಕೆಎಸ್ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಮುಟ್ಟಿನ ರಜೆ: ಲಾಡ್ ಪ್ರತಿಕ್ರಿಯೆ

• **ಬೆಂಗಳೂರು:** ಮಹಿಳಾ ಉದ್ಯೋಗಿಗಳು ಮತ್ತು ವಿದ್ಯಾರ್ಥಿನಿಯರ ಮುಟ್ಟಿನ ರಜೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರತಿಕ್ರಿಯೆ ನೀಡಿದ್ದು, ರಾಜ್ಯ ಸರ್ಕಾರವು ಪ್ರತಿ ತಿಂಗಳು ಒಂದು ದಿನದ ವೇತನ ಸಹಿತ ರಜೆಯನ್ನು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಅನ್ವಯವಾಗಿ ರೂಪಿಸಿರುವ ನೀತಿಯ ಬಗ್ಗೆ ಪ್ರತಿಪಾದಿಸಿರುವುದು ಸ್ವಾಗತಾರ್ಹ ಎಂದಿದ್ದಾರೆ. ರಾಜ್ಯದ ಮುಟ್ಟಿನ ರಜೆ ನೀತಿಯ ಕುರಿತು, ನಾವು ಸಂಬಂಧಿಸಿದ ಎಲ್ಲ ತಜ್ಞರು, ಉದ್ಯೋಗದಾತರು, ಕೈಗಾರಿಕೋದ್ಯಮಿಗಳು, ಉದ್ಯಮಿಗಳು, ವೈದ್ಯರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ಜೊತೆಗೆ ವ್ಯಾಪಕ ಚರ್ಚೆ ಮಾಡಿ, ಸಾಧಕ-ಬಾಧಕಗಳನ್ನು ಪರಿಶೀಲಿಸಿ ಸರ್ವಸಮ್ಮತ ನಿರ್ಣಯದೊಂದಿಗೆ ಜಾರಿಗೆ ತಂದಿದ್ದೇವೆ. ಹೀಗಾಗಿ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿರುವಂತೆ, ನಾಲ್ಕೈದು ದಿನಗಳ ರಜೆ ಮತ್ತು ಅದನ್ನು ಕಾನೂನಾತ್ಮಕವಾಗಿ ರೂಪಿಸಿ ಜಾರಿಗೆ ತರುವುದು ಪ್ರಾಯೋಗಿಕವಾಗಿ ಸಾಧುವಲ್ಲ ಎಂದರು.

ಮಂಡ್ಯದಲ್ಲಿ ವಾಹನ ಪರೀಕ್ಷೆ

ಪುಟ ೧ ➜ ಆ ಕೊರತೆ ನೀಗಿಸಲು ಎಆರ್‌ಎಐನಿಂದ ಪರೀಕ್ಷಾ ಕೇಂದ್ರ ಆರಂಭಿಸಲು ರಾಜ್ಯ ಸರ್ಕಾರಕ್ಕೆ ಜಾಗ ನೀಡುವಂತೆ ಪತ್ರ ಬರೆದಿದ್ದಾಗಿ ಹೇಳಿದರು.

ಕೈಗಾರಿಕೆ ಸ್ಥಾಪನೆಗೆ 100 ಎಕರೆ ಜಾಗ ನೀಡುವುದಾಗಿ ರಾಜ್ಯಸರ್ಕಾರ ಬಜೆಟ್ ಪುಸ್ತಕದಲ್ಲಿ ಘೋಷಣೆ ಮಾಡಿದ್ದಾರೆ. ಜಾಗ ಯಾವಾಗ ನೀಡುತ್ತಾರೆ ಎಂಬುದನ್ನು ನೋಡಬೇಕಿದೆ. ಅವರು ಜಾಗ ನೀಡದ ಬಳಿಕ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಾನು ಕೈಗಾರಿಕೆಗಳನ್ನು ಸ್ಥಾಪಿಸುವ ವಿಚಾರದಲ್ಲಿ ಜಿಲ್ಲೆಯ ಜನರ ನಿರೀಕ್ಷೆಯನ್ನು ಯಾವುದೇ ಕಾರಣಕ್ಕೂ ಹುಸಿಗೊಳಿಸುವುದಿಲ್ಲ. ಜಿಲ್ಲೆಯ ವಿದ್ಯಾವಂತ ಯುವಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವುದಲ್ಲದೆ, ಅಕ್ಕಪಕ್ಕದ ಜಿಲ್ಲೆಗಳ ಯುವಕರಿಗೂ ಉದ್ಯೋಗ ಸಿಗುವಂತೆ ಮಾಡುವುದಾಗಿ ಭರವಸೆ ನೀಡಿದರು.

ಜತೆಗೆ 200-300 ಕೋಟಿ ರೂ. ವೆಚ್ಚದಲ್ಲಿ ಸ್ಟಾರ್ಟಪ್ ಕಂಪನಿಗಳು ಆರಂಭಿಸುತ್ತೇನೆ. ಅಲ್ಲಿಯೂ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ದೇವೇಗೌಡರ ಬಗ್ಗೆ ಅಭಿಮಾನವಿಟ್ಟು ನನ್ನನ್ನು ಬಹುಮತದ ಅಂತರದಿಂದ ಗೆಲ್ಲಿಸಿದ್ದೀರಿ. ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದು ಕುಮಾರಸ್ವಾಮಿ ಹೇಳಿದರು. ಸಮಾರಂಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಶಾಸಕ ಎಚ್ .ಟಿ.ಮಂಜು, ಮಾಜಿ ಶಾಸಕರಾದ ಡಾ. ಕೆ.ಅನ್ನದಾನಿ, ಎ.ಬಿ.ಶಿವಕುಮಾರ್, ಕೆ.ಸುರೇಶ್‌ಗೌಡ, ವಿಧಾನಪರಿಷತ್ ಸದಸ್ಯ ವಿವೇಕಾನಂದ, ಮಂಡ್ಯ ವಿಧಾನಸಭಾ ಕ್ಷೇತ್ರದ ಮುಖಂಡ ಬಿ.ಎಸ್.ರಾಮಚಂದ್ರು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್ ಭಾಗವಹಿಸಿದ್ದರು.

ಸಿಎಸ್‌ಆರ್ ಫಂಡ್ ನೀಡಿದ ಟಿವಿಎಸ್ ಕಂಪನಿಯ ಸಿಎಫ್‌ಒ ಸೇತುರಾಂ, ಉಪಾಧ್ಯಕ್ಷ ಪ್ರಸಾದ್ ಕೃಷ್ಣನ್, ಇನ್‌ಫೋಸಿಸ್‌ನ ಹಿರಿಯ ಉಪಾಧ್ಯಕ್ಷ ಸತೀಶ್ ಬಿ.ನಂಜಪ್ಪ, ಏಚ್‌ಎಂಟಿ ಅಧ್ಯಕ್ಷ ರಾಜೇಶ್ ಕೊಹ್ಲಿ, ಹಿಂದುಜಾ ಹಾಸ್ಪಿಟಲ್‌ನ ಡಾ.ಸಂಜಯಕುಮಾರ್ ಬಜಾಜ್, ಪ್ರದೀಪ್, ಶೈಲ್ ಕಂಪನಿಯ ರಾಜೀವ್ ಪಾಂಡೆ, ಸಿವೈಕೆ ಪಾಂಡೆ ಅವರನ್ನು ಅಭಿನಂದಿಸಲಾಯಿತು.

ಬಿಜೆಪಿಯಿಂದ ಎಸ್‌ಐಆರ್ ಕಚೇರಿ



ಪುಟ ೧ ➜ ಇದು ದೇಶದ ಭದ್ರತೆಗೆ ಅಪಾಯಕಾರಿ. ಈ ಕುರಿತು ಹೆಚ್ಚಿನ ಕ್ರಮ ಕೈಗೊಳ್ಳುವಂತೆ ಕಾರ್ಯಾಗಾರದಲ್ಲಿ ಚರ್ಚೆ ಆಗಿದೆ ಎಂದರು.

ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಎಸ್ ಐಆರ್ ಕರ್ನಾಟಕ-ತೆಲಂಗಾಣದ ಪ್ರಭಾರಿ ಅಲ್ಕಾ ಗುರ್ಜರ್, ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಮಾಜಿ ರಾಜ್ಯ ಕಾರ್ಯದರ್ಶಿ ಮತ್ತು ಎಸ್‌ಐಆರ್ ರಾಜ್ಯ ತಂಡದ ಸಂಚಾಲಕ ಜಗದೀಶ್ ಹಿರೇಮನಿ ಸೇರಿ ರಾಜ್ಯ ತಂಡದ ಸದಸ್ಯರು ಕಾರ್ಯಕ್ರಮದಲ್ಲಿದ್ದರು.

ಔಟ್ ಗೋಯಿಂಗ್ ಸಿಎಂ: ಛಲವಾದಿ



ಪುಟ ೧ ➜ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಸಿದ್ದರಾಮಯ್ಯ ರಾಜಕಾರಣವನ್ನೇ ಮೈಗೂಡಿಸಿಕೊಂಡು ಬಂದವರು. ತಮ್ಮ ಉಸಿರು ಇರುವವರೆಗೆ ರಾಜಕೀಯದಲ್ಲಿ ಇರುವೆ ಎಂದು ಹೇಳುತ್ತಾರೆ. ಅವರಿಗೆ ರಾಜಕೀಯವೇ ಜೀವನ ಆಗಿತ್ತು. ಆದರೆ ರಾಜಕೀಯ ಜೀವ ಕೊಟ್ಟ ಈ ರಾಜ್ಯದ ಜನರಿಗೆ ಅವರು ಕೊಟ್ಟಿದ್ದು ಏನು ಎಂದು ಪ್ರಶ್ನಿಸಿದರು. ಈಗ ಮಗನನ್ನು ರಕ್ಷಿಸಿ ಎನ್ನುತ್ತಾರೆ. ವಂಶಪಾರಂಪರ್ಯಕ್ಕೆ ಅವರು ಜೋತು ಬಿದ್ದಿದ್ದಾರೆ. ಅವರು ತಮ್ಮ ಮಗನ ಪರವಾಗಿ ಮಾತನಾಡುವುದನ್ನು ಬಿಟ್ಟು ರಾಜ್ಯದ ಜನರ ಪರ ಮಾತನಾಡಬೇಕಿತ್ತು. ಇದು ಅವರ ರಾಜಕೀಯ ಜೀವನದ ಅಂತ್ಯದ ದಿನಗಳ ಮಾತು ಎಂದು ಹೇಳಿದರು.

ಟೆಹ್ರಾನ್ ಸ್ಫೋಟ ಹೆಚ್ಚಿದ ಉದ್ವಿಗ್ನತೆ

ಪುಟ ೧ ➜ ಯುದ್ಧ ಆರಂಭವಾದಾಗಿನಿಂದ ಇರಾನ್ ಸರ್ಕಾರ ಇಂಟರ್ನೆಟ್ ಸ್ಥಗಿತಗೊಳಿಸಿರುವುದರಿಂದ, ಇಸ್ರೇಲ್ ನಿಖರವಾಗಿ ಎಷ್ಟು ಬಾರಿ ದಾಳಿ ನಡೆಸಿದೆ ಎನ್ನುವುದು ತಿಳಿದುಬಂದಿಲ್ಲ. ಇನ್ನೊಂದೆಡೆ ಯುದ್ಧದಿಂದಾಗಿ ಭಾರತ ಸಮಸ್ಯೆ ಎದುರಿಸುತ್ತಿದ್ದರೂ ಹಣ ಹಂಚಿ ಸಮಸ್ಯೆಯನ್ನು ಹೊರಬಂದು ನಾಗರಿಕರ ರಕ್ಷಣೆ ಮತ್ತು ದೈನಂದಿನ ಜೀವನಕ್ಕೆ ಸಮಸ್ಯೆಯಾಗದಂತೆ ಗಮನಹರಿಸುತ್ತಿದೆ.

ಅಮೆರಿಕ-ಉತ್ತರ ಕೊರಿಯಾ ಕ್ಷಿಪಣಿ ಸಂಘರ್ಷ

ಪುಟ ೧ ➜ ಚೀನಾದ 'ಡಿಎಫ್-17' ನಂತಹ ಹೈಪರ್‌ಸಾನಿಕ್ ಕ್ಷಿಪಣಿಗಳನ್ನು ತಡೆಯಲು ಈ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಜಪಾನ್ ಪ್ರಧಾನಿ ತಕೈಚಿ, ಮುಂಬರುವ ವಾಷಿಂಗ್ಟನ್ ಭೇಟಿಯ ಸಮಯದಲ್ಲಿ ಈ ಬಹುಕೋಟಿ ಡಾಲರ್ ಯೋಜನೆಯಲ್ಲಿ ಸೇರುವ ಬಗ್ಗೆ ಚರ್ಚಿಸುವ ನಿರೀಕ್ಷೆಯಿದೆ.

ರಾಜತಾಂತ್ರಿಕ ಕಾರ್ಯತಂತ್ರ: ಕಿಮ್ ಜೊಂಗ್-ಉನ್ ಅವರ ಈ ಪ್ರಯೋಗದ ಕಾರಣ ಪ್ರದೇಶದಲ್ಲಿ ಆತಂಕ ಹೆಚ್ಚಿದೆ. ಚೀನಾದ ಪ್ರಭಾವ ಕುಗ್ಗಿಸಲು ಅಧ್ಯಕ್ಷ ಟ್ರಂಪ್, ಕಿಮ್ ಜಾಂಗ್-ಉನ್ ಅವರೊಂದಿಗೆ ವೈಯಕ್ತಿಕ ಬಾಂಧವ್ಯ ವೃದ್ಧಿಸಲು ಉತ್ಸುಕರಾಗಿದ್ದಾರೆ. ಚೀನಾದ ಭೂಪ್ರದೇಶದಲ್ಲಿ ಸಂಭವನೀಯ ಶೃಂಗಸಭೆ ನಡೆಸುವ ಬಗ್ಗೆ ದಕ್ಷಿಣ ಕೊರಿಯಾದ ಪ್ರಧಾನಿ ಕಿಮ್ ಮಿನ್-ಸಿಯೋಕ್ ಖಚಿತಪಡಿಸಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಯುಎಸ್ ನಡೆ ಕುತೂಹಲ ಮೂಡಿಸಿದೆ.

ತೈಲ ಖರೀದಿ: ಅಮೆರಿಕ ನಡೆಗೆ ಇರಾನ್ ವ್ಯಂಗ್ಯ

• **ಹೊಸದಿಲ್ಲಿ:** ಈ ಹಿಂದೆ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳದಂತೆ ಭಾರತಕ್ಕೆ ಎಚ್ಚರಿಕೆ ನೀಡಿ ಸುಂಕ ಹೇರಿ ನಿಷೇಧ ಹೇರಿದ್ದ ಅಮೆರಿಕ, ಇರಾನ್ ಜತೆ ಯುದ್ಧ ಮಾಡಿದ ಎರಡು ವಾರಗಳಲ್ಲೇ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವಂತೆ ಭಾರತ ಸೇರಿದಂತೆ ಜಗತ್ತಿಗೆ ಬೇಡಿಕೊಳ್ಳುತ್ತಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಕ್ಷಿ ಲೇವಡಿ ಮಾಡಿದ್ದಾರೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಬಗ್ಗೆ ಯುರೋಪಿಯನ್ ನಿಲುವನ್ನು ಟೀಕಿಸಿದ ಅರಾಕ್ಷಿ, ಇರಾನ್ ಮೇಲಿನ ಯುದ್ಧವು 'ಕಾನೂನುಬಾಹಿರ'ವಾಗಿದೆ. ಇರಾನ್ ಮೇಲಿನ ಕಾನೂನುಬಾಹಿರ ಯುದ್ಧ ಬೆಂಬಲಿಸುವುದರಿಂದ ರಷ್ಯಾದ ವಿರುದ್ಧ ಅಮೆರಿಕದ ಬೆಂಬಲ ಸಿಗುತ್ತದೆ ಎಂದು ಯುರೋಪ್ ಭಾವಿಸಿದೆ ಎಂದು ಹೇಳಿದರು.

ತವರಿನತ್ತ ಶಿವಾಲಿಕ್, ನಂದಾದೇವಿ

ಭಾರತದ ಮೊದಲ ಎಲ್‌ಪಿಜಿ ಸಾಗಣೆ ಹಡಗು ಶಿವಾಲಿಕ್ ಹಾರ್ಮುಜ್ ಜಲಸಂಧಿಯಿಂದ ಈಗಾಗಲೇ ತೆರಳಿದ್ದು, ಎರಡನೇ ಹಡಗು ನಂದಾದೇವಿ ಸಹ ಹಾರ್ಮುಜ್ ಜಲಸಂಧಿ ಯಿಂದ ಶನಿವಾರ ಪ್ರಯಾಣ ಆರಂಭಿಸಿದೆ. ಸುಮಾರು 46,000 ಟನ್‌ಗಳಿಗೂ ಹೆಚ್ಚು ಎಲ್‌ಪಿಜಿ ಇನ್ನೆರಡು ದಿನಗಳಲ್ಲಿ ತವರಿಗೆ ತಲುಪಲಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. ಭಾರತೀಯ ನೌಕಾಪಡೆಯ ಮಾರ್ಗದರ್ಶನದಲ್ಲಿ ಎರಡೂ ಹಡಗುಗಳು ಹಾರ್ಮುಜ್‌ನಿಂದ ಭಾರತದತ್ತ ಪ್ರಯಾಣ ಬೆಳೆಸಿವೆ. ಮುಂದಿನ ಎರಡು ದಿನಗಳೊಳಗೆ ಮುಂಬೈ ಅಥವಾ ಕಾಂಡ್ಲಾ ಬಂದರಿಗೆ ಹಡಗುಗಳು ಬರುವುದನ್ನು ನಿರೀಕ್ಷಿಸಲಾಗಿದೆ. ನಂದಾದೇವಿ ಹಡಗಿನಲ್ಲಿ 46,000 ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹಾಗೂ ಶಿವಾಲಿಕ್‌ನಲ್ಲೂ 40,000ದಿಂದ 55,000 ಟನ್‌ಗಳಷ್ಟು ಎಲ್‌ಪಿಜಿ ಇದೆಯೆಂದು ಮೂಲಗಳು ತಿಳಿಸಿವೆ. ಇವೆರಡೂ ಹಡಗುಗಳು ಭಾರತದ ಸಂಪೂರ್ಣ ಇಂಧನ ಪೂರೈಕೆ ಸರಪಳಿಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ.

ಬಯೋ ಗ್ಯಾಸ್‌ಗೆ ಜಿಬಿಎ ಕ್ರಮ

ಪುಟ ೧ ➜ ದಿನಕ್ಕೆ ಸುಮಾರು 200 ಕೆಜಿ ಗ್ಯಾಸ್ ಉತ್ಪಾದನೆ: ಬಯೋಗ್ಯಾಸ್ ಘಟಕಗಳಲ್ಲಿ ಪ್ರತಿ ಟನ್ ಹಸಿ ತ್ಯಾಜ್ಯದಿಂದ ಸುಮಾರು 30ರಿಂದ 50 ಕೆಜಿ ಬಯೋಗ್ಯಾಸ್ ಉತ್ಪಾದನೆ ಸಾಧ್ಯವಾಗುತ್ತದೆ. ಪ್ರತಿ ಘಟಕದಲ್ಲಿ ದಿನಕ್ಕೆ ಸುಮಾರು 200 ಕೆಜಿ ಗ್ಯಾಸ್ ಉತ್ಪಾದನೆ ನಡೆಯುತ್ತಿದೆ. ಇಲ್ಲಿ ಉತ್ಪಾದನೆಯಾಗುವ ಬಯೋಗ್ಯಾಸ್‌ನ್ನು ಘಟಕಗಳ ಒಳಾಂಗಣ ಬಳಕೆಗೆ ಬಳಸಲಾಗುತ್ತಿದ್ದು, ಹೆಚ್ಚುವರಿ ಬಯೋಗ್ಯಾಸ್ ಬಳಸಿ ಜನರೇಟರ್ ಮೂಲಕ ವಿದ್ಯುತ್ ಉತ್ಪಾದಿಸಿ ಸಮೀಪದ ಉದ್ಯಾನವನಗಳಲ್ಲಿ ದೀಪಗಳನ್ನು ಬೆಳಗಿಸಲಾಗುತ್ತಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕರೀಗೌಡ ತಿಳಿಸಿದ್ದಾರೆ. ಕೋರಮಂಗಲದಲ್ಲಿರುವ 8.5 ಟನ್ ಸಾಮರ್ಥ್ಯದ ಬಯೋಗ್ಯಾಸ್ ಘಟಕದಿಂದ ಸಮೀಪದ ಹೋಟೆಲ್‌ಗೆ ಪ್ರತಿದಿನ ಸುಮಾರು 120 ಕೆಜಿ ಬಯೋಗ್ಯಾಸ್ ಸರಬರಾಜು ಮಾಡಲಾಗುತ್ತಿದ್ದು, ಪ್ರತಿ ಕೆಜಿಗೆ ರೂ.70ರಂತೆ ದಿನಕ್ಕೆ ಸುಮಾರು ರೂ.8,400 ಆದಾಯ ಲಭ್ಯವಾಗುತ್ತಿದೆ. ಇದರ ಮೂಲಕ ಹಸಿ ತ್ಯಾಜ್ಯದಿಂದ ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ಅಡುಗೆ ಇಂಧನವಾಗಿ ಬಳಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ಬಯೋಗ್ಯಾಸ್‌ನ್ನು ಸಿಲಿಂಡರ್‌ಗಳಿಗೆ ತುಂಬಿಸಿ ಸರಬರಾಜು ಮಾಡುವ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗುವುದು. ಈ ಬಗ್ಗೆ ಬೇರೆ ಸೇರಿದಂತೆ ಮತ್ತಿತರ ವಿಷಯದ ಬಗ್ಗೆ ಮಾತುಕತೆ ನಡೆಯುತ್ತಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಬಯೋಗ್ಯಾಸ್ ಘಟಕ ಸ್ಥಾಪನೆಗೆ ವೇಗ

ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ದಿನಕ್ಕೆ ಸುಮಾರು 300 ಟನ್ ಹಸಿ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯದ ಹೊಸ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೂ ಚಾಲನೆ ನೀಡಲಾಗಿದೆ. ಇದಲ್ಲದೆ ಕನ್ನಳ್ಳಿ ಪ್ರದೇಶದಲ್ಲಿ ದಿನಕ್ಕೆ ಸುಮಾರು 1,000 ಟನ್ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸುವ ಘಟಕ ನಿರ್ಮಾಣಕ್ಕೆ ಸಚಿವ ಸಂಪುಟದೊಂದಿಗೆ ಒಪ್ಪಂದಕ್ಕೆ ಅನುಮೋದನೆ ನೀಡಲಾಗಿದೆ. ಅಲ್ಲದೆ ಹೊಸದಾಗಿ ನಾಲ್ಕು ವಿಕೇಂದ್ರೀಕೃತ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಲು ಕ್ರಮ ವಹಿಸಲಾಗಿದ್ದು, ಅವುಗಳಲ್ಲಿ ಎರಡು ಘಟಕಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕಾರ್ಯಾರಂಭಗೊಳ್ಳಲಿವೆ. ಉಳಿದ ಎರಡು ಘಟಕಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಜಿಬಿಎ ತಿಳಿಸಿದೆ.

ಕಡಿಮೆ ಅವಧಿಯಲ್ಲಿ ಪ್ರಸ್ತುತ ಇರುವ ಘಟಕಗಳನ್ನು ಉನ್ನತೀಕರಣಗೊಳಿಸಿ ಅಲ್ಲಿ ಬಯೋ ಗ್ಯಾಸ್ ಉತ್ಪತ್ತಿ ಮಾಡಿ, ಸ್ಥಳೀಯ ಹೋಟೆಲ್‌ಗಳಿಗೆ ವಿತರಣೆ ಮಾಡಲು ಕ್ರಮ ವಹಿಸಲಾಗುವುದು.
■ ಮಹೇಶ್ವರ್ ರಾವ್, ಜಿಬಿಎ ಮುಖ್ಯ ಆಯುಕ್ತ

ತರಬೇತಿಯಿಂದ ಕ್ರೀಡೆಯಲ್ಲೂ ದೇಶ ಮುಂಚೂಣಿ

ಮಂಡ್ಯ: ಭಾರತದ ಕೆಳಮಟ್ಟದ ಕ್ರೀಡಾ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಖೇಲೋ ಇಂಡಿಯಾ ಯೋಜನೆಯನ್ನು ಜಾರಿಗೆ ತಂದಿದೆ. ಇದರಿಂದ ಭಾರತವನ್ನು ಶ್ರೇಷ್ಠ ಕ್ರೀಡಾರಾಷ್ಟ್ರವಾಗಿ ರೂಪಿಸಲು ಸಹಕಾರಿಯಾಗಿದೆ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸೂಖ್ ಮಾಂಡವೀಯ ವಿಶ್ವಾಸದಿಂದ ನುಡಿದರು

ತಾಲೂಕಿನ ವಿ.ಸಿ.ಫಾರಂನಲ್ಲಿ 14 ಕೋಟಿ ರೂ. ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಕ್ರೀಡಾಪಟುಗಳು ತರಬೇತಿ ಹಾಗೂ ಮೂಲಸೌಕರ್ಯಗಳಿಲ್ಲದೆ ಪರದಾಡುತ್ತಿದ್ದರು. ಕಳೆದ 11 ವರ್ಷಗಳಲ್ಲಿ ಕ್ರೀಡಾಪಟುಗಳಿಗೆ ಅತ್ಯಾಧುನಿಕ ಕ್ರೀಡಾ ಸೌಲಭ್ಯ, ಅಂತಾರಾಷ್ಟ್ರೀಯ ಮಟ್ಟದ ತರಬೇತಿಯನ್ನು ನೀಡುವ ಮೂಲಕ ಹೆಚ್ಚು ಹೆಚ್ಚು ಪದಕಗಳನ್ನು ಗೆಲ್ಲುವುದಕ್ಕೆ ಸಹಕಾರಿ ಯಾಗಿದೆ ಎಂದು ಹೇಳಿದರು.

2016ರಲ್ಲಿ ಖೇಲೋ ಇಂಡಿಯಾ ಆರಂಭವಾದ ಬಳಿಕ ಇಡೀ ರಾಷ್ಟ್ರದಲ್ಲಿ ಕ್ರೀಡಾ ಚಟುವಟಿಕೆಗಳು ಗರಿಗೆದರಿವೆ. ಎಲ್ಲಾ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ನಗರ ಪ್ರದೇಶಕ್ಕೆ ಸೀಮಿತವಾಗಿದ್ದ ಕ್ರೀಡಾ ಚಟುವಟಿಕೆಗಳು ಪ್ರತಿ ಹಳ್ಳಿ ಮತ್ತು ಶಾಲೆಗಳಲ್ಲೂ ಆರಂಭಗೊಂಡಿವೆ. ಗ್ರಾಮೀಣ ಭಾಗದಿಂದಲೂ ಉತ್ತಮ ಕ್ರೀಡಾಪ್ರತಿಭೆಗಳು ಬೆಳಕಿಗೆ ಬರುವಂತಾಗಿದೆ. ಕಾಮನ್‌ವೆಲ್ತ್, ಏಷ್ಯನ್ ಗೇಮ್ಸ್, ಒಲಂಪಿಕ್ಸ್ ಕ್ರೀಡಾಕೂಟದಲ್ಲೂ ಕ್ರೀಡಾಪಟುಗಳು ಚಿನ್ನ ಸೇರಿದಂತೆ ಹಲವು ಪದಕಗಳನ್ನುಗೆಲ್ಲುವಂತಾಗಿದೆ ಎಂದು ತಿಳಿಸಿದರು.



ಮಂಡ್ಯ ನೆಲದಿಂದ ರಾಜ್ಯವಷ್ಟೇ ಅಲ್ಲ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕ್ರೀಡಾಪಟುಗಳು ಬಂದಿದ್ದಾರೆ. ಆ ಪೈಕಿ ನಾನು ಅಥ್ಲೆಟಿಕ್ಸ್‌ನಲ್ಲಿ ವಿಕಾಸಗೌಡ ಹಾಗೂ ವ್ಹೀಲ್ ಚೇರ್ ಟೆನ್ನಿಸ್ ಆಟಗಾರ್ತಿ ಕೆ.ಆರ್. ಶಿಲ್ಪಾ ಅವರನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಇಂತಹ ಅನೇಕ ಕ್ರೀಡಾಪಟುಗಳು ಮಂಡ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರು ಭಾರತದ ಕೀರ್ತಿಯನ್ನು ದೇಶ ವಿದೇಶಗಳಲ್ಲಿ ಬೆಳಗುತ್ತಿದ್ದಾರೆ. ಇಲ್ಲಿ ನಿರ್ಮಾಣವಾಗಲಿರುವ ಒಳಾಂಗಣ ಕ್ರೀಡಾಂಗಣದ ಸದುಪಯೋಗ ಪಡೆದುಕೊಂಡು ಇಂತಹ ಅಸಂಖ್ಯಾತ ಪ್ರತಿಭೆಗಳು ಇಲ್ಲಿಂದ ಹೊರಬರಬೇಕು ಎಂದು ಹಾರೈಸುತ್ತೇನೆ ಎಂದು ಆಶಿಸಿದರು.

ಮಂಡ್ಯದಲ್ಲಿ ಸುಸಜ್ಜಿತ ಕ್ರೀಡಾಂಗಣ

ಕೇಂದ್ರ ಸಂಪುಟದಲ್ಲಿ ನನ್ನ ಸಹೋದ್ಯೋಗಿ ಹಾಗೂ ಎನ್‌ಡಿಎ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರ ಪರಿಶ್ರಮದಿಂದ ಮಂಡ್ಯದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣವಾಗುತ್ತಿದೆ. ಕುಮಾರಸ್ವಾಮಿ ಅವರೇ, ಜನರಿಗಾಗಿ ನೀವು ಮಾಡಿರುವ ಕೆಲಸವು ಜನರು ನಿಮ್ಮ ಮೇಲೆ ತೋರಿಸುತ್ತಿರುವ ಪ್ರೀತಿಯಲ್ಲಿಯೇ ಕಾಣುತ್ತಿದೆ ಎಂದು ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದರು.ವಿಶೇಷಚೇತನರ ಬಗ್ಗೆ ನೀವು ಹೊಂದಿರುವ ಮಮತೆ, ಬದ್ಧತೆಯನ್ನು ನಾನು ಕಣ್ಣಾರೆ ನೋಡುತ್ತಿದ್ದೇನೆ. ನನಗೆ ಬಹಳ ಸಂತೋಷ ಉಂಟು ಮಾಡಿದೆ. ನೀವು ಮಾಡುತ್ತಿರುವ ಈ ಕೆಲಸ ಶ್ಲಾಘನಾರ್ಹ. ನೀವು ಎಲೆಕ್ಟ್ರಿಕ್ ವಾಹನಗಳನ್ನು ನೀಡುವ ಮೂಲಕ ವಿಶಿಷ್ಟಚೇತನರಿಗೆ ಮಾತ್ರ ಸಹಾಯ ಮಾಡುತ್ತಿಲ್ಲ, ಪರಿಸರಕ್ಕೆ ಕೂಡ ಒಳ್ಳೆಯದು ಮಾಡುತ್ತಿದ್ದೀರಿ ಎಂದು ಮಾಂಡವೀಯ ಅವರು ಶ್ಲಾಘಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಶಾಸಕರಾದ ಎಚ್.ಟಿ. ಮಂಜು, ಕೆ. ವಿವೇಕಾನಂದ, ಮಾಜಿ ಸಚಿವರಾದ ಸಿ. ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಕೆ. ಅನ್ನದಾನಿ, ಜಿ.ಬಿ. ಶಿವಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ. ರಮೇಶ್, ಬಿಜೆಪಿ ಮುಖಂಡ ಡಾ. ಸಿದ್ದರಾಮಯ್ಯ ಇದ್ದರು.



ಬಾಗಲಕೋಟೆ ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಶಂಕುಸ್ಥಾಪನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವುಕುಮಾರ, ಸಚಿವ ಎಂ.ಬಿ.ಪಾಟೀಲ,ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶರಣಪ್ರಕಾಶ ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ ಇದ್ದರು.

ಕಿರುಸುದ್ದಿ

ವಿದೇಶಿ ಪ್ರವಾಸಿಗರ ನೆರವಿಗೆ ಬದ್ಧ: ಸಚಿವ ಪಾಟೀಲ್

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಯುದ್ಧದ ಸನ್ನಿವೇಶ ಹಾಗೂ ಅಂತಾರಾಷ್ಟ್ರೀಯ ಪ್ರಯಾಣದಲ್ಲಿನ ಅನಿಶ್ಚಿತತೆಯಿಂದಾಗಿ ರಾಜ್ಯದಲ್ಲಿ ಸಿಲುಕಿರುವ ವಿದೇಶಿ ಪ್ರವಾಸಿಗರ ನೆರವಿಗೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ. ಪ್ರಸ್ತುತ ಯುದ್ಧದ ಕಾರಣದಿಂದಾಗಿ ಪ್ರಯಾಣದ ಅಡಚಣೆ ಎದುರಿಸುತ್ತಿರುವ ಮತ್ತು ವೀಸಾ ಸಂಬಂಧಿತ ಸಮಸ್ಯೆಗಳಿಂದ ಸಂಕಷ್ಟಕ್ಕೆ ಸಿಲುಕಿರುವ ವಿದೇಶಿ ಪ್ರವಾಸಿಗರು ಯಾವುದೇ ಸಹಾಯಕ್ಕಾಗಿ ಇಲಾಖೆಯನ್ನು ಸಂಪರ್ಕಿಸಬಹುದು ಎಂದು ರಾಜ್ಯ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ವಿದೇಶಿ ಅತಿಥಿಗಳಿಗೆ ಈ ಸಂಕಷ್ಟದ ಸಮಯದಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಇಲಾಖೆಯು ವಿಶೇಷ ನಿಗಾ ವಹಿಸಿದೆ. ಅತಿಥಿ ದೇವೋ ಭವ ಎಂಬ ಆಶಯದಂತೆ, ರಾಜ್ಯದಲ್ಲಿರುವ ವಿದೇಶಿ ಪ್ರವಾಸಿಗರಿಗೆ ವೀಸಾ ನಿರ್ವಹಣೆ ಸೇರಿದಂತೆ ಅಗತ್ಯವಿರುವ ಎಲ್ಲಾ ನೆರವು ನೀಡಲು ಇಲಾಖೆ ಸನ್ನದ್ಧವಾಗಿದೆ ಎಂದು ಅವರು ಭರವಸೆ ನೀಡಿದ್ದಾರೆ.

ಸಹಾಯಕ್ಕಾಗಿ ಸಂಪರ್ಕಿಸಿ: ವಿದೇಶಿ ಪ್ರವಾಸಿಗರು ಮಾಹಿತಿ ಅಥವಾ ತುರ್ತು ನೆರವಿಗಾಗಿ ಬೆಳಗ್ಗೆ 5:30 ರಿಂದ ರಾತ್ರಿ 10:00 ಗಂಟೆಯವರೆಗೆ. ಈ 89706 50021 ದೂರವಾಣಿ ಸಂಖ್ಯೆಗೆ ಕರೆ ಮಾಡಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕ ಎಚ್.ಪಿ. ಜನಾರ್ಧನ 96119 21927 ಅವರನ್ನು ಸಂಪರ್ಕಿಸಿ.

ಐಟಿ, ಬಿಟಿ ಕ್ಷೇತ್ರದಿಂದ ಉದ್ಯೋಗಾವಕಾಶ

ವಿಧಾನ ಪರಿಷತ್: ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಯುವ ಜನತೆಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಜೈವಿಕ ತಂತ್ರಜ್ಞಾನ (ಬಿಟಿ) ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡುತ್ತಿದೆ ಎಂದು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಕೆ.ಎಸ್. ನವೀನ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಐಟಿ ಕಂಪನಿಗಳ ಸ್ಥಾಪನೆ ಮತ್ತು ಸ್ಟಾರ್ಟ್‌ಅಪ್ ಪ್ರೋತ್ಸಾಹ ನೀಡಲು ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದರು. ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಮಾಹಿತಿಯಂತೆ ಕಲಬುರಗಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಸುಮಾರು 21 ಐಟಿ ಕಂಪನಿಗಳು ಸ್ಥಾಪನೆಯಾಗಿವೆ. ಬಳ್ಳಾರಿಯ ಐಟಿ ಪಾರ್ಕ್‌ನಲ್ಲಿ ಈಗಾಗಲೇ ಸುಮಾರು 18 ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಸಾರಥಿ ಯೋಜನೆ: ಆಯ್ಕೆ ಪಟ್ಟಿ ರದ್ದು

ವಿಧಾನ ಪರಿಷತ್: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ 2025–26ನೇ ಸಾಲಿನಲ್ಲಿ ಲಭ್ಯವಿರುವ ಸರ್ಕಾರದ ಸಾಂಸ್ಥಿಕ ಕೋಟಾದಡಿಯಲ್ಲಿ ನೇರ ಸಾಲ, ಗಂಗಾ ಕಲ್ಯಾಣ, ಉದ್ಯಮಶೀಲತೆ, ಮೈಕ್ರೋ ಕ್ರೆಡಿಟ್ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಯ ಅಡಿ ಕೆಲವು ಫಲಾನುಭವಿಗಳನ್ನು ಕ್ರಮಬದ್ಧವಾಗಿ ಆಯ್ಕೆಯಾಗಿಲ್ಲವೆಂದು ಕಂಡು ಬಂದಿರುವ ಹಿನ್ನೆಲೆ ಈ ಪಟ್ಟಿಗಳನ್ನು ರದ್ದುಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು. ಸದಸ್ಯರಾದ ಟಿ.ಎನ್. ಜವರಾಯಿ ಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಫಲಾನುಭವಿಗಳನ್ನು ರದ್ದುಪಡಿಸಿರುವ ಪಟ್ಟಿಯನ್ನು ಪರಿಶೀಲಿಸಿ, ಕೆಲವು ಫಲಾನುಭವಿಗಳು ಅರ್ಹರಿದ್ದಲ್ಲಿ ಸಾಂಸ್ಥಿಕ ವಿವೇಚನಾ ಕೋಟಾದ ಮಿತಿಯ ಅಡಿಯಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ತೀರ್ಪು ಪ್ರಕಟವಾಗದಿದ್ದರೂ ರೈತರಿಗೆ ನೆರವು: ಡಿ.ಕೆ.ಶಿವಕುಮಾರ

ಸಂತ್ರಸ್ತರಿಗೆ ಶೀಘ್ರ ಪರಿಹಾರ

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಕಾಮಗಾರಿಗಾಗಿ ಬ್ರಿಜೇಶ್ ಪಟೇಲ್‌ರವರ ತೀರ್ಪು ಪ್ರಕಟವಾಗಿಲ್ಲ. ಕೋರ್ಟ್ ಆದೇಶವನ್ನು ಕೇಂದ್ರ ಸರ್ಕಾರ ಜಾರಿಗೆ ತರುತ್ತಿಲ್ಲ. ಆದರೂ ನಮ್ಮ ಸರ್ಕಾರ ನಮ್ಮ ಭೂಮಿ ನಮ್ಮ ಹಕ್ಕು, ನಮ್ಮ ಜಲ ನಮ್ಮ ಹಕ್ಕು ಎಂದು ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರ ನೀಡುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿ, ಮೂರನೇ ಹಂತದ ಯುಕೆಪಿ ಕಾಮ ಗಾರಿಗಾಗಿ 1 ಲಕ್ಷ 33 ಸಾವಿರ ಎಕರೆ ಭೂಸ್ವಾಧೀನ ಮಾಡಿಕೊಂಡು ರೈತರಿಗೆ ಹಣ ಕೊಡಲು ಬದ್ಧರಾಗಿದ್ದೇವೆ. ಚೆಕ್ ಕೂಡ ನೀಡಲಾಗುತ್ತಿದೆ. ಈ ತೀರ್ಮಾಣದಿಂದ ಪಕ್ಕದ ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹಾಕಿ ರೈತರಿಗೆ ಪರಿಹಾರ ನೀಡದಂತೆ ತಕರಾರು ಅರ್ಜಿ ಹಾಕಿವೆ. ಆದರೂ ನಾವು ಈ ಬಗ್ಗೆ ಮನವರಿಕೆ ಮಾಡಲು ಕೇಂದ್ರ ಪ್ರಯತ್ನ ಪಟ್ಟಿದ್ದೇವೆ. ಹೀಗಾಗಿ ನಮ್ಮ ಸರ್ಕಾರ ರೈತರಿಗಾಗಿ ಬಲಿಷ್ಠವಾದ ತೀರ್ಮಾನ ಕೈಗೊಂಡಿದೆ ಎಂದರು.

ಜಾತಿಯನ್ನು ಕೇಳದೇ ಗುಣ ಕೇಳಬೇಕು. ಧರ್ಮ ಕೇಳದೇ ನಡತೆ ಕೇಳಬೇಕು ಎಂಬ ದಾರಿಯಲ್ಲಿ ರೈತರ ಬದುಕಿಗೆ ಸರ್ಕಾರ ನೆರವಾಗಲಿದೆ. ಸಣ್ಣ ನೀರಾವರಿ ಸಚಿವರು ಮತ್ತು ನಾವು ದೆಹಲಿಗೆ ತೆರಳಿ ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿಯಾಗಿ ನಮ್ಮ ಕೆಲಸಕ್ಕೆ ಅಡ್ಡಿ ಮಾಡಬಾರದು. ಯೋಜನೆಗೆ ಕೇಂದ್ರದಿಂದ ಅನುದಾನ ಕೂಡ ಬಿಡುಗಡೆ ಮಾಡಬೇಕು ಎಂದು ಒತ್ತಡ ಹಾಕುತ್ತೇವೆ ಎಂದರು.



> **ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣವಾಗಲಿದೆ. ರಾಜ್ಯದಲ್ಲಿ 17945 ವಿದ್ಯಾರ್ಥಿಗಳು ಪ್ರತಿ ವರ್ಷ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಓದಿ ಪದವಿ ಪಡೆದುಕೊಳ್ಳಲಿದ್ದಾರೆ. 5070 ಪಿಜಿ ಸೀಟ್, 44,000 ನರ್ಸಿಂಗ್, ಮೆಡಿಕಲ್‌ಗೆ ಶಕ್ತಿ ತುಂಬಲು ಸರ್ಕಾರ ಕೆಲಸ ಮಾಡುತ್ತಿದೆ.**
> ■ ಡಿ.ಕೆ.ಶಿವಕುಮಾರ, ಉಪಮುಖ್ಯಮಂತ್ರಿ

ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಕಳೆದ ವಿಧಾನಸಭೆಯ ಚುನಾವಣೆಯಲ್ಲಿ 14 ಸ್ಥಾನಗಳನ್ನು ಗೆಲ್ಲಿಸಿಕೊಟ್ಟ ಜನರ ಋಣ ತೀರಿಸಲು ಬಾಗಲಕೋಟೆಯಲ್ಲಿ ಮೆಡಿಕಲ್ ಕಾಲೇಜು ಆರಂಭಿಸಿದ್ದೇವೆ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಮಾತನಾಡಿ, ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜ್, ಕ್ಯಾನ್ಸರ್ ಆಸ್ಪತ್ರೆ, ಟ್ರಾಮಾ ಸೆಂಟರ್, ಯೂನಿವರ್ಸ್‌ಲ್ ಹೆಲ್ತ್ ಮಾಡುವ ಮೂಲಕ ರಾಜ್ಯದ ಜನತೆಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲು ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದರು. ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜ್ ನಿರ್ಮಾಣವಾಗುತ್ತಿರುವ ಪರಿಣಾಮದಿಂದ ಗ್ರಾಮೀಣ ಭಾಗದ ರೈತರು ಮಕ್ಕಳು, ಸಾಮಾನ್ಯ, ಬಡವರ ಮಕ್ಕಳಿಗೆ ಮೆರಿಟ್ ಆಧಾರದ ಮೇಲೆ ಸೀಟ್ ಸಿಗಲಿದೆ ಎಂದರು.

ಸಚಿವ ಎಂ.ಬಿ.ಪಾಟೀಲ,ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ, ಮಾಜಿ ಸಚಿವ ಅಜಯಕುಮಾರ ಸರನಾಯಕ ಇದ್ದರು.

ಫ್ಲಿಪ್‌ಕಾರ್ಟ್ ವಿರುದ್ಧ ಕ್ರಮ ಕೈಗೊಳ್ಳಲು ಪತ್ರ

ಬೆಂಗಳೂರು: ಹಣ ಮಾಡುವ ಭರದಲ್ಲಿ ಫ್ಲಿಪ್‌ಕಾರ್ಟ್ ಎನ್ನುವ ಸಂಸ್ಥೆ 1 ರೂಪಾಯಿಗೆ 1 ಲೀಟರ್ ಹಾಲು ನೀಡಲು ಮುಂದಾಗಿದೆ. ರೈತ ಸಮುದಾಯವನ್ನು ಧ್ವಂಸ ಮಾಡುವಂತಹ ಕೃತ್ಯಕ್ಕೆ ಕೈ ಹಾಕಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇಡೀ ದೇಶದಾದ್ಯಂತ ದಂಗೆ ಮಾಡಬೇಕಾದ ಪರಿಸ್ಥಿತಿ ಉಂಟಾಗಲಿದೆ ಎಂದು ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.



ಶನಿವಾರ ಸದಾಶಿವನಗರದ ನಿವಾಸ ದಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 1 ರೂಪಾಯಿಗೆ 1 ಲೀಟರ್ ಹಾಲು ಮಾರಲು ಮುಂದಾಗಿರುವ ಫ್ಲಿಪ್ ಕಾರ್ಟ್ ಸಂಸ್ಥೆ ವಿರುದ್ಧ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾ ಇವರಿಗೆ ಸೆಕ್ಷನ್ 19/1 ಎ ಅಡಿ ಕ್ರಮ ತೆಗೆದುಕೊಳ್ಳಬೇಕು ಎಂದು ದೂರು ನೀಡಲಾಗಿದೆ. ಜತೆಗೆ ಈ ವಿಚಾರವನ್ನು ಪ್ರಧಾನಿ ಮೋದಿಯವರಿಗೆ ಇ-ಮೇಲ್ ಮುಖಾಂತರ ಕಳಿಸುತ್ತಿದ್ದೇನೆ ಎಂದು ತಿಳಿಸಿದರು.

ಮಾರುಕಟ್ಟೆಯನ್ನು ಆವರಿಸಿಕೊಳ್ಳಬೇಕು ಎಂದು ಮಾಡುತ್ತಿರುವ ಸ್ಪರ್ಧೆಯಿಂದ ರೈತರಿಗೆ ಹೊಡೆತ ಬೀಳುತ್ತದೆ. ಇದಕ್ಕಾಗಿ ಯೇ ಸುಮಾರು 2 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ರೈತರಿಗೆ ನಾವು 38, 39, 40 ರೂಪಾಯಿ ಹಣವನ್ನು ಪಾವತಿ ಮಾಡುತ್ತಿದ್ದೇವೆ. ಇವರು 1 ರೂಪಾಯಿಗೆ ಕೊಡುವುದಕ್ಕೆ ಹೇಗೆ ಸಾಧ್ಯವಾಗು ತ್ತದೆ.ಯಾರಿಂದ ಖರೀದಿ ಮಾಡುತ್ತಿದ್ದಾರೆ. ಎಲ್ಲಿಂದ ಹಾಲು ಬರುತ್ತಿದೆ ಎಂದು ತಿಳಿದುಕೊಳ್ಳಬೇಕಿದೆ ಎಂದರು.

14.5 ಲಕ್ಷ ಲೀ ಹಾಲು ಮಾರಾಟ

ಈಗಾಗಲೇ 14.5 ಲಕ್ಷ ಲೀಟರ್ ಹಾಲು ಮಾರಾಟ ಆಗಿದೆ. ಈಗಾಗಲೇ ಎಲ್ಲಾ ಕಡೆ ಜಾಹೀರಾತು ನೀಡಿದೆ. ಸಾರ್ವಜನಿಕರ ಹಣವನ್ನ ಹೂಡಿಕೆ ಮಾಡಿ ಗ್ರಾಹಕರನ್ನ ಆಕರ್ಷಣೆ ಮಾಡಲಾಗುತ್ತಿದೆ. ಆ ಕಂಪನಿಯವರು ಎಷ್ಟು ದಿನ ಈ ರೀತಿ ಹಾಲು ಕೊಡುತ್ತಾರೆ ಎಂಬುದನ್ನು ಬಹಿರಂಗಗೊಳಿಸಬೇಕು. ಬಮುಲ್ ಒಕ್ಕೂಟಕ್ಕೆ 40 ರಿಂದ 50 ಸಾವಿರ ಲೀಟರ್ ಹಾಲು ಮಾರಾಟ ಕಡಿಮೆಯಾಗಿದೆ. ಎಷ್ಟು ದಿನದಿಂದ ಇದು ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕು ಎಂದರು.

ಪ್ರವಾಸಿಗರ ಸಂಖ್ಯೆ ಇಳಿಮುಖ

ಚಿಕ್ಕಮಗಳೂರು: ಜಿಲ್ಲೆಯ ವಿವಿಧ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಇಳಿಮುಖವಾಗಿದ್ದು, ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದಂತಾಗಿದೆ.

ಚಿಕ್ಕಮಗಳೂರು ತಾಲ್ಲೂಕಿನ ಗಿರಿ ತಪ್ಪಲಿನ ನಿಸರ್ಗ ತಾಣಗಳಾದ ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ದತ್ತಪೀಠ, ಕೆಮ್ಮಣ್ಣುಗುಂಡಿ ಇನ್ನಿತರೆ ಪ್ರದೇಶಗಳು ಶನಿವಾರ ಪ್ರವಾಸಿಗರಿಲ್ಲದೆ ಬಿಕೋ ಎನ್ನುತ್ತಿದ್ದವು. ವಾರಾಂತ್ಯದ ದಿನಗಳಲ್ಲಿ ಪ್ರವಾಸಿಗರು ಹಾಗೂ ಪ್ರವಾಸಿ ವಾಹನಗಳಿಂದ ಗಿಜಿಗುಡುವ ನಗರ ಸಮೀಪದ ಕೈಮರ ಚೆಕ್‌ಪೋಸ್ಟ್ ಸರ್ಕಲ್‌ನಲ್ಲಿ ಜನ, ವಾಹನ ಸಂಚಾರವೇ ಇರಲಿಲ್ಲ. ಪ್ರಮುಖ ಹೋಟೆಲ್‌ಗಳು ಬಾಗಿಲು ಮುಚ್ಚಿದ್ದ ಪರಿಣಾಮ ಇಡೀ ಪ್ರದೇಶ ಬಿಕೋ ಎನ್ನುತ್ತಿರುವುದು ಕಂಡುಬಂತು.

ಯಾವುದೇ ಪರಿಸ್ಥಿತಿಯಲ್ಲೂ ವಾರಾಂತ್ಯದ ದಿನಗಳಲ್ಲಿ ಬೆಂಗಳೂರು ಸೇರಿದಂತೆ ಹೊರ ಜಿಲ್ಲೆಗಳ ಐಟಿ ಉದ್ಯೋಗಿಗಳು ಜಿಲ್ಲೆಯ ವಿವಿಧ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ. ಆದರೆ ಈ ವಾರಾಂತ್ಯದಲ್ಲಿ ಜಿಲ್ಲೆಗೆ ಭೇಟಿ ನೀಡಿರುವವರ ಸಂಖ್ಯೆ ಕ್ಷೀಣಿಸಿದೆ. ಇದರ ಪರಿಣಾಮ ಬಹುತೇಕ ಹೋಂಸ್ಟೇಗಳು, ರೆಸಾರ್ಟ್‌ಗಳು, ಲಾಡ್ಜ್‌ಗಳು ಪ್ರವಾಸಿಗರಿಲ್ಲದೆ ಖಾಲಿ ಉಳಿದಿದೆ.

ಪ್ರವಾಸಿ ಸ್ಥಳಗಳಲ್ಲಿ ಹೋಟೆಲ್‌ಗಳು, ಕ್ಯಾಂ ಟೀನ್, ಕಾಂಡಿಮೆಂಟ್ಸ್‌ಗಳು, ಬೇಕರಿಗಳು ಇನ್ನಿತರೆ ವ್ಯಾಪಾರ ವಹಿವಾಟಿಗೂ ಪೆಟ್ಟು ಬಿದ್ದಿದ್ದು, ಪ್ರವಾ ಸೋದ್ಯಮ ನಷ್ಟ ಅನುಭವಿಸುವಂತಾಗಿದೆ ಎಂದರು.



ಒಂದೆರಡು ವಾರಗಳ ನಂತರ ಸಹಜ ಸ್ಥಿತಿಗೆ

ಮಧ್ಯಪ್ರಾಚ್ಯದಲ್ಲಿ ತಲೆದೋರಿದುವ ಯುದ್ಧದ ಪರಿಸ್ಥಿತಿಯಿಂದ ಉಂಟಾಗಿರುವ ಅಡುಗೆ ಅನಿಲ ಅಭಾವದ ಕಾರಣ ಎಲ್ಲೆಡೆ ಹೋಟೆಲ್‌ಗಳು ಮುಚ್ಚಲ್ಪಡುತ್ತಿರುವುದರಿಂದ ಐಟಿ ಉದ್ಯೋಗಿಗಳು ಸೇರಿದಂತೆ ಇತರೆ ಪ್ರವಾಸಿಗರು ತಮ್ಮ ಪ್ರವಾಸದ ಯೋಜನೆಯನ್ನು ಕೈಬಿಟ್ಟಿರುವ ಸಾಧ್ಯತೆ ಇದೆ. ಇಂದಿನ ಒಟ್ಟಾರೆ ಪರಿಸ್ಥಿತಿ ಪ್ರವಾಸವನ್ನು ಸಂಪೂರ್ಣ ಆನಂದಿಸಲು ಪೂರಕವಾಗಿಲ್ಲ ಎನ್ನುವ ಕಾರಣಕ್ಕೆ ಪ್ರವಾಸಿಗರು ಹಿಂದೇಟು ಹಾಕುತ್ತಿದ್ದಾರೆ. ಇದು ಹೀಗೇ ಇರುವುದಿಲ್ಲ. ಒಂದೆರಡು ವಾರಗಳ ನಂತರ ಸಹಜ ಸ್ಥಿತಿಗೆ ಮರುಳಲಿದೆ ಎಂದು ಕೈಮರದ ಹೋಟೆಲ್ ಮಾಲೀಕ ಮುರುಗನ್ ಹೇಳುತ್ತಾರೆ.

ಕೈಮಗ್ಗ ಉತ್ಪನ್ನಗಳಿಗೆ ಉತ್ತಮ ಬೇಡಿಕೆ: ಸಚಿವ

ಬೆಂಗಳೂರು: ರಾಜ್ಯದ ಕೈಮಗ್ಗ ಉತ್ಪನ್ನಗಳು ಹೊರ ರಾಜ್ಯಗಳಲ್ಲಿ ಬೇರೆ-ಬೇರೆ ಬ್ರಾಂಡ್‌ಗಳಲ್ಲಿ ಮಾರಾಟವಾಗುತ್ತಿವೆ. ನಮ್ಮದೇ ಉತ್ಪನ್ನಗಳು ಬೇರೆ ರಾಜ್ಯಗಳಿಂದ ಬೇರೆ ಬ್ರಾಂಡ್‌ಗಳ ರೂಪದಲ್ಲಿ ರಾಜ್ಯಕ್ಕೆ ಬರುತ್ತಿವೆ. ಸ್ಥಳೀಯವಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಈ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ರಾಜಾಜಿನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ಟೇಡಿಯಂನಲ್ಲಿ 14 ದಿನಗಳ ಭಾರತೀಯ ಕೈಮಗ್ಗ ಪರಂಪರೆ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಪಾರಂಪರಿಕ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಮ್ಮ ಉತ್ಪನ್ನಗಳಿಗೆ ನಮ್ಮಲ್ಲೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಯಶವಂತಪುರದಲ್ಲಿರುವ ಇಲಾಖೆಯ ಒಂದೂವರೆ ಎಕರೆ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಗಳ ಜತೆ ಚರ್ಚಿಸಿ ಶೀಘ್ರದಲ್ಲಿ ಶಂಕುಸ್ಥಾಪನೆ ನೆರವೇರಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು. ಇತ್ತೀಚೆಗೆ ಪಾರಂಪರಿಕ ಕಲೆ ನಶಿಸಿ ಹೋಗುತ್ತಿದೆ ಎಂದರು.



ಅಂತಿಮ ಹಂತದಲ್ಲಿ ಜವಳಿ ನೀತಿ

2026-30 ಅವಧಿಯ ನೂತನ ಜವಳಿ ನೀತಿ ಅಂತಿಮ ಹಂತಕ್ಕೆ ಬಂದಿದೆ. ಮೆಗಾ ಮತ್ತು ಮಿನಿ ಇಂಡಸ್ಟ್ರಿಸ್‌ಗಳನ್ನು ಒಂದೇ ಸೂರಿನ ಅಡಿಯಲ್ಲಿ ತರುವ ಪ್ರಯತ್ನ ನಡೆದಿದೆ. ಕಲಬುರಗಿಯಲ್ಲಿ ನಿರ್ಮಾಣವಾಗುತ್ತಿರುವ ಪಿಎಂ ಮಿತ್ರ ನೂಲಿನಿಂದ ಬಟ್ಟೆ ಹಂತದವರೆಗೆ ಎಲ್ಲ ಚಟುವಟಿಕೆಗಳು ಪಾರ್ಕ್‌ನಲ್ಲಿ ಒಂದೇ ಸೂರಿನ ಅಡಿಯಲ್ಲಿ ಬರಲಿವೆ. ಈ ಯೋಜನೆ ಅನುಷ್ಠಾನವಾದರೆ ಕರ್ನಾಟಕದಲ್ಲಿ ಮೈಲಿಗಲ್ಲಾಗಲಿದೆ ಎಂದು ಶಿವಾನಂದ ಪಾಟೀಲ್ ಮಾಹಿತಿ ನೀಡಿದರು.

52 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರ ಅಧಿಸೂಚನೆ

ವಿಧಾನ ಪರಿಷತ್: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿಯಿದ್ದು, ವಿವಿಧ ಇಲಾಖೆಗಳಲ್ಲಿ 52 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರ ಅಧಿಸೂಚನೆ ಹೊರಬೀಳಲಿದೆ. ಈ ಸಂಬಂಧ ಸರ್ಕಾರ ಮಟ್ಟದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಡಾ. ಎಂ.ಜಿ. ಮುಳೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಬೀದರ ಜಿಲ್ಲೆಯಲ್ಲಿ 106 ಹುದ್ದೆಗಳೂ ಸೇರಿ ರಾಜ್ಯಾದ್ಯಂತ 823 ನಿಲಯ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆರ್ಥಿಕ ಇಲಾಖೆಯಿಂದ ಒಪ್ಪಿಗೆ ಸಿಗಬೇಕಿದೆ. ಉಳಿದಂತೆ ಖಾಲಿ ಇರುವ ಗ್ರೂ-ಡಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆದುಕೊಂಡು ಹಾಸ್ಟೆಲ್‌ಗಳನ್ನು ನಿರ್ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲಿ ವಾರ್ಷಿಕವಾಗಿ ಓಬಿಸಿ ಇಲಾಖೆಯಿಂದಲೇ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ 1.41 ಲಕ್ಷ ವಿದ್ಯಾರ್ಥಿಗಳ ಹಾಸ್ಟೆಲ್ ಪ್ರವೇಶಾತಿ ಬೇಡಿಕೆ ಇದೆ ಎಂದರು.



ರಾಜ್ಯ ಸರ್ಕಾರ ಭೂಮಿ ದರ ಹೆಚ್ಚಳ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ರೈಲ್ವೆ ಕಾಮಗಾರಿಗಳಿಗೆ ಸರ್ಕಾರದಿಂದ ಹಿನ್ನಡೆ

ಹುಬ್ಬಳ್ಳಿ: ಧಾರವಾಡ-ಬೆಳಗಾವಿ ಮಧ್ಯೆ ರೈಲ್ವೆ ಮಾರ್ಗದ ಯೋಜನೆ ಕಾಮಗಾರಿಗೆ ರಾಜ್ಯ ಸರ್ಕಾರ ಭೂಸ್ವಾಧೀನಕ್ಕೆ ಸಹಕಾರ ನೀಡುತ್ತಿಲ್ಲ. ಇದರಿಂದ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುತ್ತಿದ್ದು, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ಟೈ ಹುಬ್ಬಳ್ಳಿ ಪದಾಧಿಕಾರಿಗಳು ಸರ್ಕಾರ ಮೇಲೆ ಒತ್ತಡ ಹಾಕಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.



ನಗರದಲ್ಲಿ ಶನಿವಾರ ಟೈ ಹುಬ್ಬಳ್ಳಿ ವತಿಯಿಂದ ಏರ್ಪಡಿಸಿದ್ದ ಟೈಕಾನ್ -2026 ಉತ್ತರ ಕರ್ನಾಟಕ ರೈಸಿಂಗ್ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್‌ಗೆ ಸ್ಥಾಪನೆಯಾಗಿದ್ದು, ರಾಜ್ಯ ಸರ್ಕಾರ ಭೂಮಿ ದರ ಹೆಚ್ಚಿಸಿದೆ. ಇದರಿಂದ ಕೈಗಾರಿಕೋದ್ಯಮಿಗಳು ಮುಂದೆ ಬರುತ್ತಿಲ್ಲ. ಈ ಬಗ್ಗೆ ಸಂಸ್ಥೆಗಳು ಸರ್ಕಾರದ ಗಮನಕ್ಕೆ ತರಬೇಕು ಎಂದರು. ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗದ ಕಾಮಗಾರಿಗೆ ಶೀಘ್ರದಲ್ಲಿಯೇ ಅನುಮೋದನೆ ದೊರೆಯಲಿದೆ. ಇದರಿಂದ ಉತ್ತರ ಕರ್ನಾಟಕ ಭಾಗದ ಕೈಗಾರಿಕೋದ್ಯಮಿಗಳಿಗೆ ಬಹಳಷ್ಟು ಸಹಕಾರವಾಗಲಿದೆ. ಇದು ಬಂದರುಗಳಿಗೆ ಸಂಪರ್ಕದ ಕೊಂಡಿಯಾಗಲಿದ್ದು, ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ದೇಶದಲ್ಲಿ ವಾಣಿಜ್ಯೋದ್ಯಮಿಗಳಿಗೆ ಕೌಶಲ್ಯ ಬಹಳ ಅವಶ್ಯಕ. ದೇಶದ ಎಲ್ಲ ಕ್ಷೇತ್ರದಲ್ಲಿ ಅವಕಾಶಗಳು ತೆರೆದುಕೊಂಡಿವೆ. ಕೃತಕ ಬುದ್ಧಿಮತ್ತೆ(ಎಐ), ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರ ಬೆಳೆದಿವೆ. ದೇಶದಲ್ಲಿ ಮುಂದಿನ ಐದು ವರ್ಷದಲ್ಲಿ ಕೋಟ್ಯಾಂತರ ಉದ್ಯೋಗ ಸೃಷ್ಟಿಯಾಗಲಿವೆ. ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಲಿದೆ ಎಂದು ತಿಳಿಸಿದರು.

ದೇಶದಲ್ಲಿ 300ಕ್ಕೂ ಹೆಚ್ಚು ಮೊಬೈಲ್ ತಯಾರಿಕಾ ಕಂಪನಿಗಳಿದ್ದು, ವಿಶ್ವಕ್ಕೆ ಶೇ.30ರಷ್ಟು ಮೊಬೈಲ್‌ಗಳನ್ನು ಇಲ್ಲಿಂದ ರಫ್ತು ಮಾಡಲಾಗುತ್ತಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಬೇರೆ ರಾಜ್ಯಗಳಲ್ಲಿ ವಿದ್ಯುತ್ ದರ ಕಡಿಮೆಯಿದ್ದು, ರಾಜ್ಯದಲ್ಲಿ 90 ಪೈಸೆ ಹೆಚ್ಚಿಸಲಾಗಿದೆ. ಇದು ಕೈಗಾರಿಕೋದ್ಯಮಿಗಳಿಗೆ ಹೊರೆಯಾಗಲಿದೆ. ಭಾರತ ಉತ್ಪನ್ನಗಳಿಗೆ ವಿದೇಶದಲ್ಲಿ ಭಾರೀ ಬೇಡಿಕೆ ಇದೆ. ದೇಶದಲ್ಲಿ ವಿಮಾನ ನಿಲ್ದಾಣ, ರೈಲ್ವೆ ಮಾರ್ಗ, ರಸ್ತೆ ಸಂಪರ್ಕ ಮಾಡಿದ್ದರಿಂದ ಅಭಿವೃದ್ಧಿಗೆ ಸಹಕಾರವಾಗಿದೆ ಎಂದರು.

ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಟೈ ಇವತ್ತು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. 16 ವರ್ಷ ಹಿಂದೆ 5 ಜನ ಆರಂಭಿಸಿದ್ದೇವು. ಈಗ ಬಹಳ ಹೆಸರುಗಳಿಸಿದೆ. ನವೋದ್ಯಮಿಗಳಿಗೆ ಮಾರ್ಗ ದರ್ಶನ ಮಾಡಲಾಗುತ್ತಿದೆ. ಶಿಕ್ಷಣ ಸೇರಿದಂತೆ ನಾಲ್ಕು ಕ್ಷೇತ್ರದ ಒಳಗೊಂಡು ಮುಂದೆ ನಡೆದಿದೆ. ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವಂತೆ ವಾತಾವರಣ ನಿರ್ಮಾಣವಾಗಿದೆ. ಸ್ವಂತ ಯೋಜನೆ, ಆಲೋಚನೆಯಿಂದ ಅನೇಕರು ಉದ್ಯಮಿಗಳಾಗಿ ಬೆಳೆದಿದ್ದಾರೆ ಎಂದು ಹೇಳಿದರು.

ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಟೈ ಹುಬ್ಬಳ್ಳಿ ಅಧ್ಯಕ್ಷ ಗಿರೀಶ ಮಾನೆ, ವಿಶಾಲ ನಾಡ ಗೌಡರ, ವಿ.ಎಸ್. ವಿ ಪ್ರಸಾದ, ಅಮೃತ ಕಬಾಡೆ ಇದ್ದರು.

ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವ ಸೂಚನೆ

ಮಾ.28ರಂದು ಮೇಲುಕೋಟೆ ವೈರಮುಡಿ

ಮಂಡ್ಯ: ಮೇಲುಕೋಟೆಯಲ್ಲಿ ಪ್ರಮುಖ ಆಕರ್ಷಣೆಯಾದ ಮೇಲುಕೋಟೆ ವೈರಮುಡಿ ಉತ್ಸವ ಮಾ. 28ರಂದು ನಡೆಯಲಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮ ವಹಿಸುವಂತೆ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವೈರಮುಡಿ ಬ್ರಹ್ಮೋತ್ಸವದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾ. 23ರಿಂದ ಏ. 4ರವರೆಗೆ ವೈರಮುಡಿ ಉತ್ಸವ ನಡೆಯಲಿದ್ದು, ಉತ್ಸವದಲ್ಲಿ ಯಾವುದೇ ಲೋಪದೋಷಗಳಾಗದಂತೆ, ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಮತ್ತು ಬಿಗಿ ಭದ್ರತೆ ಒದಗಿಸುವಂತೆ ಸೂಚಿಸಿದರು.

ವೈರಮುಡಿ ಉತ್ಸವದಲ್ಲಿ ಲಕ್ಷಾಂತರ ಭಕ್ತಾಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವುದರ ಜತೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.



ಪೊಲೀಸ್ ಇಲಾಖೆಯವರು ವೈರಮುಡಿ ಬ್ರಹ್ಮೋತ್ಸವದಲ್ಲಿ ಕಿರೀಟಧಾರಣಾ ಮೆರವಣಿಗೆಯ ಸಂದರ್ಭದಲ್ಲಿ ಶಾಂತಿಯುತವಾಗಿ ಹಾಗೂ ಸಮಾಧಾನವಾಗಿ ಜನರು ದೇವರು ನೋಡವಂತೆ ಅಗತ್ಯ ವ್ಯವಸ್ಥೆ ಮಾಡಬೇಕು. ಈ ಸಂಬಂಧ ದೇವಸ್ಥಾನದ ಅರ್ಚಕರೊಂದಿಗೆ ಸಭೆ ನಡೆಸಿ ಶಾಂತಿಯುತವಾಗಿ ನಡೆಯಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಮಾತನಾಡಿ, ಭಕ್ತರಿಗೆ ಕುಡಿಯುವ ನೀರಿನ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ. ವೈರಮುಡಿ ಉತ್ಸವದಲ್ಲಿ ಜನಸಂದಣಿಯಾಗದಂತೆ ಬ್ಯಾರಿಕೇಡಿಂಗ್ ಅಳವಡಿಸಿ ಸಮಸ್ಯೆ ನಿವಾರಣೆಗೆ ಕ್ರಮ ವಹಿಸಬೇಕು ಎಂದುಹೇಳಿದರು. ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿ, ಈಗಾಗಲೇ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಭಕ್ತಾದಿಗಳಿಗೆ ಅಗತ್ಯವಿರುವ ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್ ಮತ್ತು ಸಂಚಾರ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವುದರಿಂದ ಆರೋಗ್ಯ ಸೇವೆಗಳು, ಸಾರಿಗೆ ವ್ಯವಸ್ಥೆ (ಕೆ.ಎಸ್.ಆರ್.ಟಿ.ಸಿ. ಬಸ್‌ಗಳು) ಮತ್ತು ಬಿಗಿ ಪೊಲೀಸ್ ಬಂದೋಬಸ್ತ್‌ಗೆ ಸಭೆಯಲ್ಲಿ ಆದ್ಯತೆ ನೀಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ.ಜೆ. ಶೋಭಾರಾಣಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಉಪವಿಭಾಗಾಕಾರಿ ಶ್ರೀನಿವಾಸ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಚಿಂತಾಮಣಿಯಂತೆ ದುರ್ಲಭವಾದುದು ಯಾವುದು?

◆ ಚತುರ್ಭದ್ರ

ಚಿಂತಾಮಣಿ ಎಂದರೆ ಚಿಂತಿಸಿದ್ದನ್ನು, ಯೋಚಿಸಿದ್ದನ್ನು, ಇಚ್ಛಿಸಿದ್ದನ್ನು ಕೊಡುವ ಒಂದು ರತ್ನವಿಶೇಷ. ಅದೊಂದು ಮಣಿರೂಪದಲ್ಲಿ ಇರುವಂತಹ ವಸ್ತು. ಅತ್ಯಂತ ಅಪರೂಪದ ವಸ್ತು. ಅದನ್ನು ಪಡೆದವನು ಆ ಮಣಿಯ ಸಹಾಯದಿಂದ ಅವನು ಏನನ್ನು ಬೇಕಾದರೂ ಪಡೆಯಬಹುದು. ಈ ಪ್ರಶ್ನೆಯಲ್ಲಿ ಮಣಿಯ ವಿಷಯವನ್ನು ಪ್ರಸ್ತಾಪಿಸಿಲ್ಲ. ಆದರೆ ಚಿಂತಾಮಣಿಯಂತೆ ದುರ್ಲಭವಾದದ್ದು ಯಾವುದು ಎಂಬ ಪ್ರಶ್ನೆ ಇಲ್ಲಿದೆ. ಅದಕ್ಕೆ 'ಚತುರ್ಭದ್ರ' ಎಂಬ ಉತ್ತರವನ್ನು ನೀಡಲಾಗಿದೆ. ಹಾಗಾದರೆ ಚತುರ್ಭದ್ರವು ಹೇಗೆ ಚಿಂತಾಮಣಿಯಾಗಿದೆ ಎಂಬುದನ್ನು ಚಿಂತಿಸಬೇಕಾಗಿದೆ.

ಚತುರ್ಭದ್ರ ಎಂದರೆ ನಾಲ್ಕು ಕಡೆ ಗಟ್ಟಿಯಾಗಿರುವ ಸಂಗತಿ ಎಂದರ್ಥ. ಅಂದರೆ ಒಂದು ವಿಷಯ ಅಥವಾ ಒಂದು ಪದಾರ್ಥ ಅಚಲವಾಗಿ ನೆಲೆ ನಿಲ್ಲಬೇಕಾದರೆ ಅದಕ್ಕೆ ಸುತ್ತಲೂ ರಕ್ಷಣೆ ಅತ್ಯಂತ ಅವಶ್ಯಕ. ಪ್ರಧಾನವಾಗಿ ನಾಲ್ಕು ದಿಕ್ಕುಗಳನ್ನು ಇಟ್ಟುಕೊಂಡು, ಆ ನಾಲ್ಕು ದಿಕ್ಕುಗಳಲ್ಲೂ ಯಾವುದೇ ರೀತಿಯ ಬಾಧೆ ಇಲ್ಲದಿದ್ದರೆ ಅದಕ್ಕೆ 'ಚತುರ್ಭದ್ರ' ಎಂಬುದಾಗಿ ಹೇಳಬಹುದು. ಹಾಗಾದರೆ ಇಲ್ಲಿ ಆ ಚತುರ್ಭದ್ರ ಯಾವುದು ಎಂದರೆ 'ಪುರುಷಾರ್ಥ'. ಪುರುಷಾರ್ಥಗಳನ್ನೇ 'ಚತುರ್ಭದ್ರ' ಎಂಬ ಇನ್ನೊಂದು ಪದದಿಂದ ಬಳಸಲಾಗಿದೆ. "ಪುರುಷಾರ್ಥವಿದೆ. ಅದಕ್ಕನುಗುಣವಾದ ನಡೆ ನೋಡಿ ನಡೆಸಿದರೆ ಚತುರ್ಭದ್ರಮಯವಾದ ಜೀವನವಾಗುತ್ತದೆ" ಎಂಬುದಾಗಿ ಶ್ರೀರಂಗ ಮಹಾಗುರುಗಳು ಈ ಪುರುಷಾರ್ಥ ಮತ್ತು ಚತುರ್ಭದ್ರ ಎಂಬ ವಿಷಯವನ್ನು ಹೀಗೆ ಸಮೀಕರಿಸಿದ್ದನ್ನು ನಾವು ಇಲ್ಲಿ ಗಮನಿಸಬೇಕು. ಆ ಪುರುಷಾರ್ಥಗಳು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬುದಾಗಿ. ಒಬ್ಬ ವ್ಯಕ್ತಿ ಪರಿಪೂರ್ಣವಾಗಿ ಯಾವಾಗ ಆಗಬಲ್ಲ ಎಂದರೆ ಯಾವಾಗ ಈ ನಾಲ್ಕು ಪುರುಷಾರ್ಥಗಳನ್ನು ಅವನು ಅನುಭವಿಸಬಲ್ಲನೋ ಆಗ. ಅವನು ಯಾವುದೇ ರೀತಿಯ ಅಪೇಕ್ಷಿತವಾದ ಅಥವಾ ಚಿಂತಿತವಾದ ವಿಷಯವನ್ನು ಕ್ಷಣಾರ್ಧದಲ್ಲಿ ಪಡೆಯಬಲ್ಲ ಎಂದು ತಾತ್ಪರ್ಯ. ಅಂದರೆ ಅವನಿಗೆ ಈ ಪ್ರಪಂಚದ ಪ್ರತಿಯೊಂದು ಪದಾರ್ಥದ ಅರಿವು ಆಗಿರುತ್ತದೆ ಮತ್ತು ಆ ಪದಾರ್ಥಗಳ ಸ್ವಾಮ್ಯವೂ ಅವನದ್ದಾಗಿರುತ್ತದೆ. ಪದಾರ್ಥಗಳನ್ನು ಹೇಗೆ ಬಳಸಿಕೊಳ್ಳಬೇಕು? ಹೇಗೆ ಬಳಸಿಕೊಂಡರೆ ಆ ಪದಾರ್ಥವು ಮತ್ತು ಆ ಪದಾರ್ಥದಿಂದ ವ್ಯಕ್ತಿಗೂ ಒಂದು ಸಾರ್ಥಕತೆ ಎಂಬುದು ಉಂಟಾಗುತ್ತದೆ? ಎಂಬುದನ್ನು ಆತ ಅರಿಯಬಲ್ಲವನಾಗಿರುತ್ತಾನೆ. ಹಾಗಾಗಿ ಅವನಿಗೆ ಈ ನಾಲ್ಕು ಪುರುಷಾರ್ಥಗಳು ಚಿಂತಾಮಣಿಯಂತೆ ಕೆಲಸ ಮಾಡುತ್ತವೆ ಎಂಬುದು ಇದರ ತಾತ್ಪರ್ಯ. ಹಾಗಾದರೆ ಈ ನಾಲ್ಕು ಪುರುಷಾರ್ಥಗಳನ್ನು ಪಡೆಯಬೇಕಾದರೆ ಅವನಿಗೆ ಬೇಕಾದ ಮೂಲಭೂತ ಅವಶ್ಯಕತೆ ಏನು ಎಂಬುದನ್ನು ವಿವೇಕ ಚೂಡಾಮಣಿ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ–"ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಂ? ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ?" ಎಂಬುದಾಗಿ. ಅಂದರೆ ಒಬ್ಬ ಮಾನವನಾಗಿ ಹುಟ್ಟಿ, ಅವನಿಗೆ ಮೋಕ್ಷ ಪಡೆಯಬೇಕೆಂಬ ಉತ್ಕಟ ಇಚ್ಛೆಯು ಉಂಟಾಗಿ, ಅದನ್ನು ಪೂರೈಸಲು ಒಬ್ಬ ಮಹಾಪುರುಷನ ಸಂಸರ್ಗ ಉಂಟಾದರೆ ಅವನಿಗೆ ಇನ್ನು ಉಳಿದ ಎಲ್ಲವೂ ಸುಲಭ. ಏಕೆಂದರೆ ಈ ಮೂರು ಸಿಗುವುದು ಅತ್ಯಂತ ದುರ್ಲಭ. ಈ ಮೂರನ್ನು ಪಡೆದವನು ಪುರುಷಾರ್ಥ ಸಂಪತ್ತಿಯನ್ನು ಸುಲಭವಾಗಿ ತನ್ನದಾಗಿಸಿಕೊಳ್ಳುತ್ತಾನೆ. ಅಂದರೆ ಆತ ಚತುರ್ಭದ್ರಮಯವಾದ ಬಾಳಾಟವನ್ನು ಮಾಡಿದಂತೆ ಆಗುತ್ತದೆ ಎಂಬುದು ಇದರ ತಾತ್ಪರ್ಯವಾಗಿದೆ. ಇದೇ ಅವನಿಗೆ ಚಿಂತಾಮಣಿಯಂತೆ ಆಗುತ್ತದೆ.

ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ವಿಪ್ರವೇಷದಲ್ಲಿ ಭೇಟಿ

ಕೃಷ್ಣಾರ್ಜುನ-ಭೀಮಸೇನರು ಜರಾಸಂಧ ಸಂಹಾರಕ್ಕಾಗಿ ಆಗಮಿಸುತ್ತಿರುವಲ್ಲಿ ಕೆಲವರು ವೇದಪಾರಂಗತ ಬ್ರಾಹ್ಮಣರು ಕೆಲವು ಅಪಶಕುನಗಳನ್ನು ಕಂಡರು. ಅವನ್ನವರು ಜರಾಸಂಧನ ಗಮನಕ್ಕೆ ತಂದರು. ಅವಕ್ಕೆ ಪ್ರತಿಯಾಗಿ ಆತನ ಪುರೋಹಿತರು ಆತನನ್ನು ಆನೆಯ ಮೇಲೆ ಕೂರಿಸಿ ನಾಲ್ಕೂ ಎಡೆಗಳಲ್ಲಿ ಅಗ್ನಿಜ್ವಾಲನ ಮಾಡಿದರು. ಸಂಭಾವ್ಯವಾದ ಅನಿಷ್ಟಗಳ ಪರಿಹಾರಕ್ಕಾಗಿ ಜರಾಸಂಧ ದೀಕ್ಷಿತನಾಗಿ ವ್ರತಿಯಾದನು, ಉಪವಾಸ ಮಾಡಿದನು.

ಇತ್ತ ಸ್ನಾತಕವ್ರತಸ್ಥರಾಗಿ ಬ್ರಾಹ್ಮಣವೇಷದಲ್ಲಿದ್ದ ಈ ಮೂವರು ಆಯುಧಗಳನ್ನು ತೆಗೆದಿಟ್ಟರು. ಅವರಿಗೋ ಎಷ್ಟಾದರೂ ತಮ್ಮ ಬಾಹುಗಳೇ ಆಯುಧಗಳು! ಜರಾಸಂಧನೊಡನೆ ಯುದ್ಧಾಪೇಕ್ಷಿಗಳಾಗಿ ಅವರು ನಗರಪ್ರವೇಶವನ್ನು ಮಾಡಿದರು. ಆ ನರೋತ್ತಮರಾದ ಕೃಷ್ಣ-ಭೀಮ-ಧನಂಜಯರು ಅಲ್ಲಿಯ ರಾಜಮಾರ್ಗಗಳಲ್ಲಿ ಕಂಡದ್ದೇನು? ಭಕ್ಷ್ಯಾಪಣ-ಮಾಲ್ಯಾಪಣಗಳನ್ನು. ಎಂದರೆ, ಬೇಕಾದ್ದನ್ನು ತಿನ್ನಲು ಅಂಗಡಿಗಳು ಹಾಗೂ ಹೂಮಾಲೆಗಳ ಅಂಗಡಿಗಳು! ಅವುಗಳ ಸಿರಿಯನ್ನೂ, ಸರ್ವಕಾಮಗಳನ್ನೂ ಪೂರೈಸುವ ಅಲ್ಲಿಯ ಸಮೃದ್ಧಿಯನ್ನೂ ಅವರು ಕಂಡುಕೊಂಡರು. ಮಹಾಬಲಶಾಲಿಗಳಾದ ಅವರು ಹೂಕಟ್ಟುವವನೊಬ್ಬನಿಂದ ಮಾಲೆಗಳನ್ನು ಬಲಾತ್ಕಾರವಾಗಿ ಸ್ವೀಕರಿಸಿ ಮಾಲಾಧಾರಿಗಳಾದರು. ಅವರ ವಸ್ತ್ರಗಳೂ ನಾನಾವರ್ಣಗಳಿಂದ ಕೂಡಿದ್ದವು. ಹೊಳೆಯುವ ಕುಂಡಲಗಳನ್ನವರು ಧರಿಸಿದ್ದರು. ಜರಾಸಂಧನ ಅರಮನೆಯನ್ನು ಮುಟ್ಟಿದರು. ಅವರು ನಡೆದು ಬರುತ್ತಿದ್ದ ರೀತಿಯು ಹೇಗಿತ್ತೆಂದರೆ, ಹಸುಗಳು ಎಲ್ಲೆಲ್ಲಿವೆಯೆಂದು ಗೋಶಾಲೆಯನ್ನು ನೋಡಿಕೊಂಡು ನಡೆಯುತ್ತಿರುವ ಹಿಮಾಲಯದ ಸಿಂಹಗಳಂತೆ. ಯುದ್ಧಗಳಲ್ಲಿ ಶೋಭಿಸುವ ಅವರ ತೋಳ್ಗಳು ಮಹಾಗೃಹದ ಕಂಭಗಳಂತೆ ಇದ್ದುವು. ಒಟ್ಟಿನಲ್ಲಿ, ವಿಶಾಲವಕ್ಷಃಸ್ಥಳವುಳ್ಳವರೂ ಆನೆಗಳಂತಿರುವವರೂ ಆದ ಅವರನ್ನು ಕಂಡು ಮಾಗಧರಿಗೆ, ಎಂದರೆ ಮಗಧ ದೇಶದ ಪ್ರಜೆಗಳಿಗೆ, ವಿಸ್ಮಯವೇ ಉಂಟಾಯಿತು.ಜನಗಳು ಕಿಕ್ಕಿರಿದಿದ್ದ ಅಲ್ಲಿಯ ಮೂರು ಕಕ್ಷೆಗಳನ್ನು ದಾಟಿದರು ಆ ಮೂವರು ಮಹಾಪುರುಷರು. ನಿರ್ಭಯರಾಗಿದ್ದ ಅವರು ಅಭಿಮಾನಿಗಳಾಗಿಯೇ ಜರಾಸಂಧನನ್ನು ಸಮೀಪಿಸಿದರು. ಜರಾಸಂಧನೂ ಅವರನ್ನು ಆದರದೊಂದಿಗೇ ಸತ್ಕರಿಸಿದನು. ಪಾದ್ಯ-ಮಧುಪರ್ಕಗಳಿಗೆ, ಗೋದಾನಕ್ಕೆ, ಅರ್ಹರಾದವರು ಅವರು. ಪ್ರತ್ಯುತ್ಥಾನ ಮಾಡಿ, ಎಂದರೆ ತಾನೇ ಎದ್ದು ಬಂದವನಾಗಿ, ಅವರಿಗೆ ವಿಧ್ಯನುಸಾರವಾದ ಆತಿಥ್ಯವನ್ನು ಸಲ್ಲಿಸಿದನು ಜರಾಸಂಧ. ತಮಗೆ ಸ್ವಾಗತ ಎಂದನು. ಆದರೆ ಭೀಮಾರ್ಜುನರು ಮೌನದಿಂದಿದ್ದರು. ಅವರಲ್ಲಿ ಕೃಷ್ಣನೇ ಎಷ್ಟಾದರೂ ಮಹಾಬುದ್ಧಿಶಾಲಿಯಲ್ಲವೇ? ಆತನೇ ಮಾತನಾಡಿದನು. "ರಾಜಶ್ರೇಷ್ಠನೇ, ಇವರಿಬ್ಬರೂ ನಿಯಮದಲ್ಲಿರುವವರು, ಎಂದರೆ ಮೌನವ್ರತದಲ್ಲಿರತಕ್ಕವರು. ಮಧ್ಯರಾತ್ರಿಯು ಕಳೆದ ನಂತರವೇ ನಿನ್ನೊಡನೆ ಇವರು ಮಾತನಾಡತಕ್ಕವರು" ಎಂದನು. ತದನುಸಾರ ಯಜ್ಞಗೃಹದಲ್ಲುಳಿದುಕೊಳ್ಳಲು ಅವರಿಗೊಂದು ವ್ಯವಸ್ಥೆ ಮಾಡಿ ತನ್ನ ಅಂತಃಪುರಕ್ಕೆ ತೆರಳಿದನು. ಅರ್ಧರಾತ್ರವು ಕಳೆಯಲು, ಆ ದ್ವಿಜರಿದ್ದೆಡೆಗೆ ತೆರಳಿದನು. ಆ ರಾಜನ ಈ ವ್ರತವು ಜಗದ್ ವಿಶ್ರುತವಾಗಿದ್ದಿತು. ಏನೆಂದರೆ, ಸ್ನಾತಕಬ್ರಾಹ್ಮಣರು ಬಂದರೆಂದರೆ ಅದು ಅರ್ಧರಾತ್ರವೇ ಆಗಿದ್ದರೂ ಸಹ ಅವರನ್ನು ತಾನೇ ಎದುರ್ಗೊಂಡು ಸ್ವಾಗತಿಸುತ್ತಿದ್ದನು. ಬಂದಿದ್ದವರ ವೇಷವೇ ಅಪೂರ್ವವಾಗಿದ್ದರಿಂದ, ಜರಾಸಂಧನು ವಿಸ್ಮಯದಿಂದಲೇ ಅವರ ಬಳಿ ಸಾರಿದನು. ಆತನನ್ನು ಕಾಣುತ್ತಲೇ, ಸ್ವಸ್ತ್ಯಸ್ತು, ನಿನಗೆ ಕಲ್ಯಾಣವಾಗಲಿ ಎಂದು ಅವರೆಂದರು. ಪರಸ್ಪರ ಮುಖ ನೋಡಿಕೊಂಡರು. ಬ್ರಾಹ್ಮಣವೇಷದಲ್ಲಿದ್ದ ಆ ಪಾಂಡವ-ಯಾದವರಿಗೆ ಕುಳಿತುಕೊಳ್ಳಿ ಎಂದು ಹೇಳಿದನು.

ಗ್ಯಾಸ್ ಟ್ರಬಲ್ ಪ್ರಕರಣವು

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com



"ಸುಮ್ಮನೆ ಇರಾಣಂದ್ರೆ ಇರಾಕ್ ಬಿಡಾಕಿಲ್ಲ" ಎಂದಿದ್ದರು ವೈಎನ್ಕೆ. ಈಗ ಇರಾಕ್ ಯಾವುದಕ್ಕೂ ಬರಾಕ್ ಇಲ್ಲ. ಆದರೆ ಬರಾಕ್ (ಒಬಾಮಾ) ಇದ್ದ ಜಾಗಕ್ಕೆ ಬಂದವನು ಇಡೀ ಪ್ರಪಂಚವೇ ಸುಮ್ಮನೆ ಇರಾಕ್ ಬಿಡಾಕಿಲ್ಲ! ಒಂದು ಕಾಲದಲ್ಲಿ ಇದ್ದ 'ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದರಂತೆ" ಎಂಬ ಗಾದೆಯನ್ನು ಈಗ "ಬಾವಿಗೆ ಬೆಂಕಿ ಬಿದ್ದಾಗ ಗಡ್ಡ ಕೆರ್ಕೊಂಡ್ರಂತೆ" ಎಂದು ಬದಲಾಯಿಸಿದ್ದಾರಂತೆ. ಕೊಲ್ಲಿ ರಾಷ್ಟ್ರಗಳ (ಶಾಂತಿಯುತ ದೇಶಗಳನ್ನು 'ಕೊಲ್ಲದಿರಿ ರಾಷ್ಟ್ರಗಳು' ಎನ್ನಬಹುದೆ?) ತೈಲಕೂಪಗಳಿಗೆ ಬೆಂಕಿ ಬಿದ್ದ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ಗ್ಯಾಸ್ ಟ್ರಬಲ್ ಶುರುವಾಗಿದೆ. ಎಲ್‌ಪಿಜಿ ಸಿಲಿಂಡರ್ ದೊರಕುವುದು ನಿಧಾನವಾಗುವುದೆಂಬ ಸುದ್ದಿಯನ್ನು ಕೊಳಕ್ಮೀಡಿಯಾ.ಕಾಮ್ ರಾಸಭ ಕಂಠಕ್ಕೆ ಲೌಡ್‌ಸ್ಪೀಕರ್ ಅಳವಡಿಸಿಕೊಂಡು ಅರಚುತ್ತಿದೆ. 'ದಿನಾ ಬಾಯ್ಬಡ್ಕೊಳೋವ್ನು ಕಾಮನಹಬ್ಬ ಬಂದಾಗ ಸುಮ್ಮನಿರ್ತಾನೆಯೇ?' ಎಂಬಂತೆಯೇ ಜಾಲತಾಣಗಳು ಸಿಕ್ಕಸಿಕ್ಕವರ ಜನ್ಮ ಜಾಲಾಡುವ ತಾಣಗಳಾಗಿ ಬದಲಾಗಿವೆ.

"ಹೊಟೇಲಲ್ಲಿ ತಿಂದೂ ತಿಂದೂ ಗ್ಯಾಸ್ ಟ್ರಬಲ್ ಆಗ್ತಿತ್ತು. ಹೊಟೇಲಿಗೇ ಗ್ಯಾಸ್ ಟ್ರಬಲ್ ಶುರುವಾಗಿರೋದ್ರಿಂದ ಸಲಾಡ್ ತಿಂದು ಸಾಲಿಡ್ ಹೆಲ್ತ್ ಪಡೆಯಬಹುದು" ಎಂದಿತು ಬಿಪಾಸಿಟಿವ್.ಎವರ್‌ನ ಟ್ವೀಟ್.

'ಸಿಲಿಂಡರ್ ಪ್ರಾಬ್ಲಂ ಅಂತೆ. ನನಗೂ ಸಿಲಿಂಡ್ರಿಕಲ್ ವಿಷನ್ನಿನದೇ ಪ್ರಾಬ್ಲಮ್ಮು. ಕ್ಯಾನ್ ಎನಿಬಡಿ ಸಜೆಸ್ಟ್ ಎ ಗುಡ್ ನೇತ್ರವೈದ್ಯ?" ಎಂದಿತು ಬ್ಲೈಂಡ್.ಡೇಟ್.ಆರ್ಗ್.

"ಎಲ್‌ಪಿಜಿ ಶುರುವಾಗಿದ್ದೇ 1991ರಲ್ಲಿ. ಮೂವತ್ತೈದು ವರ್ಷಗಳು ತೊಂದರೆಯಿಲ್ಲದೆ ನಡೆಯಿತಲ್ಲ, ಅದೇ ಸಂತೋಷ" ಎಂದು ಟ್ವೀಟಿಸಿತು ಮನ್ಮೋಹನ್.ಸಿಸ್ಯ.ನೆಟ್

"ಎಲ್‌ಪಿಜಿ ಸಿಲಿಂಡರ್‌ಗಳು ಅದಕ್ಕೂ ಮುಂಚೆ ಇದ್ದವು ಸಿಸ್ಯಾ" ಎಂದು ಕೆಣಕಿತು ಗುರು.ಟ್ವೀಟ್

"ಓಹ್! ಸಿಲಿಂಡರ್ ಬಾಬ್ತೋ? ನಾನು ಲಿಬರಲೈಸೇಷನ್, ಪ್ರೈವೆಟೈಸೇಷನ್, ಗ್ಲೋಬಲೈಸೇಷನ್ ಎಲ್‌ಪಿಜಿ ಎಂದುಕೊಂಡೆ." ಮೊದ್ದು ಸ್ಮೈಲಿಯನ್ನು ಲಗತ್ತಿಸಿದ ಸಿಸ್ಯ.

"ಆಕ್ಚುಯಲಿ, ಗ್ಯಾಸ್ ಟ್ರಬಲ್ ಹೊಸದೇನಲ್ಲ. ಐದು ದಶಕಗಳ ಹಿಂದೆಯೇ ಆಗಾಗ್ಗೆ ದೊಂಬಿ ನಡೆಯುತ್ತಿತ್ತು" ಎಂದಿತು ಓಲ್ಡೀ.ಏನ್ಷಿಯೆಂಟ್‌ನ ಟ್ವೀಟ್.

"ದೊಂಬಿ? ಎಂತಹ ದೊಂಬಿ?" ಕೇಳಿತು ಕ್ಯೂರಿಯಸ್.ಕ್ಯಾಟ್

"ಕಲ್ಲು ತೂರಾಟ, ಡೌನ್ ಡೌನ್ ಪ್ರಿನ್ಸಿಪಾಲ್, ಬಸ್ ಸುಡುವಿಕೆ... ಜನರಲಿ ದೊಂಬಿ."

"ಸಿಲಿಂಡರ್ ಸಿಗುವುದು ನಿಧಾನವೆಂದು ಬಸ್ ಸುಟ್ಟರೆ?"

"ಓಹ್! ಯೂ ಮೀನ್ ಗ್ಯಾಸ್ ಸಿಲಿಂಡರ್! ನಾನೆಲ್ಲೋ ನೀವು ಗವ್ರ್ನಮೆಂಟ್ ಆರ್ಟ್ಸ್ & ಸೈನ್ಸ್ ಕಾಲೇಜಿನ ಬಗ್ಗೆ ಹೇಳ್ತಿದ್ದೀರಿ ಅನ್ಕೊಂಡಿದ್ದೆ. ಒಂದು ಕಾಲದಲ್ಲಿ ರೌಡಿಗಳೇ ಹೆಚ್ಚಾಗಿದ್ದ ಆ ಕಾಲೇಜನ್ನ ಗ್ಯಾಸ್ ಕಾಲೇಜ್ ಅಂತಾನೇ ಕರೀತಿದ್ದದ್ದು" ವಿವರಿಸಿತು ಓಲ್ಡೀ. ಏತನ್ಮಧ್ಯೆ "ಗ್ಯಾಸ್ ಟ್ರಬಲ್? ಈನೋ ಸೇವಿಸಿ" ಎಂಬ ಜಾಹೀರಾತು ಟ್ರಾಫಿಕ್ ಜ್ಯಾಮ್ ಮಧ್ಯದಲ್ಲಿ ತೂರುವ ಆಟೋದಂತೆ ಆಗಾಗ್ಗೆ ಮೂಡಿ ಹೋಯಿತು.

"ಸಿಲಿಂಡರ್‌ಗಳಿಗೆ ಬರವಿಲ್ಲ. ನಮ್ಮ ಗೋಡೌನ್ ಭರ್ತಿ ಸ್ಟಾಕ್ ಇದೆ" ಎಂದಿತು ಸರ್ಕಾರದ ಟ್ವೀಟ್. "ಸರ್ಕಾರ ನಿಜ ಹೇಳುತ್ತಿದೆ" ಎಂದಿತು ವಿಪಕ್ಷದ ಟ್ವೀಟ್. ಕೂಡಲೆ ಸರ್ಕಾರವು ಒಂದು ಏಕವ್ಯಕ್ತಿಯ ಆಯೋಗವನ್ನು ರಚಿಸಿ 'ವಿಪಕ್ಷವು ಆಡಳಿತಪಕ್ಷವು ಹೇಳಿದುದನ್ನು ಒಪ್ಪಿದೆಯೆಂದರೆ ನಮ್ಮದೋ, ಅದರದೋ ದೋಷವಿದೆ. ಕೂಲಂಕಷವಾಗಿ ತನಿಖೆ ನಡೆಸಿ ವರದಿಯನ್ನು ಕೂಡಲೆ ಒಪ್ಪಿಸಿ' ಎಂದು ಒಳಗೊಳಗೇ ಟ್ವೀಟಿಸಿತೆಂದು ಏನೇನೂ ಅರಿಯದ, ಆದರೆ 'ಬಲ್ಲ ಮೂಲಗಳು' ಎಂಬ ಬ್ಲಾಗ್ ತಿಳಿಸಿದೆ. "ಆದರೆ ಕೆಲವೇ ನಿಮಿಷಗಳಲ್ಲಿ ವಿಪಕ್ಷವೇ ಇನ್ನೊಂದು ಪೋಸ್ಟ್ ಹಾಕಿದ್ದರಿಂದ ತನಿಖೆಯನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ" ಎಂದೂ ಅದೇ ಬ್ಲಾಗ್ ತಿಳಿಸಿದೆ.

"ಸರ್ಕಾರವು ನಿಜ ಹೇಳಿದೆ. ಗೋಡೌನಿನಲ್ಲಿ ಸಿಲಿಂಡರ್‌ಗಳು ಇವೆ. ಆದರೆ ಅವೆಲ್ಲವೂ ಖಾಲಿ ಇವೆ" ಎಂಬುದೇ ವಿಪಕ್ಷದ ಮುಂದುವರಿದ ಟ್ವೀಟ್ ಅಂತೆ. ಈ ಟ್ವಿಟರಾಟಿ ಇಷ್ಟಕ್ಕೇ ನಿಂತಿಲ್ಲ. ಇದೋ ಮುಂದಿನ ಟ್ವೀಟುಗಳು:

"ಸಿಲಿಂಡರ್ ಖಾಲಿ ಇಲ್ಲ" ಸರ್ಕಾರದ ಟ್ವೀಟ್

"ಅಂದರೆ ನಿಮ್ಮ ತಲೆ ಖಾಲಿ ಇದೆ ಎಂದೋ?" ವಿಪಕ್ಷದ ಟ್ವೀಟ್.

"ನಮ್ಮಲ್ಲಿ ಗ್ಯಾಸ್ ಟ್ರಬಲ್ಲೇ ಇಲ್ಲ."

"ಮೂರು ಹೊತ್ತೂ ತಿಂದವರಿಗೆ ಗ್ಯಾಸ್ ಟ್ರಬಲ್ ಇರಲ್ಲ. ಹೊಟ್ಟೆಯನ್ನ ಖಾಲಿ ಬಿಟ್ಟುಕೊಂಡವರಿಗಷ್ಟೇ ಆ ತೊಂದರೆಯ ಪರಿಚಯ ಇರುತ್ತದೆ."

"ನಾವು ಹೇಳಿದ್ದು ಸಿಲಿಂಡರ್ ತೊಂದರೆ ಇಲ್ಲವೆಂದು!"

"ತೊಂದರೆ ಇರುವುದು ಸಿಲ್ಲಿ ಲೀಡರ್‌ದು!"

ಇವೆಲ್ಲ ಪರಪಂಚದ ಗ್ಯಾಸ್ ಟ್ರಬಲ್ ಆದರೆ ನನ್ನದೇ ಆದ ಗ್ಯಾಸ್ ಟ್ರಬಲ್ ಉದ್ಭವಿಸುವುದರಲ್ಲಿತ್ತು. ಟ್ವಿಟರಾಟಿಯ ಗಲಭೆಯಲ್ಲಿ ತಲೆಯನ್ನು ಹುದುಗಿಸಿದ್ದವನನ್ನು ಮಡದಿಯ ಫೋನ್ ಕರೆ ಸೆಳೆಯಿತು.

"ವಾಟ್ ಈಸ್ ದ ಸ್ಟೋರಿ?"

"ಗ್ಯಾಸ್ ಟ್ರಬಲ್!"

"ಯಾವ ಬಾಬ್ತು?"

"ಸಿಲಿಂಡರ್‌ದು. ಗೇಟಲ್ಲಿ ವಾಚ್‌ಮನ್ ಹತ್ರ ಇಟ್ಹೋಗಿದ್ದಾನೆ. 'ತುಂಬಾ ಡೆಲಿವರಿಗಳು ಇವೆ. ಪ್ಲೀಸ್ ಕೋಆಪರೇಟ್' ಅಂತ್ಹೇಳಿ 'ಈ ನಂಬರಿಗೆ ಟಿಪ್ಸ್ ಕಳಿಸಿ' ಅಂತ ನಂಬರ್ ಕಳಿಸಿದ್ದಾನೆ ಡೆಲಿವರಿ ಬಾಯ್. ನಿಮಗೆ ನಂಬರ್ ಫಾರ್ವರ್ಡ್ ಮಾಡಿದ್ದೇನೆ" ಎನ್ನುತ್ತಾ ಫೋನಿಟ್ಟಳು ಮಡದಿ.

ನಮ್ಮ ಅಪಾರ್ಟ್‌ಮೆಂಟಿನ ವಾಚ್‌ಮನ್ ನಿಜಕ್ಕೂ ಕಾಯುತ್ತಿರುವುದು ಯಮನನ್ನು ಮಾತ್ರ ಎಂಬುದು ನನ್ನ ದೃಢವಾದ ನಂಬಿಕೆ. ಬಾವಲಿಯ ಬೆಳಗಿನ ದೃಷ್ಟಿ, ಜೇಡದ ಶ್ರವಣಶಕ್ತಿ, ಆಮೆಯ ನಡಿಗೆಯ ಈತನನ್ನು ಗಾಂಧೀಜಿಯೇ 'ಕೈಸೇ ಹೋ ಅಂಕಲ್?' ಎಂದು ವಿಚಾರಿಸಿಕೊಂಡಿದ್ದರಂತೆ. ಅವನನ್ನು ಹೊರಲು ಜನರು ಬೇಕಾಗಿರುವ ಪರಿಸ್ಥಿತಿಯಲ್ಲಿರುವವನನ್ನು ಸಿಲಿಂಡರ್ ಹೊರು ಎನ್ನಲಾದೀತೇ! ನಾನೇ ಹೋದೆ. ಬೆಂಗಳೂರಿನ ರಸ್ತೆಗಳ ತದ್ರೂಪವಾಗಿರುವ ನಮ್ಮ ಅಪಾರ್ಟ್‌ಮೆಂಟಿನ ಬೇಸ್‌ಮೆಂಟಿನಲ್ಲಿ ಹಳ್ಳಗಳನ್ನು ಹಾರಿಸಿ, ಗುಡ್ಡೆಗಳಿಗೆ ಢೀ ಕೊಟ್ಟು ಪುಡಿಯಾಗಿಸಿ, ಸಿಲಿಂಡರನ್ನು ಲಿಫ್ಟಿಗೆ ವರ್ಗಾಯಿಸಿ ಫ್ಲಾಟಿಗೆ ತಂದೆ. "ಗ್ಯಾಸ್ ಮುಗಿದಿತ್ತು. ಸಿಲಿಂಡರ್ ಚೇಂಜ್ ಮಾಡಿ ಪುಟ್ಟಿ ಬರುವಷ್ಟರಲ್ಲಿ ಅನ್ನಕ್ಕಿಡಿ" ಎಂದಿತು ವಾಟ್ಸ್‌ಆಪ್.

ಸಿಲಿಂಡರ್‌ಗಳಿಗೆ ಮುತ್ತೈದೆಯ ಲಕ್ಷಣಗಳಿರುತ್ತವೆ. ಮೈಭರ್ತಿ ಕುಂಕುಮದ ಬಣ್ಣವಿರುವ ಇವಕ್ಕೆ ಕುತ್ತಿಗೆಯಲ್ಲಿ ಅರಿಶಿನದ ದಾರದ ಬದಲಿಗೆ ಬಿಳಿಯ ಬಣ್ಣದ ದಾರವೊಂದಿರುತ್ತದೆ. ವಿವಾಹಿತಳ ಅರಿಶಿನದ ದಾರವಾದರೂ ಸುಲಭವಾಗಿ ತುಂಡಾದೀತು, ಆದರೆ ಸಿಲಿಂಡರ್‌ನ ದಾರವು 'ಎಳೆದರಾಗಲಿ, ಅಲುಗಿಸಿದರಾಗಲಿ, ದಾರವನ್ನು ಹಿಡಿದೇ ಸಿಲಿಂಡರನ್ನು ಎತ್ತಿಹಿಡಿದರಾಗಲಿ, ನಾತಿ ಚರಾಮಿ' ಎಂಬಂತೆ ಭದ್ರವಾಗಿ ನೇತಾಡುತ್ತಿರುತ್ತದೆ. ಆ 'ತಾಳಿದಾರ'ವನ್ನು ಸಿಲಿಂಡರಿನ ಕೊರಳಿನಿಂದ ಬೇರ್ಪಡಿಸುವ ವಿಚ್ಛೇದನ ವಕೀಲನ ಕೆಲಸವನ್ನು ಮಾಡದಿದ್ದರೆ ಗ್ಯಾಸ್ ಹೊರಬರದೆ ಇಡೀ ಕಿಚನ್ 'ಗ್ಯಾಸ್ ಟ್ರಬಲ್'ನಿಂದ ನರಳುತ್ತದೆ.

ಹಳೆಯ ಸಿಲಿಂಡರಿನಿಂದ ಸರಬರಾಜುಮೂತಿಯನ್ನು ಹೊರಸೆಳೆದು ಹೊಸ ಸಿಲಿಂಡರಿಗೆ ಹೊಂದಿಸುವ ಮುನ್ನ ಸಿಲಿಂಡರಿನ 'ತಾಳಿದಾರ'ವನ್ನು ತೆಗೆಯಲು ಉದ್ಯುಕ್ತನಾದೆ. ಭೂಮಿಗೆ ಸಮಾನಾಂತರವಾಗಿ ದಾರವನ್ನು ಸೆಳೆದು ಹಿಡಿದು ಎಡಕ್ಕೆ ಬಲವಾಗಿ ಜಗ್ಗಿದೆ. ಊಹೂಂ. ದುಂಬಿ ಕೊರೆದರೂ ತೊಡೆಯಲುಗಿಸದ ಕರ್ಣನಂತೆ ದಾರವು ಯಥಾಸ್ಥಿತಿಯಲ್ಲಿತ್ತು.

ಎಡಕ್ಕೆ ಜಗ್ಗಿದೆ. ಅದು ಕಾರ್ಲ್ ಮಾರ್ಕ್ಸ್‌ನ ಅನುಯಾಯಿ ಅಲ್ಲವೆಂದು ದೃಢವಾಯಿತು. ದಾರವನ್ನು ಮುಷ್ಟಿಯಲ್ಲಿ ಹಿಡಿದು ಅನಾಮತ್ತಾಗಿ ಸಿಲಿಂಡರನ್ನು ಎತ್ತಿದೆ. ದಾರವು ಸ್ಥಿತಿಸ್ಥಾಪಕತ್ವವನ್ನು ಕಾಪಾಡಿಕೊಂಡಿತು. ಚಿಂತಾಕ್ರಾಂತನಾದೆ. ಕ್ಲಾಂತನಾದೆ. ಟ್ವಿಟರ್‌ನಲ್ಲಿ ಕಾಣಿಸಿಕೊಂಡ ಗ್ಯಾಸ್ ಟ್ರಬಲ್ ನನ್ನನ್ನೇನೂ ಕಾಡಿರಲಿಲ್ಲ. ಮೊನ್ನೆ ಬುಕ್ ಮಾಡಿದ್ದೆ, ಇವತ್ತು ಅನ್ನಕ್ಕೆ ಇಡಬೇಕಾದ ಸಮಯಕ್ಕೆ ಸರಿಯಾಗಿ ಸಿಲಿಂಡರ್ ಬಂದಿತ್ತು. ಆದರೆ ದಾರ?

'ಸಂಸ್ಕೃತದಲ್ಲಿ ಹೆಂಡತಿಯನ್ನು ದಾರಾ ಎಂದು ಕರೆಯುತ್ತಾರೆ" ಎಂಬ ಮಾತು ನೆನಪಾಯಿತು. ಈ ದಾರದ ಸಮಸ್ಯೆ ಬಗೆಹರಿಯದಿದ್ದರೆ ಆ ದಾರಾ ಸಮಸ್ಯೆ ಆಗುವ ಸಂಭವವಿದೆ ಎಂದು ಮನ ಭವಿಷ್ಯ ನುಡಿಯಿತು. ಹೇಗಾದರೂ ದಾರವನ್ನು ಮಣಿಸಿ ದಾರಾಳನ್ನು ಮೆಚ್ಚಿಸಬೇಕೆಂದು ನಿರ್ಧರಿಸಿ ಮಡದಿ ಫಾರ್ವರ್ಡಿಸಿದ್ದ ನಂಬರಿಗೆ ಫೋನ್ ಮಾಡಿ, ವಿಷಯವನ್ನು ತಿಳಿಸಿ, ಗೋಗರೆದೆ. ಗೋರ್ಕಲ್ಲಿನ ಮೇಲಿನ ಮಳೆಯ ನೆನಪಾಯಿತು. ಪರಿಣಾಮವೂ ಡಿಟ್ಟೋ.

ಬಾಗಿಲ ಬಳಿ ನೆರಳಾಡಿತು. ತಲೆಯೆತ್ತಿದೆ. 'ಕೈಸೇ ಹೋ ಅಂಕಲ್' ಅನ್ನಿಸಿಕೊಂಡವ ನಿಂತಿದ್ದ.

'ಅಮ್ಮ ಫೋನ್ ಮಾಡಿದ್ದರು" ಎಂದ. ಅವರ ಅಮ್ಮ ಇದ್ದ ಸಮಯದಲ್ಲಿ ಗ್ರಹಂ ಬೆಲ್ ಹುಟ್ಟಿದ್ದನೋ ಇಲ್ಲವೋ ಎಂಬ ಆಲೋಚನೆಯೊಂದು ಸುಳಿದು ಕಷ್ಟದಲ್ಲಿಯೂ ನಗೆಯ ಸುಳಿಗಾಳಿ ಸುಳಿಯಿತು.

"ಸಿಲಿಂಡರ್‌ನ ದಾರ ತೆಗೆಯಕ್ಕೆ ಅಪ್ಪೋರಿಗೆ ಬರಲ್ಲ, ತೆಕ್ಕೊಡು ಅಂದ್ರು ಅಮ್ಮ." ನನಗೇ ಮಣಿಯದ ಆ ದಾನವದಾರವು ಗೋರಿಗೆ ಎರಡು ಹೆಜ್ಜೆ ದೂರ ಇವನಿಗೆ ಸಗ್ಗುವುದೇನು? ವಾಚ್‌ಮನ್ ನೇರವಾಗಿ ಸಿಲಿಂಡರ್ ಬಳಿ ಹೋದ. ಒಂದೇ ಒಂದು ಕ್ಷಣದಲ್ಲಿ 'ತಾಳಿದಾರ'ವನ್ನು ಸಿಲಿಂಡರಿನ ಕುತ್ತಿಗೆಯಿಂದ ಬೇರ್ಪಡಿಸಿ, ಸರಬರಾಜುಮೂತಿಯನ್ನು ತಗುಲಿಸಿ ಹೊರನಡೆದ.

ಮನೆಯ ಗ್ಯಾಸ್ ಟ್ರಬಲ್ ಸಾಲ್ವ್ ಆಯಿತು. ಪ್ರಪಂಚದ್ದು?

ಸದ್ಯದಲ್ಲೇ ಪ್ರಪಂಚದ ಎಲ್ಲ ತೊಂದರೆಗಳಿಗೂ ಪರಿಹಾರವನ್ನು ಹೊಂದಿರುವ 'ಯುದ್ಧಪ್ರೇಮಿ ಶಾಂತಿದೂತ' ಟ್ರಂಪ್ ಎಲ್ಲರ ಮನೆಗೂ ಸಿಲಿಂಡರ್ ಕಳುಹಿಸುವನಂತೆ. ನೀವು ಮಾಡಬೇಕಾದುದಿಷ್ಟೆ.

ಕೂಡಲೆ ನಿಮ್ಮ ಕನ್‌ಸ್ಯೂಮರ್ ನಂಬರನ್ನು ವೈಟ್‌ಹೌಸಿಗೆ ವಾಟ್ಸಪ್ ಮಾಡಿ!

ಆರ್ಷಸಾಹಿತ್ಯಕ್ಕೆ ಹೊಸ ಸ್ಪರ್ಶ ನೀಡಿದ ಬನ್ನಂಜೆ

▶ ಗ.ನಾ. ಭಟ್ಟ

ಸಂಸ್ಕೃತ ವಾಙ್ಮಯದಲ್ಲಿ ಭರತಭೂಮಿಯ ಕೀರ್ತಿ ಎರಡು ಮಹಾಕಾವ್ಯಗಳಿಂದ ಅಮರವಾಗಿ ಅತ್ಯುನ್ನತವಾಗಿ ಬೆಳಗುತ್ತಿದೆ. ವೇದಗಳ ನಂತರ ರಾಮಾಯಣ ಮತ್ತು ಮಹಾಭಾರತಗಳು ಪರಮಪೂಜ್ಯ, ಜೀವನಾದರ್ಶ ಗ್ರಂಥಗಳಾಗಿ ಕೋಟಿ ಕೋಟಿ ಭಾರತೀಯರ ಹೃದಯದಲ್ಲಿ ನೆಲೆಗೊಂಡಿವೆ. ಈ ಎರಡರಲ್ಲಿ ರಾಮಾಯಣವು ಹಿಮಾಲಯ ಪರ್ವತದಂತೆ ಅತ್ಯಂತ ರಮಣೀಯವೂ, ಗಗನಚುಂಬಿಯೂ ಆಗಿದ್ದರೆ ಮಹಾಭಾರತವು ಸಮುದ್ರದಂತೆ ವಿಸ್ತಾರವಾಗಿ ಪ್ರಕ್ಷುಬ್ಧವಾಗಿ ಜೀವನದ ತೊಡಕಿನ ಪ್ರಸಂಗಗಳನ್ನು ತೋರಿಸುತ್ತಾ ಮಾರ್ಗಜ್ಯೋತಿಯಾಗಿ ಕಂಗೊಳಿಸುತ್ತಿದೆ. ಮನುಷ್ಯಜೀವನದ ಅರ್ಥವೇನು? ಧರ್ಮವೇನು? ಸಾರಭೂತವಾದ ಗುಣಗಳೇನು ಎಂಬಿತ್ಯಾದಿ ಪ್ರಶ್ನೆಗಳಿಗೆ ರಾಮಾಯಣ, ಮಹಾಭಾರತಗಳಿಂದ ನಾವು ಉತ್ತರಗಳನ್ನು ಕಂಡುಕೊಳ್ಳಬಹುದು.

ಆದರೂ ಅವು ಒಮ್ಮೊಮ್ಮೆ ನಮಗೆ ಎಟುಕುವುದಿಲ್ಲ. ಅದರ ಒಳಮರ್ಮವನ್ನು, ಸಂದೇಶ-ಆದರ್ಶಗಳನ್ನು, ಧರ್ಮಾಧರ್ಮಗಳನ್ನು, ಒಳಿತು -ಕೆಡುಕುಗಳನ್ನು ತೋರಿಸಿಕೊಡುವುದಕ್ಕೆ ಖಂಡಿತಕ್ಕೂ ಒಬ್ಬ ಗುರು ಬೇಕಾಗುತ್ತಾನೆ. ಅಂತಹ ಗುರುಗಳಲ್ಲಿ ಒಬ್ಬರು ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯರು, ಇನ್ನೊಬ್ಬರು ವಾಲ್ಮೀಕಿ-ವ್ಯಾಸಹೃದಯಜ್ಞ ಎಂದೇ ಖ್ಯಾತರಾದ ಡಾ. ಕೆ.ಎಸ್.ನಾರಾಯಣಾಚಾರ್ಯರು. ಇವರಿಬ್ಬರೂ ಇಂದು ನಮ್ಮೊಂದಿಗಿಲ್ಲ. ಆದರೆ ಅವರು ರಚಿಸಿದ ಕೃತಿಗಳು, ಮಾಡಿದ ಪ್ರವಚನಗಳು ನಮ್ಮೊಂದಿಗೆ ಇವೆ. ರಾಮಾಯಣ-ಭಾರತದ ಒಳಬಗೆ- ಗುಟ್ಟು-ಸ್ವಾರಸ್ಯಗಳನ್ನು ತಿಳಿಯುವುದಕ್ಕೆ ಇಬ್ಬರೂ ಒಂದೊಂದು ಮಾರ್ಗವನ್ನು ಅನುಸರಿಸಿದರು. ಕೆ.ಎಸ್.ನಾರಾಯಣಾಚಾರ್ಯರು ಐರೋಪ್ಯ ಸಾಹಿತ್ಯ ಕೃಷಿಯ ವಿಮರ್ಶಾ ಮಾನದಂಡವನ್ನೂ, ಭಾರತೀಯ ವ್ಯಾಖ್ಯಾನ ಪರಂಪರೆಯನ್ನೂ, ಇಲ್ಲಿಯ ಕಾವ್ಯಮೀಮಾಂಸೆಯ ಅಳತೆಗೋಲನ್ನೂ ಇಟ್ಟುಕೊಂಡು ಈ ಮಹಾಕಾವ್ಯಗಳ ಅಂತರಂಗವನ್ನು ಮೊಗೆದು ಮೊಗೆದು ಕೊಟ್ಟರು. ಬನ್ನಂಜೆಯವರು ಇಲ್ಲಿಯ ಮಹಾಕಾವ್ಯಗಳ ಉಪಕ್ರಮ-ಉಪಸಂಹಾರಗಳಿಂದಲೇ, ಅದರ ಪೂರ್ವೋತ್ತರ ಸಮನ್ವಯದಿಂದಲೇ ಅವುಗಳ ಅಂತರಂಗವನ್ನು ಬಿಡಿಸಿ ಬಿಡಿಸಿ ಕಾವ್ಯರಸಿಕರಿಗೆ ಉಣಬಡಿಸಿದರು.

ಪೂರ್ವೋತ್ತರಾವಿರೋಧೇನ ಕೋತ್ರಾರ್ಥೋಭಿಮತೋ ಭವೇತ್ ।
ಇತ್ಯಾದ್ಯಮೂಹನಂ ತರ್ಕಃ ಶುಷ್ಕತರ್ಕಂ ತು ವರ್ಜಯೇತ್ ॥

ಎಂಬ ಮಾನದಂಡವನ್ನಿಟ್ಟುಕೊಂಡು ಮಹಾಕಾವ್ಯಗಳ ಅಂತರಂಗಕ್ಕೆ ಹೊಸ್ಪರ್ಶವನ್ನು ನೀಡಿದರು. ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿದರು.

ಬನ್ನಂಜೆ ಗೋವಿಂದಾಚಾರ್ಯರು ಈ ನಾಡಿನ ಭಾಗ್ಯ. ಎಲ್ಲಿ ಬೇಕೆಂದರೆ ಅಲ್ಲಿ, ಯಾವಾಗ ಬೇಕೆಂದರೆ ಆವಾಗ ಕಾಣಸಿಗುವ ವ್ಯಕ್ತಿತ್ವವಲ್ಲ. ಅವರದ್ದು ಶತಮಾನಕ್ಕೊಮ್ಮೆ ಭೂಮಿಯಲ್ಲಿ ಹುಟ್ಟಿಬರುವ ಅಪರೂಪದ ಚೈತನ್ಯ. ಅಸಾಧಾರಣವಾದ ವೈದುಷ್ಯ, ಚಿಂತನೆ, ವಿಮರ್ಶೆ-ಇವನ್ನು ಒಂದೇ ಕಡೆ ನೋಡಬೇಕೆಂದರೆ ಅದು ಬನ್ನಂಜೆಯವರಲ್ಲಿ ಮಾತ್ರ. ಪ್ರಾಚೀನ ಸಾಹಿತ್ಯಗಳಿಗೆ ಭಾಷ್ಯಕಾರರಾಗಿ, ವ್ಯಾಖ್ಯಾನಕಾರರಾಗಿ, ಮಹಾವಾಗ್ಮಿಯಾಗಿ, ಕವಿಯಾಗಿ, ಕಥನಕಾರರಾಗಿ, ಗ್ರಂಥಸಂಪಾದಕರಾಗಿ, ಅನುವಾದಕರಾಗಿ, ಪತ್ರಕರ್ತರಾಗಿ, ದಾರ್ಶನಿಕರಾಗಿ, ವೇದಾಂತಿಯಾಗಿ, ಸಂಶೋಧಕರಾಗಿ, ನೂರೈವತ್ತಕ್ಕೂ ಹೆಚ್ಚು ಕೃತಿರಚಯಿತರಾಗಿ ಅವರು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಪ್ರಪಂಚಕ್ಕೆ ನೀಡಿದ ಕೊಡುಗೆ ಅನನ್ಯವಾದುದು.

ಅವರ ವ್ಯಕ್ತಿತ್ವದಲ್ಲಿ ಸುಂದರ ಭಾವುಕತೆಯೂ ಪ್ರೌಢ ವೈಚಾರಿಕತೆಯೂ ಮೇಳೈಸಿದ್ದವು. ಸಂಪ್ರದಾಯದೊಟ್ಟಿಗೆ ಆಧುನಿಕತೆಯೂ ಅಷ್ಟೇ ಪ್ರಮಾಣದಲ್ಲಿ ಬೆರೆತಿದ್ದವು. ಸರಳತೆ-ಸಂಕೀರ್ಣತೆಯೊಂದಿಗೆ ಸರಸತೆ-ವಿನೋದ, ಸ್ನೇಹ-ಸಾಹಸ-ಇವೆಲ್ಲವೂ ಮುಪ್ಪುರಿಗೊಂಡಿದ್ದವು. ವಿಕ್ಷಿಪ್ತತೆ ಅವರ ವಿಶೇಷ ಗುಣವಾಗಿತ್ತು. "ನನ್ನದು ವಿಕ್ಷಿಪ್ತವಾದ ಅಧ್ಯಯನ, ವಿಕ್ಷಿಪ್ತವಾದ ಓದುವಿಕೆ, ವಿಕ್ಷಿಪ್ತವಾದ ಬದುಕು. ಆದರೂ ಅದೊಂದು ತನ್ನಷ್ಟಕ್ಕೆ ಒದಗಿ ಬಂದ ವೇದಿಕೆ" ಎಂದು ಅವರೇ ಹೇಳಿಕೊಂಡಿದ್ದಾರೆ. (ಆತ್ಮನಿವೇದನೆ-28)

ಅವರು ಬಾಲ್ಯದಿಂದಲೂ ಜಿಜ್ಞಾಸು ಪ್ರವೃತ್ತಿಯನ್ನು ಹೊಂದಿದ್ದರು. ಪ್ರಶ್ನೆ ಕೇಳುವುದು ಅವರ ಜಾಯಮಾನವಾಗಿತ್ತು. ಸಾಂಪ್ರದಾಯಿಕ ಪಂಡಿತರಿಂದ ಅವರಿಗೆ ಸರಿಯಾದ ಉತ್ತರ ಸಿಗುತ್ತಿರಲಿಲ್ಲ. ಅದರಿಂದ ಅವರು ತುಂಬಾ ಅತೃಪ್ತರಾದರು. ಇದಕ್ಕೆ ಪರಿಹಾರ ಏನು ಎಂದು ಅವರು ತಮ್ಮ ತಂದೆಯವರ ಬಳಿ ಕೇಳಿದಾಗ "ಪ್ರಶ್ನೆ ನಿನಗೆ ಬಂತಲ್ಲ, ಆ ಪ್ರಶ್ನೆ ಎಲ್ಲಿಂದ ಬಂತು ಅಲ್ಲೇ ಉತ್ತರ ಹುಡುಕು" ಅಂತ ಹೇಳಿದರು. "ತಪಸಾ ಬ್ರಹ್ಮ ವಿಜಿಜ್ಞಾಸಸ್ವ" ಎಂಬ ಉಪನಿಷದ್ವಾಣಿ ಅವರನ್ನು ಪ್ರೇರಿಸಿ, ಮುನ್ನಡೆಸಿತು. "ತಂದೆಯವರ ಮಾತು ನಿಜವಾಗಿ ನನ್ನನ್ನು ಚಿಂತನೆಗೆ ಹಚ್ಚಿತು. ನನ್ನ ಜೀವನಕ್ಕೆ ಹೊಸ ರೂಪರೇಷೆ ನೀಡಿತು" ಎಂದಿದ್ದಾರೆ ಬನ್ನಂಜೆ. ಅವರ ದೊಡ್ಡಪ್ಪ ಪಡುಮುನ್ನೂರು ಶ್ರೀನಿವಾಸಾಚಾರ್ಯರು, ಪೇಜಾವರ ಶ್ರೀಗಳು ಮತ್ತು ಭಂಡಾರಕೇರೆ ಶ್ರೀ ವಿದ್ಯಾಮಾನ್ಯ ತೀರ್ಥರು ಇವರುಗಳಿಂದ ಒಂದಿಷ್ಟು ಪಾಠ ಹೇಳಿಸಿಕೊಂಡಿದ್ದನ್ನು ಬಿಟ್ಟರೆ ಬನ್ನಂಜೆಯವರದ್ದು ಸ್ವಾಧ್ಯಾಯವೇ ಹೆಚ್ಚು. ಇದರ ಜೊತೆಗೆ "ಗುರೋರಭಾವೇ ಯೋಗ್ಯಸ್ಯ ಸ್ವಯಮೇವಾಭ್ಯಸೇತ್ ಶ್ರುತೀಃ" ಎಂಬ ಮಧ್ವಾಚಾರ್ಯರ ಒಂದು ಮಾತು ಅವರ ಸ್ವಾಧ್ಯಾಯವನ್ನು ಪೋಷಿಸಿತು. ಹೀಗೆ ಬಾಲ್ಯದಿಂದಲೇ ಸ್ವಾಧ್ಯಾಯ ಮತ್ತು ಪ್ರವಚನದ ಮೂಲಕ ಅವರು ಬೆಳೆದ ಪರಿ ವಿಸ್ಮಯಾವಹವಾದುದು.



ಇಂದು ಸಂಜೆ 5-30ಕ್ಕೆ ಮೈಸೂರಿನ ರಮಾಗೋವಿಂದ್ ಕಲಾವೇದಿಕೆಯಲ್ಲಿ (ಗಾನಭಾರತೀ ವೀಣೆ ಶೇಷಣ್ಣ ಭವನದ ಆವರಣ) 'ಬನ್ನಂಜೆ 90 ವಿಶ್ವನಮನ' ಕಾರ್ಯಕ್ರಮ ಜರುಗಲಿದೆ.

ಬನ್ನಂಜೆಯವರು ತಮ್ಮ ಓದಿನ ಬಲದಿಂದ, ಜಿಜ್ಞಾಸು ಮತ್ತು ಪ್ರಶ್ನೋತ್ಥಾಪಕ ಪ್ರವೃತ್ತಿಯಿಂದ ತಥಾಕಥಿತ ಸಾಹಿತ್ಯ ಮತ್ತು ಚರ್ವಿತಚರ್ವಣ ಹಳಸಲು ಮಾತುಗಳಿಂದ ಬಹುಬೇಗನೆ ಹೊರಬಂದುಬಿಟ್ಟರು. ಅದರ ಫಲವಾಗಿ ಅವರು ನೀಡಿದ ಒಂದೊಂದು ನವೋನವೀನ ಹೇಳಿಕೆಯೂ ಸಂಪ್ರದಾಯಶರಣರಿಗೆ, ಮಡಿವಂತರಿಗೆ ವ್ಯತಿರಿಕ್ತವಾಗಿ, ವಿರುದ್ಧವಾಗಿ ಕಾಣಿಸಿಕೊಂಡವು. ವಸ್ತುತಃ ಅವು ವಿರುದ್ಧವಾಗಿಯೂ, ವ್ಯತಿರಿಕ್ತವಾಗಿಯೂ ಇರಲಿಲ್ಲ. ಚಿಂತನ-ಮಂಥನದಿಂದ ಬಂದ ನವನೀತವಾಗಿತ್ತು. ಅದು ಇತರರಿಗೆ ಅರ್ಥವಾಗಲಿಲ್ಲ. ಅಂತಹವರ ಬಗ್ಗೆ ಅವರೇ ಹೇಳಿದ ಒಂದು ಮಾತು-"ಕುರುಡರಿಗೆ ಕಂಬ ಕಾಣದೇ ಇದ್ದರೆ ಅದು ಕಂಬದ ತಪ್ಪಲ್ಲ" ಎಂದು. ಇದರಿಂದಾಗಿಯೇ ಬನ್ನಂಜೆ ತಥಾಕಥಿತ ಆಸ್ತಿಕರಿಗೆ ಮೈಲಿಗೆಯಾದರು; ತಥಾಕಥಿತ ನಾಸ್ತಿಕರಿಗೆ ಮಡಿವಂತರಾದರು. ಇದಕ್ಕೊಂದು ಸುಂದರ ಉದಾಹರಣೆಯೆಂದರೆ- "ಸಂಸ್ಕೃತ ನಾಟಕಗಳನ್ನು ತೆಗೆದರೆ ಐವತ್ತರಿಂದ ಅರವತ್ತು ನಾಟಕಗಳು ರಾಮಾಯಣದ್ದೇ. ಎಲ್ಲ ಕವಿಗಳ ವಿಷಯ ಹೆಚ್ಚಾಗಿ ರಾಮಾಯಣದ್ದು. ಕಾಳಿದಾಸ ಮಹಾಭಾರತದ ಶಾಕುಂತಲ ತೆಗೆದುಕೊಂಡ. ನನಗೆ ವಾಲ್ಮೀಕಿಯ ಪ್ರಭಾವ ಅಷ್ಟೊಂದಿಲ್ಲ. ನನ್ನ ದೃಷ್ಟಿಯಲ್ಲಿ ವೇದವ್ಯಾಸರು ಒಂದು ಪರ್ವತವಾದರೆ ವಾಲ್ಮೀಕಿ ತಪ್ಪಲು ಇದ್ದ ಹಾಗೆ. ವ್ಯಾಸರ ಪ್ರಜ್ಞೆಯ ಮುಂದೆ ಏನೂ ಅಲ್ಲ. ಆದರೆ ವಾಲ್ಮೀಕಿಯ ಪ್ರಭಾವವೂ ನನ್ನ ಮೇಲಿದೆ. ಕಾಳಿದಾಸ ನನಗೆ ಯಾವ ಹಂತದಲ್ಲೂ ಪ್ರಭಾವ ಬೀರಲೇ ಇಲ್ಲ. ನನಗೆ ಮಹಾಕಾವ್ಯಗಳಲ್ಲಿ ತುಂಬಾ ಕಾಡಿದ್ದು ಭಾರವಿಯ ಕಿರಾತಾರ್ಜುನೀಯ. ಸಂಸ್ಕೃತವನ್ನು ಅವನು ದುಡಿಸಿಕೊಂಡ ಚೆಂದ ಇದೆಯಲ್ಲ ಅದ್ಭುತ ಅದು. ಅದರ ನಂತರ ಮಾಘ. ಕೆಲವರು ಮಹಾಕಾವ್ಯ ಅಂದರೆ ನೈಷಧ ಅಂತಾರೆ. ಯಾವುದೂ ಕೂಡಾ ಪ್ರಭಾವ ಮಾಡಲಿಲ್ಲ. ನನಗೆ ತುಂಬ ಖುಷಿ ಕೊಟ್ಟವನು ಭಾರವಿ. ನಾಟಕಗಳಲ್ಲಿ ತುಂಬಾ ಖುಷಿ ಕೊಟ್ಟವ ಭವಭೂತಿ ಮತ್ತು ಭಾಸ; ಕಾಳಿದಾಸ ಅಲ್ಲ" ಎಂದು ಬನ್ನಂಜೆ ಹೇಳುತ್ತಾರೆ.

ಇಲ್ಲಿ ಒಂದು ಸೂಕ್ಷ್ಮವಿದೆ. ಇಲ್ಲಿ ಬನ್ನಂಜೆ ವ್ಯಾಸ, ವಾಲ್ಮೀಕಿ, ಕಾಳಿದಾಸ, ಭಾಸ, ಭವಭೂತಿ ಮೊದಲಾದವರ ಬಗ್ಗೆ ತುಂಬಾ ಭಿನ್ನವಾಗಿ ಮಾತನಾಡಿದ್ದಾರೆ. ಇದು ಮಾಮೂಲಿ ಜಾಡಿಗಿಂತ ತುಂಬಾ ಭಿನ್ನವಾದ, ಹೊಸದಾದ ಮಾತು ಎಂಬುದರಲ್ಲಿ ಎರಡು ಮಾತಿಲ್ಲ. ಇದನ್ನೇ ಸ್ವಲ್ಪ ವಿವರಿಸಿ ಹೇಳುವುದಾದರೆ–

ಉಪಮಾ ಕಾಳಿದಾಸಸ್ಯ ಭಾರವೇರರ್ಥಗೌರವಮ್ ।
ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋಗುಣಾಃ ॥
ಕಾವ್ಯೇಷು ನಾಟಕಂ ರಮ್ಯಮ್ ತತ್ರ ರಮ್ಯಾ ಶಕುಂತಲಾ ।
ತತ್ರಾಪಿ ಚತುರ್ಥೋಂಕೋ ತತ್ರ ಶ್ಲೋಕಚತುಷ್ಟಯಮ್ ॥

"ಉಪಮೆಗೆ ಕಾಳಿದಾಸ, ಅರ್ಥಗೌರವಕ್ಕೆ ಭಾರವಿ, ಪದಲಾಲಿತ್ಯಕ್ಕೆ ದಂಡಿ-ಈ ಮೂರೂ ಗುಣಗಳು ಮಾಘನಲ್ಲಿ ಇವೆ". "ಕಾವ್ಯಗಳಲ್ಲಿ ರಮಣೀಯವಾದುದು ನಾಟಕ; ಅದರಲ್ಲೂ ಶಕುಂತಲಾ; ಅದರಲ್ಲೂ ನಾಲ್ಕನೇ ಅಂಕ; ಅದರಲ್ಲೂ ನಾಲ್ಕನೆ ಶ್ಲೋಕ" ಎಂದು ಯಾವನೋ ಒಬ್ಬ ತನ್ನ ಅನಿಸಿಕೆಯನ್ನು ಹರಿಬಿಟ್ಟ. ಇದನ್ನು ಹಿಂದುಮುಂದು ಯೋಚಿಸದೆ ಎಲ್ಲರೂ ಸ್ವೀಕರಿಸಿ ಪ್ರಚಾರ ಮಾಡತೊಡಗಿದರು. ಇಂತಹ ಕೊಂಡಾಟದ, ಅನಿಸಿಕೆಯ ಮಾತುಗಳು ಸಂಸ್ಕೃತ ಸಾಹಿತ್ಯಪ್ರಪಂಚದಲ್ಲಿ ದಂಡಿಯಾಗಿ ಸಿಗುತ್ತವೆ. ಇಂತಹ ಮಾತುಗಳಿಗೆ ಬನ್ನಂಜೆ ಅಪವಾದ. ಅವರು ಸ್ವತಂತ್ರವಾಗಿ ಚಿಂತಿಸಿ, ತನಗೆ ಅನಿಸಿದ್ದನ್ನು ನೇರವಾಗಿ ದಿಟ್ಟವಾಗಿ ಸಹೃದಯರೆಲ್ಲರೂ ಮೆಚ್ಚುವಂತೆ ಸಾಧಾರಿತವಾಗಿ ಹೇಳುವವರು. ಇದು ಅನೇಕರಿಗೆ ಪಥ್ಯವಾಗುವುದಿಲ್ಲ. ಅಂತಹವರನ್ನು ಕಂಡೇ ಬನ್ನಂಜೆ 'ತಥಾಕಥಿತ ಸಾಹಿತಿಗಳು' ಎಂದು ಖಾರವಾಗಿ ಹೇಳಿದ್ದು.

ಬನ್ನಂಜೆಯವರ ಓದು ಆಳವಾದುದು, ವಿಶಾಲವಾದುದು ಮತ್ತು ಸೃಷ್ಟಿಶೀಲವಾದುದು. ಪ್ರವಚನವೂ ಹಾಗೆಯೇ. ಯಾವುದೇ ಆದರೂ ಕೂಡಾ ಭಿನ್ನವಾಗಿ, ಹೊಸದಾಗಿ, ವಿಚಿಕಿತ್ಸಕ ದೃಷ್ಟಿಯಿಂದ ನೋಡುವುದು ಅವರ ಕ್ರಮ. ಈ ಕಾರಣದಿಂದಲೇ ಅವರು ನಮ್ಮ ನಾಡಿನ ಪ್ರವಚನಕಾರರಲ್ಲಿ, ಲೇಖಕರಲ್ಲಿ, ಆರ್ಷಸಾಹಿತಿಗಳಲ್ಲಿ ಅಗ್ರಮಾನ್ಯರೆನಿಸಿಕೊಂಡರು.

ಅರಬ್ ರಾಷ್ಟ್ರಗಳ ವಿಶ್ವಾಸ ಕಳಕೊಂಡ ಅಮೆರಿಕ

▶ ದಿನೇಶ ನಾಯಕ್

ಇರಾನ್ ಸಮರ ಇನ್ನೂ ಮುಂದುವರಿದಿದ್ದು, ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಇರಾನ್ ತನ್ನ ಶತ್ರುಗಳಿಗೆ ಪ್ರಬಲ ಪ್ರತಿಯೇಟು ನೀಡುತ್ತಿದೆ. ಅದು ಇಸ್ರೇಲ್‌ನ ವಿರುದ್ಧ ದಾಳಿ ಮಾಡಿರುವುದಷ್ಟೇ ಅಲ್ಲದೇ ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕನ್ ಮಿಲಿಟರಿ ನೆಲೆಗಳ ಮೇಲೂ ದಾಳಿ ನಡೆಸಿದೆ. ಅದರ ಜತೆಗೇ ತೈಲ ಸಂಗ್ರಹಾಗಾರಗಳ ಮೇಲೆ, ತೈಲ ನಿಕ್ಷೇಪಗಳ ಮೇಲೆ ಕೂಡಾ ದಾಳಿ ನಡೆಸಿದೆ. ಅದು ಹೊರ್ಮುಜ್ ಜಲಸಂಧಿಯನ್ನು ಮುಚ್ಚಿರುವ ಕಾರಣದಿಂದಾಗಿ ಇಡೀ ಜಾಗತಿಕ ತೈಲ ಪೂರೈಕೆಯ ಮೇಲೆ ಪರಿಣಾಮ ಉಂಟಾಗಿದೆ. ಅಮೆರಿಕದ ಕೆಲವು ಯುದ್ಧವಿಮಾನಗಳನ್ನೂ ಹೊಡೆದುರುಳಿಸಿದೆ.

ಈ ಸಮರದಲ್ಲಿ ವಿನಾಕಾರಣ ಕೊಲ್ಲಿಯ ಕೆಲವು ದೇಶಗಳು ಸಿಲುಕಿಕೊಂಡಿವೆ. ಅಮೆರಿಕಕ್ಕೆ ಮಿಲಿಟರಿ ನೆಲೆ ಸ್ಥಾಪಿಸಲು ಅವಕಾಶ ನೀಡಿದ ಕಾರಣಕ್ಕಾಗಿ ಅವುಗಳೂ ದಾಳಿಗೆರವಾಗಿವೆ. ಅವುಗಳಿಗೆ 'ರಕ್ಷಣಾ ಕೊಡೆ' ಒದಗಿಸುವುದಾಗಿ ಹೇಳಿದ್ದ ಅಮೆರಿಕವು ಈ ಕಾರ್ಯದಲ್ಲಿ ಈಗ ವಿಫಲಗೊಂಡಿರುವುದು ಅದರ ಮಿತ್ರರಾಷ್ಟ್ರಗಳಿಗೆ ಅಸಮಾಧಾನ ಉಂಟು ಮಾಡಿದೆ. ತನ್ನ ಸ್ನೇಹಿತ ರಾಷ್ಟ್ರಗಳ ಮೇಲೆ ದಾಳಿಯಾಗದಂತೆ ತಾನು ತಡೆಯುವುದಾಗಿ ಅಮೆರಿಕ ಈ ಹಿಂದೆ ಹೇಳಿದ್ದರೂ ಈ ವಾಗ್ದಾನವನ್ನು ಪಾಲಿಸಲು ಅದು ವಿಫಲವಾಗಿದೆ. ಹಾಗಾಗಿ ಈಗ ಕೊಲ್ಲಿಯ ಕೆಲವು ರಾಷ್ಟ್ರಗಳು ತಮ್ಮದೇ ಆದ ಪರ್ಯಾಯ ಭದ್ರತಾ ವ್ಯವಸ್ಥೆಯನ್ನು ಮಾಡಿಕೊಳ್ಳುವತ್ತ ಚಿಂತನೆ ನಡೆಸಿವೆ.

1960ರ ದಶಕದ ತನಕ ಗಲ್ಫ್ ರಾಷ್ಟ್ರಗಳಿಗೆ ಬ್ರಿಟನ್ ಸರಕಾರವು ಮಿಲಿಟರಿ ರಕ್ಷಣೆ ನೀಡುತ್ತಿತ್ತು. ಅಲ್ಲಿಂದ ಬಳಿಕ ಅಮೆರಿಕ ಈ ಹೊಣೆಯನ್ನು ಹೊತ್ತುಕೊಂಡಿತು. ಅಮೆರಿಕದ ನೆರವಿನ ಮೂಲಕ ಇರಾನ್ ಮತ್ತು ಸೌದಿ ಅರೇಬಿಯಾಗಳು ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಭದ್ರತಾ ವ್ಯವಸ್ಥೆಯ ಹೊಣೆಗಾರಿಕೆ ವಹಿಸಿಕೊಳ್ಳುವಂತಾಯಿತು. 1979ರಲ್ಲಿ ಇರಾನ್‌ನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದುದರಿಂದ ಈ ವ್ಯವಸ್ಥೆ ವಿಫಲಗೊಂಡಿತು. ಈ ಸಂದರ್ಭದಲ್ಲಿ ಅಮೆರಿಕವು ಗಲ್ಫ್‌ನ ಭದ್ರತಾ ಉಸ್ತುವಾರಿಯನ್ನು ತಾನೇ ನೋಡಿಕೊಳ್ಳುವುದಾಗಿ ಹೇಳಿತು. ಗಲ್ಫ್ ಪ್ರದೇಶದಲ್ಲಿ ನಡೆಯುವ ಯಾವುದೇ ದಾಳಿಯನ್ನು ಅಮೆರಿಕದ ಹಿತಾಸಕ್ತಿಗಳ ಮೇಲೆ ನಡೆಯುವ ದಾಳಿ ಎಂಬುದಾಗಿ ಪರಿಗಣಿಸಿ ಅದನ್ನು ಹಿಮ್ಮೆಟ್ಟಿಸಲಾಗುವುದು ಎಂದು ಅಮೆರಿಕ ಘೋಷಿಸಿತು. ಅದರಂತೆ ಗಲ್ಫ್‌ನ ಎರಡು ರಾಷ್ಟ್ರಗಳಾದ ಇರಾನ್ ಮತ್ತು ಇರಾಕ್‌ಗಳು ತಮ್ಮ ಭದ್ರತೆಗೆ ಅಪಾಯಕಾರಿ ಎಂದು ಭಾವಿಸಿದ್ದ ಹಲವಾರು ಗಲ್ಫ್ ರಾಷ್ಟ್ರಗಳು ಇವೆರಡು ದೇಶಗಳ ವಿರುದ್ಧವಾಗಿ 'ಗಲ್ಫ್ ಸಹಕಾರಿ ಮಂಡಳಿ' (ಜಿಸಿಸಿ) ರಚಿಸಿಕೊಂಡವು. ಅದಕ್ಕೆ ಅಮೆರಿಕವೂ ಸಹಕಾರ ನೀಡಿತು.

1991ರಲ್ಲಿ ಇರಾಕ್ ಸಮರದ ಬಳಿಕ ಅಮೆರಿಕವು ಅಲ್ಲಿ ಕೆಲವು ಶಾಶ್ವತ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿತು. ಅಮೆರಿಕದ ನೌಕಾಪಡೆಯೊಂದು 1995ರಲ್ಲಿ ಬಹ್ರೇನ್‌ನಲ್ಲಿ ತಳವೂರಿತು. 1996ರಲ್ಲಿ ಕತಾರ್‌ನಲ್ಲಿ ಇನ್ನೊಂದು ನೆಲೆ ಸ್ಥಾಪಿಸಿತು. ಅಲ್ಲಿಂದ ಬಳಿಕ ಕೊಲ್ಲಿ ಪ್ರದೇಶದಲ್ಲಿ ಅಮೆರಿಕದ ನೆಲೆಗಳು ಇನ್ನಷ್ಟು ವಿಸ್ತಾರಗೊಂಡವು. 2017ರಲ್ಲಿ 'ಅರಬ್ ನ್ಯಾಟೋ' ವ್ಯವಸ್ಥೆ ರೂಪುಗೊಂಡಿತು. ಇದರಲ್ಲಿ ಈಜಿಪ್ಟ್ ಮತ್ತು ಜೋರ್ಡಾನ್‌ಗಳೂ ಸೇರಿಕೊಂಡವು. 2022ರಲ್ಲಿ ಈಜಿಪ್ಟ್, ಇರಾಕ್, ಜೋರ್ಡಾನ್ ಸೇರಿದಂತೆ ಗಲ್ಫ್ ರಾಷ್ಟ್ರಗಳೆಲ್ಲಾ ತಮ್ಮ ಪ್ರದೇಶಕ್ಕೆ ಎದುರಾಗುವ ಬೆದರಿಕೆಯನ್ನು ಒಟ್ಟಾಗಿ ಎದುರಿಸುವ ನಿರ್ಧಾರ ತಾಳಿದವು. ಕಳೆದ ವರ್ಷ ಇಸ್ರೇಲ್ ಹಮಾಸ್ ಮೇಲೆ ದಾಳಿ ನಡೆಸಿದಾಗಲೂ ಅಮೆರಿಕವು ಕತಾರ್‌ಗೆ ತಾನು ಭದ್ರತೆ ನೀಡುವುದಾಗಿ ವಾಗ್ದಾನ ನೀಡಿತ್ತು.

ಇದೀಗ ಇರಾನ್ ಯುದ್ಧ ಸ್ಫೋಟಿಸುವುದರೊಂದಿಗೆ ಅಮೆರಿಕ ನೀಡಿದ ಆಶ್ವಾಸನೆಗಳೆಲ್ಲಾ ಪೊಳ್ಳಾಗಿದೆ. ಗಲ್ಫ್ ರಾಷ್ಟ್ರಗಳು ಇರಾನಿನ ಕ್ಷಿಪಣಿ ದಾಳಿಗೆ ತುತ್ತಾಗುತ್ತಿವೆ. ಅವುಗಳ ಮೇಲೆ ದಾಳಿ ನಡೆಯದಂತೆ ರಕ್ಷಣೆ ನೀಡುವಲ್ಲಿ ಅಮೆರಿಕ ವಿಫಲವಾಗಿದೆ.

ಅಮೆರಿಕವು ತಮಗಿಂತ ಇಸ್ರೇಲ್‌ಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದೆ. ಇಸ್ರೇಲ್‌ಗೆ ವಾಯುರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದರೆ, ಇತರ ಗಲ್ಫ್ ದೇಶಗಳಿಗೆ ಅಂತಹ ವ್ಯವಸ್ಥೆ ಪೂರೈಸದ್ದರಿಂದ ಅವು ಇರಾನಿನ ರಾಕೆಟ್ ದಾಳಿಗೆ ತುತ್ತಾಗುತ್ತಿವೆ ಎಂದು ಕೊಲ್ಲಿ ರಾಷ್ಟ್ರಗಳು ಆಪಾದಿಸುತ್ತಿವೆ.

"ಅಮೆರಿಕವು ಕೊಲ್ಲಿ ರಾಷ್ಟ್ರಗಳಿಗೆ ನೆರವು ನೀಡುವುದಕ್ಕಿಂತ ಹೆಚ್ಚಾಗಿ ಕೊಲ್ಲಿ ರಾಷ್ಟ್ರಗಳೇ ಅಮೆರಿಕಕ್ಕೆ ರಕ್ಷಣೆ ನೀಡುವಂತಾಗಿದೆ" ಎಂದು ಕುವೈತ್‌ನ ರಕ್ಷಣಾ ವಿಶ್ಲೇಷಕನೊಬ್ಬ ಹೇಳಿದ್ದು, ಅದಕ್ಕೆ ಕೊಲ್ಲಿಯ ಇತರ ದೇಶಗಳೂ ಸಹಮತ ವ್ಯಕ್ತಪಡಿಸಿವೆ.

ಯುದ್ಧ ಸಾರುವ ಮೊದಲು ತಮಗೆ ಆ ಕುರಿತಂತೆ ಮಾಹಿತಿಯನ್ನೂ ನೀಡದಿರುವ ಬಗ್ಗೆ ಕೂಡಾ ಈ ಕೊಲ್ಲಿ ರಾಷ್ಟ್ರಗಳು ಅಸಮಾಧಾನಗೊಂಡಿವೆ.

ಗಾಝಾ ಕದನ ನಡೆದಾಗ ಒಂದೆರಡು ವಿಷಯಗಳು ಸ್ಪಷ್ಟವಾಗಿದ್ದವು. ಇಸ್ರೇಲ್ ಮತ್ತು ಅಮೆರಿಕಗಳು ಇರಾನ್ ಮೇಲೆ ದಾಳಿ ನಡೆಸಲು ತಮ್ಮ ವಾಯುಪ್ರದೇಶ ಬಳಸಲು ಗಲ್ಫ್ ರಾಷ್ಟ್ರಗಳು ಅನುಮತಿ ನೀಡಿದ್ದವು. ಹಾಗಿದ್ದರೂ ಇರಾನ್ ಅವುಗಳ ಮೇಲೆ ದಾಳಿಗೆ ಮುಂದಾಗಿರಲಿಲ್ಲ. ಇತ್ತೀಚೆಗೆ ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ದಾಳಿ ನಡೆಸಿದಾಗ ಇದೇ ಗಲ್ಫ್ ರಾಷ್ಟ್ರಗಳು ಇರಾನಿನ ತಮ್ಮ ಬೆಂಬಲ ವ್ಯಕ್ತಪಡಿಸಿದ್ದವು. ಆದರೆ ವಿಪರ್ಯಾಸವೆಂದರೆ ಇರಾನ್ ಈ ಬಾರಿ ಈ ಗಲ್ಫ್ ರಾಷ್ಟ್ರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ.

ಇವೆಲ್ಲದರ ಹಿನ್ನಡೆಯಲ್ಲಿ ಗಲ್ಫ್‌ನ ಕೆಲವು ದೇಶಗಳು ತಮ್ಮ ಭದ್ರತೆಯ ಕುರಿತಂತೆ ಚಿಂತಿತವಾಗಿದ್ದು, ಪರ್ಯಾಯ ವ್ಯವಸ್ಥೆ ರೂಪಿಸಲು ಯೋಚಿಸುತ್ತಿವೆ.ಬಲಿಷ್ಠ ಶಕ್ತಿಯಾಗಿರುವ ಅಮೆರಿಕವು ಕೊಲ್ಲಿಯಲ್ಲಿ 13 ಮಿಲಿಟರಿ ನೆಲೆಗಳನ್ನು ಹೊಂದಿದ್ದರೂ ಕೇವಲ ಒಂದು ದೇಶದ ದಾಳಿಯನ್ನು ತಡೆಯಲು ವಿಫಲವಾಗಿರುವುದು ಈ ದೇಶಗಳಿಗೆ ಭ್ರಮನಿರಶನ ಉಂಟು ಮಾಡಿದೆ.

ಇರಾನಿನ ವಿರುದ್ಧ ದಾಳಿಗೆ ತಮ್ಮ ನೆಲೆಗಳನ್ನು ಮತ್ತು ವಾಯುಪ್ರದೇಶ ಬಳಸುವುದನ್ನು ನಿರ್ಬಂಧಿಸುವ ಕುರಿತಂತೆ ಈ ರಾಷ್ಟ್ರಗಳು ಚಿಂತಿಸುತ್ತಿವೆ. ಅಂತಹ ನಿರ್ಧಾರ ತಳೆದಲ್ಲಿ ಅದು ಈ ಸಮರದ ಮೇಲೆ ಮಹತ್ವದ ಪರಿಣಾಮ ಬೀರಲಿದೆ.

ಇರಾನ್ ಸಮರವು ಬೇಗ ಮುಗಿಯುವುದನ್ನು ಕೊಲ್ಲಿ ದೇಶಗಳು ಬಯಸುತ್ತಿವೆ. ಆದಕ್ಕೆ ಟ್ರಂಪ್ ಧೋರಣೆಯೇ ಅಡ್ಡಿಯಾಗಿದೆ. ಇದೂ ಅವುಗಳಿಗೆ ಅಮೆರಿಕದ ಕುರಿತಂತೆ ಅಸಮಾಧಾನ ಹೆಚ್ಚಿಸಿದೆ.

ಕಿರುಸುದ್ದಿ

ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ: ಮಾ. 17 ರಂದು ಜಿಲ್ಲಾ ಮಟ್ಟದ ಕಾರ್ಯಾಗಾರ

ಉಡುಪಿ: ಕೃಷಿ ಇಲಾಖೆ ವತಿಯಿಂದ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಜಿಲ್ಲಾ ಮಟ್ಟದ ಕಾರ್ಯಾಗಾರ ಮತ್ತು ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ ಕಾರ್ಯಕ್ರಮವು ಮಾರ್ಚ್ 17ರಂದು ಬೆಳಿಗ್ಗೆ 10 ಗಂಟೆಗೆ ರಜತಾದ್ರಿಯ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು, ಕೃಷಿ ಸಚಿವ ಚೆಲುವರಾಯ ಸ್ವಾಮಿ ಉಪಸ್ಥಿತರಿರಲಿದ್ದು, ಶಾಸಕ ಯಶ್‌ಪಾಲ್ ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಬಿ. ವೈ ರಾಘವೇಂದ್ರ, ಶಾಸಕರುಗಳಾದ ವಿ. ಸುನಿಲ್ ಕುಮಾರ್, ಗುರುರಾಜ್ ಗಂಟಿಹೊಳೆ, ಎ. ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ, ವಿಧಾನಪರಿಷತ್ ಶಾಸಕರುಗಳಾದ ಎಸ್.ಎಲ್. ಭೋಜೇಗೌಡ, ಮಂಜುನಾಥ್ ಭಂಡಾರಿ, ಡಾ. ಧನಂಜಯ ಸರ್ಜಿ ಹಾಗೂ ಕಿಶೋರ್ ಕುಮಾರ್ ಪುತ್ತೂರು, ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ.ಗಫೂರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಉಡುಪಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್ ಹಾಗೂ ಮತ್ತಿತರರು ಭಾಗವಹಿಸಲಿದ್ದಾರೆ.

ಕಾಡುಕುರಿ ಬೇಟೆ: ಆರೋಪಿ ಸೆರೆ

ಮಡಿಕೇರಿ: ಅರಣ್ಯದಲ್ಲಿ ಕಾಡುಕುರಿಯನ್ನು ಕೊಂದು ಅದನ್ನು ಮನೆಗೆ ತಂದು ಮಾಂಸವಾಗಿ ತಯಾರಿಸುತ್ತಿರುವ ಸಂದರ್ಭ ದಾಳಿ ನಡೆಸಿದ ಅರಣ್ಯ ಇಲಾಖೆ ಅಧಿಕಾರಿಗಳು ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿಗೆ ಸೇರಿದ ಬಂದೂಕು, ಕಾಡುಕುರಿ ಮಾಂಸವನ್ನು ವಶಕ್ಕೆ ಪಡೆದ ಅರಣ್ಯ ಇಲಾಖೆ ಅಧಿಕಾರಿಗಳು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಶನಿವಾರಸಂತೆ ಸಮೀಪದ ನಿಡ್ತ ಗ್ರಾ.ಪಂ.ವ್ಯಾಪ್ತಿಯ ಜಾಗೇನಹಳ್ಳಿ ಗ್ರಾಮದ ಡಿ.ಎಸ್. ಸುರೇಶ್ ಬಂಧಿತ ಆರೋಪಿ. ಸುರೇಶ್ ಮತ್ತು ಸಂಗಡಿಗರು ಪಕ್ಕದ ಕಾಡಿನಲ್ಲಿ ಅಕ್ರಮವಾಗಿ ಬೇಟೆಯಾಡಲು ಹೋಗಿದ್ದು, ಕಾಡುಕುರಿಯನ್ನು ಬೇಟೆಯಾಡಿದ ಆರೋಪಿಗಳು ಜಾಗೇನಹಳ್ಳಿ ಗ್ರಾಮದ ಡಿ.ಎಸ್.ಸುರೇಶ್ ಅವರ ಮನೆಯಲ್ಲಿ ಅದನ್ನು ಮಾಂಸವನ್ನಾಗಿ ತಯಾರಿಸುತ್ತಿರುವ ಸುಳಿವಿನ ಮೇರೆಗೆ ಶನಿವಾರಸಂತೆ ವಲಯಾಧಿಕಾರಿ ಡಿ.ವಿ.ಪೂಜಾಶ್ರೀ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ. ಈ ಸಂದರ್ಭ ಇಬ್ಬರು ಆರೋಪಿಗಳು ತಲೆ ಮರೆಸಿಕೊಂಡಿರುವುದಾಗಿ ಹೇಳಲಾಗಿದೆ.

ಕಾರ್ಯಾಚರಣೆಯಲ್ಲಿ ಡಿಆರ್ ಎಫ್‌ಒ ವಿಕ್ರಮ್, ಗಸ್ತು ಅರಣ್ಯ ಪಾಲಕ ಭರಮಪ್ಪ, ಕರೇಪ್ಪ ಪೂಜಾರಿ, ಸಿಬ್ಬಂದಿಗಳಾದ ಹರೀಶ್, ಆನಂದ, ನಾಗೇಶ್, ಗೋಪಿ, ಉಮೇಶ್, ಚಂದನ್ ಪಾಲ್ಗೊಂಡಿದ್ದರು.



ಪರಿವಾರ ಬಂಟ ಸಮುದಾಯ ತಳಂಗರೆ ಕುಟುಂಬಸ್ಥರ ಸೇವಾ ಸಮಿತಿಯ 25ನೇ ವಾರ್ಷಿಕೋತ್ಸವ ಹಾಗೂ ಧರ್ಮನೇಮ ಕೂಡ್ಲು ವಿಷ್ಣುಮಂಗಲ ಶ್ರೀರಾಮನಗರದಲ್ಲಿರುವ ತರವಾಡು ಮನೆಯಲ್ಲಿ ಏಪ್ರಿಲ್ 25ರಿಂದ 27ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಇದರ ಆಮಂತ್ರಣ ಪತ್ರಿಕೆಯನ್ನು ಶುಕ್ರವಾರ ಎಡನೀರು ಮಠದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಬಿಡುಗಡೆಗೊಳಿಸಿದರು. ಈ ಸಂದರ್ಭ ಅಪ್ಪಯ್ಯ ನಾಯ್ಕ್ ಮಧೂರು, ಸಂತೋಷ್‌ಕುಮಾರ್ ಮಧೂರು, ಬಾಲಚಂದ್ರ, ವಿಶ್ವನಾಥ ನಾಯ್ಕ್, ಕಾರ್ತಿಕ್ ಮನ್ನಿಪ್ಪಾಡಿ ಜೊತೆಗಿದ್ದರು.

ಪೆರ್ಡೂರು ಶ್ರೀಅನಂತ ಪದ್ಮನಾಭ ದೇವಸ್ಥಾನ ವಾರ್ಷಿಕ ಜಾತ್ರೆ: ಬದಲಿ ಮಾರ್ಗ ಸೂಚಿ

ಉಡುಪಿ: ಪೆರ್ಡೂರು ಶ್ರೀಅನಂತ ಪದ್ಮನಾಭ ದೇವಸ್ಥಾನದ ವಾರ್ಷಿಕ ಜಾತ್ರೆಯ ಪ್ರಯುಕ್ತ ರಾ.ಹೆ 169(ಎ) ರ ಮಾರ್ಗದಲ್ಲಿ ಸಂಚರಿಸುವ ವಾಹನಗಳ ಸುಗಮ ಸಂಚಾರ ದೃಷ್ಟಿಯಿಂದ ಮೋಟಾರು ವಾಹನ ಕಾಯ್ದೆ 1988 ರ ಕಲಂ 115 ಹಾಗೂ ಕರ್ನಾಟಕ ಮೋಟಾರು ವಾಹನ ನಿಯಮ 1989 ರ ನಿಯಮ 221 5(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾರ್ಚ್ 16 ರಂದು ಸಂಜೆ 4 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ವಾಹನಗಳಿಗೆ ಬದಲಿ ಮಾರ್ಗದಲ್ಲಿ ಸಂಚರಿಸಲು ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಆದೇಶಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 169(ಎ)ರಲ್ಲಿ ಆಗುಂಬೆ-ಹೆಬ್ರಿಯಿಂದ-ಉಡುಪಿ ಕಡೆಗೆ ಬರುವ ವಾಹನಗಳು ಪೆರ್ಡೂರು ಮೇಲ್ಪೇಟೆ-ಬೈರಂಪಳ್ಳಿ- ಹರಿಖಂಡಿಗೆ-ಕೋಟ್ನಾಕಟ್ಟೆ- ಹಿರಿಯಡ್ಕ ಜಂಕ್ಷನ್ ಮಾರ್ಗವಾಗಿ ಉಡುಪಿಗೆ ಸಂಚರಿಸುವುದು.

ರಾಷ್ಟ್ರೀಯ ಹೆದ್ದಾರಿ 169(ಎ) ರಲ್ಲಿ ಹೆಬ್ರಿಯಿಂದ ಪೆರ್ಡೂರುಮಾರ್ಗವಾಗಿಪೇತ್ರಿ-ಬ್ರಹ್ಮಾವರಕಡೆಸಂಚರಿಸುವ ವಾಹನಗಳು ಪೆರ್ಡೂರು ಮೇಲ್ಪೇಟೆಯ ಆರ್‌ಎಸ್‌ಎಸ್ ಬ್ಯಾಂಕ್ ಬಳಿ ಇರುವ ಅಲಂಗಾರು ರಸ್ತೆ ಮಾರ್ಗವಾಗಿ ಕರ್ಜೆ-ಪೇತ್ರಿ-ಬ್ರಹ್ಮಾವರ ಕಡೆಗೆ ಸಂಚರಿಸುವುದು.

ಮಾರ್ಚ್16 ರಂದು ಸಂಜೆ 4 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ಪೆರ್ಡೂರು ಕೆಳಪೇಟೆಯಿಂದ-ಮೇಲ್ಪೇಟೆಯ ಬಸ್ ನಿಲ್ದಾಣದವರೆಗೆ ವಾಹನ ಸಂಚಾರ ಮುಕ್ತಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಬದಲಿ ಮಾರ್ಗದ ವಿವರಗಳು

ರಾಷ್ಟ್ರೀಯ ಹೆದ್ದಾರಿ 169(ಎ) ರಲ್ಲಿ ಉಡುಪಿಯಿಂದ ಹೆಬ್ರಿ-ಆಗುಂಬೆ ಕಡೆಗೆ ಹೋಗುವ ವಾಹನಗಳು ಹಿರಿಯಡ್ಕ ಜಂಕ್ಷನ್‌ನಲ್ಲಿ ಮಾರ್ಗ ಬದಲಾಯಿಸಿ ಕೋಟ್ನಾಕಟ್ಟೆ-ಹರಿಖಂಡಿಗೆ-ಬೈರಂಪಳ್ಳಿ-ಪೆರ್ಡೂರು ಮೇಲ್ಪೇಟೆ ಮಾರ್ಗವಾಗಿ ಅಥವಾ ಹಿರಿಯಡ್ಕ ಬಜೆ, ಕುಕ್ಕೆಹಳ್ಳಿ, ಪೇತ್ರಿ ಮಾರ್ಗವಾಗಿ ಹೆಬ್ರಿ, ಆಗುಂಬೆಗೆ ಸಂಚರಿಸುವುದು.

ಐರ್ಲೆಂಡಿನಲ್ಲಿ ಮೃತಪಟ್ಟ ಸಾಂಜೋ ಸುನಿಲ್ ಸಾವಿನ ಪ್ರಕರಣದ ಬಗ್ಗೆ ಸಂಶಯ

ಇಂದು ಕಡಬದಲ್ಲಿ ಮೌನ ಮೆರವಣಿಗೆ

ಕಡಬ: ಇತ್ತೀಚೆಗೆ ಐರ್ಲೆಂಡಿನಲ್ಲಿ ಸಾವೀಗೀಡಾಗಿರುವ ಕಡಬದ ಕುಟ್ರುಪ್ಪಾಡಿ ನಿವಾಸಿ ಸಾಂಜೋ ಸುನೀಲ್ ಅವರ ಸಾವಿನ ಕುರಿತು ಅನೇಕ ಸಂದೇಹಗಳಿದ್ದು, ಅದರ ಸಮಗ್ರ ತನಿಖೆ ನಡಸಬೇಕೆಂದು ಆಗ್ರಹಿಸಿ ಕಡಬದ ಕ್ರಿಶ್ಚಿಯನ್ ಲೈಟ್ನಿಂಗ್ ಕ್ಲಬ್ ಮತ್ತು ಮಲಯಾಳಿ ಫ್ರೆಂಡ್ಸ್ ಸಂಘಟನೆಯ ನೇತೃತ್ವದಲ್ಲಿ ಮಾ. 15ರಂದು ಕಡಬದಲ್ಲಿ ಮೌನ ಮೆರವಣಿಗೆ ನಡೆಯಲಿದೆ ಎಂದು ಕಡಬ ಕ್ರಿಶ್ಚಿಯನ್ ಲೈಟ್ನಿಂಗ್ ಕ್ಲಬ್‌ನ ಕಾರ್ಯದರ್ಶಿ ಕ್ಸೇವಿಯರ್ ಬೇಬಿ ಹೇಳಿದರು.



ಶನಿವಾರ ಕಡಬ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಜೆ 6 ಗಂಟೆಗೆ ಕಡಬ ಅನುಗ್ರಹ ಸಭಾಭವನದಿಂದ ಸೈಂಟ್ ಜೋಕಿಮ್ಸ್ ವಾಣಿಜ್ಯ ಕಟ್ಟಡದ ಮುಂಭಾಗದವರೆಗೆ ಮೇಣದ ಬತ್ತಿ ಉರಿಸಿ ಮೌನ ಮೆರವಣಿಗೆ ನಡೆಯಲಿದೆ ಎಂದು ಅವರು ತಿಳಿಸಿದರು.

ಸಾಂಜೋ ಸುನಿಲ್ ಅವರದ್ದು ಆತ್ಮಹತ್ಯೆ ಅಲ್ಲ, ಇದೊಂದು ಕೊಲೆ ಪ್ರಕರಣವೆನ್ನುವ ಸಂಶಯ ಮೂಡಿದೆ. ಪ್ರಕರಣ ಕುರಿತು ಸಾರ್ವಜನಿಕ ವಲಯದಲ್ಲಿ ಅನೇಕ ಸಂದೇಹಗಳಿವೆ. ಹಾಗಾಗಿ ಸಮಗ್ರ ತನಿಖೆ ನಡೆಸಿ ಸತ್ಯಾಸತ್ಯತೆ ಹೊರಬರಬೇಕು ಎಂದು ಅವರು ಆಗ್ರಹಿಸಿದರು. ಸಾಂಜೋ ಸುನೀಲ್ ಮದುವೆಯಾಗಿ ಒಂದೇ ತಿಂಗಳು ಊರಲ್ಲಿದ್ದು ಬಳಿಕ ಉದ್ಯೋಗ ನಿಮಿತ್ತ ಇಸ್ರೇಲ್‌ಗೆ ತೆರಳಿದ್ದರು. ಅವರ ಪತ್ನಿ ಲಿಷ್ಮಾ ಫಿಲಿಪ್ ಉದ್ಯೋಗ ನಿಮಿತ್ತ ಐರ್ಲೆಂಡ್‌ಗೆ ತೆರಳಿದ್ದರು. 6 ತಿಂಗಳ ಬಳಿಕ ಇಸ್ರೇಲ್ ಉದ್ಯೋಗ ಬಿಟ್ಟು ಪತ್ನಿಯೊಂದಿಗೆ ಐರ್ಲೆಂಡಿನಲ್ಲಿ ವಾಸಿಸುವ ಉದ್ದೇಶದಿಂದ ಅಲ್ಲಿಯೇ ಉದ್ಯೋಗ ಪಡೆಯಲು ಪತ್ನಿಯ ಡಿಪೆಂಡೆಡ್ ವೀಸಾದಲ್ಲಿ ಸಾಂಜೋ ಐರ್ಲೆಂಡ್‌ಗೆ ತೆರಳಿದ್ದರು.

ಐರ್ಲೆಂಡ್‌ಗೆ ತಲುಪಿದ 28ನೇ ದಿನಕ್ಕೆ ಸಾಂಜೋ ಸುನೀಲ್ ಅವರ ಮೃತ ದೇಹ ಸಂಶಯಾತ್ಮಕ ರೀತಿಯಲ್ಲಿ ಕಂಡು ಬಂದಿತ್ತು. ಸಾಂಜೋ ಸುನೀಲ್ ಪತ್ನಿ ಲಿಷ್ಮಾ ಹೇಳುವ ಪ್ರಕಾರ ಲಿಷ್ಮಾ ಮನೆಯಿಂದ ಹೊರಗಡೆ ಹೋಗಿ ಬರುವಾಗ ಮನೆಯ ಬಾತ್ ರೂಮಲ್ಲಿ ಸಾಂಜೋ ದೇಹ ರೇಡಿಯೇಟರ್ ಕೇಬಲ್‌ಗೆ ನೇಣು ಬಿಗಿದುಕೊಂಡು ಮೊಣಕಾಲೂರಿದ ಸ್ಥಿತಿಯಲ್ಲಿ ಇತ್ತು. ಈ ಬಗ್ಗೆ ಆಕೆ ಅಲ್ಲಿನ ಪೊಲೀಸ್‌ನವರಿಗೆ ಮಾಹಿತಿ ತಿಳಿಸಿದ್ದಾರೆ. ಪ್ರಥಮ ಚಿಕಿತ್ಸೆಗಾಗಿ ದೇಹವನ್ನು ರೇಡಿಯೇಟರ್‌ನಿಂದ ಬಿಚ್ಚಿ ಕೆಳಗಡೆ ಮಲಗಿಸಿದ್ದರು ಎಂದೂ ಹೇಳಲಾಗಿದೆ. ಈ ಸಂದರ್ಭದಲ್ಲಿ ಇವರಿಗೆ ಸಹಕಾರ ನೀಡಿರುವ ಅನ್ಯ ವ್ಯಕ್ತಿಯ ಬಗ್ಗೆ ಸಂಶಯ ವ್ಯಕ್ತವಾಗಿದೆ. ಲಿಷ್ಮಾಳ ಪ್ಲಾಟ್‌ಗೆ ಆ ವ್ಯಕ್ತಿ ಬಂದು ಹೋಗಿರುವ ಸಿಸಿ ಕ್ಯಾಮರದ ದೃಶ್ಯಾವಳಿ ಕೂಡ ಇದೆ. ವಿವಾಹಿತನಾಗಿರುವ ಕೇರಳ ಮೂಲದ ಆ ವ್ಯಕ್ತಿಗೆ ಲಿಷ್ಮಾ ಫಿಲಿಪ್‌ನವಳೊಂದಿಗೂ ಆತ್ಮೀಯತೆ ಇತ್ತು ಎನ್ನುವುದು ಸಂಶಯಕ್ಕೆ ಎಡೆ ಮಾಡಿದೆ ಎಂದು ಅವರು ವಿವರಿಸಿದರು.

ನೇಣು ಬಿಗಿದು ಸಾಯುವಂತಹ ಯಾವುದೇ ವ್ಯವಸ್ಥೆಗಳು ಆ ರೂಮಿನಲ್ಲಿ ಇರಲಿಲ್ಲ. ಆತ ನೇಣು ಬಿಗಿದುಕೊಂಡ ಎಂದು ಹೇಳುವ ಬಾತ್ ರೂಮ್‌ನ ರೇಡಿಯೇಟರ್ ಕೇಬಲ್ ಕೇವಲ 5 ಅಡಿ ಮಾತ್ರ ಎತ್ತರದಲ್ಲಿ ಇದೆ. ಸರಿಸುಮಾರು 6 ಅಡಿ ಎತ್ತರದ ಸಾಂಜೋ ಸುನೀಲ್ ಇದರಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದು ಲಿಷ್ಮಾ ಹೇಳಿಕೊಂಡಂತೆ ವಿಶ್ವಾಸಯೋಗ್ಯವಾದ ಕತೆಯಲ್ಲ. ಆದುದರಿಂದ ಈ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರಕಾರಗಳೂ ಮುತುವರ್ಜಿ ವಹಿಸಿಕೊಂಡು ಸಾಂಜೋ ಸುನೀಲ್ ಅವರ ಸಾವಿನ ಬಗ್ಗೆ ಕೂಲಂಕಷ ತನಿಖೆ ನಡೆಸಿ, ಅಲ್ಲಿ ನಡೆಸಿರುವ ಸಾಂಜೋ ಅವರ ಶವ ಮಹಜರು ವರದಿಯನ್ನು ತರಿಸಿಕೊಂಡು ಸಾರ್ವಜನಿಕರಲ್ಲಿರುವ ಗೊಂದಲವನ್ನು ನಿವಾರಣೆ ಮಾಡಬೇಕು ಹಾಗೂ ಸತ್ಯಾಂಶ ಹೊರ ಬರಬೇಕು ಎಂದು ಆಗ್ರಹಿಸಿ ಮೌನ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಕ್ಸೇವಿಯರ್ ಬೇಬಿ ಹೇಳಿದರು.

ಕಡಬದಕ್ರಿಶ್ಚಿಯನ್ ಲೈಟ್ನಿಂಗ್ ಕ್ಲಬ್ ಮತ್ತುಮಲಯಾಳಿ ಫೆಂಡ್ಸ್ ಸಂಘಟನೆಯ ಪ್ರಮುಖರಾದ ಮನೋಜ್ ಕೋಡಿಂಬಾಳ, ಶಾಜಿ ಕೆ. ಜೋನ್, ಬಿನೋಯ್ ಮ್ಯಾಥ್ಯೂ, ಶಾಂಡೋ ಕೆ.ಪಿ. ಉಪಸ್ಥಿತರಿದ್ದರು.

ಸತ್ಯಾಂಶ ಹೊರ ಬರಲಿ
ಕಡಬದ ಕುಟ್ರುಪ್ಪಾಡಿಯ ಸಾಂಜೋ ಸುನಿಲ್ ಸಾವಿನ ಬಗ್ಗೆ ಸಂಶಯಗಳಿದ್ದು, ಕೇಂದ್ರ ಹಾಗೂ ರಾಜ್ಯ ಸರಕಾರ ಈ ಕುರಿತು ಕೂಲಂಕಶ ತನಿಖೆ ನಡೆಸಿ ಸತ್ಯಾಂಶ ಹೊರತರಬೇಕು
-ಕ್ಸೇವಿಯರ್ ಬೇಬಿ

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜ್ 'ಟೀಂ ಯುವಶಕ್ತಿ ಟ್ರಸ್ಟ್' ಉದ್ಘಾಟನೆ

ಕುಂದಾಪುರ : ಇಂದಿನ ಆಧುನಿಕ ತಂತ್ರಜ್ಞಾನ ಮತ್ತು ಮೊಬೈಲ್ ಯುಗದಲ್ಲಿ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗುತ್ತಿರುವುದೇ ಹೆಚ್ಚು. ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುವ ಮುಖಾಂತರ ವಿದ್ಯಾರ್ಥಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಿ ಎಂದು ಉದ್ಯಮಿ ದಿನೇಶ್ ಹೆಗ್ಡೆ ಮೊಳಹಳ್ಳಿ ಕರೆ ನೀಡಿದರು.

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನಲ್ಲಿ 'ಟೀಂ ಯುವಶಕ್ತಿ ಟ್ರಸ್ಟ್'ನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಭಂಡಾರ್ಕಾರ್ಸ್ ಕಾಲೇಜಿನ ವಿದ್ಯಾರ್ಥಿಗಳಿಂದ ಆರಂಭವಾದ 'ಟೀಂ ಯುವಶಕ್ತಿ ಟ್ರಸ್ಟ್' ತುಂಬಾ ವಿಶೇಷವಾದ ಸಮಾಜಮುಖಿ ಚಿಂತನೆಯನ್ನು ಕಂಡುಕೊಂಡು ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅವರು ಈ ಕಾರ್ಯ ನಿಜಕ್ಕೂ ಅಭಿನಂದನೀಯ. ಅವರುಗಳು ಈ ಕಾರ್ಯ ವಿದ್ಯಾರ್ಥಿಗಳಿಗೆ ಪ್ರೇರಣಾ ಶಕ್ತಿಯಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಂಡಾರ್ಕಾರ್ಸ್ ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾಚಾರಿ ವಹಿಸಿದ್ದರು. ಬಿಜೆಪಿ ಕುಂದಾಪುರ ಕ್ಷೇತ್ರದ ಮಾಜಿ ಅಧ್ಯಕ್ಷ ಶಂಕರ ಅಂಕದಕಟ್ಟೆ, ಆರ್.ಎನ್.ಎಸ್, ಬೆಂಗಳೂರು ಇದರ ಪ್ರಾದೇಶಿಕ ವ್ಯವಸ್ಥಾಪಕ ಪ್ರಭಾಕರ, ಭಂಡಾರ್ಕಾರ್ಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಎಂ.ಗೊಂಡ, ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ಪ್ರೊ. ಅರುಣ್ ಕುಮಾರ್ ಎ.ಎಸ್., ಪದವಿ ಕಾಲೇಜಿನ ಕಛೇರಿ ವ್ಯವಸ್ಥಾಪಕ ಗೋಪಾಲ್ ನಾಯ್ಕ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಅಭಯ ಹಸ್ತ ಚಾರಿಟೇಬಲ್ ಟ್ರಸ್ಟ್ ಆನಗಳ್ಳಿ ಇದರ ಶರತ್ ಕಾಂಚನ್, ಹೆಲ್ಪಿಂಗ್ ಹ್ಯಾಂಡ್ಸ್ ಇದರ ಸದಸ್ಯರಾದ ರತನ್ ಅವರನ್ನು ಸನ್ಮಾನಿಸಲಾಯಿತು. ನಾಡ ಗ್ರಾಮದ ಕೋಣ್ಕಿ ಇಲ್ಲಿನ ವಿಶೇಷ ಚೇತನ ಶ್ರೀರಕ್ಷಾ ಶೆಟ್ಟಿ ಅವರಿಗೆ ಮ್ಯೂಸಿಕ್ ಸ್ಟ್ಯಾಂಡ್ ನೀಡಿ ಗೌರವಿಸಲಾಯಿತು. ಚರ್ಚ್ ರಸ್ತೆಯ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಪುಸ್ತಕ ಮತ್ತು ಬೋರ್ಡ್ ಹೈಸ್ಕೂಲ್ ಕುಂದಾಪುರ ಇಲ್ಲಿನ ವಿದ್ಯಾರ್ಥಿಗಳಿಗೆ ಬ್ಯಾಗಗಳು ಮತ್ತು ಭಂಡಾರ್ಕಾರ್ಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ರಾಘವೇಂದ್ರ, ಚೈತ್ರ ಸಂಜೀವ, ವಸಂತಿ ಆಚಾರ್ಯ ಮತ್ತು ನಾಗೇಂದ್ರ ಅವರಿಗೆ ಧನಸಹಾಯ ಮಾಡಲಾಯಿತು.

ವಿದ್ಯಾರ್ಥಿ ಧನುಷ್ ಸ್ವಾಗತಿಸಿದರು. ರೇಡಿಯೋ ಕುಂದಾಪುರದ ಕಾರ್ಯಕ್ರಮ ನಿರ್ವಹಕಿ ಜ್ಯೋತಿ ಸಾಲಿಗ್ರಾಮ ಕಾರ್ಯಕ್ರಮ ನಿರೂಪಿಸಿದರು. ಟೀಂ ಯುವಶಕ್ತಿ ಟ್ರಸ್ಟ್ ಇದರ ಸದಸ್ಯ ಮತ್ತು ಕಾಲೇಜಿನ ವಿದ್ಯಾರ್ಥಿ ಶಶಾಂಕ್ ವಂದಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ, ಶ್ರೀ ಗೋಪಾಲಕೃಷ್ಣ ಮಂದಿರದ ಬಳಿ, ಮುಲಾರ ಕೋಣಾಜೆ.
2. ವಾಸು ಪೂಜಾರಿ, ಅಂಬೋಡಿಮಾರು, ಬಡಗಬೆಳ್ಳೂರು, ಬಂಟ್ವಾಳ (ತಾ).
3. ಬಡಗ ಬೆಳ್ಳೂರು ಪಲ್ಲಿಪಾಡಿ ಹತ್ತು ಸಮಸ್ತರು, ಕಂಡದಬೆಟ್ಟು, ಬಂಟ್ವಾಳ (ತಾ).
4. ಶ್ರೀ ದೇವಿ ಸಮಿತಿ, ಬಾಳೆಪುಣಿ, ಹೂಹಾಕುವ ಕಲ್ಲು, ವಯಾ ಮುಡಿಪು.
5. ಯಕ್ಷ ಅಭಿಮಾನಿ ಬಳಗ, ಬೆಳಾಲು ವಯಾ ಉಜಿರೆ, ಬೆಳ್ತಂಗಡಿ (ತಾ).
6. ಪಿ. ಸಂತೋಷ್ ಐತಾಳ್, 'ಅನ್ನಪೂರ್ಣ', ಮೈನ್‌ರೋಡ್, ಕುಳಾಯಿ.
7. ಶ್ರೀ ನೀಲಕಂಠೇಶ್ವರ ದೇವಸ್ಥಾನ, ದೈವಂಗಳ ಗುಡ್ಡೆ, ಅದ್ಯಪಾಡಿ

ಶ್ರೀ ಧರ್ಮಸ್ಥಳ ಮೇಳ
ಕೋಣಂದೂರು ಅಕ್ಕಾಪುರದಲ್ಲಿ
ಶ್ರೀಮತಿ ಗೀತಾ ರಾಜೇಂದ್ರ ಹೆಚ್.ಎನ್. ಮತ್ತು ಮಕ್ಕಳು ಅಕ್ಕಾಪುರ

ಶ್ರೀ ಸಾಲಿಗ್ರಾಮ ಮೇಳ
ಸಾಗರ ನೆಹರೂ ಮೈದಾನದಲ್ಲಿ
ಗದಾಯುದ್ಧ-ಸುಧನ್ವ- ಜಾಂಬವತಿ

ಶ್ರೀ ಪೆರ್ಡೂರು ಮೇಳ
ಗರಡಿ ಮಜಲಿನಲ್ಲಿ - ಚದುರಂಗ

ಶ್ರೀ ಹನುಮಗಿರಿ ಮೇಳ
ಕಾಟಿಪಳ್ಳದಲ್ಲಿ

ಶ್ರೀ ಪಾವಂಜೆ ಮೇಳ
ನಾಳ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ
ಛಾಯಾನಂದನ

300 ಬೆಡ್ ಆಸ್ಪತ್ರೆ ವಿಚಾರದಲ್ಲಿ ಅನಗತ್ಯ ಕಿರಿಕಿರಿ: ಕೆಪಿಸಿಸಿ ಸಂಯೋಜಕ ಆರೋಪ



ಪುತ್ತೂರು: ಪುತ್ತೂರು ಮೆಡಿಕಲ್ ಕಾಲೇಜ್ ನಿರ್ಮಾಣದ ಸೇಡಿಯಾಪು ಜಾಗದಲ್ಲೇ 300 ಹಾಸಿಗೆಗಳ ನೂತನ ಆಸ್ಪತ್ರೆ ನಿರ್ಮಾಣವಾಗಲಿದೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ. ಬಿಜೆಪಿಗರು ಅನಗತ್ಯವಾಗಿ ಈ ವಿಚಾರದಲ್ಲಿ ಕಿರಿ ಕಿರಿ ಉಂಟು ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ಸಂಯೋಜಕ ಕಾವು ಹೇಮನಾಥ ಶೆಟ್ಟಿ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೇಡಿಯಾಪುವಿನಲ್ಲಿ 300 ಹಾಸಿಗೆಗಳ ನೂತನ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜು ನಿರ್ಮಾಣವಾಗಲಿದೆ. ಆಸ್ಪತ್ರೆಮತ್ತು ಕಾಲೇಜು ಜತೆ ಜತೆಯಾಗಿದ್ದರೆ ಬಹಳ ಪ್ರಯೋಜನವಿದೆ. ಕೊಡಗು ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಮತ್ತು ಸರಕಾರಿ ಆಸ್ಪತ್ರೆ ಬೇರೆ ಬೇರೆ ಪ್ರದೇಶದಲ್ಲಿರುವ ಕಾರಣ ಸಾಕಷ್ಟು ಸಮಸ್ಯೆಯಾಗುತ್ತಿದೆ ಎಂದರು.

ಸೇಡಿಯಾಪುವಿನ 40 ಎಕರೆ ಜಾಗದಲ್ಲೇ ಮೆಡಿಕಲ್ ಕಾಲೇಜ್, ಆಸ್ಪತ್ರೆ ಮತ್ತು ಆಯುರ್ವೇದ ಆಸ್ಪತ್ರೆ ನಿರ್ಮಾಣವಾಗಲಿದೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ ಎಂದವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ರವಿಪ್ರಸಾದ್ ಶೆಟ್ಟಿ, ಮೋನು ಬಪ್ಪಳಿಗೆ, ಲ್ಯಾನ್ಸಿ ಮಸ್ಕರೇನಸ್, ಸುಪ್ರೀತ್ ಕಣ್ಣರಾಯ ಮತ್ತು ಗಂಗಾಧರ ಶೆಟ್ಟಿ ಉಪಸ್ಥಿತರಿದ್ದರು.

- **300 ಹಾಸಿಗೆಗಳ ನೂತನ ಆಸ್ಪತ್ರೆ ನಿರ್ಮಾಣವಾಗಲಿದೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ.**
- **ಬಿಜೆಪಿಗರು ಅನಗತ್ಯವಾಗಿ ಈ ವಿಚಾರದಲ್ಲಿ ಕಿರಿ ಕಿರಿ ಉಂಟು ಮಾಡುತ್ತಿದ್ದಾರೆ**

ಉಡುಪಿ ಜಿಲ್ಲೆಯಲ್ಲಿ ಜಲ್ ಜೀವನ್ ಮಿಷನ್ ಯೋಜನೆಯಡಿ 525 ಏಕ ಗ್ರಾಮ ಕುಡಿಯುವ ನೀರಿನ ಯೋಜನೆ ಹಾಗೂ 2 ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರು

ಕಾಪು: ಉಡುಪಿ ಜಿಲ್ಲೆಯಲ್ಲಿ ಜಲ್ ಜೀವನ್ ಮಿಷನ್ ಯೋಜನೆಯಡಿ 525 ಏಕ ಗ್ರಾಮ ಕುಡಿಯುವ ನೀರಿನ ಯೋಜನೆ ಹಾಗೂ 2 ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆ. ಕಾಪು ವಿಧಾನಸಭಾ ಕ್ಷೇತ್ರದಲ್ಲಿ 73 ಏಕ ಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದು, ಅದರಲ್ಲಿ 65 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, 8 ಕಾಮಗಾರಿಗಳು ಪ್ರಗತಿಯಲ್ಲಿವೆ. ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ರಾಜ್ಯ ಅಧಿವೇಶನದಲ್ಲಿ ಉಡುಪಿ ಜಿಲ್ಲೆಯಲ್ಲಿ ಜಲ್ ಜೀವನ್ ಮಿಷನ್ ಮತ್ತು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳು ಎಷ್ಟು..? ಹಾಗೂ ಸದ್ರಿ ಯೋಜನೆಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಇನ್ನೂ ಪ್ರಾರಂಭಿಸಲು ಕಾಮಗಾರಿಗಳ ವಿವರವೆಷ್ಟು..? ಹಾಗೂ ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸದ್ರಿ ಯೋಜನೆಯಡಿಯಲ್ಲಿ ಬಾಕಿ ಇರುವ ಕಾಮಗಾರಿಗಳು ಹಾಗೂ ವಾರಾಹಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಕಾಪು ತಾಲೂಕಿನ 7 ಗ್ರಾಮಗಳಿಗೆ ಕುಡಿಯುವ ನೀರಿನ ಪೂರೈಕೆ ಯಾವ ಹಂತದಲ್ಲಿದೆ ಎಂದು ಪ್ರಶ್ನಿಸಿದ್ದರು. ಕಾಪು ವಿಧಾನಸಭಾ ಕ್ಷೇತ್ರದ 18 ಗ್ರಾಮ ಪಂಚಾಯತ್‌ಗಳ 30 ಗ್ರಾಮಗಳಿಗೆ ಕಾರ್ಕಳ, ಕಾಪು, ಹೆಬ್ರಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಮೂಲಕ ವಾರಾಹಿ ನದಿಯಿಂದ ಸುಸ್ಥಿರ ಶುದ್ದೀಕರಿಸಿದ ನೀರು ಸರಬರಾಜು ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ 7 ಗ್ರಾಮಗಳಾದ ಕುರ್ಕಾಲು, ಮೂಡಬೆಟ್ಟು, ಏಣಗುಡ್ಡೆ, ಕೋಟೆ , ಮಟ್ಟು, ಇನ್ನಂಜೆ, ಪಾಂಗಾಳ ಗ್ರಾಮಗಳಿಗೆ ಕಾಪು ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯಡಿ ಬರುವ ಕುಂಜಾರುಗಿರಿ ನೀರು ಶುದ್ದೀಕರಣ ಘಟಕದಿಂದ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ 26.14 ಕೋಟಿ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದಿಂದ ಅನುಷ್ಠಾನಗೊಳಿಸಲು ಸಮ್ಮತಿಯನ್ನು ನೀಡಿರುತ್ತಾರೆ. ಸದ್ರಿ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಲು ಕ್ರಮವಹಿಸುವುದಾಗಿ ಸಚಿವರು ತಿಳಿಸಿದರು.

ರಾಜ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾವಿದರಿಗೆ ನೀಡಲಾಗುವ ಪ್ರೋತ್ಸಾಹದಾಯಕ ಯೋಜನೆಗಳು ಯಾವುವು..? ಇದಕ್ಕೆ ವಾರ್ಷಿಕವಾಗಿ ಬೇಕಾಗುವ ಅನುದಾನವೆಷ್ಟು..? ಹಾಗೂ ಉಡುಪಿ ಜಿಲ್ಲೆಯಲ್ಲಿ ಕಳೆದ 2 ಆರ್ಥಿಕ ವರ್ಷಗಳಲ್ಲಿ ಕಲಾವಿದರಿಗೆ ನೀಡಲಾಗಿರುವ ಮಾಸಿಕ ಮಾಸಾಶನ ಅನುದಾನ ಎಷ್ಟು..? ಬಾಕಿ ಮೊತ್ತ ಬಿಡುಗಡೆಗೆ ಸರಕಾರದ ಕ್ರಮವೇನು ಎಂಬುದರ ಬಗ್ಗೆಯೂ ಕೂಡಾ ಶಾಸಕ ಗುರ್ಮೆ ಪ್ರಶ್ನೆಯನ್ನು ಕೇಳಿದ್ದು, ಇದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಉತ್ತರಿಸುತ್ತಾ, ಕಲಾವಿದರಿಗೆ ಕಳೆದ 2 ಆರ್ಥಿಕ ವರ್ಷಗಳಲ್ಲಿ ಮಾಸಿಕ ಮಾಸಾಶನವನ್ನು ನೀಡುತ್ತಿದ್ದು, 2023-24 ನೇ ಸಾಲಿನಲ್ಲಿ 20.26 ಲಕ್ಷ ಹಾಗೂ 2024-25 ನೇ ಸಾಲಿನಲ್ಲಿ 17.52 ಲಕ್ಷ ಅನುದಾನ ಬಿಡುಗಡೆ ಆಗಿದ್ದು, ಜಿಲ್ಲೆಯಿಂದ ಸ್ವೀಕೃತವಾದ ಅರ್ಜಿಗಳಿಗೆ ಮಾಸಾಶನ ಮಂಜೂರು ಮಾಡಲಾಗುತ್ತಿದ್ದು, 77 ಕಲಾವಿದರಿಗೆ ಮಾಸಾಶವನ್ನು ನೀಡಲಾಗುತ್ತಿದ್ದು, ಮಾಸಾಶನ ಪಾವತಿಗೆ ಬಾಕಿ ಇರುವುದಿಲ್ಲ ಎಂದು ತಿಳಿಸಿದ್ದಾರೆ.

ನಿಡ್ವಳ್ಳಿ ಶ್ರೀ ಶಾಂತದುರ್ಗಾ ದೇವಸ್ಥಾನದ ಪ್ರತಿಷ್ಠಾ ಉತ್ಸವ



ನಿಡ್ವಳ್ಳಿ: ಶ್ರೀ ಕ್ಷೇತ್ರ ನಿಡ್ವಳ್ಳಿಯ ಶ್ರೀ ಶಾಂತದುರ್ಗಾ ದೇವಸ್ಥಾನದ ಪ್ರತಿಷ್ಠಾ ಉತ್ಸವ ಹಾಗೂ ಜಾತ್ರೆ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಿತು.

ಮಾ.12ರಂದು ಬೆಳಗ್ಗೆ ಬಲಿವಾಡು ಶೇಖರಣೆ ಹಾಗೂ ಹಸಿರುವಾಣಿ ಶೇಖರಣೆ ನಡೆಯಿತು. ಮಾ.13ರಂದು ಬೆಳಗ್ಗೆ ಪ್ರಾರ್ಥನೆ, ಗಣಪತಿ ಹೋಮ, ಶ್ರೀ ದೇವರಿಗೆ ಪಂಚವಿಂಶತಿ ಕಲಶ ನಡೆಯಿತು. ನಿಡ್ವಳ್ಳಿಯ ಶ್ರೀ ಶಾಂತದುರ್ಗಾ ಭಕ್ತ ವೃಂದದವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಮಹಾಪೂಜೆ, ಪಲ್ಲಪೂಜೆ, ಪ್ರಸಾದ ವಿತರಣೆ ಅನ್ನ ಸಂತರ್ಪಣೆ ನಡೆಯಿತು. ಸಂಜೆ ಗಂಗಾಧರ್ ಮಾರಾರ್ ನೀಲೇಶ್ವರ ಬಳಗದವರಿಂದ ತಾಯಾಂಬಕ ಸೇವೆ. ರಾತ್ರಿ ಪೂಜೆ, ಪ್ರಸಾದ ವಿತರಣೆ ನಂತರ ಶ್ರೀ ಭೂತ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಶ್ರೀ ದೇವರ ಗರ್ಭಗೃಹ ಪ್ರವೇಶ, ಮಂತ್ರಾಕ್ಷತೆ, ಮಹಾ ಅನ್ನ ಸಂತರ್ಪಣೆ ನಡೆಯಿತು.

ದೇವಸ್ಥಾನದ ಆಡಳಿತ ಮಂಡಳಿ ಗೌರವಾಧ್ಯಕ್ಷ ಪ್ರಮೋದ್ ಆರಿಗ ನಿಡ್ವಳ್ಳಿ ಗುತ್ತು, ಕಿನ್ನಿಮಾಣಿ ಪೂಮಾಣಿ ಪರಿವಾರ ದೈವಗಳ ದೈವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಪ್ರವೀಣ್ ಆರಿಗ ನಿಡ್ವಳ್ಳಿ ಗುತ್ತು, ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ನಾಗೇಶ ಗೌಡ ಪುಳಿತ್ತಡಿ ಮತ್ತಿತರರು ಪಾಲ್ಗೊಂಡಿದ್ದರು.

ಬಾಬು ರಾಜೇಂದ್ರ ಪ್ರೌಢಶಾಲೆಗೆ ಕೊಡುಗೆ

ಮೂಡುಬಿದಿರೆ : ಇಲ್ಲಿನ ಬಾಬು ರಾಜೇಂದ್ರ ಪ್ರೌಢಶಾಲೆಗೆ ಬೆಂಗಳೂರಿನ ಟೆಕ್ನೋಯಲಜಿ ಇಂಡಿಯಾ ಆಯಿಲ್ಸ್ ಆಂಡ್ ಫ್ಯಾಟ್ಸ್ ಪ್ರೈವೇಟ್ ಲಿಮಿಟೆಡ್ ಇದರ 2025-26ರ ಸಿಎಸ್‌ಆರ್ ನಿಧಿ ರೂ. 5 ಲಕ್ಷ ವೆಚ್ಚದಲ್ಲಿ ಕೊಡಮಾಡಿರುವ ಕೊಡುಗೆಗಳ ಹಸ್ತಾಂತರ ಕಾರ್ಯಕ್ರಮವು ಶುಕ್ರವಾರ ನಡೆಯಿತು.



ಟೆಕ್ನೋಯಲಜಿ ಇಂಡಿಯಾ ಆಯಿಲ್ಸ್ ಮತ್ತು ಫ್ಯಾಟ್ಸ್ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥಾಪಕರಾದ ರಘುರಾಮ್ ಮುಳಿಯ ಅವರು 2- ಸ್ಮಾರ್ಟ್ ಟಿವಿ, 3-ಲ್ಯಾಪ್ ಟಾಪ್, 1-ಪ್ರಾಜೆಕ್ಟರ್, ಜನರೇಟರ್ ಹಾಗೂ ಜೆರಾಕ್ಸ್ ಮೆಷಿನ್‌ನನ್ನು ಹಸ್ತಾಂತರಿಸಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರಲ್ಲಿಯೂ ವಿವಿಧ ರೀತಿಯ ಪ್ರತಿಭೆಗಳಿವೆ. ಕೇವಲ ಪಠ್ಯ ಪುಸ್ತಕದ ಶಿಕ್ಷಣಕ್ಕೆ ಸೀಮಿತವಾಗದೆ ಇತರ ಕೌಶಲವನ್ನು ವೃದ್ಧಿಸಿಕೊಂಡು ಬೆಳೆಯುವ ಮೂಲಕ ಮುಂದಿನ ದಿನಗಳಲ್ಲಿ ತಮ್ಮಿಂದ ಸಹಕಾರ ದೊರೆಯುವಂತಾಗಬೇಕು. ಹೆತ್ತವರು ನಿಮ್ಮ ಮೇಲೆ ಯಾವುದಾದರೊಂದು ಕನಸು ಕಂಡು ನಿಮ್ಮನ್ನು ಈ ಸಂಸ್ಥೆಗೆ ಸೇರಿಸಿದ್ದಾರೆ. ಅವರ ಕನಸನ್ನು ನನಸಾಗಿಸಲು ಶಿಕ್ಷಕರು ಶ್ರಮ ವಹಿಸುತ್ತಾರೆ. ಅವರ ಶ್ರಮ ಮತ್ತು ನಮ್ಮ ಯೋಗದಿಂದಾಗಿ ಈ ಸಂಸ್ಥೆಗೆ ಸಹಕಾರ ನೀಡುತ್ತಿದ್ದೇವೆ ಎಂದರು.

ಮಾಜಿ ಸಚಿವ, ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಕೆ. ಅಭಯಚಂದ್ರ ಜೈನ್ ಅಧ್ಯಕ್ಷತೆ ವಹಿಸಿದ್ದರು. ಗೌರವ ಶಾಲೆಗೆ ಕೊಡುಗೆಗಳನ್ನು ನೀಡಿರುವ ರಘುರಾಮ ಮುಳಿಯ ಹಾಗೂ ಅವರಿಂದ ಸಹಕಾರ ಪಡೆಯಲು ಕಾರಣೀಕರ್ತರಾಗಿರುವ ಶಿಕ್ಷಕ ಗೋವರ್ಧನ್ ಅವರನ್ನು ಶಾಲೆಯ ವತಿಯಿಂದ ಗೌರವಿಸಲಾಯಿತು.

ಆಡಳಿತ ಮಂಡಳಿಯ ಉಪಾಧ್ಯಕ್ಷರುಗಳಾದ ಸಂಪತ್ ಸಾಮ್ರಾಜ್ಯ, ಪುಷ್ಪರಾಜ್ ಜೈನ್, ಸದಸ್ಯರಾದ ರಾಮ್ ಪ್ರಸಾದ್ ಭಟ್, ನಿವೃತ್ತ ಮುಖ್ಯ ಶಿಕ್ಷಕ ಬಾಹುಬಲಿ, ಕಂಪನಿಯ ಟೆಕ್ನಿಕಲ್ ಮೆನೇಜರ್ ಯೋಗೀಶ್ ನಾಯಕ್, ಶಾಲಾ ಹಳೆ ವಿದ್ಯಾರ್ಥಿ ನಾಗರಾಜ್ ಉಪಸ್ಥಿತರಿದ್ದರು.

ಸಂಚಾಲಕ ರಾಮ್ ನಾಥ್ ಭಟ್ ಸ್ವಾಗತಿಸಿದರು. ಮುಖ್ಯ ಶಿಕ್ಷಕಿ ತೆರೆಜಾ ಖಿರ್ಡೋಜಾ ಪ್ರಾಸ್ತಾವಿಕವಾಗಿ ಮಾತನಾಡಿ, ಮುಖ್ಯ ಅತಿಥಿಯನ್ನು ಪರಿಚಯಿಸಿದರು. ಶಿಕ್ಷಕ ವೆಂಕಟರಮಣ ಕೆರೆಗದ್ದೆ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕ ಕಿರಣ್ ವಂದಿಸಿದರು.

ಫಿಲೋಮಿನಾ ಕಾಲೇಜಿನ ಗಣಕವಿಜ್ಞಾನ ವಿಭಾಗ, ಕಾಲೇಜಿನ ಐಐಸಿ ಘಟಕಗಳ ಜಂಟಿ ಆಶ್ರಯದಲ್ಲಿ

'ಎಐ ಇನ್ನೊವೇಶನ್ ಸ್ಪ್ರಿಂಟ್' ಕಾರ್ಯಕ್ರಮ

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ ಗಣಕವಿಜ್ಞಾನ ವಿಭಾಗ ಹಾಗೂ ಕಾಲೇಜಿನ ಐಐಸಿ ಘಟಕಗಳ ಜಂಟಿ ಆಶ್ರಯದಲ್ಲಿ ಕಾಲೇಜಿನ ಗಣಕವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗಾಗಿ 'ಎಐ ಇನ್ನೊವೇಶನ್ ಸ್ಪ್ರಿಂಟ್-ಡಿಜಿಟಲ್ ಪರಿವರ್ತನೆಗಾಗಿ ತ್ವರಿತ ಪ್ರೊಟೊಟೈಪ್ ಅಭಿವೃದ್ಧಿ' ಎಂಬ ತಾಂತ್ರಿಕ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಫಾ.ಡಾ. ಆ್ಯಂಟನಿ ಪ್ರಕಾಶ್ ಮೊಂತೇರೊ, ಇಂದಿನ ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಶಿಕ್ಷಣ, ಉದ್ಯಮ ಮತ್ತು ಸಮಾಜದ ಅಭಿವೃದ್ಧಿಗೆ ಮಹತ್ತರ. ವಿದ್ಯಾರ್ಥಿಗಳು ಹೊಸ ಆಲೋಚನೆಗಳನ್ನು ಅಭಿವೃದ್ಧಿಪಡಿಸಿ ವೇಗವಾಗಿ ಪ್ರೋಟೋಟೈಪ್‌ಗಳನ್ನು ಸೃಷ್ಟಿಸುವ ಮೂಲಕ ನವೀನತೆ ಬೆಳೆಸಬೇಕು. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕತೆ, ಸಮಸ್ಯೆ ಪರಿಹಾರ ಸಾಮರ್ಥ್ಯ ಮತ್ತು ತಂತ್ರಜ್ಞಾನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯಕವಾಗುತ್ತದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಹಾಗೂ ಪ್ರಸ್ತುತ ಮಂಗಳೂರಿನ ಎನಪೋಯ ಪರಿಗಣಿತ ವಿಶ್ವವಿದ್ಯಾನಿಲಯದ ಗಣಗವಿಜ್ಞಾನ ವಿಭಾಗದ ಹಿರಿಯ ಸಂಶೋಧನಾ ವಿದ್ಯಾರ್ಥಿನಿ ಅನುಶಾ ಎಂ.ಡಿ. ವಿದ್ಯಾರ್ಥಿಗಳಿಗೆ ಕಾರ್ಯಕ್ರಮದ ವಿಷಯದ ಕುರಿತು ಮೂಲಭೂತ ಮಾಹಿತಿ ನೀಡಿ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಹೊಸ ತಂತ್ರಜ್ಞಾನಗಳನ್ನು ಕಲಿಯಲು ಪ್ರೇರಣೆ ನೀಡಿದರು.

ಮಧುರಾ ಮತ್ತು ಬಳಗ ಪ್ರಾರ್ಥಿಸಿದರು. ಗಣಕವಿಜ್ಞಾನ ವಿಭಾಗದ ಡೀನ್ ಹಾಗೂ ಕಾಲೇಜಿನ ಪರೀಕ್ಷಾಂಗ ಕುಲಸಚಿವ ಡಾ. ವಿನಯಚಂದ್ರ ಸ್ವಾಗತಿಸಿ, ಗಣಕವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವಾರಿಜಾ ಎಂ. ವಂದಿಸಿದರು. ಗಣಕವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಖಲಂದರ್ ಶರೀಫ್ ಕಾರ್ಯಕ್ರಮ ನಿರ್ವಹಿಸಿದರು.

- **ಇಂದಿನ ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಶಿಕ್ಷಣ, ಉದ್ಯಮ ಮತ್ತು ಸಮಾಜದ ಅಭಿವೃದ್ಧಿಗೆ ಮಹತ್ತರ.**

ಉಡುಪಿ, ಕಾರ್ಕಳ ತಾಲೂಕಿನ ವಿವಿಧೆಡೆ ಪ್ರತಿಭಟನೆ । ಆಡಳಿತ ವೈಫಲ್ಯ, ಬೆಲೆ ಏರಿಕೆ, ಬಜೆಟ್‌ನಲ್ಲಿ ಜಿಲ್ಲೆಯ ಅವಗಣನೆ

ಅಭಿವೃದ್ಧಿ ಮರೆತ ರಾಜ್ಯ ಕಾಂಗ್ರೆಸ್ ಸರಕಾರ: ಉಡುಪಿ ಜಿಲ್ಲಾ ಬಿಜೆಪಿ ತೀವ್ರ ಆಕ್ರೋಶ

ಉಡುಪಿ: ರಾಜ್ಯದ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಯನ್ನು ಮರೆತು ಆಡಳಿತ ನಡೆಸುತ್ತಿದ್ದು, ಇಡೀ ರಾಜ್ಯಕ್ಕೆ ಚೊಂಬು ನೀಡಿದೆ ಎಂದು ಶಾಸಕ ವಿ. ಸುನೀಲ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ಬಜೆಟ್‌ನಲ್ಲಿ ಉಡುಪಿ ಜಿಲ್ಲೆಯ ಅಭಿವೃದ್ಧಿಯನ್ನು ಸಂಪೂರ್ಣ ಕಡೆಗಣಿಸಿರುವುದನ್ನು ಖಂಡಿಸಿ ಉಡುಪಿ ನಗರ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಅಭಿವೃದ್ಧಿ ಹೆಸರಲ್ಲಿ ಕಾಲಹರಣ

ಸಿದ್ದರಾಮಯ್ಯ ಅವರ ಬಜೆಟ್‌ನಲ್ಲಿ ಅಭಿವೃದ್ಧಿ ಕುರಿತ ಯಾವುದೇ ಗಂಧ ಗಾಳಿಯಿಲ್ಲ ಎಂದು ಟೀಕಿಸಿದ ಅವರು, ಸುಮಾರು 1,32,000 ಕೋಟಿ ರೂಪಾಯಿ ಸಾಲ ಮಾಡಿ, ಕೇವಲ ಗ್ಯಾರಂಟಿಯೇ ಅಭಿವೃದ್ಧಿ ಎಂಬ ಭ್ರಮೆಯಲ್ಲಿ ಸರ್ಕಾರ ಕಾಲಹರಣ ಮಾಡುತ್ತಿದೆ ಎಂದು ದೂರಿದರು. ನಾವು ಐವರು ಶಾಸಕರು ಜಿಲ್ಲೆಯ ಸಮಸ್ಯೆಗಳ ಬಗ್ಗೆ ಸರ್ಕಾರವನ್ನು ಎಚ್ಚರಿಸಿದ್ದರೂ, ಯಾವುದೇ ಯೋಜನೆಗಳಿಗೆ ಸರ್ಕಾರ ಅನುದಾನ ನೀಡುತ್ತಿಲ್ಲ ಎಂದು ಅವರು ಕಿಡಿಕಾರಿದರು.

ಕರಾವಳಿಯ ಸಮಸ್ಯೆಗಳ ಕಡೆಗಣನೆ

ಜಿಲ್ಲೆಯಲ್ಲಿ ಮರಳಿನ ಸಮಸ್ಯೆ ಭೀಕರವಾಗಿದ್ದು, ಬಿಜೆಪಿ ಸರ್ಕಾರದಲ್ಲಿ 8 ರಿಂದ 12 ಸಾವಿರ ರೂಪಾಯಿಗೆ ಸಿಗುತ್ತಿದ್ದ ಮರಳು ಈಗ ದುಬಾರಿಯಾಗಿದೆ. ಅಂದು 25 ರೂಪಾಯಿಗೆ ಸಿಗುತ್ತಿದ್ದ ಕೆಂಪು ಕಲ್ಲು ಇಂದು 45 ರಿಂದ 50 ರೂಪಾಯಿಗೆ ಏರಿಕೆಯಾಗಿದೆ ಎಂದು ಅವರು ಅಂಕಿ–ಅಂಶಗಳ ಸಮೇತ ವಿವರಿಸಿದರು. ಕಳೆದ ಮೂರು ವರ್ಷಗಳಲ್ಲಿ ಈ ಸರ್ಕಾರ ಒಂದೇ ಒಂದು ಮನೆ ನೀಡಿಲ್ಲ. ಅಷ್ಟೇ ಅಲ್ಲದೆ, ಶಾಲೆಗಳಿಗೆ ಶೌಚಾಲಯ ಕಟ್ಟಲೂ ಹಣ ನೀಡದ ಕೆಟ್ಟ ಸರ್ಕಾರ ಇದಾಗಿದೆ ಎಂದರು.

ಪರ್ಯಾಯಕ್ಕೆ ಹಣ ನೀಡಿಲ್ಲ

ಉಡುಪಿಯ ಪರ್ಯಾಯ ಮಹೋತ್ಸವಕ್ಕೆ ಈ ಹಿಂದೆ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ 25 ಕೋಟಿ ರೂಪಾಯಿ ನೀಡಿದ್ದರು. ಆದರೆ ಈ ಸರ್ಕಾರ ಪರ್ಯಾಯಕ್ಕೆ ಒಂದು ರೂಪಾಯಿಯನ್ನೂ ನೀಡಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕಾಪು ಮಾರಿಗುಡಿಯ ಜೀರ್ಣೋದ್ಧಾರಕ್ಕೆ 70 ಕೋಟಿ ರೂಪಾಯಿ ಅನುದಾನ ನೀಡಿದ್ದೆವು, ಆದರೆ ಈ ಸರ್ಕಾರದಿಂದ ನಯಾಪೈಸೆ ಬಂದಿಲ್ಲ ಎಂದರು.

ಸಿದ್ದರಾಮಯ್ಯ - ಸಾಲರಾಮಯ್ಯ

ಶಾಸಕ ಯಶ್ ಪಾಲ್ ಸುವರ್ಣ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿ ಬಾರಿಯೂ ರಾಜ್ಯದ ಕರಾವಳಿಗೆ ಕರಾಳ ಬಜೆಟ್ ಮಂಡಿಸಿದ್ದಾರೆ. ಸಿದ್ದರಾಮಯ್ಯ ಇದೀಗ 'ಸಾಲರಾಮಯ್ಯ' ಆಗಿದ್ದಾರೆ. ಜನಿಸುವ ಪ್ರತಿ ಮಗುವಿನ ತಲೆಯ ಮೇಲೆ 1.50 ಲಕ್ಷ ರೂ. ಸಾಲದ ಹೊರೆ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಮಾತನಾಡಿದರು.



ಪ್ರತಿಭಟನೆಯಲ್ಲಿ ನಗರ ಅಧ್ಯಕ್ಷ ದಿನೇಶ್ ಅಮೀನ್, ಮಂಗಳೂರು ವಿಭಾಗ ನಿಕಟಪೂರ್ವ ಪ್ರಭಾರಿ ಕೆ.ಉದಯಕುಮಾರ್ ಶೆಟ್ಟಿ, ಪ್ರಮುಖ ಮುಖಂಡರಾದ ದಿನಕರ್ ಬಾಬು, ಶಿಲ್ಪಾ ಜಿ.ಸುವರ್ಣ, ಮಟ್ಟಾರು ರತ್ನಾಕರ್ ಹೆಗ್ಡೆ, ರೇಶ್ಮಾ ಉದಯ್ ಶೆಟ್ಟಿ, ಶ್ರೀಕಾಂತ್ ನಾಯಕ್, ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ಪ್ರಭಾಕರ್ ಪೂಜಾರಿ, ರಜನಿ ಹೆಬ್ಬಾರ್, ವಿಜಯ್ ಕೊಡವೂರು, ಸುಪ್ರಸಾದ್ ಶೆಟ್ಟಿ ಬೈಕಾಡಿ, ಶಿವಕುಮಾರ್ ಅಂಬಲಪಾಡಿ, ನಗರಸಭಾ ಮಾಜಿ ಸದಸ್ಯ ಗಿರೀಶ್ ಅಂಚನ್ ಮತ್ತಿತರರಿದ್ದರು.

ಮೆರವಣಿಗೆ

ಪ್ರತಿಭಟನಾ ಸಭೆಗೂ ಮೊದಲು ಜೋಡುಕಟ್ಟೆಯಿಂದ ಉಡುಪಿ ಸಿಟಿ ಬಸ್ ನಿಲ್ದಾಣದವರೆಗೆ ಉಡುಪಿ ನಗರ ಬಿಜೆಪಿ ಹಾಗೂ ಜಿಲ್ಲಾ ಬಿಜೆಪಿಯ ನೂರಾರು ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಜೆಟ್‌ನಲ್ಲಿ ಉಡುಪಿ ಜಿಲ್ಲೆ ಕಡೆಗಣಿಸಿದ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕಾರ್ಕಳ ತಾಲೂಕಿನ ವಿವಿಧೆಡೆ ಬಿಜೆಪಿ ಪ್ರತಿಭಟನೆ

ಕಾರ್ಕಳ: ರಾಜ್ಯದ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ, ಬೆಲೆ ಏರಿಕೆ ಹಾಗೂ ಅಭಿವೃದ್ಧಿ ವಿರೋಧಿ ಧೋರಣೆಗಳನ್ನು ಖಂಡಿಸಿ ಕಾರ್ಕಳ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿ ವತಿಯಿಂದ ಜನ ವಿರೋಧಿ ಕಾಂಗ್ರೆಸ್ ರಾಜ್ಯ ಸರ್ಕಾರದ ವಿರುದ್ಧ ಶನಿವಾರ ಕಾರ್ಕಳ ಪುರಸಭೆ ಬಳಿ ಸೇರಿದಂತೆ ತಾಲೂಕಿನ ಗ್ರಾಮ ಮಟ್ಟದ 35 ಕಡೆಗಳಲ್ಲಿ ಬಿಜೆಪಿ ವತಿಯಿಂದ ಬೃಹತ್ ಜನಾಗ್ರಹ ಸಭೆ ನಡೆಯಿತು.

ಬಜಗೋಳಿಯಲ್ಲಿ ಮುಡಾರು ಗ್ರಾಮ ಸಮಿತಿ ವತಿಯಿಂದ ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಶಾಸಕ ವಿ. ಸುನಿಲ್ ಕುಮಾರ್, ರಾಜ್ಯ ಸರ್ಕಾರದ ಆಡಳಿತ ವೈಖರಿಯನ್ನು ತೀವ್ರವಾಗಿ ಟೀಕಿಸಿದರು. ಮೂರು ವರ್ಷಗಳಲ್ಲಿ ನಾಲ್ಕು ಬಜೆಟ್ ಮಂಡಿಸಿದರೂ ಕರಾವಳಿ ಭಾಗಕ್ಕೆ ನಯಾಪೈಸೆಯೂ ಅನುದಾನ ನೀಡಿಲ್ಲ. ಬಿಜೆಪಿ ಆಡಳಿತಾವಧಿಯಲ್ಲಿ ಕಾರ್ಕಳದಲ್ಲಿ ನಡೆದ ಅಭಿವೃದ್ಧಿ ಪರ್ವಕ್ಕೆ ಈಗಿನ ಸರ್ಕಾರ ಬ್ರೇಕ್ ಹಾಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೊಸ ಬಿಪಿಎಲ್ ಕಾರ್ಡ್‌ಗಳಿಗೆ ಅವಕಾಶ ನೀಡದಿರುವುದು, ಅಸ್ತಿತ್ವದಲ್ಲಿರುವ ಕಾರ್ಡ್‌ಗಳ ರದ್ದತಿ ಸೇರಿದಂತೆ ವಿಧವಾ ವೇತನ, ಸಂಧ್ಯಾ ಸುರಕ್ಷಾ ಪಿಂಚಣಿಗಳನ್ನು ಸ್ಥಗಿತಗೊಳಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು. ನಿರಂತರವಾಗಿ ಏರಿಕೆಯಾಗುತ್ತಿರುವ ವಿದ್ಯುತ್ ದರ ಹಾಗೂ ಅಘೋಷಿತ ಲೋಡ್ ಶೆಡ್ಡಿಂಗ್‌ನಿಂದ ಸಾರ್ವಜನಿಕರು ಮತ್ತು ಉದ್ದಿಮೆದಾರರು ಹೈರಾಣಾಗಿದ್ದಾರೆ. ರಾಜ್ಯ ಬಜೆಟ್‌ನಲ್ಲಿ ಕರಾವಳಿ ಭಾಗದ ಪ್ರವಾಸೋದ್ಯಮ ಮತ್ತು ಅಭಿವೃದ್ಧಿ



ಯೋಜನೆಗಳಿಗೆ ಯಾವುದೇ ಅನುದಾನ ನೀಡದೆ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಕಳೆದ 2 ವರ್ಷ 9 ತಿಂಗಳ ಅವಧಿಯಲ್ಲಿ ಸರ್ಕಾರದಿಂದ ಯಾವುದೇ ವಿಶೇಷ ಅನುದಾನ ಬಿಡುಗಡೆಯಾಗಿಲ್ಲ ಎಂದು ವಾಗ್ದಾಳಿ ನಡೆಸಿದರು.

ನಂದಳಿಕೆ ಗ್ರಾಮ ಪಂಚಾಯತ್ ಹಾಗೂ ಬೋಳ ಗ್ರಾಮ ಪಂಚಾಯತ್ ಜಂಟಿಯಾಗಿ ಕೆದಿಂಜೆಯಲ್ಲಿ ನಡೆಸಿದ ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಭಟನಾ ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಕುತ್ತಾರು ನವೀನ್ ಶೆಟ್ಟಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಬಂದ ಬಳಿಕ ಸರ್ಕಾರದ ಆಡಳಿತ ವೈಫಲ್ಯಗಳಿಂದ ಜನಸಾಮಾನ್ಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಮಹಾವೀರ ಹೆಗ್ಡೆ ಮಾತನಾಡಿ, ಕಾಂಗ್ರೆಸ್ ನಾಯಕ ಉದಯ ಶೆಟ್ಟಿ ಅಭಿವೃದ್ಧಿ ಕಾರ್ಯಗಳ ಕ್ರೆಡಿಟ್ ಪಡೆಯಲು ನಾಟಕವಾಡುತ್ತಿದ್ದಾರೆ, ಅಲ್ಲದೇ ಕಾರ್ಕಳದ ಪ್ರವಾಸೋದ್ಯಮಕ್ಕೆ ಅಡ್ಡಗಾಲು ಹಾಕಿದ್ದಾರೆ ಎಂದು ಆರೋಪಿಸಿದರು. ಕಾರ್ಕಳ ಬಿಜೆಪಿ ಕ್ಷೇತ್ರಾಧ್ಯಕ್ಷ ನವೀನ್ ನಾಯಕ್ ನಿಟ್ಟೆ ಮಾತನಾಡಿ, ಗ್ರಾಮ ಪಂಚಾಯತ್ ಮಟ್ಟದಿಂದ ಹಿಡಿದು ವಿಧಾನಸೌಧದವರೆಗೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಎಸ್‌ಸಿಪಿ–ಟಿಎಸ್‌ಪಿ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ದಲಿತ ಸಮುದಾಯಕ್ಕೆ ಅನ್ಯಾಯ ಎಸಗಲಾಗುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಆಡಳಿತ ಯಂತ್ರ ಸಂಪೂರ್ಣವಾಗಿ ಹಳಿತಪ್ಪಿದೆ ಎಂದರು.

ಬಿಜೆಪಿ ವಕ್ತಾರ ರವೀಂದ್ರ ಮೊಯ್ಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ಬೋಳ, ಯುವಮೋರ್ಚಾ ಅಧ್ಯಕ್ಷ ರಾಕೇಶ್ ಶೆಟ್ಟಿ, ಯುವಮೋರ್ಚಾ ರಾಜ್ಯ ಕಾರ್ಯದರ್ಶಿ ವಿಖ್ಯಾತ್ ಶೆಟ್ಟಿ, ಬಿಜೆಪಿಯ ಪ್ರಮುಖರಾದ ಸೂರ್ಯಕಾಂತ್ ಶೆಟ್ಟಿ, ಜಯರಾಮ್ ಸಾಲ್ಯಾನ್, ಸುಮಿತ್ ಶೆಟ್ಟಿ ಬೈಲೂರು, ಪ್ರಕಾಶ್ ರಾವ್, ಸುಮಾ ಕೇಶವ್, ಯೋಗೀಶ್ ನಾಯಕ್, ನಕ್ರೆ ಅಂಥೋನಿ ಡಿಸೋಜಾ, ಸೇರಿದಂತೆ ತಾಲೂಕಿನ ಜನಪ್ರತಿನಿಧಿಗಳು, ಗ್ರಾ.ಪಂ ಸದಸ್ಯರು, ಕಾರ್ಯಕರ್ತರು ಭಾಗವಹಿಸಿದ್ದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ 23ನೇ ವರ್ಷದ ಇಫ್ತಾರ್ ಕೂಟ

ಇಫ್ತಾರ್ ಸೌಹಾರ್ದತೆ ಮತ್ತು ಮಾನವೀಯತೆ ಬೆಳೆಸುವ ವೇದಿಕೆಯಾಗಿದೆ: ಅನೀಸ್ ಕೌಸರ್

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ವಿದ್ಯಾಗಿರಿ ಕೃಷಿಸಿರಿ ಆವರಣದಲ್ಲಿ 23ನೇ ವರ್ಷದ ಇಫ್ತಾರ್ ಕೂಟವನ್ನು ಆಯೋಜಿಸಿದ್ದು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಿಬ್ಬಂದಿ ಸೇರಿದಂತೆ ಸುಮಾರು 6,000ಕ್ಕೂ ಅಧಿಕ ಮಂದಿ ಭಾಗವಹಿಸಿ ಸೌಹಾರ್ದತೆ ಮತ್ತು ಸಹೋದರತ್ವದ ಸಂದೇಶವನ್ನು ಸಾರಿದರು.

ರಮ್ಜಾನ್ ಸಂದೇಶ ನೀಡಿದ ರಾಜ್ಯ ವಕ್ಫ್ ಕೌನ್ಸಿಲ್ ಸದಸ್ಯ ಅನೀಸ್ ಕೌಸರ್, ಇಂದಿನ ಸಮಾಜದಲ್ಲಿ ಹೆಚ್ಚುತ್ತಿರುವ ಭಿನ್ನಾಭಿಪ್ರಾಯಗಳ ನಡುವೆ ಇಫ್ತಾರ್ ನಂತಹ ಕಾರ್ಯಕ್ರಮಗಳು ಅತ್ಯಂತ ಅಗತ್ಯವಾಗಿವೆ. ಇವು ವಿವಿಧ ಧರ್ಮಗಳ ನಡುವೆ ಪರಸ್ಪರ ಗೌರವ ಮತ್ತು ಸಾಮರಸ್ಯವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ರಮಝಾನ್ ತಿಂಗಳಲ್ಲಿ ಆಚರಿಸಲಾಗುವ ಉಪವಾಸವು ದೇಹವನ್ನು ಮಾತ್ರವಲ್ಲದೆ ಹೃದಯವನ್ನೂ ಶುದ್ಧಗೊಳಿಸಿ ಮಾನವೀಯತೆ, ಕರುಣೆ ಮತ್ತು ದಯೆಯ ಗುಣಗಳನ್ನು ಬೆಳೆಸುತ್ತದೆ. ಹೃದಯ ಶುದ್ಧವಾಗಿದ್ದು, ಧರ್ಮದ ಮಾರ್ಗದಲ್ಲಿ ನಡೆದಾಗಲೇ ವ್ಯಕ್ತಿ ನಿಜವಾದ ಮಹಾನ್ ವ್ಯಕ್ತಿಯಾಗುತ್ತಾನೆ ಎಂದು ಶ್ರೀಕೃಷ್ಣ ಪರಮಾತ್ಮ ಅರ್ಜುನನಿಗೆ ನೀಡಿದ ಸಂದೇಶವನ್ನು ಉಲ್ಲೇಖಿಸಿದರು. ಭಾರತದ ನಾಗರಿಕತೆ ಸಹಿಷ್ಣುತೆ ಮತ್ತು ವೈವಿಧ್ಯತೆಯ ಮೇಲೆ ನಿರ್ಮಿತವಾಗಿದೆ.



ವೇದಗಳಲ್ಲಿಯೂ ಸಹ ಸಾಮರಸ್ಯ ಮತ್ತು ಸಹಬಾಳ್ವೆಯ ಸಂದೇಶ ಸ್ಪಷ್ಟವಾಗಿ ಕಾಣುತ್ತದೆ. ಆದ್ದರಿಂದ ಇಂದಿನ ಸಮಾಜದಲ್ಲಿ ಸಹೋದರತ್ವ, ಕರುಣೆ ಮತ್ತು ಪರಸ್ಪರ ಗೌರವವನ್ನು ಬೆಳೆಸುವ ಅಗತ್ಯವಿದೆ ಎಂದು ತಿಳಿಸಿದರು. ಎಲ್ಲಾ ಧರ್ಮಗಳೂ ಮೂಲತಃ ಕರುಣೆ, ದಯೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಸಾರುತ್ತವೆ. ಮಾನವನು ಮಾನವಕುಲವನ್ನು ಗೌರವಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ದಕ್ಷಿಣ ಕನ್ನಡ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಇಬ್ರಾಹಿಂ ನವಾಜ್, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಎಂ.ಎ. ಗಫೂರ್, ಟ್ರಸ್ಟಿಗಳಾದ ವಿವೇಕ್ ಆಳ್ವ ಹಾಗೂ ಡಾ. ವಿನಯ ಆಳ್ವ, ಬಿಲ್ಡರ್ ಮುಸ್ತಫಾ, ಎಂಎಸ್ ಸೈಫುದ್ದೀನ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ನಮಾಜ್ ಪ್ರಾರ್ಥನೆಗಾಗಿ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಸಮೂಹ ಭೋಜನದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.



ದಿವಂಗತ ಎಂ. ಸತೀಶ್ ಪ್ರಭು ಅವರಿಗೆ ಗೌರವಪೂರ್ಣ ನಮನ ಶ್ರದ್ಧಾಂಜಲಿ ಸಭೆ ನಗರದ ಸಂಘನಿಕೇತನದಲ್ಲಿ ಶ್ರೀ ವೆಂಕಟರಮಣ ದೇವಸ್ಥಾನ , ರಾಷ್ಟ್ರೀಯ ಸ್ವಯಂಸೇವಕ ಸಂಘ , ಕೇಶವ ಸ್ಮೃತಿ ಸಂವರ್ಧನ ಸಮಿತಿ, ಮಂಗಳೂರು ಶ್ರೀ ಶಾರದಾ ಮಹೋತ್ಸವ ಸಮಿತಿ ಹಾಗೂ ಭಾರತೀಯ ಜನತಾ ಪಕ್ಷದ ವತಿಯಿಂದ ಶನಿವಾರ ಜರಗಿತು .

ಪುತ್ತೂರು ಮಾರುಕಟ್ಟೆ ಧಾರಣೆ

14-03-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 460	ಹಳೆ ಕರಿಗೋಟು	230 - 260
ಚೋಲ್ ಅಡಿಕೆ	505 - 530	ಹಸಿ ಕೊಕ್ಕೋ	75 - 105
ಡಬಲ್ ಚೋಲ್	505 - 530	ಒಣ ಕೊಕ್ಕೋ	280 - 310
ಹೊಸ ಪಟೋರ	340 - 390	**ಕಾಳುಮೆಣಸು ಧಾರಣೆ**	
ಹಳೆ ಪಟೋರ	380 - 410	ಕಾಳುಮೆಣಸು	465 - 665
ಹೊಸ ಉಳ್ಳಿ	115 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	105 - 290	ಆರ್‌ಎಸ್‌ಎಸ್ 1	211.50
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	197.00
ಹಳೆ ಕೋಕಾ	330 - 350	ಸ್ಕ್ರಾಪ್ 1	130.00
ಹೊಸ ಕರಿಗೋಟು	230 - 260	ಸ್ಕ್ರಾಪ್ 2	120.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-746) ಡ್ರಾ ಮಾರ್ಚ್ 14ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KG 569383 (ERNAKULAM)

Consolation Prize Rs.5,000/-
KA 569383 KB 569383 KC 569383 KD 569383
KE 569383 KF 569383 KH 569383 KJ 569383
KK 569383 KL 569383 KM 569383

2nd Prize Rs.25,00,000/- [25 Lakhs]
KD 296989 (IRINJALAKKUDA)

3rd Prize Rs.10,00,000/- [10 Lakhs]
KJ 886398 (VADAKARA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0179 1495 2123 3170 3227 3388 3553 4160 4779 5264
5906 6371 7946 8229 8484 8777 9009 9383 9553

5th Prize Rs.2,000/-
3730 4074 7211 8428 8876 9344

6th Prize Rs.1,000/-
0351 0610 0642 1359 1509 1773 2129 2229 3129 3283
3370 3403 3583 3981 4251 5043 5105 5287 7257 8013
8060 8716 8829 8865 9119

7th Prize Rs.500/-
0003 0108 0225 0401 0490 0529 0749 0797 0799 0909
1123 1224 1379 1383 2045 2310 2337 2492 2566 2598
2695 2700 2730 2840 3191 3307 3785 3805 3870 3911
4087 4162 4198 4248 4313 4345 4370 4391 4439 4453
4592 4874 5171 5533 5623 5755 5819 6013 6167 6195
6232 6254 6653 6654 6655 6737 6905 7509 7526 7638
7701 7707 7735 8120 8188 8344 8376 8407 8419 8900
8935 9117 9144 9236 9364 9521

8th Prize Rs.200/-
0146 0199 0211 0312 0324 0331 0453 0478 0504 0551
1030 1147 1185 1529 1697 1881 1909 2128 2248 2459
2470 2591 2670 2967 3093 3165 3246 3319 3443 3472
3539 3687 3897 3945 3958 3968 4017 4156 4214 4375
4769 4809 4914 5052 5349 5355 5386 5419 5480 5508
5584 5612 5992 6134 6147 6190 6522 6576 6649 6718
6772 6859 6907 7018 7028 7055 7259 7298 7341 7360
7530 7540 7624 7689 8068 8100 8180 8260 8654 8687
8859 8883 8902 8926 9061 9274 9496 9638 9652 9684
9694 9842

9th Prize Rs.100/-
0095 0176 0200 0217 0256 0266 0285 0372 0385 0587
0647 0650 0657 0837 0886 1090 1129 1204 1342 1375
1386 1399 1403 1452 1468 1541 1543 1594 1608 1616
1783 1856 1896 1907 2030 2062 2233 2280 2412 2432
2435 2512 2576 2694 2723 2800 2810 2977 2998 3025
3105 3160 3237 3245 3249 3266 3289 3290 3320 3325
3391 3396 3418 3442 3507 3713 3769 3818 3819 3821
3915 4093 4108 4120 4175 4193 4404 4545 4695 4731
4732 4740 4758 4817 4882 4920 4974 5020 5054 5153
5157 5258 5272 5292 5311 5374 5400 5556 5764 5775
5809 5811 5920 5975 6017 6144 6329 6363 6394 6421
6444 6494 6502 6580 6627 6635 6705 6981 7410 7456
7559 7745 7885 7944 7964 8101 8581 8582 8702 8703
8751 8870 9022 9166 9272 9495 9576 9599 9712 9822
9879 9936 9939 9986

ಪ್ರವಾಸೋದ್ಯಮ ಅಭಿವೃದ್ಧಿಗೆ ಸಸಿಹಿತ್ಲು ಕಡಲ ತೀರ ಪೂರಕ : ಸಚಿವ ಕೃಷ್ಣ ಬೈರೇಗೌಡ

ಮುಲ್ಕಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾಗಿದ್ದು ಸಸಿಹಿತ್ಲು ಕಡಲ ತೀರ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿದ್ದು ಅಭಿವೃದ್ಧಿಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಕರ್ನಾಟಕ ಸರ್ಕಾರದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು

ಹಳೆಯಂಗಡಿ ಗ್ರಾಮ ಪಂಚಾಯತ್‌ನ ಸಸಿಹಿತ್ಲು ಮುಂಡಾ ಬೀಚ್ ಪ್ರದೇಶಕ್ಕೆ ಭೇಟಿ ನೀಡಿ ಮಾಧ್ಯಮದೊಂದಿಗೆ ಮಾತನಾಡಿದರು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್. ವಿ. ಹಾಗೂ ಮುಲ್ಕಿ ತಹಶಿಲ್ದಾರ್ ಶ್ರೀಧರ್ ಮುಂದಲಮನಿ ಬೀಚ್ ಅಭಿವೃದ್ಧಿ ಬಗ್ಗೆ ಮಾಹಿತಿ ನೀಡಿದರು.

ಕೆಪಿಸಿಸಿ ಸದಸ್ಯರಾದ ವಸಂತ



ಬರ್ನಾಡ್, ಮುಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಕೋಟ್ಯಾನ್, ಮೆಸ್ಕಾಂ ಸಲಹಾ ಸಮಿತಿಯ ಕ್ಷೇತ್ರ ಸದಸ್ಯರಾದ ಧರ್ಮಾನಂದ ಶೆಟ್ಟಿ ಗಾರ್ ಪಂಚ ಗ್ಯಾರಂಟಿ ತಾಲೂಕು ಸದಸ್ಯರಾದ ಸುಭಾಷ್ ಚಂದ್ರ ಕೆಎಸ್ ರಾವ್ ನಗರ, ಹಳೆಯಂಗಡಿ ಸ ಪ್ರ ದರ್ಜೆ ಕಾಲೇಜಿನ ಸಮಿತಿ ಸದಸ್ಯರಾದ ಸಂತೋಷ್ ಕೋಟ್ಯಾನ್, ಸಸಿಹಿತ್ಲು ಸಾರಂತಾಯ ಗರೋಡಿಯ ಕಾರ್ಯದರ್ಶಿ ಪ್ರಮೋದ್ ಪೂಜಾರಿ ಮತ್ತು ಸದಸ್ಯರಾದ ಪ್ರಜ್ವಲ್ ಪೂಜಾರಿ ಉಪಸ್ಥಿತರಿದ್ದರು.

ಹಳೇ ಆರೋಪಿ ಸೆರೆ

ಬಂಟ್ವಾಳ: ಕಳೆದ 10 ವರ್ಷಗಳಿಂದ ಪ್ರಕರಣವೊಂದರಲ್ಲಿ ತಲೆ ಮರೆಸಿಕೊಂಡಿದ್ದ ಕೇರಳ ಮೂಲದ ಆರೋಪಿಯನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ ಕೇರಳ ರಾಜ್ಯದ ಎರ್ನಾಕುಳಂ ಜಿಲ್ಲೆಯ ಕುಟ್ಟಿಂಚಾಲ್, ತರಂಪಲ್ಲಿ ನಿವಾಸಿ ಪ್ರಿನ್ಸ್ ಟಿ. ಜೆ. ಜೋಶ್ (43) ಬಂಧಿತ ಆರೋಪಿಯಾಗಿದ್ದಾನೆ.

ನಾಳೆಯಿಂದ ಮಂಗಳೂರಿನಲ್ಲಿ ಮಹಿಳಾ ಕ್ರಿಕೆಟ್ ಪಂದ್ಯಾಟ

25 ಓವರ್‌ಗಳ ಪಂದ್ಯ: ಒಟ್ಟು 5 ತಂಡಗಳು

ಮಂಗಳೂರು: ದಕ್ಷಿಣ ಕನ್ನಡ ಕ್ರಿಕೆಟ್ ಅಸೋಸಿಯೇಶನ್ (ಡಿಕೆಸಿಎ) ಹಾಗೂ ನಾರ್ದನ್‌ಸ್ಕೈ ಪ್ರಾಪರ್ಟೀಸ್ ಸಹಯೋಗದಲ್ಲಿ ಇದೇ ಮೊದಲ ಬಾರಿಗೆ ಮಂಗಳೂರಿನಲ್ಲಿ ಮಹಿಳಾ ವಿಭಾಗದಲ್ಲಿ ಲೆದರ್ ಬಾಲ್ ಕ್ರಿಕೆಟ್ ಟೂರ್ನಮೆಂಟ್ ಮಾ.16ರಿಂದ 21ರವರೆಗೆ ನಗರದ ಕೇಂದ್ರ ಮೈದಾನದಲ್ಲಿ ಆಯೋಜಿಸಲಾಗಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಡಿಕೆಸಿಎ ಉಪಾಧ್ಯಕ್ಷ ಮಹಾಬಲ ಮಾರ್ಲ ಅವರು ಮಹಿಳಾ ಕ್ರಿಕೆಟ್ ಅಭಿವೃದ್ಧಿಗೆ ಉತ್ತೇಜನ ನೀಡುವುದು ಮತ್ತು ಯುವ ಹಾಗೂ ಪ್ರತಿಭಾವಂತ ಆಟಗಾರ್ತಿಯರಿಗೆ ತಮ್ಮ ಕೌಶಲ್ಯ ಪ್ರದರ್ಶಿಸಲು ವೇದಿಕೆ ಕಲ್ಪಿಸುವುದು ಈ ಟೂರ್ನಮೆಂಟ್‌ನ ಮುಖ್ಯ ಉದ್ದೇಶವಾಗಿದೆ ಎಂದರು.

ಮಂಗಳೂರು, ಉಡುಪಿ, ಕೊಡಗು ಜಿಲ್ಲೆಯನ್ನೊಳಗೊಂಡು ಈ ಪಂದ್ಯಾಟ ನಡೆಯಲಿದ್ದು, ಒಟ್ಟು 5 ತಂಡಗಳು ಭಾಗವಹಿಸಲಿವೆ. ಮಂಗಳೂರಿನಿಂದ 2, ಉಡುಪಿ, ಮಣಿಪಾಲ ಮತ್ತು ಬ್ರಹ್ಮಾವರದಿಂದ ತಲಾ ಒಂದು ತಂಡಗಳು ಭಾಗವಹಿಸಲಿವೆ. ಮೊದಲ ಹಂತದಲ್ಲಿ ಲೀಗ್ ಪದ್ಧತಿಯಲ್ಲಿ ಪ್ರತಿ ಪಂದ್ಯವು 25 ಓವರ್‌ಗಳಾಗಿ ನಡೆಯಲಿದೆ. ಅಂತಿಮ ಪಂದ್ಯಕ್ಕೆ 30 ಓವರ್ ನಿಗದಿಗೊಳಿಸಲಾಗಿದೆ. ಫೈನಲ್‌ಗೆ ಮುನ್ನ 10 ಲೀಗ್ ಪಂದ್ಯಗಳು ನಡೆಯಲಿವೆ. ಮಾ.16ರಂದು ಬೆಳಗ್ಗೆ 8.30ಕ್ಕೆ ಉದ್ಘಾಟನಾ ಪಂದ್ಯ ಆರಂಭವಾಗಲಿದೆ ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿಕೆಸಿಎ ಉಪಾಧ್ಯಕ್ಷ ಡಾ.ಶ್ರೀಕಾಂತ್ ರೈ, ಸಂಘಟಕ ಶೇಖರ್ ಶೆಟ್ಟಿ, ಸಂಚಾಲಕ ಲಕ್ಷ್ಮೀದಾಸ್, ಪ್ರಮುಖರಾದ ಸಾಜು ನೆಲ್ಯಾರ್, ಚೇತನ್, ಪ್ರವಿತಾ, ಜೋಯೆಲ್ ಮತ್ತಿತರರು ಉಪಸ್ಥಿತರಿದ್ದರು.

ತೃತೀಯ ಲಿಂಗಿಯೊಬ್ಬರ ವಿರುದ್ಧ ಕಳ್ಳತನ ಆರೋಪ

ವಿಚಾರಣೆ ರದ್ದಿಗೆ ಹೈಕೋರ್ಟ್ ನಿರಾಕರಣೆ

ಬೆಂಗಳೂರು: ಸರಗಳ್ಳತನ ಆರೋಪದ ಸಂಬಂಧ ತೃತೀಯ ಲಿಂಗಿಯೊಬ್ಬರ ವಿರುದ್ಧ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೂರು ದರೋಡೆ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣಾಧೀನ ನ್ಯಾಯಾಲಯದ ವಿಚಾರಣೆ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಅರ್ಜಿದಾರರ ವಿರುದ್ಧದ ಪ್ರಕರಣಗಳನ್ನು ರದ್ದುಪಡಿಸಿದರೆ, ಸರಗಳ್ಳತನ ಆರೋಪದ ಪ್ರಕರಣಗಳಿಗೆ ಅನುಮತಿ ನೀಡಿದಂತಾಗುತ್ತದೆ ಎಂದು ಮೌಖಿಕವಾಗಿ ಹೇಳಿದೆ. ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದರೋಡೆ ಆರೋಪಕ್ಕೆ ಸಂಬಂಧಿಸಿದಂತೆ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಸಿಜೆಎಂ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆ ರದ್ದುಪಡಿಸುವಂತೆ ಕೋರಿ ಬೆಂಗಳೂರಿನ ವಿವೇಕ್ ನಗರದ ನಿವಾಸಿಯಾದ ತೃತೀಯ ಲಿಂಗಿ ಅಭಿಷೇಕ್ ಅಲಿಯಾಸ್ ಗೊಂಬಿ ಅಲಿಯಾಸ್ ಅನಾಮಿಕ ಸಲ್ಲಿಸಿದ್ದ ಮೂರು ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ವಜಾಗೊಳಿಸಿದೆ.

ಅರ್ಜಿದಾರರ ಪರ ವಕೀಲ ಧನಂಜಯ್ ಕುಮಾರ್ ಅವರು ಅರ್ಜಿದಾರರು ಮೂರು ಸರಗಳನ್ನು ಮೂರು ಪ್ರದೇಶಗಳಲ್ಲಿ ಕಳವು ಮಾಡಿದ್ದಾರೆ ಎಂಬ ಆರೋಪದ ಮೇಲೆ ಮೂವರು ದೂರುದಾರರು ಪ್ರತ್ಯೇಕವಾಗಿ ದೂರು ದಾಖಲಿಸಿದ್ದಾರೆ.



ದೂರು ದಾಖಲಿಸುವಲ್ಲಿ ಮೂರರಿಂದ ಎಂಟು ತಿಂಗಳ ಕಾಲ ವಿಳಂಬವಾಗಿದೆ. ಟಿವಿಯಲ್ಲಿ ಬಂದ ಸುದ್ದಿ ನೋಡಿದ ನಂತರ ದೂರು ದಾಖಲಿಸಿದ್ದಾರೆ ಎಂದರು.

ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ಮೊದಲ ಪ್ರಕರಣದಲ್ಲಿ ಅರ್ಜಿದಾರರನ್ನು ಬಂಧಿಸಲಾಗಿತ್ತು. ಆತನ ಸ್ವಹೇಳಿಕೆ ದಾಖಲಿಸಿಕೊಳ್ಳಲಾಯಿತು. ಆದರಲ್ಲಿ ಇತರೆ ಎರಡು ಸರಗಳ್ಳನ ಪ್ರಕರಣಗಳ ಬಗ್ಗೆ ಅರ್ಜಿದಾರನೇ ಹೇಳಿಕೆ ನೀಡಿದ್ದ. ತನಿಖೆ ವೇಳೆ ಕಳವು ಮಾಡಿದ್ದ ಸರಗಳನ್ನು ಜಪ್ತಿ ಮಾಡಲಾಗಿದೆ.

ಈ ಮಧ್ಯೆ ಇತರೆ ಇಬ್ಬರು ದೂರುದಾರರು ದೂರು ದಾಖಲಿಸಿದ್ದಾರೆ. ಅರ್ಜಿದಾರರ ವಿರುದ್ಧ ವಿಚಾರಣಾಧೀನ ನ್ಯಾಯಾಲಯ ದೋಷಾರೋಪ ಹೊರಿಸಿದೆ. ಈ ಹಂತದಲ್ಲಿ ಪ್ರಕರಣ ರದ್ದುಪಡಿಸಬಾರದು ಎಂದು ಕೋರಿದರು. ವಾದ-ಪ್ರತಿವಾದ ಆಲಿಸಿದ ಪೀಠವು ಅರ್ಜಿದಾರರು ವಿಚಾರಣಾ ನ್ಯಾಯಾಲಯ ವಿಚಾರಣೆ ಎದುರಿಸಲಿ ಎಂದು ತಿಳಿಸಿ ಅರ್ಜಿಗಳನ್ನು ವಜಾಗೊಳಿಸಿತು.

ಸಂಪದ ಮಹಿಳಾ ಸಿಎಗಳ ಸಮ್ಮೇಳನ


ಬೆಂಗಳೂರು: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯಿಂದ ಎಫ್‌ಕೆಸಿಸಿಐಯ ಸರ್ ಎಂ.ವಿ. ಆಡಿಟೋರಿಯಂನಲ್ಲಿ ಶನಿವಾರ ಸಂಪದ ಮಹಿಳಾ ಸಿಎಗಳ ಸಮ್ಮೇಳನ ಆಯೋಜಿಸಲಾಗಿತ್ತು.

ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿ ಬೆಂಗಳೂರು ಶಾಖೆಯ ನೂತನ ಅಧ್ಯಕ್ಷೆ ಸಿಎ ಕವಿತಾ ಪರಮೇಶ್, ಕಾರ್ಯದರ್ಶಿ ಶ್ರೀಪಾದ್ ಹುಳಿಗೋಳ್ ನಾರಾಯಣ್ ಮುಂತಾದವರು ಉಪಸ್ಥಿತರಿದ್ದರು.

ಭವಾನಿ ಜೋಯಿಸ್ ನೇತೃತ್ವದಲ್ಲಿ ಬ್ಯಾಲೆನ್ಸಿಂಗ್ ಬುಕ್ಸ್ ಹಾಗೂ ಬ್ರೇಕಿಂಗ್ ಬ್ಯಾರಿಯರ್ ಎಂಬ ವಿಷಯದಲ್ಲಿ ಚರ್ಚೆ ನಡೆಯಿತು, ದೀಪಾ ಕೃಷ್ಣಮೂರ್ತಿ ಇನ್ನರ್ ಬ್ಯಾಲೆನ್ಸ್, ಔಟರ್ ಬ್ರಿಲಿಯನ್ಸ್ ಕುರಿತು ಮಾತನಾಡಿದರು, ಟ್ಯಾಲಿ ಸಂಸ್ಥೆಯ ಬ್ರಾಂಡ್ ಸಲಹೆಗಾರ್ತಿ ಸಿಎಂಒ ಜಯತಿ ಸಿಂಗ್ ಅವರು ಉದ್ಯೋಗಕ್ಕಾಗಿ ನಿಮ್ಮನ್ನು ನೀವು ಬ್ರ್ಯಾಂಡ್ ಮಾಡುವುದು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.




ಪ್ರಶಸ್ತಿ ಪ್ರದಾನ



ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಕನ್ನಡ ಜನಶಕ್ತಿ ಕೇಂದ್ರ, ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ವೈ.ಎಸ್.ವಿ.ದತ್ತ ಅವರಿಗೆ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಾಜಿ ಸಚಿವರಾದ ಎಚ್. ವಿಶ್ವನಾಥ್, ಮೋಟಮ್ಮ, ಕನ್ನಡ ಜನ ಶಕ್ತಿ ಕೇಂದ್ರದ ಅಧ್ಯಕ್ಷ ರಾಮೇಗೌಡ ಉಪಸ್ಥಿತರಿದ್ದರು.

ಕಿರುಸುದ್ದಿ

ಸಹಕಾರದಿಂದ ಶೈಕ್ಷಣಿಕ ಪ್ರಗತಿ



ಬೆಂಗಳೂರು: ಮೇವಾ ವ್ಯಾನ್ ಗಾರ್ಡ್ ಬಿಜಿನೆಸ್ ಸ್ಕೂಲ್‌ನೊಂದಿಗಿನ ಸಹಯೋಗವು ಶೈಕ್ಷಣಿಕ ಸಹಕಾರವನ್ನು ಬಲಪಡಿಸುವಲ್ಲಿ ಮತ್ತು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅವಕಾಶವನ್ನು ಹೆಚ್ಚಿಸುವಲ್ಲಿ ಪ್ರಮುಖ ಮೈಲಿಗಲ್ಲನ್ನು ಗುರುತಿಸುತ್ತದೆ ಎಂದು ಕೊಟ್ಟಾಯಂ ಐಐಐಟಿ ಸಂಸ್ಥೆ ಅಧ್ಯಕ್ಷೆ ಡಾ.ವಿಜಯಲಕ್ಷ್ಮಿ ದೇಶಮಾನೆ ಹೇಳಿದರು. ಶನಿವಾರ ಮೇವಾ ವ್ಯಾನ್ ಗಾರ್ಡ್ ಬಿಜಿನೆಸ್ ಸ್ಕೂಲ್‌ನಲ್ಲಿ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಕೊಟ್ಟಾಯಂ ಹಾಗೂ ಮೇವಾ ವ್ಯಾನ್ ಗಾರ್ಡ್ ಬಿಜಿನೆಸ್ ಸ್ಕೂಲ್ ನಡುವೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ ಮಾತನಾಡಿ, ಈ ಪಾಲುದಾರಿಕೆಯು ವಿದ್ಯಾರ್ಥಿಗಳಿಗೆ ಐಐಐಟಿ ಕೊಟ್ಟಾಯಂನೊಂದಿಗೆ ಸಂಯೋಜಿತವಾದ ಶೈಕ್ಷಣಿಕ ವಾತಾವರಣ, ಸುಧಾರಿತ ಕಲಿಕಾ ಸೌಲಭ್ಯಗಳು ಮತ್ತು ತಾಂತ್ರಿಕ ಪರಿಣತಿಯಿಂದ ಪ್ರಯೋಜನ ಪಡೆಯುವ ಅವಕಾಶವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ ಎಂದು ತಿಳಿಸಿದರು. ಈ ಸಹಯೋಗದ ಮೂಲಕ, ವಿದ್ಯಾರ್ಥಿಗಳು ಪ್ರಮುಖ ತಾಂತ್ರಿಕ ಸಂಸ್ಥೆಯ ಮಟ್ಟದಲ್ಲಿ ಉದ್ಯಮ- ಆಧಾರಿತ ಜ್ಞಾನ, ಸಂಶೋಧನಾ ಅವಕಾಶ ಮತ್ತು ಕೌಶಲ್ಯ ಅಭಿವೃದ್ಧಿ ಉಪಕ್ರಮಗಳಿಗೆ ಹೆಚ್ಚಿನ ಒಡ್ಡಿಕೊಳ್ಳುವಿಕೆಯನ್ನು ಪಡೆಯುತ್ತಾರೆ ಎಂದರು. ಎಂವಿಬಿಎಸ್ ಡೀನ್ ಡಾ.ಭಾರತೀಶ್ ರಾವ್ ,ಐಐಐಟಿ ಕೊಟ್ಟಾಯಂ ರಿಜಿಸ್ಟ್ರಾರ್ ಡಾ. ರಾಧಾಕೃಷ್ಣನ್ ಇದ್ದರು.

ಪ್ರಯಾಣಿಕರ ದಟ್ಟಣೆ: ವಿಶೇಷ ರೈಲು ಸಂಚಾರ

ಬೆಂಗಳೂರು: ಯುಗಾದಿ ಹಬ್ಬದ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು, ನೈರುತ್ಯ ರೈಲ್ವೆಯು ಯಶವಂತಪುರ ಮತ್ತು ಹೊಸಪೇಟೆ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲಿದೆ. ರೈಲು ಸಂಖ್ಯೆ 06533 ಯಶವಂತಪುರ–ಹೊಸಪೇಟೆ ವಿಶೇಷ ಎಕ್ಸ್‌ಪ್ರೆಸ್ ರೈಲು ಮಾ.18 ರಂದು ಸಂಜೆ 6:15ಕ್ಕೆ ಯಶವಂತಪುರದಿಂದ ಹೊರಟು, ಮರುದಿನ ಬೆಳಗ್ಗೆ 4 ಗಂಟೆಗೆ ಹೊಸಪೇಟೆ ತಲುಪಲಿದೆ. ರೈಲು ಸಂಖ್ಯೆ 06534 ಹೊಸಪೇಟೆ–ಯಶವಂತಪುರ ರೈಲು ಮಾ.19ರಂದು ಬೆಳಗ್ಗೆ 9ಗಂಟೆಗೆ ಹೊಸಪೇಟೆಯಿಂದ ಹೊರಟು, ಅದೇ ದಿನ ರಾತ್ರಿ 7:20ಕ್ಕೆ ಯಶವಂತಪುರ ತಲುಪಲಿದೆ.

ವಿವಿಧ ನಿಲ್ದಾಣದಲ್ಲಿ ತಾತ್ಕಾಲಿಕ ರೈಲು ನಿಲುಗಡೆ

ಬೆಂಗಳೂರು: ನೈಋತ್ಯ ರೈಲ್ವೆ ವಿವಿಧ ನಿಲ್ದಾಣಗಳಲ್ಲಿ ಕೆಲ ರೈಲುಗಳಿಗೆ ನೀಡಿರುವ ತಾತ್ಕಾಲಿಕ ನಿಲುಗಡೆಯನ್ನು ಜೂ.30 ರವರೆಗೆ ಮುಂದುವರೆಸಲಿದೆ. ರೈಲು ಸಂಖ್ಯೆ 56519/56520 ಕೆಎಸ್‌ಆರ್ ಬೆಂಗಳೂರು – ಹೊಸಪೇಟೆ ದೇವನೂರಿನಲ್ಲಿ ನಿಲುಗಡೆ. ರೈಲು ಸಂಖ್ಯೆ 20675/20676 ಬೆಳಗಾವಿ – ಮೈಸೂರು ಎಕ್ಸ್‌ಪ್ರೆಸ್‌ಗೆ ರಾಮಗಿರಿಯಲ್ಲಿ ನಿಲುಗಡೆ. ರೈಲು ಸಂಖ್ಯೆ 17391/17392 ಕೆಎಸ್‌ಆರ್ ಬೆಂಗಳೂರು – ಸಿಂಧನೂರು ಎಕ್ಸ್‌ಪ್ರೆಸ್‌ಗೆ ರಾಮಗಿರಿ ಮತ್ತು ಚಲಗೇರಿಯಲ್ಲಿ, ರೈಲು ಸಂಖ್ಯೆ 16239/16240 ಚಿಕ್ಕಮಗಳೂರು – ಯಶವಂತಪುರ – ಎಕ್ಸ್‌ಪ್ರೆಸ್‌ಗೆ ಅರಳಗುಪ್ಪೆ ಮತ್ತು ಸಂಪಿಗೆ ರೋಡ್ ನಿಲ್ದಾಣದಲ್ಲಿ ನಿಲುಗಡೆ. ರೈಲು ಸಂಖ್ಯೆ 16579/16580 ಯಶವಂತಪುರ – ಶಿವಮೊಗ್ಗ ಟೌನ್ – ಯಶವಂತಪುರ ಎಕ್ಸ್‌ಪ್ರೆಸ್‌ಗೆ ಚಿಕ್ಕಬಾಣಾವರದಲ್ಲಿ, ರೈಲು ಸಂಖ್ಯೆ 16595/16596 ಕೆ.ಎಸ್.ಆರ್ ಬೆಂಗಳೂರು – ಕಾರವಾರ ಎಕ್ಸ್‌ಪ್ರೆಸ್‌ಗೆ ಕುಣಿಗಲ್‌ನಲ್ಲಿ ನಿಲುಗಡೆ.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ವಿಶೇಷ ಅಭಿಯಾನ: ರಸ್ತೆ ಬದಿ ಸಂಗ್ರಹವಾದ 41 ಲೋಡ್ ತ್ಯಾಜ್ಯ ತೆರವು

ಸ್ವಚ್ಛತೆಯಿಂದ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ

ಬೆಂಗಳೂರು: ನಿರಂತರ ಸಾಮೂಹಿಕ ಸ್ವಚ್ಛತೆ ಕಾರ್ಯ ದಿಂದ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ ಹಾಗೂ ಪಾದಚಾರಿ ಒತ್ತುವರಿ ತಡೆಗಟ್ಟಲು ಸಾಧ್ಯ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ವಿಶೇಷ ಅಭಿಯಾನದ ಕುರಿತು ಮಾಹಿತಿ ನೀಡಿದ ಅವರು, ಪಾಲಿಕೆ ವ್ಯಾಪ್ತಿಯಲ್ಲಿ ನಗರದ ಸ್ವಚ್ಛತೆ ಕಾಪಾಡುವ ಹಾಗೂ ನಾಗರಿಕರಿಗೆ ಆರೋಗ್ಯಕರ ಪರಿಸರ ಒದಗಿಸುವ ಉದ್ದೇಶದಿಂದ ವಿವಿಧ ಪ್ರದೇಶದಲ್ಲಿ ವಿಶೇಷ ಸ್ವಚ್ಛತಾ ಅಭಿಯಾನವನ್ನು ಕೈಗೊಳ್ಳಲಾಯಿತು.

ಆರು ವಿಧಾನಸಭಾ ಕ್ಷೇತ್ರಗಳಲ್ಲಿನ ವಿವಿಧ ಭಾಗಗಳಲ್ಲಿ ಕಸ ಸಂಗ್ರಹವಾಗುವ ಸ್ಥಳವನ್ನು ಗುರುತಿಸಿ ಅವುಗಳನ್ನು ತೆರವುಗೊಳಿಸುವ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ನಿಯಮಿತ ಸ್ವಚ್ಛತಾ ಕಾರ್ಯಗಳ ಜೊತೆಗೆ ವಿಶೇಷ ಕಾರ್ಯಾಚರಣೆಗಳನ್ನು ರೂಪಿಸಿ ಜಾರಿಗೆ ತರಲಾಗಿದೆ. ನಗರದಲ್ಲಿ ಗುರುತಿಸಲ್ಪಟ್ಟ ಬ್ಲ್ಯಾಕ್ ಸ್ಪಾಟ್ ಪ್ರದೇಶಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವುದಕ್ಕೆ ನಗರ ಪಾಲಿಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ತಿಳಿಸಿದರು.

ಶುಕ್ರವಾರ ನಡೆದ ವಿಶೇಷ ಸ್ವಚ್ಛತಾ ಅಭಿಯಾನ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ಮಾರ್ಗದರ್ಶನದಲ್ಲಿ ನಡೆದಿದೆ. ಒಟ್ಟು 8.45 ಕಿ.ಮೀ. ವ್ಯಾಪ್ತಿಯಲ್ಲಿ ನಡೆದ ಈ ಕಾರ್ಯಾ ಚರಣೆಯಲ್ಲಿ 6



ಜೆಸಿಬಿ ಯಂತ್ರಗಳು ಮತ್ತು 31 ಟ್ರ್ಯಾಕ್ಟರ್‌ಗಳ ಬಳಕೆಯೊಂದಿಗೆ ರಸ್ತೆ ಬದಿಗಳಲ್ಲಿ ಸಂಗ್ರಹವಾಗಿದ್ದ 41 ಲೋಡ್ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

ಅಲ್ಲದೇ ವಿವಿಧ ಪ್ರದೇಶಗಳಲ್ಲಿ ಗುರುತಿಸಲ್ಪಟ್ಟಿದ್ದ 10 ಬ್ಲ್ಯಾಕ್ ಸ್ಪಾಟ್‌ಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಯಿತು. ಈ ಕಾರ್ಯಾಚರಣೆಯಲ್ಲಿ 144 ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಸಿಬ್ಬಂದಿ ಭಾಗವಹಿ ಸಿದ್ದರು. ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಹಕಾರದಿಂದ ಅಭಿಯಾನ ಪೂರ್ಣಗೊಂಡಿತು ಎಂದು ತಿಳಿಸಿದರು.

ರಸ್ತೆ ಕತ್ತರಿಸುವಿಕೆ ಅರ್ಜಿ ಪರಿಶೀಲಿಸಿ ಅನುಮತಿ ನೀಡಿ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾರ್ಕ್ಸ್ ತಂತ್ರಾಂಶದಲ್ಲಿ ನೋಂದಾಯಿತ ರಸ್ತೆ ಕತ್ತರಿಸುವಿಕೆ ಅರ್ಜಿಗಳನ್ನು ಪರಿಶೀಲಿಸಿ ಕೂಡಲೇ ಅನುಮತಿ ನೀಡಿ ಎಂದು ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಅವರು, ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಮತ್ತು ವಿಶೇಷ ಮೂಲಸೌಕರ್ಯ ಯೋಜನೆಗೆ ಬಂಡವಾಳ ಬೆಂಬಲ ಅನುದಾನದಡಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡಿರುವ ವಿವಿಧ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ಗೇಲ್ ಕಂಪನಿಗೆ ಅನುಮತಿ ನೀಡಲು ನಿರ್ದೇಶನ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಗೇಲ್ ಕಂಪನಿಯಿಂದ ರಸ್ತೆ ಕತ್ತರಿಸಲು ಅನುಮತಿ ಕೋರಿ ಒಟ್ಟು 51 ಅರ್ಜಿಗಳು ಸಲ್ಲಿಕೆಯಾಗಿದ್ದು, ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಈ ಕೂಡಲೇ ಮಾರ್ಕ್ಸ್ ತಂತ್ರಾಂಶದಲ್ಲಿ ನೋಂದಾಯಿತ ರಸ್ತೆ ಕತ್ತರಿಸುವ ಮನವಿಗಳನ್ನು ಪರಿಶೀಲಿಸಿ ನಗರದಲ್ಲಿ ಅನಿಲ ಪೈಪ್ ಲೈನ್ ಸಂಪರ್ಕ ಕಾಮಗಾರಿಗಳು ವಿಳಂಬವಾಗದಂತೆ ಎಲ್ಲಾ ಅರ್ಜಿಗಳನ್ನು ಆದ್ಯತೆಯ ಮೇರೆಗೆ ವಿಲೇವಾರಿ ಮಾಡುವಂತೆ ನಿರ್ದೇಶನ ನೀಡಿದರು.

ವಿಜ್ಞಾನಪುರ ಕೆರೆ ಸುತ್ತಮುತ್ತ ಅಕ್ರಮವಾಗಿ ಸುರಿದಿರುವ ಮಣ್ಣು ಮತ್ತು ಕಸದ ಅವಶೇಷಗಳನ್ನು ಕೂಡಲೇ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಜನಗಣತಿ 2027ಕ್ಕೆ ಸಂಬಂಧಿಸಿದಂತೆ ಮತಗಟ್ಟೆ ಪಟ್ಟಿವಾರು 150 ರಿಂದ 200 ಮನೆಗಳನ್ನು ಒಳಗೊಂಡಂತೆ ಮೂರು ಬ್ಲಾಕ್‌ಗಳ ಕಚ್ಚಾ ನಕ್ಷೆಯನ್ನು ಸಿದ್ಧಪಡಿಸಿಕೊಳ್ಳಲು ಚಾರ್ಜ್ ಅಧಿಕಾರಿಗಳಿಗೆ ತಿಳಿಸಿದರು.

ಕೃಷಿ ವಿವಿಯಿಂದ ವಿವಿಧ ಕೋರ್ಸ್‌ಗಳಿಗೆ ಆಹ್ವಾನ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆಯಲ್ಲಿ ಕೃಷಿಕರಿಗಾಗಿ ಕೃಷಿಯಲ್ಲಿ ದೂರ ಶಿಕ್ಷಣದ ಮೂಲಕ ನಡೆಸುವ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ರವರು 2026-27ನೇ ಶೈಕ್ಷಣಿಕ ಸಾಲಿನಲ್ಲಿ ಎರಡು ಡಿಪ್ಲೊಮಾ ಮತ್ತು ನಾಲ್ಕು ಸರ್ಟಿಫಿಕೇಟ್ ಕೋರ್ಸ್ ಗಳಿಗೆ ಅರ್ಜಿಗಳನ್ನು ಆಹ್ವಾನಿಸಲು ಅಧಿಸೂಚನೆ ನೀಡಲಾಗಿದೆ. ಒಂದು ವರ್ಷದ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ ಶುಲ್ಕ ರೂ.10 ಸಾವಿರ ರೂ.ಗಳಿದ್ದು, 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದು. ಒಂದು ವರ್ಷದ ಸ್ನಾತಕೋತ್ತರ ಕೃಷಿ ಡಿಪ್ಲೊಮಾ ಕೋರ್ಸ್‌ಗೆ ಕೋರ್ಸ್ ಶುಲ್ಕ ರೂ.12 ಸಾವಿರ. ಕೃಷಿ ಪದವೀಧರರು ಅರ್ಜಿ ಸಲ್ಲಿಸಬಹುದು. ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗ ಕೋರ್ಸ್‌ಗೆ ಕೋರ್ಸ್ ಶುಲ್ಕ 3000 ಸಾವಿರ ರೂ.ಗಳಿದ್ದು, 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದು. ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಕೋರ್ಸ್‌ಗೆ ಕೋರ್ಸ್ ಶುಲ್ಕ 3000 ರೂ.ಗಳಿದ್ದು, 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದು. ಜೇನುಸಾಕಣೆ ಕೋರ್ಸ್‌ಗೆ ಕೋರ್ಸ್ ಶುಲ್ಕ 3000 ರೂ. , 7ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದು. ಕೃಷಿ ಕೋರ್ಸ್‌ಗೆ ಶುಲ್ಕ 1500 ರೂ 7ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸ ಬಹುದು. ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಏ.11 ರವರೆಗೆ ಪ್ರತಿ ಕೋರ್ಸ್‌ಗೆ ಅರ್ಜಿ ಶುಲ್ಕ ರೂ.100 ರಂತೆ ಪಾವತಿಸಿ ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು- 560065 , ಬೆಂಗಳೂರು ಕೃಷಿ ವಿವಿ ಕಾರ್ಯವ್ಯಾಪ್ತಿಯ ಕೃಷಿ ವಿಜ್ಞಾನ ಕೇಂದ್ರ ರಾಮನಗರ, ಚಿಕ್ಕಬಳ್ಳಾಪುರ, ಬೆಂ,ಗ್ರಾ,, ತುಮಕೂರು ಇಲ್ಲಿ ಅರ್ಜಿ ಪಡೆಯಬಹುದು ಅಥವಾ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಜಾಲತಾಣದಿಂದ www.uasbangalore.edu.in ಡೌನ್ಲೋಡ್ ಮಾಡಿಕೊಳ್ಳಬಹುದು.



ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನಿಂದ ಪಶುವೈದ್ಯಕೀಯ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆಯರ ಸನ್ಮಾನಿಸಲಾಯಿತು. ಪದ್ಮಶ್ರೀ ಡಾ.ಎಸ್.ಜಿ. ಸುಶೀಲಮ್ಮ, ಬೀದರ್ ಜಿಲ್ಲೆ ಸಮಾಜ ಸೇವಕಿ ಗುರಮ್ಮ ಸಿದ್ದಾರೆಡ್ಡಿ ಇತರರಿದ್ದರು.

ಗೃಹ ಬಳಕೆ ಸಿಲಿಂಡರ್ ವಾಣಿಜ್ಯಕ್ಕೆ ಬಳಸಿದರೆ ಕ್ರಮ: ಆಹಾರ ಇಲಾಖೆ ಎಚ್ಚರಿಕೆ

ವಿವಿಧೆಡೆ ಅಧಿಕಾರಿಗಳು ದಾಳಿ: ಸಿಲಿಂಡರ್ ವಶ

ಬೆಂಗಳೂರು: ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ವಾಣಿಜ್ಯ ಉದ್ದೇಶಗಳಿಗಾಗಿ ಅಕ್ರಮವಾಗಿ ಬಳಸುವರ ವಿರುದ್ಧ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು, ರಾಜ್ಯದ ವಿವಿಧೆಡೆ ದಾಳಿ ನಡೆಸಿ ನೂರಾರು ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು ಅಗತ್ಯ ವಸ್ತುಗಳ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಗೃಹಬಳಕೆ ಸಿಲಿಂಡರ್‌ಗಳ ದುರ್ಬಳಕೆ ತಡೆಯಲು ಸಚಿವರು ನೀಡಿದ ಕಟ್ಟುನಿಟ್ಟಿನ ಸೂಚನೆಯಂತೆ ಈ ಕಾರ್ಯಾಚರಣೆ ನಡೆದಿದೆ. ಬೆಂಗಳೂರಿನ ಪೀಣ್ಯದಲ್ಲಿ 45 ಹಾಗೂ ಚಿಕ್ಕಜಾಲದಲ್ಲಿ 209 ಸಿಲಿಂಡರ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಉಳಿದಂತೆ ಯಾದಗಿರಿಯಲ್ಲಿ 46, ದಾವಣಗೆರೆಯಲ್ಲಿ 13 ಮತ್ತು ಶಿವಮೊಗ್ಗದಲ್ಲಿ 3 ಸಿಲಿಂಡರ್‌ಗಳನ್ನು ಜಪ್ತಿ ಮಾಡಿ, 1955ರ ಅಗತ್ಯ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸ ಲಾಗಿದೆ. ಕೋಲಾರ ಜಿಲ್ಲೆಯ ಕೆಜಿಎಫ್‌ನಲ್ಲಿ ಅಕ್ರಮ ವಾಗಿ ರೀಫಿಲ್ಲಿಂಗ್ ನಡೆಸುತ್ತಿದ್ದ ಗ್ಯಾಸ್ ಏಜೆನ್ಸಿ ಅಂಗಡಿಯ ಮೇಲೆ ದಾಳಿ ಮಾಡಿ ಕಾನೂನು ಕ್ರಮ ಜರುಗಿಸಲಾಗಿದೆ.

ವಾಣಿಜ್ಯ ಸಿಲಿಂಡರ್ ವಿತರಣೆಗೆ ಆದ್ಯತೆ: ಕೇಂದ್ರ ಸರ್ಕಾರದ ಮಾರ್ಗಸೂಚನೆಯಂತೆ ವಾಣಿಜ್ಯ ಬಳಕೆಯ ಒಟ್ಟು ಸಿಲಿಂಡರ್‌ಗಳ ಪೈಕಿ ಶೇ. 20ರಷ್ಟನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆದ್ಯತೆಯ ಮೇರೆಗೆ ವಿತರಿಸಲು ಸೂಚಿಸಲಾಗಿದೆ. ಆಸ್ಪತ್ರೆಗಳು, ಶಾಲೆಗಳು, ವಿಮಾನ ನಿಲ್ದಾಣ, ರೈಲು ಮತ್ತು ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳು, ಪ್ರಮುಖ ದೇವಸ್ಥಾನಗಳ ಪ್ರಸಾದ ವಿನಿಯೋಗ ಕೇಂದ್ರಗಳು, ವೃದ್ಧಾಶ್ರಮಗಳು ಹಾಗೂ ಸರ್ಕಾರಿ ಮತ್ತು ಪ್ರಮುಖ ಖಾಸಗಿ ಕಚೇರಿಗಳಿಗೆ ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಆದ್ಯತೆ ನೀಡಲಾಗುವುದು ಎಂದು ಇಲಾಖೆ ತಿಳಿಸಿದೆ.

ಪೂರೈಕೆಯಲ್ಲಿ ವ್ಯತ್ಯಯವಿಲ್ಲ: ಶನಿವಾರ ರಾಜ್ಯಾದ್ಯಂತ 14.2 ಕೆ.ಜಿ.ಯ ಒಟ್ಟು 3,86,363 ಗೃಹ ಬಳಕೆಯ ಸಿಲಿಂಡರ್‌ಗಳು ಹಾಗೂ 6,371 ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ವಿತರಿಸಲಾಗಿದೆ. ಗೃಹ ಬಳಕೆದಾರರಿಗೆ ಯಾವುದೇ ರೀತಿಯಲ್ಲಿ ಸಿಲಿಂಡರ್ ಕೊರತೆಯಾಗದಂತೆ ಮತ್ತು ಅಕ್ರಮ ಬಳಕೆಯಿಂದ ಸಾಮಾನ್ಯ ಜನರಿಗೆ ತೊಂದರೆಯಾಗದಂತೆ ಇಲಾಖೆ ಮುನ್ನೆಚ್ಚರಿಕೆ ವಹಿಸಿದೆಂದು ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ಇಲಾಖೆ ತಿಳಿಸಿದೆ.

ಪೀಣ್ಯದಲ್ಲಿ ಹೊಸ ಸಮಗ್ರ ಮೋಷನ್ ಘಟಕಕ್ಕೆ ಭೂಮಿಪೂಜೆ

ಮೇಕ್ ಇನ್ ಇಂಡಿಯಾದಿಂದ ಬಲ

ಬೆಂಗಳೂರು: ಮೇಕ್ ಇನ್ ಇಂಡಿಯಾ ಮತ್ತು ರಾಜ್ಯದ ಉತ್ಪಾದನಾ ಕ್ಷೇತ್ರಕ್ಕೆ ಎಬಿಬಿ ಹೂಡಿಕೆಗಳು ಮತ್ತಷ್ಟು ಬಲ ತುಂಬಲಿವೆ ಎಂದು ಎಬಿಬಿ ಇಂಡಿಯಾದ ಕಂಟ್ರಿ ಹೆಡ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಸಂಜೀವ್ ಶರ್ಮಾ ಅಭಿಪ್ರಾಯಪಟ್ಟರು.

ಎಲೆಕ್ಟ್ರಿಫಿಕೇಶನ್ ಮತ್ತು ಆಟೋಮೇಷನ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ, ಜಾಗತಿಕ ತಂತ್ರಜ್ಞಾನ ನಾಯಕನಾಗಿರುವ ಎಬಿಬಿ ಸಂಸ್ಥೆಯು ಪೀಣ್ಯದಲ್ಲಿ ಆರಂಭಿಸುತ್ತಿರುವ ಹೊಸ ಸಮಗ್ರ ಮೋಷನ್ ಘಟಕಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಕಾರ್ಯ ವಿಸ್ತರಣೆಯು ಭಾರತದ ಮೇಲೆ ಎಬಿಬಿ ಹೊಂದಿರುವ ದೀರ್ಘಕಾಲೀನ ಬದ್ಧತೆ ಮತ್ತು ನಮ್ಮ ಲೋಕಲ್-ಫಾರ್-ಲೋಕಲ್ ತಂತ್ರವನ್ನು ಪ್ರತಿಬಿಂಬಿಸುತ್ತದೆ. ಕರ್ನಾಟಕದಲ್ಲಿ ನಮ್ಮ ಉತ್ಪಾದನಾ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಬಲಪಡಿಸುವ ಮೂಲಕ, ನಾವು ಸುಧಾರಿತ ತಂತ್ರಜ್ಞಾನವನ್ನು ಗ್ರಾಹಕರಿಗೆ ಹತ್ತಿರ ತರುತ್ತಿದ್ದೇವೆ. ಇದು ಕೈಗಾರಿಕೆಗಳ ಇಂಧನ ದಕ್ಷತೆಯನ್ನು ಸುಧಾರಿಸಲು, ಕಾರ್ಯಾಚರಣೆಯನ್ನು ಡಿಜಿಟಲೀಕರಣಗೊಳಿಸಲು ಮತ್ತು ಭಾರತದ ಮೂಲಸೌಕರ್ಯ ಬೆಳವಣಿಗೆಗೆ ಬೆಂಬಲ ನೀಡಲು ಸಹಾಯ ಮಾಡುತ್ತದೆ ಎಂದರು.

ಕರ್ನಾಟಕದಲ್ಲಿ ದೀರ್ಘಕಾಲದಿಂದ ಬಲವಾದ ಅಸ್ತಿತ್ವವನ್ನು ಹೊಂದಿರುವ ಎಬಿಬಿ ಸಂಸ್ಥೆಗೆ ಬೆಂಗಳೂರು ಭಾರತದ ಪ್ರಮುಖ ಉತ್ಪಾದನಾ ಮತ್ತು ತಾಂತ್ರಿಕ ಕೇಂದ್ರವಾಗಿದೆ. ಈ ಇತ್ತೀಚಿನ ಹೂಡಿಕೆಯ ಮೂಲಕ ಎಬಿಬಿ ರಾಜ್ಯದಲ್ಲಿ ಮೂರು ಪ್ರಮುಖ ಉತ್ಪಾದನಾ ಸ್ಥಳಗಳನ್ನು ಹೊಂದಲಿದೆ. ಇಲ್ಲಿನ ಉತ್ಪಾದನಾ ಚಟುವಟಿಕೆಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನರು ಉದ್ಯೋಗ ಪಡೆಯಲಿದ್ದಾರೆ. ಈ ಹೊಸ ಘಟಕಗಳು ಡೇಟಾ ಸೆಂಟರ್, ಮೆಟ್ರೊ ರೈಲು, ನವೀಕರಿಸಬಹುದಾದ ಇಂಧನ, ಮೂಲಸೌಕರ್ಯ ಮತ್ತು ಲೋಹದಂತಹ ಕ್ಷೇತ್ರಗಳಿಗೆ ಸೇವೆ ಒದಗಿಸಲಿದೆ.

ಮೂತ್ರಪಿಂಡ ಕಸಿ ತಜ್ಞ ಡಾ.ಅನಿಲ್ ಕುಮಾರ್ ಸಲಹೆ

ಮೂತ್ರಪಿಂಡ ಸಮಸ್ಯೆಗೆ ಜಾಗೃತಿ

ಕೆಂಗೇರಿ: ಮೂತ್ರಪಿಂಡ ಸಮಸ್ಯೆಯಿಂದ ಪಾರಾಗುವ ನಿಟ್ಟಿನಲ್ಲಿ ಮಧುಮೇಹ ಕಾಯಿಲೆ ಹೊಂದಿರುವ ವ್ಯಕ್ತಿಗಳು ನಿಯಮಿತ ತಪಾಸಣೆಗೆ ಒಳಗಾಗುವುದು ಅತ್ಯಂತ ಅವಶ್ಯ ಎಂದು ಬಿಜಿಎಸ್ ಗ್ಲೆನೀಗಲ್ಸ್ ಆಸ್ಪತ್ರೆಯ ಮೂತ್ರಪಿಂಡ ಕಸಿ ತಜ್ಞ ಡಾ.ಅನಿಲ್ ಕುಮಾರ್ ಹೇಳಿದರು.

ವಿಶ್ವ ಮೂತ್ರಪಿಂಡ ದಿನಾಚರಣೆ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಸ್ತುರಹಿತ ಜೀವನ ಶೈಲಿ ಹಾಗೂ ನಗರ ಜೀವನದ ಜಂಜಾಟದಿಂದಾಗಿ ಬಹುತೇಕ ನಗರವಾಸಿಗಳು ಬಿಪಿ ಹಾಗೂ ಮಧುಮೇಹ ಕಾಯಿಲೆಗೆ ಒಳಗಾಗುತ್ತಿದ್ದಾರೆ. ಪ್ರಾಥಮಿಕ ಹಂತದಲ್ಲಿ ಈ ಕಾಯಿಲೆಗಳು ಗುಣವಾಗದಿದ್ದಲ್ಲಿ ಕಿಡ್ನಿ ಸಮಸ್ಯೆ ಬಾಧಿಸುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ಎಚ್ಚರಿಸಿದರು.

ಮೂತ್ರಪಿಂಡ ಸಮಸ್ಯೆ ಬಾಧಿತರಲ್ಲಿ ಬಹುತೇಕರು ಮಧುಮೇಹಿಗಳೇ ಆಗಿರುತ್ತಾರೆ. ಹೀಗಾಗಿ ಸಕಾಲಿಕ ತಪಾಸಣೆ ಹಾಗೂ



ಚಿಕಿತ್ಸೆ ಅತ್ಯಂತ ಮುಖ್ಯವಾಗಿದೆ. ಮೂತ್ರಪಿಂಡ ಚಿಕಿತ್ಸೆಗೆ ಸರ್ಕಾರ ನೀಡುತ್ತಿರುವ ಸಹಾಯ ನಿಧಿ ಹೆಚ್ಚಾಗಬೇಕು. ತಮಿಳುನಾಡು ಹಾಗೂ ಗುಜರಾತ್ ಸರ್ಕಾರಗಳು ಬಡ ಜನರಿಗೆ ಸುಮಾರು ಆರು ಲಕ್ಷ ರೂ.ವೈದ್ಯಕೀಯ ನೆರವು ನೀಡುತ್ತಿದ್ದು, ರಾಜ್ಯ ಸರ್ಕಾರವೂ ಇದೇ ಮೊತ್ತ ನೀಡಿದರೆ ಬಡ ವರ್ಗದ ಜನಗಳ ಆರ್ಥಿಕ ಹೊರೆ ಇಳಿಯಲಿದೆ ಎಂದು ತಿಳಿಸಿದರು. ಡಾ.ನರೇಂದ್ರ ಮಾತನಾಡಿ, ಮೂತ್ರಪಿಂಡ ಕಸಿ ಪ್ರಕ್ರಿಯೆ ಪ್ರಸ್ತುತ ಸುಲಭ ಶಸ್ತ್ರಚಿಕಿತ್ಸೆಯಾಗಿದ್ದು, ಜನರು ಆತಂಕ ಪಡಬೇಕಿಲ್ಲ. ಬೇರೆ ರಕ್ತ ಗುಂಪಿನ ದಾನಿಗಳಿಂದಲೂ ಮೂತ್ರಪಿಂಡ ದಾನ ಪಡೆದು ಯಶಸ್ವಿಯಾಗಿ ಚಿಕಿತ್ಸೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಚಾಲಾಕಿಗಳ ನಕಲಿ ನಾಟಕ ಬಯಲು

ಬೆಂಗಳೂರು: ಸೈಬರ್ ವಂಚಕರ ಜಾಲ ಈಗ ಮುಂದಿನ ಹಂತಕ್ಕೆ ತಲುಪಿದೆ. ಇಷ್ಟು ದಿನ ಬೇರೆ ರಾಜ್ಯದ ಪೊಲೀಸರ ಹೆಸರಿನಲ್ಲಿ ಜನರನ್ನು ಹೆದರಿಸುತ್ತಿದ್ದ ವಂಚಕರು, ಈಗ ಸ್ಥಳೀಯ ಪೊಲೀಸರ ಹೆಸರನ್ನೇ ಬಳಸಿಕೊಂಡು ಜನರನ್ನು ದಾರಿ ತಪ್ಪಿಸಲು ಮುಂದಾಗಿದ್ದಾರೆ. ನಗರದ ಮಹಿಳೆಯೊಬ್ಬರಿಗೆ ಬಂದ ಕರೆ ಮತ್ತು ಅವರು ತೋರಿದ ಸಮಯಪ್ರಜ್ಞೆ ಈ ಚಾಲಾಕಿಗಳ ನಕಲಿ ನಾಟಕವನ್ನು ಬಯಲಿಗೆಳೆದಿದೆ.

ಪೊಲೀಸರು ಯಾವತ್ತೂ ಡಿಜಿಟಲ್ ಅರೆಸ್ಟ್ ಮಾಡುವುದಿಲ್ಲ ಮತ್ತು ವಿಡಿಯೋ ಕಾಲ್ ಮೂಲಕ ತನಿಖೆ ನಡೆಸಿ ಹಣ ಕೇಳುವುದಿಲ್ಲ. ಸಾರ್ವಜನಿಕರು ನಕಲಿ ಆದೇಶ ಪತ್ರಗಳಿಗೆ ಮರುಳಾಗಬಾರದು , ಯಾವುದೇ ಅನುಮಾನ ಬಂದರೆ 1930 ಸಂಖ್ಯೆಗೆ ಕರೆ ಮಾಡಿ ದೂರು ನೀಡಬೇಕು.

ನಯನಾ ಪ್ರಕಾಶ್ ಎಂಬ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿದ್ದ ಖದೀಮರು ಬೆಂಗಳೂರಿನ ಮಹಿಳೆಯೊಬ್ಬರಿಗೆ ಮೊದಲು ಆಡಿಯೋ ಕಾಲ್ ಮಾಡಿ, ನಿಮ್ಮ ತಾಯಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಬೆದರಿಸಿದ್ದಾರೆ. ನಂತರ ಕರೆಯನ್ನು ವಿಡಿಯೋ ಕಾಲ್‌ಗೆ ವರ್ಗಾಯಿಸಿ ತನಿಖೆ ಮಾಡಬೇಕೆಂದು ದಬಾಯಿಸಿದ್ದಾರೆ.

ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರ ನಕಲಿ ಸೀಲ್ , ಸಹಿ ಬಳಸಿದ್ದಾರೆ. ಅಲ್ಲದೆ ಸಿಐಡಿ ಹೆಸರಿನಲ್ಲಿ ಅರೆಸ್ಟ್ ವಾರಂಟ್ ಸೃಷ್ಟಿಸಿ, ಸುಪ್ರೀಂ ಆದೇಶ ಎಂದು ನಕಲಿ ದಾಖಲೆಗಳನ್ನು ಕಳುಹಿಸಿ ಮಹಿಳೆಯನ್ನು ಆತಂಕಕ್ಕೆ ತಳ್ಳಿದ್ದರು. ನಕಲಿ ದಾಖಲೆ ನೋಡಿ ಅನುಮಾನಗೊಂಡ ಮಹಿಳೆ ಎದೆಗುಂದದೆ ಎಚ್ಚೆತ್ತುಕೊಂಡಿದ್ದಾರೆ. ಸೈಬರ್ ಕ್ರೈಂ ವಿಭಾಗದ ಅಧಿಕೃತ ಇ-ಮೇಲ್ ಐಡಿಗೆ ದೂರು ನೀಡಿದ್ದಲ್ಲದೆ, ಸೈಬರ್ ಕ್ರೈಂ ಪೋರ್ಟಲ್‌ನಲ್ಲಿ ದೂರನ್ನು ದಾಖಲಿಸಿದ್ದಾರೆ.

3 ಕೋಟಿ ವೆಚ್ಚದಲ್ಲಿ ಮಣಿಪಾಲ ಕೈಗಾರಿಕಾ ಪ್ರದೇಶದ ರಸ್ತೆ ಅಭಿವೃದ್ಧಿ

ಕಾಮಗಾರಿಗೆ ಯಶ್‌ಪಾಲ್ ಸುವರ್ಣ ಗುದ್ದಲಿಪೂಜೆ

ಉಡುಪಿ: ಮಣಿಪಾಲ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 3 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳ್ಳಲಿರುವ ಮುಖ್ಯ ರಸ್ತೆ ಕಾಮಗಾರಿಗೆ ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಗುದ್ದಲಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು, ಮಣಿಪಾಲ ಕೈಗಾರಿಕಾ ಪ್ರದೇಶದ ರಸ್ತೆ ಸಂಪೂರ್ಣ ಹದಗೆಟ್ಟು ಈ ಭಾಗದಲ್ಲಿ ಕಾರ್ಯಾಚರಿಸುತ್ತಿರುವ ಕೈಗಾರಿಕೆಗಳಿಗೆ ಹಾಗೂ ದಿನಂಪ್ರತಿ ಸಂಚರಿಸುವ ಸಾರ್ವಜನಿಕರಿಗೆ ತೀವ್ರ ಸಮಸ್ಯೆಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಉಡುಪಿ ನಗರಸಭೆಯ ಮೂಲಕ 40 ಲಕ್ಷ ಅನುದಾನ ಒದಗಿಸಿ, ಸ್ಥಳೀಯ ಕಂಪೆನಿಗಳ ಸಿಎಸ್‌ಆರ್ ಅನುದಾನದ ಮೂಲಕ ಒಟ್ಟು 3 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದರು. ಸರಕಾರದ ಮೂಲಕ ರಸ್ತೆ ಅಭಿವೃದ್ಧಿಗೆ ಅನುದಾನದ ಕೊರತೆ ಉಂಟಾದಾಗ ಜಿಲ್ಲಾ ಸಣ್ಣ ಕೈಗಾರಿಕಾ ಸಂಘದ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಶಾಸಕನ ನೆಲೆಯಲ್ಲಿ ಸ್ಥಳೀಯ ಖಾಸಗಿ ಕಂಪೆನಿಗಳಿಗೆ ಮನವಿ



ಮಾಡಿದಾಗ ಈ ಕಾಮಗಾರಿಗೆ ತಮ್ಮ ಸಿಎಸ್‌ಆರ್ ನಿಧಿಯಿಂದ ಗರಿಷ್ಠ ಮೊತ್ತವನ್ನು ನೀಡುವ ಮೂಲಕ ಕೈಗಾರಿಕಾ ಪ್ರದೇಶದ ರಸ್ತೆ ಅಭಿವೃದ್ಧಿಗೆ ಕೈಜೋಡಿಸಿ ವಿಶೇಷ ಸಹಕಾರ ನೀಡಿದ್ದಕ್ಕೆ ಅಭಿನಂದನೆ ಸಲ್ಲಿಸಿದರು.

ಜಿಲ್ಲಾ ಸಣ್ಣಕೈಗಾರಿಕೆ ಸಂಘದ ಅಧ್ಯಕ್ಷ ಮಟ್ಟಾರು ವಸಂತ ಕಿಣಿ ಮಾತನಾಡಿ, ಕೈಗಾರಿಕಾ ಪ್ರದೇಶದ ಬಹುದಿನದ ಬೇಡಿಕೆಯಾಗಿದ್ದ ರಸ್ತೆ ಕಾಮಗಾರಿ ಶೀಘ್ರ ಪೂರ್ಣಗೊಂಡು ಸಾರ್ವಜನಿಕರ ಉಪಯೋಗಕ್ಕೆ ಸಿಗುವಂತಾಗಲಿ ಎಂದರು.

ಈ ಸಂದರ್ಭದಲ್ಲಿ ಉಡುಪಿ ನಗರಸಭೆ ಮಾಜಿ ಅಧ್ಯಕ್ಷರಾದ ಪ್ರಭಾಕರ ಪೂಜಾರಿ, ಸದಸ್ಯರಾದ ಕಲ್ಪನಾ ಸುಧಾಮ, ನರಸಿಂಹ ನಾಯಕ್, ಟಿ ಜಿ ಹೆಗ್ಡೆ, ಹರೀಶ್ ಶೆಟ್ಟಿ, ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಪದಾಧಿಕಾರಿಗಳಾದ ವಿಶ್ವನಾಥ ಭಟ್, ಚಿತ್ರರಂಜನ್ ಭಟ್, ವಲ್ಲಭ್ ಭಟ್, ಉಡುಪಿ ನಗರ ಬಿಜೆಪಿ ಅಧ್ಯಕ್ಷರಾದ ದಿನೇಶ್ ಅಮೀನ್, ಪ್ರಮುಖರಾದ ಕೃಷ್ಣ ಕುಲಾಲ್, ಸದಾನಂದ ಪ್ರಭು, ನಿತಿನ್ ಪೈ, ಪೃಥ್ವಿರಾಜ್ ಹಾಗೂ ವಿವಿಧ ಕಂಪೆನಿಗಳ ಪ್ರಮುಖರು ಉಪಸ್ಥಿತರಿದ್ದರು.

ಕಿರುಸುದ್ದಿ

ದೈವ ನರ್ತನಕ್ಕೆ ಅನ್ಯರ ಬಳಕೆ: ಡಾ. ರತಿ ಆರೋಪ

ಮಂಗಳೂರು: ನಗರದ ಬೋಳೂರು ಜಾರಂದಾಯ ದೈವಸ್ಥಾನದ ನೇಮೋತ್ಸವದಲ್ಲಿ ಬಂಟ ದೈವದ ನರ್ತಕವಾಗಿ ಅನ್ಯ ಸಮುದಾಯದ ಯುವಕನನ್ನು ಬಳಕೆ ಮಾಡುವ ಮೂಲಕ ಅಪಚಾರ ಎಸಗಲಾಗಿದೆ ಎಂದು ಪಂಬದ ಸಮುದಾಯದ ಡಾ.ರತಿ ಅವರು ಆರೋಪಿಸಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹಲವು ವರ್ಷಗಳಿಂದ ಬೋಳೂರಿನ ಜಾರಂದಾಯ ದೈವಸ್ಥಾನದಲ್ಲಿ ನೇಮೋತ್ಸವವನ್ನು ಪಂಬದ ಸಮುದಾಯದ ದೈವನರ್ತಕರು ನಡೆಸಿಕೊಂಡು ಬಂದಿದ್ದಾರೆ. ಈ ವರ್ಷ ಕ್ರೈಸ್ತ ಸಮುದಾಯಕ್ಕೆ ಸೇರಿದ ಯುವಕನ ಮೂಲಕ ದೈವ ನರ್ತನ ನಡೆಸಲಾಗಿದೆ ಎಂದು ಆರೋಪಿಸಿದರು. ದೈವನರ್ತನ ಪವಿತ್ರ ಕಾರ್ಯವಾಗಿದ್ದು, ಕಟ್ಟುಪಾಡುಗಳನ್ನು ಬಿಟ್ಟು ನಡೆಸಬಾರದು ಎಂಬ ನೆಲೆಯಲ್ಲಿ ಈ ಹೋರಾಟವನ್ನು ಮಾಡುತ್ತಿರುವುದಾಗಿ ಅವರು ಹೇಳಿದರು.

ಸೌಮ್ಯಲಕ್ಷ್ಮೀ ಕೆ.ಗೆ ಬೆಳ್ಳಿ ಪದಕ



ಬಂಟ್ವಾಳ: ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ ಮಂಗಳೂರು, ರಾಷ್ಟ್ರೀಯ ವಿಸ್ತರಣಾ ನಿರ್ವಹಣಾ ಸಂಸ್ಥೆ, ಹೈದರಾಬಾದ್ ಮತ್ತು ಕೃಷಿ ಇಲಾಖೆ ದಕ್ಷಿಣ ಕನ್ನಡ ಆಯೋಜಿಸಿದ 2023–24ನೇ ಸಾಲಿನ ಯುವ ಉದ್ಯಮಿಗಳಿಗೆ ಕೃಷಿ ವಿಸ್ತರಣಾ ಸೇವೆಯಲ್ಲಿ ಒಂದು ವರ್ಷದ ಡಿಪ್ಲೋಮಾ (ಡಿಪ್ಲೋಮಾ ಇನ್ ಎಗ್ರಿಕಲ್ಚರಲ್ ಎಕ್ಸ್ ಟೆನ್ಷನ್ ಸರ್ವೀಸಸ್ ಫಾರ್ ಇನ್ ಪುಟ್ ಡೀಲರ್ಸ್) ವಿಷಯದಲ್ಲಿ ಬಿ.ಸಿ.ರೋಡ್ ನ ಸೌಮ್ಯಲಕ್ಷ್ಮೀ ಕೆ. ಅವರು ಬೆಳ್ಳಿ ಪದಕದೊಂದಿಗೆ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಇವರು ಬಂಟ್ವಾಳ ಕೃಷಿ ಇಲಾಖೆಯ ತಾಂತ್ರಿಕ ಕೃಷಿ ಅಧಿಕಾರಿ ನಂದನ್ ಶೆಣೈ ಅವರ ಪತ್ನಿಯಾಗಿದ್ದಾರೆ.

ಇನ್‌ಸ್ಪೈರ್ ಅವಾರ್ಡ್: ಯಶಸ್ ಬಿ.ಕೆ. ಜಿಲ್ಲಾ ಮಟ್ಟಕ್ಕೆ ಆಯ್ಕೆ



ಕಡಬ: ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ(ಡಿಎಸ್‌ಟಿ)ಯ ಪ್ರಮುಖ ಕಾರ್ಯಕ್ರಮವಾದ ಇನ್‌ಸ್ಪೈರ್ ಅವಾರ್ಡ್ ಮನಾಕ್‌ಗೆ ಶ್ರೀ ರಾಮಕುಂಜೇಶ್ವರ ಕನ್ನಡ ಮಾಧ್ಯಮ ಪ್ರೌಢ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಯಶಸ್ ಬಿ.ಕೆ. ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಸ್ಮಾರ್ಟ್ ಟ್ರೈನ್ ಎಂಬ ಶೀರ್ಷಿಕೆಯ ಯೋಜನೆಯಡಿ ಈ ಆಯ್ಕೆ ನಡೆದಿದೆ. ಅವರಿಗೆ ಶಾಲಾ ಮುಖ್ಯ ಶಿಕ್ಷಕ ಸತೀಶ್ ಭಟ್ ಅವರ ಮಾರ್ಗದರ್ಶನದಲ್ಲಿ ವಿಜ್ಞಾನ ಶಿಕ್ಷಕಿ ಉಷಾ ಕುಮಾರಿ ತರಬೇತಿ ನೀಡಿದ್ದಾರೆ. ಯಶಸ್ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಕಡಬ ತಾಲೂಕು ಘಟಕದ ಅಧ್ಯಕ್ಷ ಕೆ.ಎಸ್. ಬಾಲಕೃಷ್ಣ ಕೊಯಿಲ ಹಾಗೂ ಮೀನಾಕ್ಷಿ ಬಿ.ಕೆ. ದಂಪತಿಯ ಪುತ್ರ.

ಸರ್ಕಾರದ ಯೋಜನೆಯ ದುರುಪಯೋಗ ಪ್ರಕರಣ: ಆರೋಪಿಗಳಿಗೆ ಜೈಲು ಶಿಕ್ಷೆ

ಪುತ್ತೂರು: ತಾಲೂಕಿನ ಆರ್ಯಾಪು ಗ್ರಾಮದಲ್ಲಿ, ಸರ್ಕಾರದ ಯೋಜನೆ ಅಡಿಯಲ್ಲಿ ಮನೆ ಮಂಜೂರಾತಿಗಾಗಿ ಕೊಡಲ್ಪಡುವ ರೂ.1.50 ಲಕ್ಷ ಹಣವನ್ನು ನಕಲಿ ದಾಖಲೆಗಳನ್ನು ಸಲ್ಲಿಸುವ ಮೂಲಕ ಪಡೆದುಕೊಂಡ ಆರೋಪಿಗಳಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿ ತೀರ್ಮ ನೀಡಿದೆ. ನಕಲಿ ದಾಖಲೆಗಳನ್ನು ಸಲ್ಲಿಸಿ, ಸರ್ಕಾರದ ಯೋಜನೆ ಅಡಿಯಲ್ಲಿ ಮನೆ ಮಂಜೂರಾತಿಗಾಗಿ ಕೊಡಲ್ಪಡುವ ರೂ.1.50 ಲಕ್ಷ ಹಣವನ್ನು ಪಡೆದುಕೊಂಡ ಕುರಿತು ಆರೋಪಿಗಳಾದ ಬಾಬು ಮೇರಾ, ಜ್ಯೋತಿ ಹಾಗೂ ತನಿಯ ಮೇರಾ ಎಂಬವರ ವಿರುದ್ಧ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣದ ದಾಖಲಾಗಿತ್ತು. ಈ ಪ್ರಕರಣವನ್ನು ಪುತ್ತೂರು ಗ್ರಾಮಾಂತರ ಠಾಣೆಯ ಆಗಿನ ಪೊಲೀಸ್ ಉಪ ನಿರೀಕ್ಷಕರಾಗಿದ್ದ ಉದಯರವಿ ಮತ್ತು ಸಕ್ತಿವೇಲು ಅವರು ತನಿಖೆ ನಡೆಸಿ, ಆರೋಪಿತರ ವಿರುದ್ಧ ಆಗತ್ಯ ಸಾಕ್ಷಿಗಳನ್ನು ಕಲೆ ಹಾಕಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆದ ಸಂದರ್ಭ ಸಹಾಯಕ ಸರಕಾರಿ ಅಭಿಯೋಜಕರಾದ ಚೇತನಾ ದೇವಿ ಸಮರ್ಥವಾಗಿ ವಾದ ಮಂಡಿಸಿದ್ದರು.

ನ್ಯಾಯಾಲಯವು ಆರೋಪಿತರುಗಳಿಗೆ 3 ವರ್ಷ ಸದಾ ಸಜೆ ಹಾಗೂ ರೂ.5 ಸಾವಿರ ದಂಡ ವಿಧಿಸಿದ್ದು, ದಂಡ ಪಾವತಿಸಲು ತಪ್ಪಿದಲ್ಲಿ 3 ತಿಂಗಳ ಸದಾ ಕಾರಾವಾಸ ಶಿಕ್ಷೆ ವಿಧಿಸಿ ಆದೇಶಿಸಿದೆ.

ಕಂದಾಯ–ಅರಣ್ಯ ಭೂಮಿ ಸಮಸ್ಯೆ | ಸಚಿವ ಕೃಷ್ಣ ಬೈರೇಗೌಡ ಭರವಸೆ

ಜಿಲ್ಲಾ ಮಟ್ಟದಲ್ಲಿ ಎಸ್‌ಐಟಿ ರಚನೆ

ಮಂಗಳೂರು: ಸುಪ್ರೀಂ ಕೋರ್ಟ್‌ನ ಆದೇಶದಂತೆ ಅರಣ್ಯ ಭೂಮಿ ಮತ್ತು ಕಂದಾಯ ಭೂಮಿ ಗುರುತಿಸಿ ವರದಿ ಸಲ್ಲಿಸಲು ಜಿಲ್ಲಾ ಮಟ್ಟದಲ್ಲಿ ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ.

ಅವರು ಶನಿವಾರ ಮುಲ್ಕಿ ತಾಲೂಕು ಆಡಳಿತ ಕೇಂದ್ರ ಪ್ರಜಾಸೌಧ ಉದ್ಘಾಟಿಸಿ ಮಾತನಾಡಿದರು.

ಕಂದಾಯ ಮತ್ತು ಅರಣ್ಯ ಭೂಮಿ ಸಮಸ್ಯೆಯು ಹಲವು ವರ್ಷಗಳಿಂದ ಮುಂದುವರಿಯುತ್ತಾ ಬಂದಿದ್ದು, ರೈತರು ಈ ಬಗ್ಗೆ ಅನುಭವಿಸುತ್ತಿರುವ ಸಂಕಷ್ಟಗಳನ್ನು ಸರಕಾರವು ಗಂಭೀರವಾಗಿ ಪರಿಗಣಿಸಿದೆ. ರೈತರಿಗೆ ಹಿಂದೆ ಮಂಜೂರಾಗಿರುವ ಭೂಮಿಯಲ್ಲಿ ಅರಣ್ಯ–ಕಂದಾಯ ಬೇರ್ಪಡಿಸುವಿಕೆಗೆ ಜಂಟಿ ಸರ್ವೆ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ತ್ವರಿತವಾಗಿ ಕಾರ್ಯ ಪ್ರವೃತ್ತರಾಗಲು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ಭೂಮಿ ಮಂಜೂರಾಗಿದ್ದರೂ ಇನ್ನು ಪ್ಲಾಟಿಂಗ್ ಆಗದೆ ದೀರ್ಘಕಾಲದಿಂದ ರೈತರು ಸಮಸ್ಯೆ ಅನುಭವಿಸುತ್ತಿದ್ದರು. ಆದರೆ ಈಗ ಸರಕಾರವೇ ಮುಂದೆ ಬಂದು ಪ್ಲಾಟಿಂಗ್ ಮಾಡಿಕೊಡುತ್ತಿದೆ. 2018 ರಿಂದ 23ರವರೆಗೆ ಜಿಲ್ಲೆಯಲ್ಲಿ 1948 ಜನರಿಗೆ ಪ್ಲಾಟಿಂಗ್ ಆಗಿದ್ದು, ಕಳೆದ 2 ವರ್ಷಗಳಲ್ಲಿ 60,943 ಜನರಿಗೆ ಪ್ಲಾಟಿಂಗ್ (1–5) ಮಾಡಲಾಗಿದೆ. ಈ ಪೈಕಿ 23,620 ರೈತರಿಗೆ ಪಹಣಿ ವಿತರಿಸಲಾಗಿದೆ ಎಂದು ಕಂದಾಯ ಸಚಿವರು ಹೇಳಿದರು. ಮನೆ ಅಡಿ ಸ್ಥಳ ಸಕ್ರಮೀಕರಣ ಮಾಡುವ 94ಸಿ ಮತ್ತು 94ಸಿಸಿ ಪ್ರಕರಣಗಳಲ್ಲಿ ಇದುವರೆಗೆ 2.20 ಲಕ್ಷ ಮಂದಿಗೆ ಹಕ್ಕು ಪತ್ರ ವಿತರಿಸಲಾಗಿದೆ. ಮೃತರ ಹೆಸರಿನಲ್ಲಿದ್ದ ಜಮೀನನ್ನು ವಾರಿಸುದಾರರ ಹೆಸರಿಗೆ ಖಾತೆ ಮಾಡಿ ಕೊಡುವ ಇ –ಪೌತಿ ಅಭಿಯಾನ ದಲ್ಲಿ 60 ಸಾವಿರ ವಾರಿಸುದಾರರಿಗೆ ಖಾತೆ ಮಾಡಿಕೊಡಲಾಗಿದೆ ಎಂದು ಸಚಿವರು ಹೇಳಿದರು.



ಮುಲ್ಕಿ ತಾಲೂಕು ಆಡಳಿತ ಕೇಂದ್ರ ಪ್ರಜಾಸೌಧ ಉದ್ಘಾಟನೆ

ಜನರಿಗೆ ಆಡಳಿತ ಹತ್ತಿರವಾಗಲು ಹಾಗೂ ಅಧಿಕಾರಿಗಳಿಗೆ ತಾವು ಇರುವುದು ಜನರ ಸೇವೆಗಾಗಿ ಎಂಬ ಮನೋಭಾವನೆ ಇರಲು ತಾಲೂಕು ಆಡಳಿತ ಕಚೇರಿಗಳಿಗೆ 'ಪ್ರಜಾ ಸೌಧ' ಎಂದು ಹೆಸರು ಇಡಲಾಗಿದೆ. ಮೂಲ್ಕಿ ಪ್ರಜಾಸೌಧ ಕಚೇರಿಗೆ ಕಂಪೌಂಡ್ ನಿರ್ಮಾಣ ಮತ್ತು ಇತರ ಆಗತ್ಯ ಸೌಲಭ್ಯಗಳಿಗಾಗಿ ಹೆಚ್ಚುವರಿಯಾಗಿ ರೂ. 1.60 ಕೋಟಿ ಮಂಜೂರು ಮಾಡಲಾಗಿದೆ ಎಂದು ಕಂದಾಯ ಸಚಿವರು ತಿಳಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಜಿಲ್ಲೆಯ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಬಂಡವಾಳ ಹೂಡಿಕೆ, ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ ಎಂದರು. ಜಿಲ್ಲಾ ವೆನ್ಲಾಕ್ ಆಸ್ಪತ್ರೆಗೆ ಹೊಸ ಓ.ಪಿ.ಡಿ ಬ್ಲಾಕ್ ನಿರ್ಮಿಸಲು ರೂ. 70 ಕೋಟಿ ಮಂಜೂರಾಗಿದೆ. ಮೂಡಬಿದ್ರೆ, ಬಂಟ್ವಾಳ, ವಿಟ್ಲ, ಬೆಳ್ತಂಗಡಿ ತಾಲೂಕು ಆಸ್ಪತ್ರೆಯಲ್ಲಿ ಉತ್ತಮ ಕ್ಲಿನಿಕಲ್ ಸೇವೆಯನ್ನು ನೀಡಲು ಜಿಲ್ಲೆಯ 3 ಖಾಸಗಿ ಮೆಡಿಕಲ್ ಕಾಲೇಜುಗಳೊಂದಿಗೆ ಒಡಂಬಡಿಕೆ ಪ್ರಕ್ರಿಯೆ ನಡೆಯುತ್ತಿದೆ. ಇದರಿಂದ ಈ ಆಸ್ಪತ್ರೆಗಳಲ್ಲಿ ಹೆಚ್ಚು ವೈದ್ಯರು ಮತ್ತು ನರ್ಸಿಂಗ್ ಸೇವೆ ದೊರಕಲಿದೆ ಎಂದು ಅವರು ಹೇಳಿದರು.

ಲೋಕಸಭಾ ಸದಸ್ಯ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಪುತ್ತೂರು ಸುಳ್ಯ ಕಡಬ ಬೆಳ್ತಂಗಡಿ ತಾಲೂಕಿನಲ್ಲಿ ಅರಣ್ಯ– ಕಂದಾಯ ಭೂಮಿ ಸಮಸ್ಯೆ ಇತ್ಯರ್ಥ ಪಡಿಸಲು ಕಂದಾಯ ಸಚಿವರಲ್ಲಿ ಆಗ್ರಹಿಸಿದರು. ತಲಪಾಡಿಯಿಂದ ಕುಂದಾಪುರದವರೆಗೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಪಡಿಸಲು ಹಾಗೂ ರಸ್ತೆಯ ಎರಡು ಬದಿಯಲ್ಲಿ ಸರ್ವಿಸ್ ರಸ್ತೆ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ ಎಂದು ತಿಳಿಸಿದರು. ಮೂಡಬಿದ್ರೆ ಶಾಸಕ ಉಮಾನಾಥ ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್, ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಲವೀನಾ ಪಿಂಟೋ, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ್, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ. ಎಂ. ಶಾಹೀದ್ ತೆಕ್ಕಿಲ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ, ಉಪ ವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಮತ್ತಿತರರು ಇದ್ದರು.

ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಸ್ವಾಗತಿಸಿ ಪ್ರಸ್ತಾವಿಸಿದರು.ಡಾ. ಮಂಜುಳಾ ಶೆಟ್ಟಿ ನಿರೂಪಿಸಿದರು, ಮುಲ್ಕಿ ತಹಶೀಲ್ದಾರ ಶ್ರೀಧರ ಮುಂದಲಮನಿ ಧನ್ಯವಾದ ಅರ್ಪಿಸಿದರು.

ಕಾರ್ಯಕ್ರಮದಲ್ಲಿ ಮುಲ್ಕಿ ಮತ್ತು ಮೂಡಬಿದಿರೆ ತಾಲೂಕು ವ್ಯಾಪ್ತಿಯ 94ಸಿ ಮತ್ತು 94ಸಿಸಿ ಯಡಿ 300 ಹಕ್ಕುಪತ್ರಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು.

ಭೂ ದಾಖಲೆ 24 ಗಂಟೆಯೂ ಲಭ್ಯ

ಭೂಮಿಯ ದಾಖಲೆಯ ದೃಢೀಕೃತ ಪ್ರತಿ ಪಡೆಯಲು ಸಾರ್ವಜನಿಕರು ಅಲೆದಾಡಬೇಕಾಗಿಲ್ಲ . ಈಗ ಆನ್‌ಲೈನ್ ಮೂಲಕ ದಿನದ 24 ಗಂಟೆಯಲ್ಲಿಯೂ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು ಕಂಪ್ಯೂಟರ್ ಮತ್ತು ಮೊಬೈಲ್ ಮೂಲಕ ಪಡೆಯಬಹುದಾಗಿದೆ. ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಸುಮಾರು 73 ಕೋಟಿ ಪುಟಗಳ ಕಂದಾಯ ದಾಖಲೆಗಳನ್ನು ತಾಲೂಕು ಕಚೇರಿಗಳಲ್ಲಿ ಸ್ಕ್ಯಾನಿಂಗ್ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಆಳ್ವಾಸ್ ನೇತೃತ್ವದಲ್ಲಿ ಮೂಡುಬಿದಿರೆ ಸ್ವರಾಜ್ಯ ಮೈದಾನದಲ್ಲಿ ವಾರ್ಷಿಕ ಕ್ರೀಡಾಕೂಟ

ಡಾ. ಆಳ್ವ ಶಿಕ್ಷಣ ಕ್ಷೇತ್ರದ ಅನರ್ಘ್ಯ ರತ್ನ: ಕುಂದರ್

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ಮಂಗಳೂರು ವಿವಿ, ರಾಜೀವ್ ಗಾಂಧಿ ವೈದ್ಯಕೀಯ ವಿವಿ, ವಿಶ್ವೇಶ್ವರಯ್ಯ ತಾಂತ್ರಿಕ ವಿವಿ, ಕರ್ನಾಟಕ ಕಾನೂನು ವಿವಿ, ಕೆಳದಿ ಶಿವಪ್ಪ ನಾಯಕ ಕೃಷಿ ವಿವಿ ಹಾಗೂ ಆಳ್ವಾಸ್ ಸ್ವಾಯತ್ತ ಕಾಲೇಜು ವಾರ್ಷಿಕ ಕ್ರೀಡಾಕೂಟ –2026 ಸ್ವರಾಜ್ಯ ಮೈದಾನದಲ್ಲಿ ನಡೆಯಿತು.



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ, ಮಂಗಳೂರು ಕಸ್ಟಮ್ಸ್ ಇಲಾಖೆ ನಿವೃತ್ತ ಅಧೀಕ್ಷಕ ದಿನೇಶ್ ಕುಂದರ್, ಆಳ್ವಾಸ್ ಸಂಸ್ಥೆ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಅವಕಾಶ ಒದಗಿಸುತ್ತಿರುವುದು ಪ್ರಶಂಸನೀಯ. ಡಾ. ಎಂ. ಮೋಹನ್ ಆಳ್ವರು ಕರ್ನಾಟಕದ ಶಿಕ್ಷಣ ಕ್ಷೇತ್ರದ ಅನರ್ಘ್ಯ ರತ್ನ. ಆಳ್ವಾಸ್ ಕ್ರೀಡಾ ದತ್ತು ಸ್ವೀಕಾರ ಯೋಜನೆಯಡಿ ದೇಶದ ಸುಮಾರು 600 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕ್ರೀಡೆಯಲ್ಲಿ ತರಬೇತಿ ಪಡೆದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮೆರೆಯುತ್ತಿರುವುದು ಸಂಸ್ಥೆಯು ಕ್ರೀಡೆಗೆ ನೀಡುತ್ತಿರುವ ಬದ್ಧತೆಯನ್ನು ತೋರಿಸುತ್ತದೆ ಎಂದರು.

ಕ್ರೀಡಾಕೂಟದ ಅಂಗವಾಗಿ ಬಾಲಕರ ಹಾಗೂ ಬಾಲಕಿಯರಿಗಾಗಿ 100 ಮೀ., 200 ಮೀ., 400 ಮೀ. ಮತ್ತು 800 ಮೀ. ಓಟ ಸ್ಪರ್ಧೆಗಳು ನಡೆದವು. ಜೊತೆಗೆ ಬಾಲಕರಿಗೆ 3000 ಮೀಟರ್ ಹಾಗೂ ಬಾಲಕಿಯರಿಗೆ 1500 ಮೀಟರ್ ಓಟದ ಸ್ಪರ್ಧೆಗಳು ನಡೆದವು. ಉದ್ದ ಜಿಗಿತ (ಲಾಂಗ್ ಜಂಪ್), ಶಾಟ್ ಪುಟ್, 4X100 ಮೀಟರ್ ರಿಲೇ ಓಟ ಸ್ಪರ್ಧೆಗಳು ನಡೆದವು. ಉದ್ಘಾಟನಾ ಸಂದರ್ಭದಲ್ಲಿ ಹೀಲಿಯಂ ಬಲೂನುಗಳನ್ನು ಆಕಾಶಕ್ಕೆ ಬಿಡುವ ಮೂಲಕ ಕ್ರೀಡಾಕೂಟಕ್ಕೆ ಅಧಿಕೃತ ಚಾಲನೆ ನೀಡಲಾಯಿತು. ಚಿನ್ನದ ಪದಕ ವಿಜೇತೆ ರೇಖಾ ಬಸಪ್ಪ ಕ್ರೀಡಾ ಪ್ರತಿಜ್ಞಾವಿಧಿಯನ್ನು ಓದಿದರು. ನಾಗೇಂದ್ರ ಅಣ್ಣಪ್ಪ ನಾಯಕ್, ಲಕ್ಷ್ಮಿ ವೈಷ್ಣವಿ ಹಾಗೂ ನರುಖ್ ಹೊಸ್ರುರ್, ಸರ್ವಜೀತ್ ಹಾಗೂ ಗೀತಾ ಚೌಕಾಸಿ ಕ್ರೀಡಾ ಜ್ಯೋತಿಯನ್ನು ಹಸ್ತಾಂತರಿಸಿದರು. ಆಳ್ವಾಸ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಪೀಟರ್ ಫರ್ನಾಂಡಿಸ್ ಸ್ವಾಗತಿಸಿ, ಆಳ್ವಾಸ್ ಹೋಮಿಯೋಪತಿ ಕಾಲೇಜಿನ ಪ್ರಾಂಶುಪಾಲ ಡಾ. ರೋಷನ್ ಪಿಂಟೋ ವಂದಿಸಿದರು. ಕಾರ್ಯಕ್ರಮವನ್ನು ರಾಜೇಶ್ ಡಿಸೋಜಾ ನಿರೂಪಿಸಿದರು. ಸಂಸ್ಥೆಯ ಹಿರಿಯ ವಿದ್ಯಾರ್ಥಿನಿ ಹಾಗೂ ಅಂತಾರಾಷ್ಟ್ರೀಯ ಅಥ್ಲೀಟ್ ದೀಕ್ಷಿತಾ ಆರ್. ಗೌಡರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ, ಕಬಡ್ಡಿ ವಿಶ್ವಕಪ್ ವಿಜೇತ ತಂಡದ ಧನಲಕ್ಷ್ಮಿ ಹಾಗೂ ಆಳ್ವಾಸ್ ಸಂಸ್ಥೆಗಳ ಪ್ರಾಚಾರ್ಯರು ಇದ್ದರು.

ಇಂದು ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಳದ ಆಡಳಿತ ಮಂಡಳಿಗೆ ಚುನಾವಣೆ

ಕೋಟ: ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಸ್ಥಾನದ ಮುಂದಿನ 5 ವರ್ಷಗಳ ನೂತನ ಆಡಳಿತ ಮಂಡಳಿಗೆ ಚುನಾವಣೆ ಮಾ.15ರಂದು ದೇವಳದ ವಠಾರದಲ್ಲಿ ಬೆಳಗ್ಗೆ 8ರಿಂದ ಸಂಜೆ 4ರ ವರೆಗೆ ನಡೆಯಲಿದೆ.

ಒಟ್ಟು 9 ಸ್ಥಾನಗಳಲ್ಲಿ ಒಂದು ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 8 ಸ್ಥಾನಕ್ಕೆ 18 ಮಂದಿ ಸ್ಪರ್ಧೆಯಲ್ಲಿದ್ದಾರೆ. ಹೊರರಾಜ್ಯದಿಂದ ಲಕ್ಷ್ಮೀನಾರಾಯಣ ರಾವ್ ವರ್ಕಾಡಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮತಕ್ಷೇತ್ರ 1ರ ಸಾಲಿಗ್ರಾಮದದಿಂದ 4 ಅಭ್ಯರ್ಥಿಗಳ ಆಯ್ಕೆಗೆ ಸಿ.ಗಣೇಶ್ ಮಧ್ಯಸ್ಥ ಚಂದ್ರಶೇಖರ ಉಪಾಧ್ಯ, ಕೆ.ತಾರಾನಾಥ ಹೊಳ್ಳ, ಪರಶುರಾಮ ಭಟ್ಟ, ಪ್ರಸನ್ನ ತುಂಗ, ಬಾಲಕೃಷ್ಣ ನಕ್ಷತ್ರಿ, ಮುರುಳೀಧರ ಹೆಬ್ಬಾರ್ ಎ.ಎಸ್., ರಾಜಶೇಖರ ಹೆಬ್ಬಾರ್, ರಾಜಾರಾಮ ಐತಾಳ್ ಕೆ., ಸಿ.ಸುರೇಶ್ ತುಂಗ ಸೇರಿದಂತೆ ಒಟ್ಟು 10 ಅಭ್ಯರ್ಥಿಗಳು ಸ್ಪರ್ಧೆ ಮಾಡಿದ್ದಾರೆ.

ಮತ ಕ್ಷೇತ್ರ 2ರಲ್ಲಿ ಉಡುಪಿ ಜಿಲ್ಲೆಯ ಉಳಿದ ಭಾಗಗಳಾದ ಉಡುಪಿ, ಕಮಲಶಿಲೆ, ಕಿರಿಮಂಜೇಶ್ವರ, ಕುಂದಾಪುರ ವ್ಯಾಪ್ತಿಯ 1 ಅಭ್ಯರ್ಥಿಗಳ ಆಯ್ಕೆಗಾಗಿ ಬಿ.ಚಂದ್ರಶೇಖರ ನಾವಡ, ವೈ.ಸದಾರಾಮ ಹೇರ್ಳೆ ಸ್ಪರ್ಧೆ ಮಾಡಿದ್ದಾರೆ.

ಮತ ಕ್ಷೇತ್ರ 3ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ 1 ಅಭ್ಯರ್ಥಿಗಳ ಆಯ್ಕೆಗಾಗಿ ಪ್ರಕಾಶ್ ಕಾರಂತ, ಸದಾಶಿವ ಐತಾಳ್ ಪಿ. ಸ್ಪರ್ಧೆಯಲಿದ್ದಾರೆ. ಮತ ಕ್ಷೇತ್ರ 4ರಲ್ಲಿ ಬೆಂಗಳೂರು ಕಾರ್ಪೊರೇಶನ್‌ನಿಂದ ಪ್ರಕಾಶ ಮಯ್ಯ ಜಿ., ಸುರೇಶ್ ಹಂದೆ ಪಿ. ಅವರಲ್ಲಿ 1 ಅಭ್ಯರ್ಥಿಗಳ ಆಯ್ಕೆಗಾಗಿ ಸ್ಪರ್ಧೆ ನಡೆಯಲಿದೆ. ಮತ ಕ್ಷೇತ್ರ 5ರ ಕರ್ನಾಟಕ ರಾಜ್ಯದ ಇತರ ಭಾಗದಿಂದ 1 ಅಭ್ಯರ್ಥಿಗಳ ಆಯ್ಕೆಗೆ ಬಿ.ಜಿ.ಕೃಷ್ಣಮೂರ್ತಿ, ಕೆ.ಪಿ. ಶೃಂಗೇಶ್ವರ ಸ್ವಾಮಿ ಸ್ಪರ್ಧಾ ಕಣದಲ್ಲಿದ್ದಾರೆ. ಮುಖ್ಯ ಚುನಾವಣಾಕಾರಿಯಾಗಿ ಎ.ಅಮೃತ ಹೊಳ್ಳ ಸಹಾಯಕ ಚುನಾವಣಾಧಿಕಾರಿಯಾಗಿ ವಿಶ್ವನಾಥ ಹೊಳ್ಳ ಕರ್ತವ್ಯ ನಿರ್ವಹಿಸಲಿದ್ದಾರೆ.

ಮಂಗಳೂರು–ರಾಮೇಶ್ವರಂ ರೈಲು: ಹೆಚ್ಚಿನ ನಿಲುಗಡೆಗೆ ಬಿಆರ್‌ಪಿಎಂಎಸ್‌ನಿಂದ ಆಗ್ರಹ

ಕಾಸರಗೋಡು: ಮಂಗಳೂರು – ರಾಮೇಶ್ವರಂ ರೈಲುಗಾಡಿಗೆ ಪ್ರಸ್ತುತ ಕಾಸರಗೋಡು ರೈಲು ನಿಲ್ದಾಣದಲ್ಲಿ ಮಾತ್ರ ನಿಲುಗಡೆ ಮಂಜೂರು ಮಾಡಲಾಗಿದೆ. ಆದರೆ ಕಾಸರಗೋಡು ಜಿಲ್ಲೆಯ ಹೆಚ್ಚಿನ ಪ್ರಯಾಣಿಕರಿಗೆ ಪ್ರಯೋಜನವಾಗುವಂತೆ ಕುಂಬಳೆ, ಕಾಞಂಗಾಡು, ಚೆರುವತ್ತೂರು ರೈಲು ನಿಲ್ದಾಣಗಳಲ್ಲೂ ಈ ಹೊಸ ರೈಲುಗಾಡಿಗೆ ನಿಲುಗಡೆ ಒದಗಿಸಬೇಕೆಂದು ಭಾರತೀಯ ರಾಜ್ಯ ಪೆನ್ಶನರ್ಸ್ ಮಹಾ ಸಂಘ (ಬಿಆರ್ ಪಿಎಂಎಸ್)ದ ಸಭೆ ಒತ್ತಾಯಿಸಿದೆ.

ಮಂಗಳೂರು ಮತ್ತು ಕಲ್ಲಿಕೋಟೆ ನಡುವೆ ಹಗಲು ಹೊತ್ತಿನಲ್ಲಿ ರೈಲು ಸಂಚಾರ ಕಡಿಮೆ ಇದ್ದುದರಿಂದ ರೈಲು ಪ್ರಯಾಣಿಕರು ತೊಂದರೆಗೊಳಗಾಗಿದ್ದಾರೆ. ಆದ್ದರಿಂದ ಹಗಲು ಹೊತ್ತು ಹೆಚ್ಚಿನ ರೈಲು ಸಂಚರಿಸುವಂತೆ ಮಾಡಬೇಕೆಂದು ಬೇಡಿಕೆ ಮುಂದಿಟ್ಟು ಕೇಂದ್ರ ಸರಕಾರ ಮತ್ತು ರೈಲ್ವೆ ಇಲಾಖೆಗೆ ಮನವಿ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕಾಸರಗೋಡು ಕರಂದಕ್ಕಾಡಿನ ಸಂಘದ ಸಭಾಂಗಣದಲ್ಲಿ ಜರಗಿದ ಜಿಲ್ಲಾ ಸಮಿತಿಯ ಸಭೆಯಲ್ಲಿ ಜಿಲ್ಲಾಧ್ಯಕ್ಷ ಕೆ.ಬಾಲಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಸಂಘದ ರಾಷ್ಟ್ರೀಯ ಅಧ್ಯಕ್ಷ ಸಿ.ಎಚ್.ಸುರೇಶ್, ಸಂಘದ ರಕ್ಷಾಧಿಕಾರಿ ಬಾಲಕೃಷ್ಣ ಮಲ್ಲಿಗೆಮಾಡು, ರಾಷ್ಟ್ರೀಯ ಕೋಶಾಧಿಕಾರಿ ದಯಾನಂದ ಮುಜುಂಗಾವು, ಜಿಲ್ಲಾ ಕೋಶಾಧಿಕಾರಿ ಮಾಧವನ್ ನಾಯರ್, ಮುರಳೀಧರನ್, ಮಹಾಲಿಂಗ ನಾಯ್ಕ್ ಮುಂತಾದವರು ಸಭೆಯಲ್ಲಿ ಮಾತನಾಡಿದರು.

ಚುನಾವಣೆ ಮುಂದಿಟ್ಟು ತರಾತುರಿಯಲ್ಲಿ ವೇತನಆಯೋಗವನ್ನುನೇಮಕಗೊಳಿಸಲಾಗಿದೆ. ಆದರೆ ಮುಂದಿನ ಪೇ/ಪೆನ್ಷನ್ ರಿವಿಷನ್ ಫಲಪ್ರದವಾಗಿ ಜಾರಿಗೊಳ್ಳಬಹುದೇ ಎಂಬ ಆತಂಕ ವ್ಯಕ್ತಪಡಿಸಲಾಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಶ್ರೀಕಂಠನ್ ಸ್ವಾಗತಿಸಿ, ಜೊತೆ ಕಾರ್ಯದರ್ಶಿ ಪ್ರದೀಪ್ ಕುಮಾರ್ ವಂದಿಸಿದರು.

ಮಂಗಳೂರು ಮಹಾನಗರ ಪಾಲಿಕೆ ವಾರ್ಡ್ – 10

ರಾಜಕಾಲುವೆಗಳ ಸ್ವಚ್ಛತೆಯತ್ತ ಬೇಕಿದೆ ಆದ್ಯತೆ

ದಿಗಂತ ವಾಟರ್ ಚೆಕ್

ಮಂಗಳೂರು: ಬೈಕಂಪಾಡಿ ಎಂದಾಕ್ಷಣ ಅಲ್ಲಿನ ಕೈಗಾರಿಕಾ ಸಂಸ್ಥೆಗಳ ಚಿತ್ರಣ ಕಣ್ಣೆದುರು ಬಂದು ನಿಲ್ಲುತ್ತದೆ. ಸಾಲು ಸಾಲು ಕಂಪೆನಿಗಳ ನಡು ನಡುವೆ ಬದುಕು ಕಟ್ಟಿಕೊಂಡಿರುವ ನೂರಾರು ಕುಟುಂಬಗಳು ಇಲ್ಲಿ ನೆಲೆಸಿವೆ.

ದಶಕಗಳ ಹಿಂದೆ ಪಚ್ಚನೆಯ ಪೈರನ್ನೊತ್ತ ಗದ್ದೆ, ನೋಡಿದಷ್ಟು ದೂರವೆಲ್ಲಾ ತೆಂಗಿನ ತೋಟಗಳ ಮೂಲಕ ಕಂಗೊಳಿಸುತ್ತಿದ್ದ ಈ ಪ್ರದೇಶ ಆರ್ಥಿಕ ಶಕ್ತಿಯ ಪ್ರಮುಖ ಕೇಂದ್ರವಾಗಿ ಬದಲಾಗಿರುವುದು ಇತಿಹಾಸ. ಬೃಹತ್ ಉದ್ಯಮಗಳು ನೆಲೆಯೂರುವ ಮೂಲಕ ಈ ಬೈಕಂಪಾಡಿಯ ಚಿತ್ರಣವನ್ನೇ ಬದಲಿಸಿವೆ. ರಾಜ್ಯಕ್ಕೆ ಆರ್ಥಿಕತೆಯ ಬಹುಪಾಲು ಅಂಶ ಬೈಕಂಪಾಡಿ ಪ್ರದೇಶದಿಂದ ಸಲ್ಲಿಕೆಯಾಗುತ್ತದೆ ಎಂಬುದು ಗಮನಿಸಬೇಕಾದ ಅಂಶ.

ಹತ್ತಾರು ಉದ್ಯಮಗಳು

ಎಂಆರ್‌ಪಿಎಲ್, ಒಎನ್‌ಜಿಸಿ, ಕೃಷಿ ಉತ್ಪನ್ನ ಮಾರುಕಟ್ಟೆ, ರಾಸಾಯನಿಕ ಮತ್ತು ರಸಗೊಬ್ಬರ ಕಾರ್ಖಾನೆಗಳು, ತೈಲ ಸಂಗ್ರಹಣಾ ಕೇಂದ್ರ, ಪ್ಯಾಕೇಜಿಂಗ್ ಮತ್ತು ಕೈಗಾರಿಕಾ ಉಪಕರಣಗಳ ಉತ್ಪಾದನಾ ಘಟಕಗಳು, ಸಣ್ಣ ಮತ್ತು ಮಧ್ಯಮ ತಯಾರಿಕಾ ಘಟಕಗಳು, ಲೆಮಿನಾದಂತಹ ಪ್ರಮುಖ ಸಂಸ್ಥೆಗಳು ಇಲ್ಲಿದ್ದು, ಸಾವಿರಾರು ಮಂದಿಗೆ ಉದ್ಯೋಗವನ್ನೂ ಕಲ್ಪಿಸಿವೆ.

ಕುಡಿಯುವ ನೀರಿನ ಸಮಸ್ಯೆ ಇಲ್ಲಿಲ್ಲ

ಬೃಹತ್ ಉದ್ಯಮ ಸಂಸ್ಥೆಗಳು ಇಲ್ಲಿರುವುದರಿಂದ ನೀರಿನ ಸಮಸ್ಯೆ ತಲೆದೋರದಂತೆ ಎಚ್ಚರವಹಿಸಲಾಗಿದೆ. ಊರಿನ ಜನತೆ ಕೂಡ ಕುಡಿಯುವ ನೀರಿನ ಸಮಸ್ಯೆ ಅಷ್ಟಾಗಿ ಕಾಡಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ತುಂಬೆಯಿಂದ ನೇರವಾಗಿ ನೀರಿನ ವ್ಯವಸ್ಥೆಯಿದ್ದು, ಈ ಭಾಗದ ಜನತೆಯನ್ನು ಈ ಸಮಸ್ಯೆ ಅಷ್ಟಾಗಿ ಕಾಡುತ್ತಿಲ್ಲ. ಅಲ್ಲದೆ ಉದ್ಯಮಗಳು ಈ ಭಾಗದಲ್ಲಿ ಹೆಚ್ಚಾಗಿ ಇರುವ ಕಾರಣದಿಂದಲೂ ಭರಪೂರ ನೀರಿನ ಪೂರೈಕೆಯಾಗುತ್ತಿದೆ.

ಬೇರೆ ಸಮಸ್ಯೆಗಳಿವೆ

ಬೈಕಂಪಾಡಿ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಇಲ್ಲದಿದ್ದರೂ ಬೇರೆ ಸಮಸ್ಯೆಗಳು ಹಲವು ಇವೆ. ಡ್ರೈನೇಜ್ ಸಮಸ್ಯೆ ಬಗೆಹರಿಯಬೇಕು. ಈ ಭಾಗದಲ್ಲಿ ಅಪಘಾತಗಳು ಹೆಚ್ಚುತ್ತಿದ್ದು, ಇದನ್ನು ತಡೆಯಲು ಜೀಬ್ರಾ ಕ್ರಾಸಿಂಗ್ ಹಂಪ್ಸ್ ಅಳವಡಿಸಬೇಕು. ಬೈಕಂಪಾಡಿ ಹೆದ್ದಾರಿ ಬಳಿ ರೈಲ್ವೆ ಮೇಲ್ಸೇತುವೆಯಿಂದ ಚಿತ್ರಾಪುರವರೆಗೆ ಸರ್ವಿಸ್ ರಸ್ತೆ ಮಾಡಲು ಮಹಾನಗರ ಪಾಲಿಕೆ ಹೆದ್ದಾರಿ ಇಲಾಖೆಗೆ ಒತ್ತಡ ಹೇರಬೇಕು. ಇನ್ನು ಹಲವಾರು ವರ್ಷಗಳಿಂದ ಗ್ರಾಮಸ್ಥರು ಬಳಕೆ ಮಾಡುತ್ತಿದ್ದ ಬೈಕಂಪಾಡಿ ಹೆದ್ದಾರಿ ಸಂಪರ್ಕಿಸುವ ಕಾಲು ರಸ್ತೆಯನ್ನು ಮುಚ್ಚುವ ಹುನ್ನಾರ ನಡೆಯುತ್ತಿದ್ದು ಇದು ಸರಿಯಲ್ಲ. ಈ ಬಗ್ಗೆ ಸ್ಥಳೀಯ ಆಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತಾರೆ ಬೈಕಂಪಾಡಿ ನವೀನ್ ಜಿ. ಸಾಲ್ಯಾನ್ ಅವರು.



ಡ್ರೈನೇಜ್ ಸಮಸ್ಯೆ ಬಗೆಹರಿಯಲಿ



ಬರುವ ನೀರು ಪ್ರೆಶರ್ ಇಲ್ಲದ ಕಾರಣ ಟ್ಯಾಂಕ್ ತುಂಬುತ್ತಿಲ್ಲ. ನೀರು ಬರುವವರೆಗೆ ಕಾದು ಕುಳಿತುಕೊಳ್ಳುವ ಸ್ಥಿತಿ. ಬೈಕಂಪಾಡಿಯಲ್ಲಿ ಡ್ರೈನೇಜ್ ಸಮಸ್ಯೆ ಅತಿಯಾಗಿ ಕಾಡುತ್ತಿದೆ. ಇದು ಬಗೆಹರಿಯಬೇಕು. ಎನ್‌ಎಂಪಿ ಟಿ ಬೈಕಂಪಾಡಿ ಪಣಂಬೂರು ಬೀಚ್ ವರೆಗೆ ಕಾಂಕ್ರೀಟ್ ಚತುಷ್ಪದ ರಸ್ತೆ ಮಾಡಿದ್ದು, ಹಂಪ್ಸ್ ಅಗತ್ಯವಿದೆ.

■ ನವೀನ್ ಜಿ ಸಾಲ್ಯಾನ್ ಬೈಕಂಪಾಡಿ,

ಇದುವರೆಗೆ ಸಮಸ್ಯೆಯಿಲ್ಲ

ಬೈಕಂಪಾಡಿ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಎಂದೂ ಕಾಡಿಲ್ಲ. ವಾರ್ಡ್‌ನಲ್ಲಿ ಜಲಸಿರಿ ಯೋಜನೆಯೂ ಯಶಸ್ವಿಯಾಗಿ ಅನುಷ್ಠಾನವಾಗಿದೆ. ಕೈಗಾರಿಕೆಗಳು ಹೆಚ್ಚು ಇರುವ ಈ ಪ್ರದೇಶಕ್ಕೆ ನೀರಿನ ಪೂರೈಕೆ ಅವಿರತವಿರುವ ಕಾರಣ. ಕುಡಿಯುವ ನೀರಿಗೂ ಕೊರತೆ ಕಂಡುಬಂದಿಲ್ಲ.

■ ಸುಮಿತ್ರಾ ಕರಿಯ, ಮಾಜಿ ಕಾರ್ಪೊರೇಟರ್

ಒಳಚರಂಡಿ ಸರಿಯಾಗಲಿ



ಬೈಕಂಪಾಡಿ ಪ್ರದೇಶದಲ್ಲಿ ಮಳೆ ನೀರು ಹರಿಯುವ ತೋಡು, ಒಳಚರಂಡಿಯ ಸಂಪರ್ಕ ವ್ಯವಸ್ಥಿತವಾಗಿ ಮಾಡಬೇಕು. ಇದರಿಂದ ಕೃತಕ ನೆರೆಯನ್ನು ತಪ್ಪಿಸಬಹುದು. ಬೀದಿದೀಪ ಎಲ್‌ಇಡಿ ಸಮಸ್ಯೆ ಇರುವುದನ್ನು ಸರಿಪಡಿಸಬೇಕು. ಕುಡಿಯುವ ನೀರಿನ ವ್ಯವಸ್ಥೆ ಜಲಸಿರಿ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಿ , ಜನರ ಸೌಲಭ್ಯಕ್ಕೆ ಬಿಟ್ಟುಕೊಡಲು ಪಾಲಿಕೆ ಆದ್ಯತೆ ನೀಡಬೇಕು.

■ ಕುಮಾರ್ ಮೆಂಡನ್, ಅಧ್ಯಕ್ಷರು, ಬೈಕಂಪಾಡಿ ಮೊಗವೀರ ಮಹಾಸಭಾ

ಮನೆಗಳು ಎಷ್ಟಿವೆ?

ಬೈಕಂಪಾಡಿ ವಾರ್ಡ್‌ನಲ್ಲಿ ಸರಿಸುಮಾರು 1400ರಷ್ಟು ಮನೆಗಳಿವೆ. ಪ್ರತಿ ಮನೆಗಳಿಗೂ ನೀರಿನ ಸಂಪರ್ಕವಿದೆ. ಬಹುತೇಕ ಕಡೆಗಳಲ್ಲಿ ಜಲಸಿರಿ ಯೋಜನೆಯ ಸಂಪರ್ಕವೂ ಆಗಿದೆ. ಈ ಭಾಗದ ಹೆಚ್ಚಿನ ಮನೆಗಳಲ್ಲಿ ಬಾವಿಗಳೂ ಇದ್ದು, ಬಹುತೇಕ ಮಂದಿ ಇದನ್ನೇ ಅವಲಂಬಿಸುತ್ತಾರೆ.

ನಾಳೆ ವಾರ್ಡ್ 11, ಪಣಂಬೂರು ಪರಿಸರದ ಸ್ಥಿತಿಗತಿ

ನಗರ ಎಸ್.ಟಿ. ಮೋರ್ಚಾ ವತಿಯಿಂದ ವಿಶಿಷ್ಟ ಕಾರ್ಯಕ್ರಮ ಆಯೋಜನೆ

ಉಡುಪಿ: ಇಂದು 'ಶಿವಾಜಿ ಸಂಗಮ'

ಉಡುಪಿ: ಪರಿಶಿಷ್ಟ ಪಂಗಡದ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಕಲ್ಪಿಸುವ ಸಹಿತ ಎಸ್.ಟಿ. ಸಮುದಾಯಕ್ಕೆ ಸರಕಾರದಿಂದ ದೊರಕಬಹುದಾದ ಸೌಲಭ್ಯಗಳನ್ನು ಪರಿಚಯಿಸುವ ಜೊತೆಗೆ ಮರಾಠ ಸಮುದಾಯಕ್ಕೆ ಸೇರಿದ ಹಿಂದು ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜರ ಶೌರ್ಯ, ಜೀವನಾದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಬಿಜೆಪಿ ಉಡುಪಿ ನಗರ ಎಸ್.ಟಿ. ಮೋರ್ಚಾ ನೇತೃತ್ವದಲ್ಲಿ ಮಾ.15ರಂದು ಸಂಜೆ ಗಂಟೆ 4.30ಕ್ಕೆ ಬಿಜೆಪಿ ಜಿಲ್ಲಾ ಕಚೇರಿಯ ಬಳಿ ಶಿವಾಜಿ ಸಂಗಮ ಕಾರ್ಯಕ್ರಮ ನಡೆಯಲಿದೆ ಎಂದು ಬಿಜೆಪಿ ಉಡುಪಿ ನಗರ ಎಸ್.ಟಿ. ಮೋರ್ಚಾ ಅಧ್ಯಕ್ಷೆ ಸುಮಲತ ತಿಳಿಸಿದ್ದಾರೆ.

ಸುದ್ದಿ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮಾ.15ರಂದು ಸಂಜೆ ಗಂಟೆ 4.30ಕ್ಕೆ ಸುಮಾರು 10 ತಂಡಗಳಿಂದ ಮರಾಠಿ ಸಮುದಾಯದ ಭವ್ಯ ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸುವ ನೃತ್ಯ ವೈಭವ ನಡೆಯಲಿದೆ. ಸಂಜೆ ಗಂಟೆ 5.30ಕ್ಕೆ ನಡೆಯಲಿರುವ ಶಿವಾಜಿ ಸಂಗಮ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಉಡುಪಿ ವಿಧಾನಸಭಾ ಕ್ಷೇತ್ರದ ಶಾಸಕ ಯಶ್‌ಪಾಲ್ ಎ. ಸುವರ್ಣ ಅವರು ವಹಿಸಲಿದ್ದಾರೆ. ಮಂಗಳೂರು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಎಸ್.ಟಿ. ಸಮುದಾಯದ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಿದ್ದಾರೆ. ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ನಡೆಯಲಿದೆ. ಮರಾಠಿ ಸಮುದಾಯದ ಹತ್ತು ಸಮಸ್ತರ ಕಟ್ಟೆಯ 18 ಗುರಿಕಾರರಿಗೆ ಗೌರವಾರ್ಪಣೆ ನಡೆಯಲಿದೆ. ಎಸ್.ಟಿ. ಸಮುದಾಯಕ್ಕೆ ಸರಕಾರದಿಂದ ದೊರೆಯಬಹುದಾದ ಸೌಲಭ್ಯಗಳ ಕುರಿತು ಮಾಹಿತಿ ನೀಡುವ ಪುಸ್ತಕ ಬಿಡುಗಡೆ ನಡೆಯಲಿದೆ.



ಮುಖ್ಯ ಅತಿಥಿಗಳಾಗಿ ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ, ಮಾಜಿ ಜಿಲ್ಲಾಧ್ಯಕ್ಷ ಕೆ. ಉದಯ ಕುಮಾರ್ ಶೆಟ್ಟಿ, ಬಿಜೆಪಿ ಉಡುಪಿ ನಗರಾಧ್ಯಕ್ಷ ದಿನೇಶ್ ಅಮೀನ್, ಉಡುಪಿ ನಗರಸಭೆಯ ನಿಕಟಪೂರ್ವ ಅಧ್ಯಕ್ಷ ಪ್ರಭಾಕರ ಪೂಜಾರಿ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎ.ಉಮೇಶ್ ನಾಯ್ಕ್, ಮಾಜಿ ನಗರಸಭಾ ಸದಸ್ಯ ಅಶೋಕ್ ನಾಯ್ಕ್ ಮತ್ತು ಸಮುದಾಯದ ಪ್ರಮುಖರು ಭಾಗವಹಿಸಲಿದ್ದಾರೆ. ವಾಗ್ಮಿ ಪ್ರಕಾಶ್ ಮಲ್ಪೆ ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ರಾತ್ರಿ ಗಂಟೆ 7.30ರಿಂದ ಡಾ. ವಿಜಯ ಕುಮಾರ್ ಕೊಡಿಯಾಲ್‌ಬೈಲ್ ಅವರ ನಿರ್ದೇಶನದಲ್ಲಿ ಖ್ಯಾತ ತುಳು ನಾಟಕ 'ಛತ್ರಪತಿ ಶಿವಾಜಿ' ಪ್ರದರ್ಶನಗೊಳ್ಳಲಿದೆ. ಪಕ್ಷದ ಎಲ್ಲಾ ಸ್ತರದ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸುಮಲತ ಪತ್ರಿಕಾಗೋಷ್ಠಿಯಲ್ಲಿ ವಿನಂತಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಉಡುಪಿ ನಗರ ಎಸ್.ಟಿ. ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಸುಗುಣಾ ಡಿ. ನಾಯ್ಕ್, ವಿನಯ್, ಉಪಾಧ್ಯಕ್ಷರುಗಳಾದ ನವೀನ್ ನಾಯ್ಕ್, ಶರತ್ ನಾಯ್ಕ್ ಹಾಗೂ ರಾಹುಲ್ ಉಪಸ್ಥಿತರಿದ್ದರು.

ಗುರುಗ್ರಾಮ್‌ನಲ್ಲಿ ನಡೆದ ಕೂಟ: ಮೊದಲೆರಡೂ ಸ್ಥಾನದಲ್ಲಿ ಕನ್ನಡತಿಯರು | ಗಮನ ಸೆಳೆದ ಸ್ನಿಗ್ಧ | ಸೋಲಲ್ಲಿ ಗೆದ್ದ ಪದ್ಮಪ್ರಿಯಾ

ಅಂತಾರಾಷ್ಟ್ರೀಯ ಜೂ. ಟೆನಿಸ್‌ನಲ್ಲಿ ಕನ್ನಡಿಗರದ್ದೇ ದರ್ಬಾರ್!

ಬೆಂಗಳೂರು: ಕರ್ನಾಟಕದ ಯುವ ಟೆನಿಸ್ ಆಟಗಾರ್ತಿ ಸ್ನಿಗ್ಧ ಕಾಂತಾ ಗುರುಗ್ರಾಮ್‌ನಲ್ಲಿ ಶನಿವಾರ ಮುಗಿದ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಟ್ರೋಫಿ ಮುಡಿಗೇರಿಸಿಕೊಂಡರು. ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯನ್ನು ಗೆದ್ದು ಬೀಗಿದರು. ಫೈನಲ್‌ನಲ್ಲಿ ಅವರು ಮತ್ತೋರ್ವ ಕರ್ನಾಟಕ ಆಟಗಾರ್ತಿ ಪದ್ಮಪ್ರಿಯಾ ರಮೇಶ್ ಕುಮಾರ್ ಅವರನ್ನು 6–4, 6–4 ಅಂಕಗಳಿಂದ ಸೋಲಿಸಿದರು. ಇದರೊಂದಿಗೆ ಮೊದಲೆರಡೂ ಸ್ಥಾನಗಳನ್ನು ಕನ್ನಡಿಗರೇ ಗಳಿಸಿದ್ದು, ಟೆನಿಸ್ ಕರ್ನಾಟಕ ಪಾರುಪತ್ಯ ಮುಂದುವರಿದಂತಿದೆ. ಇಬ್ಬರ ರ್‍ಯಾಂಕಿಂಗ್‌ಗೂ ಬೂಸ್ಟರ್ ಕೂಟ ನೀಡಿದೆ.



ನಿಯಂತ್ರಿತ ಆಟಕ್ಕೆ ಸಿಕ್ಕ ಜಯ

ಎರಡನೇ ಶ್ರೇಯಾಂಕಿತ ಆಟಗಾರ್ತಿಯಾಗಿದ್ದ 16 ವರ್ಷದ ಸ್ನಿಗ್ಧ ಕಾಂತಾ, ಇಡೀ ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿ ಗೆಲುವಿನ ಫೇವರಿಟ್ ಆಗಿ ಮೆರೆದಿದ್ದರು. ಫೈನಲ್‌ನಲ್ಲಿ ಕೂಡ ನಿಯಂತ್ರಿತ ಆಟವಾಡಿದರು. ಎರಡು ಸೆಟ್‌ಗಳಲ್ಲೂ ಪ್ರಮುಖ ಅವಕಾಶಗಳನ್ನು ಬಳಸಿಕೊಂಡು ನೇರ ಸೆಟ್‌ಗಳಲ್ಲಿ ಜಯ ಸಾಧಿಸಿದರು. ಫೈನಲ್‌ನಲ್ಲಿ ಏಕ ಪಕ್ಷೀಯ ಗೆಲುವು ಸಾಧಿಸಿದರೂ ಅವರ ಪರಾಕ್ರಮ ಕೇವಲ ನಿರ್ಣಾಯಕ ಪಂದ್ಯಕ್ಕೆ ಸೀಮಿತವಾಗಿರಲಿಲ್ಲ. ಮೊದಲ ದಿನದಿಂದಲೂ ತಮ್ಮ ಅನುಭವದ ಜತೆಗೆ ನಿಯಂತ್ರಿತ ಪ್ರದರ್ಶನದೊಂದಿಗೆ ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕಿತ ಆಟಗಾರ್ತಿ ದೀಪಶಿಖಾ ವಿನಾಯಗಮೂರ್ತಿ ಅವರನ್ನು 6–2, 3–6, 6–4 ಅಂಕಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದರು.

ರ್‍ಯಾಂಕಿಂಗ್‌ನಲ್ಲಿ ವೃದ್ಧಿ

ಈ ಜಯದಿಂದ ಸ್ನಿಗ್ಧ ಕಾಂತಾ ಅವರ ಜೂನಿಯರ್ ಅಂತರರಾಷ್ಟ್ರೀಯ ಟೆನಿಸ್ ಅಭಿಯಾನಕ್ಕೆ ಮಹತ್ವದ ಶ್ರೇಯಾಂಕ ಅಂಕಗಳು ಲಭಿಸಿವೆ. ಈ ಹಂಗಾಮಿನಲ್ಲಿ ಅವರು ತಮ್ಮ ವೃತ್ತಿಜೀವನದ ಅತ್ಯುತ್ತಮ 448ನೇ ಶ್ರೇಯಾಂಕಕ್ಕೂ ಏರಿದ್ದಾರೆ. 2025ರ ಮಾರ್ಚ್‌ನಲ್ಲಿ ರಾಯ್ಪುರದಲ್ಲಿ ನಡೆದ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲೂ ಗರ್ಲ್ಸ್ ಸಿಂಗಲ್ಸ್ ಪ್ರಶಸ್ತಿ ಗೆದ್ದು ಅವರು ಗಮನ ಸೆಳೆದಿದ್ದರು.

ಒಂದೂ ಸೆಟ್ ಸೋಲದೆ ಫೈನಲ್‌ಗೇರಿದ್ದ ಪದ್ಮಪ್ರಿಯಾ

ಇತ್ತ ರನ್ನರ್‌-ಅಪ್ ಆಗಿ ಹೊರಹೊಮ್ಮಿದ ಪದ್ಮಪ್ರಿಯಾ ರಮೇಶ್ ಕುಮಾರ್ ಕೂಡ ಕಮ್ಮಿಯೇನಿರಲಿಲ್ಲ. ಪಂದ್ಯಾವಳಿಯ ಪ್ರತಿಯೊಂದು ಪ್ರದರ್ಶನ ಅವರನ್ನು ಬಲಿಷ್ಠ ಆಟಗಾರ್ತಿ ಎಂಬುದನ್ನು ಸಾಬೀತುಪಡಿಸಿತು. ಗುರುಗ್ರಾಮ್ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ಕೇವಲ 13 ವರ್ಷದ ಈ ಪ್ರತಿಭೆ ಫೈನಲ್‌ವರೆಗೆ ಒಂದು ಸೆಟ್ ಕೂಡ ಕಳೆದುಕೊಳ್ಳದೆ ಬಂದಿದ್ದರು. ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತ ಆಟಗಾರ್ತಿ ಪ್ರಿಶಾ ನಿಖಿಲ್ ಶಿಂಡೆ ಅವರನ್ನು 6–4, 6–1 ಅಂಕಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದರು. ಮೈಸೂರು ಮೂಲದ ಪದ್ಮಪ್ರಿಯಾ ಈಗಾಗಲೇ ಭಾರತದ ಯುವ ಟೆನಿಸ್ ಕ್ಷೇತ್ರದಲ್ಲಿ ಭರವಸೆಯ ಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ. ಅವರು ಹಲವು ವಾರಗಳ ಕಾಲ ಭಾರತದ 14 ವರ್ಷದೊಳಗಿನ ಮಹಿಳೆಯರ ಶ್ರೇಯಾಂಕದಲ್ಲಿ ಮೊದಲ ಸ್ಥಾನದಲ್ಲಿದ್ದು, ರಾಷ್ಟ್ರೀಯ 16 ವರ್ಷದೊಳಗಿನ ಶ್ರೇಯಾಂಕದ ಮೊದಲ 100 ಆಟಗಾರರ ಪಟ್ಟಿಗೂ ಪ್ರವೇಶಿಸಿದ್ದಾರೆ. ಜೊತೆಗೆ ಏಷ್ಯಾ ಮಟ್ಟದ 14 ವರ್ಷದೊಳಗಿನ ಟೆನಿಸ್ ಸ್ಪರ್ಧೆಯಲ್ಲಿ ಪದಕ ಗೆದ್ದು ಅಂತಾರಾಷ್ಟ್ರೀಯ ಮಟ್ಟದಲ್ಲೂ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ.

"ಸ್ನಿಗ್ಧ ಅವರಿಗೆ ಪ್ರಶಸ್ತಿ ಜಯಕ್ಕೆ ಅಭಿನಂದನೆಗಳು ಮತ್ತು ಪದ್ಮಪ್ರಿಯಾ ಅವರಿಗೆ ಫೈನಲ್ ಪ್ರವೇಶಿಸಿದಕ್ಕಾಗಿ ಅಭಿನಂದನೆಗಳು. ಅಂತಾರಾಷ್ಟ್ರೀಯ ಜೂನಿಯರ್ ಟೆನಿಸ್ ಸ್ಪರ್ಧೆಯಲ್ಲಿ ಮೊದಲೆರಡು ಸ್ಥಾನಗಳನ್ನು ಕರ್ನಾಟಕದವರೇ ಪಡೆದಿರುವುದು ರಾಜ್ಯ ಟೆನಿಸ್ ಬೆಳವಣಿಗೆಯ ಉತ್ತಮ ಸಂಕೇತವಾಗಿದೆ.

■ **ಸುನಿಲ್ ಯಾಜಮಾನ್,**
ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಸಂಯುಕ್ತ ಕಾರ್ಯದರ್ಶಿ

» ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಗಮನಸೆಳೆದ ಕನ್ನಡಿಗರು

ಕಿರುಸುದ್ದಿ

ದಿಲ್ಲಿ ಮೆಂಟರ್ ಪೀಟರ್ಸನ್ ರಾಜೀನಾಮೆ

ಹೊಸದಿಲ್ಲಿ: ಇಂಗ್ಲೆಂಡಿನ ಮಾಜಿ ಕ್ರಿಕೆಟಿಗ ಕೆವಿನ್ ಪೀಟರ್ಸನ್ ಅವರು, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸಿ ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಮಾರ್ಚ್ 28ರಿಂದ ಐಪಿಎಲ್ ಶುರುವಾಗಲಿದೆ. ಎಲ್ಲಾ ತಂಡಗಳು ತಯಾರಿ ನಡೆಸುತ್ತಿವೆ. ಆಟಗಾರರು ಹಂತ–ಹಂತವಾಗಿ ತಂಡಗಳನ್ನು ಸೇರಿಕೊಳ್ಳುತ್ತಿದ್ದಾರೆ. ಈ ಮಧ್ಯೆ, ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್ ಆಗಿದ್ದ ಕೆವಿನ್ ಪೀಟರ್ಸನ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ವೊಂದರ ಮೂಲಕ ನಿರ್ಧಾರ ಪ್ರಕಟಿಸಿದ್ದಾರೆ. ನನಗೆ ಆ ಪೋಸ್ಟ್‌ನಲ್ಲಿ ಕೆಲಸ ಮಾಡುವುದಕ್ಕೆ ಸಮಯವಿಲ್ಲ. ಐಪಿಎಲ್‌ನಿಂದ ಹೊರಬೀಳಲಾರೆ, ದಿಲ್ಲಿ ಅಲ್ಲದೆ, ಭಾಗವಹಿಸುತ್ತಿರುವ ಎಲ್ಲಾ ಆಟಗಾರರೂ ಉತ್ತಮವಾಗಿ ಆಡಲಿ. ನಾನು ವಿಕ್ಷಣೆ ವಿವರಣೆಯಲ್ಲಿ ಎಲ್ಲರನ್ನೂ ಸಿಗುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಬಿನ್ನಿ, ದ್ರಾವಿಡ್, ಮಿಥಾಲಿಗೆ ಇಂದು ಪ್ರಶಸ್ತಿ

ಹೊಸದಿಲ್ಲಿ: ಕನ್ನಡಿಗರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ ಹಾಗೂ ಭಾರತ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಜೀವಮಾನ ಸಾಧನೆ ಪ್ರಶಸ್ತಿ ಭಾನುವಾರ ನಡೆಯಲಿರುವ ನಮನ್ ಕಾರ್ಯಕ್ರಮದಲ್ಲಿ ನೀಡಲಿದೆ. ಪ್ರತಿ ವರ್ಷವೂ ನಡೆಯುವ ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಭಾನುವಾರದಂದು ದಿಲ್ಲಿಯಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ ಮಾಡುತ್ತೇವೆ ಎಂದು ಬಿಸಿಸಿಐ ತಿಳಿಸಿದ್ದು, ಪ್ರಶಸ್ತಿ ವಿಜೇತರ ಪಟ್ಟಿ ಬಿಡುಗಡೆ ಮಾಡಿದೆ. ಭಾರತ ತಂಡದ ಮಾಜಿ ಕ್ರಿಕೆಟಿಗ, ತರಬೇತುದಾರರಾದ ರಾಹುಲ್ ದ್ರಾವಿಡ್ ಮತ್ತು ಮಾಜಿ ಕ್ರಿಕೆಟಿಗ ಹಾಗೂ ಮಾಜಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರಿಗೆ ಕರ್ನಲ್ ಸಿ. ಕೆ ನಾಯ್ಡು ಜೀವಮಾನ ಪ್ರಶಸ್ತಿ ನೀಡಿದರೆ, ಮಹಿಳಾ ಕ್ರಿಕೆಟ್‌ನ ದಿಗ್ಗಜ ಆಟಗಾರ್ತಿ ಮಿಥಾಲಿ ರಾಜ್ ಅವರಿಗೆ ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ.



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಪ್ರಧಾನ ತರಬೇತುದಾರ ಗೌತಂ ಗಂಭೀರ್ ಅವರು ಶನಿವಾರದಂದು ಮುಂಬೈನ ಶ್ರೀ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಭೇಟಿ ನೀಡಿ ಆಶೀರ್ವಾದ ಪಡೆದರು.

ಪ್ಯಾರಾ ಅಥ್ಲೆಟಿಕ್ಸ್: ದಾಖಲೆ ಸಂಖ್ಯೆಯ ಪದಕ ಗೆದ್ದ ಭಾರತೀಯರು

208 ಪದಕ ಬಾಚಿದ ಭಾರತ



ಪ್ರೀತಿ ಪಾಲ್‌ಗೆ ಚಿನ್ನದ ಪದಕ

ಪ್ರೀತಿ ಪಾಲ್ ವೇಗಕ್ಕೆ ಪದಕ

ಮೀರಟ್ ಮೂಲದ 25 ವರ್ಷದ ಪ್ರೀತಿ ಪಾಲ್ ಮಹಿಳೆಯರ 200 ಮೀಟರ್ (ಟಿ–35/ಟಿ37 ವರ್ಗ) ಓಟವನ್ನು 30.26 ಸೆಕೆಂಡುಗಳಲ್ಲಿ ಮುಗಿಸಿ ಚಿನ್ನ ಗೆದ್ದರು. ರಷ್ಯಾದ ಕರೀನಾ ಮಚುಲ್ಸ್ಕಾಯಾ 32.22 ಸೆಕೆಂಡುಗಳಲ್ಲಿ ಬೆಳ್ಳಿ ಪದಕ ಪಡೆದುಕೊಂಡರೆ, ಭಾರತದ ಬಿನಾ ಶಂಭುಭಾ 32.35 ಸೆಕೆಂಡುಗಳಲ್ಲಿ ಕಂಚು ಗೆದ್ದರು. ಇದಕ್ಕೂ ಮುನ್ನ ಪ್ರೀತಿ ಪಾಲ್ ಮಹಿಳೆಯರ 100 ಮೀಟರ್ ಸ್ಪರ್ಧೆಯಲ್ಲೂ ಚಿನ್ನದ ಪದಕ ಗೆದ್ದಿದ್ದರು. ಗೆಲುವಿನ ಬಗ್ಗೆ ಮಾತನಾಡುತ್ತಾ ಅವರು, ನಾನು ಗುರಿ ಇಟ್ಟಿದ್ದ ಸಮಯವನ್ನು ಕೇವಲ ಅಲ್ಪ ಅಂತರದಲ್ಲಿ ತಪ್ಪಿಸಿಕೊಂಡಿದ್ದೇನೆ. ನನ್ನ ವೈಯಕ್ತಿಕ ಅತ್ಯುತ್ತಮ ಸಮಯ 30.03 ಸೆಕೆಂಡುಗಳು. ಅಭ್ಯಾಸದಲ್ಲಿ ಈಗಾಗಲೇ 29.6 ಸೆಕೆಂಡುಗಳು ಓಡಿದ್ದೇನೆ. ಅಂತಿಮ ಹಂತದಲ್ಲಿ ದಣಿವು ಕಾಣಿಸುತ್ತಿದೆ, ಅದನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇನೆ ಎಂದು ಪ್ರೀತಿ ಹೇಳಿದರು.

ಹೊಸದಿಲ್ಲಿ: ಸತತ ಎರಡು ದಿನಗಳ ಮಟ್ಟಿಗೆ ಕೂಟದಲ್ಲಿ ಅಸಾಮಾನ್ಯ ಪ್ರದರ್ಶನ ನೀಡಿರುವ ಭಾರತದ ಪ್ಯಾರಾ ಅಥ್ಲೀಟ್‌ಗಳು ಮುಕ್ತಾಯಗೊಂಡ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರಾಂಡ್ ಪ್ರಿ ಸ್ಪರ್ಧೆಯಲ್ಲಿ ಬರೋಬ್ಬರಿ 208 ಪದಕ ಬಾಚಿಕೊಂಡರು.

ಪ್ಯಾರಿಸ್ 2024 ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಭಾರತದ ಅಥ್ಲೀಟ್ ಪ್ರೀತಿ ಪಾಲ್ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರಾಂಡ್ ಪ್ರಿ ಸ್ಪರ್ಧೆಯಲ್ಲಿ ಮತ್ತೊಮ್ಮೆ ಅದ್ಭುತ ಪ್ರದರ್ಶನ ನೀಡಿದರು. ಮಹಿಳೆಯರ 200 ಮೀಟರ್ ಓಟದಲ್ಲಿ ಅವರು ಅಸಾಧಾರಣ ವೇಗದೊಂದಿಗೆ ಗೆಲುವು ಸಾಧಿಸಿ ಭಾರತಕ್ಕೆ ಮತ್ತೊಂದು ಚಿನ್ನದ ಪದಕ ತಂದರು.

ಈ ಗೆಲುವಿನ ನಂತರ ಸ್ಪರ್ಧೆಯಲ್ಲಿ ಭಾರತ ಭರ್ಜರಿ ಪ್ರಾಬಲ್ಯ ತೋರಿತು. ಒಟ್ಟು 208 ಪದಕಗಳನ್ನು ಗೆದ್ದು ದಾಖಲೆ ನಿರ್ಮಿಸಿತು. ಇದರಲ್ಲಿ 75 ಚಿನ್ನ, 69 ಬೆಳ್ಳಿ ಮತ್ತು 64 ಕಂಚು ಪದಕಗಳು ಸೇರಿವೆ. ಕಡಿಮೆ ದೇಶಗಳು ಭಾಗವಹಿಸಿದ್ದರೂ ಭಾರತವು ಸಂಪೂರ್ಣ ಮೇಲುಗೈ ಸಾಧಿಸಿತು.

ಪುರುಷರ ಶಾಟ್‌ಪುಟ್‌ನಲ್ಲಿ ಭಾರತೀಯರಾಟ:

ಪುರುಷರ ಶಾಟ್‌ಪುಟ್ 57 ವರ್ಗದಲ್ಲಿ ಭಾರತ ಮೂರು ಪದಕಗಳನ್ನು ಗೆದ್ದಿತು. ಶುಭಮ್ ಜುಯಾಲ್ 14.45 ಮೀಟರ್ ತೂರಾಟದೊಂದಿಗೆ ಚಿನ್ನ, ಭಗತ್ ಸಿಂಗ್ 13.29 ಮೀಟರ್ ತೂರಾಟದೊಂದಿಗೆ ಬೆಳ್ಳಿ ಹಾಗೂ ಪ್ರಿಯಾಂಶ್ ಕುಮಾರ್ 13.07 ಮೀಟರ್ ತೂರಾಟದೊಂದಿಗೆ ಕಂಚು ಪಡೆದರು.

ಓಟದಲ್ಲಿ: ಪುರುಷರ 200 ಮೀಟರ್ (35 ವರ್ಗ) ಓಟದಲ್ಲಿ ವಿನಯ 28.18 ಸೆಕೆಂಡುಗಳಲ್ಲಿ ಚಿನ್ನ ಗೆದ್ದರು. ಅನುಭವ್ ಚೌಧರಿ 29.49 ಸೆಕೆಂಡುಗಳಲ್ಲಿ ಬೆಳ್ಳಿ ಪಡೆದರೆ, ಹಾಂಗ್ ಕಾಂಗ್‌ನ ಚುಯಿ ಯಿಯು ಬಾವೋ ಕಂಚು ಗೆದ್ದರು. ಇನ್ನು 200 ಮೀಟರ್ (ಟಿ–37/ಟಿ44 ವರ್ಗ) ಓಟದಲ್ಲೂ ಭಾರತ ಮೂರು ಪದಕಗಳನ್ನು ಗೆದ್ದಿತು. ರಾಕೇಶ್ ಭಾಯ್ ಭಟ್ 25.20 ಸೆಕೆಂಡುಗಳಲ್ಲಿ ಚಿನ್ನ, ಸಿದ್ಧಾರ್ಥ ಮಂಜು ಬೆಳ್ಳಾರಿ 28.23 ಸೆಕೆಂಡುಗಳಲ್ಲಿ ಬೆಳ್ಳಿ ಹಾಗೂ ರವಿಕಿರಣ ಆಸರೆಲ್ಲಿ 31.50 ಸೆಕೆಂಡುಗಳಲ್ಲಿ ಕಂಚು ಪಡೆದರು. ಪುರುಷರ 800 ಮೀಟರ್ (ಟಿ53/ಟಿ54 ವರ್ಗ) ಸ್ಪರ್ಧೆಯಲ್ಲೂ ಭಾರತ ಸಂಪೂರ್ಣ ಮೇಲುಗೈ ಸಾಧಿಸಿತು. ಮನೋಜ್ ಕುಮಾರ್ ಸಬಾಪತಿ 1:57.41 ಸಮಯದಲ್ಲಿ ಚಿನ್ನ ಗೆದ್ದರು. ಮಣಿಕಂಡನ್ ಜೋತಿ 2:11.14 ಸಮಯದಲ್ಲಿ ಬೆಳ್ಳಿ ಹಾಗೂ ಕಮಲಕಾಂತ ನಾಯಕ 2:20.83 ಸಮಯದಲ್ಲಿ ಕಂಚು ಪಡೆದರು.

ಹಾಕಿ: ಫೈನಲ್‌ನಲ್ಲಿ ಭಾರತ ಪರಾಭವ



» ವಿಶ್ವಕಪ್ ಅರ್ಹತಾ ಸುತ್ತು
» ಇಂಗ್ಲೆಂಡ್‌ಗೆ 2-0ರ ಗೆಲುವು

ಹೈದರಾಬಾದ್: ಅಂತಾರಾಷ್ಟ್ರೀಯ ಹಾಕಿ ಸಂಸ್ಥೆಯ ಮಹಿಳೆಯರ ವಿಶ್ವಕಪ್‌ನಲ್ಲಿ ಅರ್ಹತೆ ಗಿಟ್ಟಿಸಿಕೊಂಡ ನಂತರ ಫೈನಲ್ ಪಂದ್ಯದಲ್ಲಿ ಭಾರತ ಇಂಗ್ಲೆಂಡ್ ವಿರುದ್ಧ ಪರಾಭವಗೊಂಡಿತು.

ದೀರ್ಘಕಾಲದ ಪೈಪೋಟಿಯಲ್ಲಿ ಮಿಂಚಿದರೂ ಎದುರಾಳಿಗಳ ಕಮಾಲ್ ಮುಂದೆ ಭಾರತ ಕೂಟದಲ್ಲೇ ಮೊದಲ ಪಂದ್ಯ ಸೋತಿತು. ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಅಚ್ಚಳಿಯದ ಪ್ರದರ್ಶನ ನೀಡಿದ್ದ ಭಾರತ ಕೊನೆಯ ಪಂದ್ಯದಲ್ಲಿ ಸಿಕ್ಕ ಐದೂ ಅವಕಾಶಗಳನ್ನು ಕಳೆದುಕೊಂಡ ನಂತರ ಇಂಗ್ಲೆಂಡ್ 2–0ರಿಂದ ಪಂದ್ಯವನ್ನು ಗೆದ್ದು ಅರ್ಹತಾ ಸುತ್ತಿನ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು. ಶನಿವಾರದ ಪಂದ್ಯದಲ್ಲಿ ಆರಂಭ ದಿಂದಲೂ ಉಭಯ ತಂಡಗಳು ಸಮಯೋಚಿತ ಆಟವಾಡಿದವು. ಪಂದ್ಯದ 23ನೇ ಸೆಕೆಂಡಿನಲ್ಲೇ ಎದುರಾಳಿ ಆಟಗಾರ್ತಿ ಥಾಂಪ್ಸನ್ ಹಸಿರು ಕಾರ್ಡ್ ಪಡೆದರು. 1.12 ನೇ ನಿಮಿಷದಲ್ಲೇ ಪೆನಾಲ್ಟಿ ಕಾರ್ನರ್ ಪಡೆದ ಭಾರತ ಗೋಲು ಗಳಿಸಲಿಲ್ಲ. ಡಿಫೆನ್ಸ್‌ನಲ್ಲಿ ಮಿಂಚಿದ ಇಂಗ್ಲೆಂಡ್ 12.51 ನೇ ನಿಮಿಷದಲ್ಲಿ ಗೋಲು ದಾಖಲಿಸಿ ಮುನ್ನಡೆ ಪಡೆದುಕೊಂಡಿತು. ಗ್ರೇಸ್ ಖಾತೆ ತೆರೆದರು. ಎರಡನೇ ಕ್ವಾರ್ಟರ್ ಆರಂಭದಲ್ಲೇ ಮತ್ತೊಮ್ಮೆ ಒತ್ತಡ ಹೇರಿದ ಭಾರತ 22.51ನೇ ನಿಮಿಷದ ವೇಳೆ ಮತ್ತೊಂದು ಪೆನಾಲ್ಟಿ ಕಾರ್ನರ್ ಪಡೆದುಕೊಂಡಿತು. ಆದಾಗ್ಯೂ ಖಾಲಿ ಕೈಯಲ್ಲೇ ಆಟ ಮುಂದುವರಿಸಿತು. 35ನೇ ನಿಮಿಷದಲ್ಲಿ ಮತ್ತೊಂದು ಪೆನಾಲ್ಟಿ ಕಾರ್ನರ್ ಪಡೆದುಕೊಂಡರೂ ಗೋಲು ಗಳಿಸಲಿಲ್ಲ ಭಾರತ. ಮೂರನೇ ಕ್ವಾರ್ಟರ್‌ಗೂ ಮುನ್ನ ಇಂಗ್ಲೆಂಡ್ ಗೋಲಿನ ಅಂತರ 2ಕ್ಕೆ ಹಿಗ್ಗಿಸಿಕೊಂಡಿತು. 43ನೇ ನಿಮಿಷದಲ್ಲಿ ನೀಲ್ ಎಲ್ಜಿಬೆತ್ ಗೋಲು ಬಾರಿಸಿ ಭಾರತೀಯರ ಮೇಲೆ ಭಾರೀ ಒತ್ತಡ ಹಾಕಿದರು. 59ನೇ ನಿಮಿಷದ ವೇಳೆ ಗೋಲು ಪೆನಾಲ್ಟಿ ಕಾರ್ನರ್ ಪಡೆದರೂ ಭಾರತ ಯಾವುದೇ ಗೋಲು ಗಳಿಸದೆ, ಖಾಲಿ ಕೈಯಲ್ಲೇ ಪಂದ್ಯ ಮುಗಿಸಿತು.

ಫುಟ್ಬಾಲ್: ಜೂ. ತಂಡಕ್ಕೆ 2ನೇ ಜಯ

ಹೊಸದಿಲ್ಲಿ: ಮ್ಯಾನ್ಮಾರ್‌ನ ತುವುನ್ನಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಎರಡನೇ ಅಂತಾರಾಷ್ಟ್ರೀಯ ಸ್ನೇಹಪೂರ್ಣ ಪಂದ್ಯದಲ್ಲಿ ಭಾರತದ 17 ವರ್ಷದೊಳಗಿನ ಮಹಿಳಾ ಫುಟ್ಬಾಲ್ ತಂಡ ರೋಚಕ ಹೋರಾಟದಲ್ಲಿ ಮ್ಯಾನ್ಮಾರ್ ತಂಡವನ್ನು 3–2 ಗೋಲುಗಳಿಂದ ಸೋಲಿಸಿ ಗಮನಸೆಳೆದಿದೆ. ಪಂದ್ಯ ಅಂತಿಮ ಕ್ಷಣಗಳಲ್ಲಿ ತಿರುವು ಪಡೆದಿದ್ದು, ಬದಲಾಯಿತ ಆಟಗಾರ್ತಿಯರ ಗೋಲುಗಳಿಂದ ಭಾರತ ಅದ್ಭುತ ಗೆಲುವು ದಾಖಲಿಸಿತು.

ಮೊದಲಾರ್ಧದಲ್ಲಿ ಮ್ಯಾನ್ಮಾರ್ ಉತ್ತಮ ಆರಂಭ ಕಂಡಿತು. 12ನೇ ನಿಮಿಷದಲ್ಲಿ ಕ್ಷಿನ್ ವಿಂಟ್ ವಾರ ಕ್ಯಾಂಗ್ ಗೋಲು ಗಳಿಸಿ ಆತಿಥೇಯರಿಗೆ ಮುನ್ನಡೆ ತಂದರು. ಭಾರತ ತಂಡ 33ನೇ ನಿಮಿಷದಲ್ಲಿ ಅಲ್ವಾ ದೇವಿ ಸೆಂಜಾಮ್ ಅವರ ಗೋಲಿನ ಮೂಲಕ ಸಮಬಲ ಸಾಧಿಸಿತು. ರೆಡಿಮಾ ದೇವಿ ನೀಡಿದ ನಿಖರ ಪಾಸ್ ಅನ್ನು ನಿಯಂತ್ರಿಸಿಕೊಂಡ ಅಲ್ವಾ ದೇವಿ ಎಡ ಕಾಲಿನಿಂದ ಬಲಿಷ್ಠ ಶಾಟ್ ಹೊಡೆದು ಗೋಲು ದಾಖಲಿಸಿದರು. ಇದು 15 ವರ್ಷದ ಅಲ್ವಾ ದೇವಿ ಅವರ ಮೊದಲ ಯುವ ಅಂತಾರಾಷ್ಟ್ರೀಯ ಗೋಲಾಗಿದೆ.

ಆದರೆ ಮೊದಲಾರ್ಧದ ಅಂತ್ಯದ ಕ್ಷಣದಲ್ಲಿ ಮ್ಯಾನ್ಮಾರ್ ಮತ್ತೆ ಮುನ್ನಡೆ ಪಡೆದಿತು. 45ನೇ ನಿಮಿಷದಲ್ಲಿ ಸೌಂಗ್ ತಾಜಿನ್ ಊ ನೀಡಿದ ಕಾರ್ನರ್ ಕಿಕ್ ಅನ್ನು ಮಿನ್ ಹ್ಸೋನ್ ಮೇ ಜಿಟಾರ್ ತಲೆಯಿಂದ ಜಾಲದಲ್ಲಿ ಸೇರಿಸಿದರು. ಇದರಿಂದ ವಿರಾಮದ ವೇಳೆಗೆ ಮ್ಯಾನ್ಮಾರ್ 2–1 ಮುನ್ನಡೆ ಹೊಂದಿತ್ತು.



ಎರಡನೇ ಕ್ವಾರ್ಟರ್: ಎರಡನೇ ಕ್ವಾರ್ಟರ್‌ನಲ್ಲಿ ಎರಡು ತಂಡಗಳ ಮಧ್ಯೆ ಕಠಿಣ ಪೈಪೋಟಿ ನಡೆಯಿತು. ಮಧ್ಯಮೈದಾನದಲ್ಲಿ ಹೋರಾಟ ಹೆಚ್ಚಾಗಿದ್ದು, ಸ್ಪಷ್ಟ ಅವಕಾಶಗಳು ಕಡಿಮೆಯಾದವು. ಆದರೆ ಅಂತಿಮ ಕ್ಷಣಗಳಲ್ಲಿ ಭಾರತ ಪಂದ್ಯವನ್ನು ತಿರುಗಿಸಿತು. 88ನೇ ನಿಮಿಷದಲ್ಲಿ ಬದಲಾಯಿತ ಆಟಗಾರ್ತಿ ಅನುಷ್ಕಾ ಕುಮಾರಿ ಸಮಬಲದ ಗೋಲು ದಾಖಲಿಸಿದರು. ಸಹ ಆಟಗಾರ್ತಿ ಬೋನಿಫಿಲಿಯಾ ಶುಲ್ಲೈ ನೀಡಿದ ಪಾಸ್ ಅನ್ನು ಪಡೆದುಕೊಂಡ ಅನುಷ್ಕಾ ಸುಮಾರು 25 ಗಜ ದೂರದಿಂದ ಹೊಡೆದ ಶಾಟ್ ನೇರವಾಗಿ ಜಾಲ ಸೇರಿತು.

ಇದರಿಂದ ಉತ್ಸಾಹಗೊಂಡ ಭಾರತ ಕೊನೆಯ ಕ್ಷಣದಲ್ಲಿ ಜಯದ ಗೋಲು ದಾಖಲಿಸಿತು. ಹೆಚ್ಚುವರಿ ಸಮಯದ 91ನೇ ನಿಮಿಷದಲ್ಲಿ ಎಲಿಜಬೆತ್ ಲಕ್ರಾ ದೂರದಿಂದ ಚೆಂಡು ಕಳುಹಿಸಿದರು. ಮ್ಯಾನ್ಮಾರ್ ರಕ್ಷಣಾ ಆಟಗಾರ್ತಿ ಖಿನ್ ಮ್ಯಿಂಟ್ ಯಾನ್ ತಲೆ ಹೊಡೆತದಲ್ಲಿ ತಪ್ಪು ಮಾಡಿದ ಪರಿಣಾಮ ಚೆಂಡು ಜೋಯಾ ಕೈಗೆ ಸಿಕ್ಕಿತು. ಅವಕಾಶವನ್ನು ಬಳಸಿಕೊಂಡ ಜೋಯಾ ಎಡ ಕಾಲಿನಿಂದ ಚೆಂಡನ್ನು ಜಾಲದಲ್ಲಿ ಸೇರಿಸಿ ಭಾರತಕ್ಕೆ 3–2 ಗೆಲುವು ತಂದುಕೊಟ್ಟರು.

ಈ ಪಂದ್ಯ ಮುಂದಿನ ಮೇ 1ರಿಂದ 17ರವರೆಗೆ ಚೀನಾದ ಸುಝೌ ನಗರದಲ್ಲಿ ನಡೆಯಲಿರುವ ಏಷ್ಯಾ ಮಟ್ಟದ 17 ವರ್ಷದೊಳಗಿನ ಮಹಿಳಾ ಕಪ್ ಫುಟ್ಬಾಲ್ ಟೂರ್ನಿಗೆ ಭಾರತ ತಂಡದ ಸಿದ್ಧತೆಯ ಭಾಗವಾಗಿತ್ತು. ಗುರುವಾರ ನಡೆದ ಮೊದಲ ಸ್ನೇಹಪೂರ್ಣ ಪಂದ್ಯದಲ್ಲೂ ಭಾರತ 2–0 ಗೋಲುಗಳಿಂದ ಜಯ ಸಾಧಿಸಿತ್ತು

ಪಿಎಸ್‌ಎಲ್ ತ್ಯಜಿಸಿ ಐಪಿಎಲ್‌ಗೆ ಬ್ಲೆಸ್ಸಿಂಗ್?

ಹೊಸದಿಲ್ಲಿ: ಪಾಕಿಸ್ತಾನ, ಬಾಂಗ್ಲಾದೇಶ ಆಟಗಾರರನ್ನು ಬಿಸಿಸಿಐ ದಿಕ್ಕರಿಸಿದಂತೆ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿಯನ್ನು ಸಲೀಸಾಗಿ ದಿಕ್ಕರಿಸಿದ ಜಿಂಬಾಬ್ವೆ ವೇಗಿ ಬ್ಲೆಸ್ಸಿಂಗ್ ಮುಝರ್ಬಾನಿ ಶೀಘ್ರದಲ್ಲೇ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಸೇರಿಕೊಳ್ಳಲಿದ್ದಾರೆ.



ಬಾಂಗ್ಲಾದೇಶ ಆಟಗಾರ ಮುಸ್ತಾಫಿಜುರ್ ರೆಹಮಾನ್ ಖರೀದಿಸಿದ್ದಕ್ಕಾಗಿ ಕೆಕೆಆರ್ ತಂಡ ಭಾರೀ ಹಿನ್ನಡೆ ಅನುಭವಿಸಿತ್ತು. ಸಂಘಟನೆಗಳ ತೀವ್ರ ಪ್ರತಿಭಟನೆ ಬೆನ್ನಲ್ಲೇ ಬಿಸಿಸಿಐ ಪಾಕ್ ಆಟಗಾರರಂತೆ ಬಾಂಗ್ಲಾದವರಿಗೂ ಗೇಟ್‌ಪಾಸ್ ನೀಡಿತ್ತು. ಕೆಕೆಆರ್ ತಂಡದಿಂದ ರೆಹಮಾನ್ ಹೊರಬಿದ್ದಿದ್ದರು. ಈ ನಿಟ್ಟಿನಲ್ಲಿ ಅವರ ಬದಲಿ ಆಟಗಾರರಾಗಿ ಕೆಕೆಆರ್‌ನಿಂದ ಬುಲಾವ್ ಬಂದಿದ್ದು, ಪಿಎಸ್‌ಎಲ್‌ನ ಇಸ್ಲಾಮಾಬಾದ್ ಯುನೈಟೆಡ್ ತಂಡಕ್ಕೆ ಆಯ್ಕೆಯಾಗಿದ್ದ ಅವರು ಆಡದಿರಲು ಹೇಳಿದ್ದಾರೆ ಎಂದು ಕ್ರಿಕ್ ಇನ್ಫೋ ವರದಿ ಮಾಡಿದೆ. ಈ ಹಿಂದೆ ಕೂಡ ಪಿಎಸ್ ಎಲ್ ತಂಡಕ್ಕೆ ಆಯ್ಕೆಯಾಗಿದ್ದ ಬ್ಲೆಸ್ಸಿಂಗ್ ಈ ಬಾರಿ ಅಲ್ಲೂ ಕೂಡ ಅನ್‌ಸೋಲ್ಡ್ ಆಗಿದ್ದರು. ಆದರೆ ಇಸ್ಲಾಮಾಬಾದ್ ನೇರ ಖರೀದಿ ಮಾಡಿತ್ತು. 26ರಿಂದ ಶುರುವಾಗಲಿರುವ ಈ ಕೂಟಕ್ಕೂ ಮುನ್ನವೇ ಬ್ಲೆಸ್ಸಿಂಗ್ ಫ್ರಾಂಚೈಸಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಬಾಕ್ಸಿಂಗ್: ಫೈನಲ್‌ಗೇರಿದ ನಾಲ್ವರು

ಬ್ಯಾಂಕಾಕ್: ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಫ್ಯೂಚರ್ ಕಪ್ ಸ್ಪರ್ಧೆಯಲ್ಲಿ ಭಾರತದ ಬಾಕ್ಸರ್‌ಗಳು ಶನಿವಾರ ನಡೆದ ಸೆಮಿಫೈನಲ್ ಪೈಪೋಟಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ನಾಲ್ವರು ಆಟಗಾರರು ಅಂತಿಮ ಸುತ್ತಿಗೆ ಪ್ರವೇಶಿಸಿದ್ದಾರೆ.

ಚಂದ್ರಿಕಾ, ಗುಂಜನ್, ಜಾಯ್‌ಶ್ರೀ ದೇವಿ ಮತ್ತು ಅಂಬೇಕರ್ ಮೀತ್ರೈ ತಮ್ಮ ತಮ್ಮ ವಿಭಾಗಗಳಲ್ಲಿ ವಿಶ್ವಾಸಾರ್ಹ ಜಯಗಳಿಸಿ ಪದಕದತ್ತ ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ. ಮಹಿಳೆಯರ 51 ಕೆಜಿ ವಿಭಾಗದಲ್ಲಿ ಚಂದ್ರಿಕಾ ಅದ್ಭುತ ಪ್ರದರ್ಶನ ನೀಡಿ ಮೊರಾಕ್ಕೊದ ರಿಹಾಬ್ ಹಮ್ದೌನ್ ವಿರುದ್ಧ ಎರಡನೇ ಸುತ್ತಿನಲ್ಲಿ ನಿರ್ಣಾಯಕ ಜಯ ಸಾಧಿಸಿದರು. ರೆಫರಿ ಸ್ಪರ್ಧೆಯನ್ನು ನಿಲ್ಲಿಸಿದ ಪರಿಣಾಮ ಚಂದ್ರಿಕಾ ಸುಲಭವಾಗಿ ಅಂತಿಮ ಸುತ್ತಿಗೆ ಪ್ರವೇಶಿಸಿದರು.

ಮಹಿಳೆಯರ 48 ಕೆಜಿ ವಿಭಾಗದಲ್ಲಿ ಗುಂಜನ್ ಉತ್ತರ ಕೊರಿಯಾದ ಯು ಗ್ಯೊಂಗ್ ಕಿಮ್ ವಿರುದ್ಧ 50 ಏಕಮತ ತೀರ್ಪಿನ ಮೂಲಕ ಗೆಲುವು ಸಾಧಿಸಿದರು. ಆರಂಭದಿಂದಲೇ ದಿಟ್ಟವಾಗಿ ಹೋರಾಡಿದ ಗುಂಜನ್ ಸ್ಪರ್ಧೆಯಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿ ಅಂತಿಮ ಸುತ್ತಿನ ಟಿಕೆಟ್ ಪಡೆದುಕೊಂಡರು.




ಮಹಿಳೆಯರ 54 ಕೆಜಿ ವಿಭಾಗದಲ್ಲಿ ಜಾಯ್ ಶ್ರೀ ದೇವಿ ಮತ್ತೊಂದು ಪ್ರಭಾವಿ ಪ್ರದರ್ಶನ ನೀಡಿದರು. ಮೆಕ್ಸಿಕೊದ ಸೋಫಿಯಾ ರಾಮಿರೆಜ್ ವಿರುದ್ಧ ನಡೆದ ಅರ್ಧ ಅಂತಿಮ ಪೈಪೋಟಿಯಲ್ಲಿ ಅವರು ಮೊದಲನೇ ಸುತ್ತಿನಲ್ಲೇ ರೆಫರಿ ಸ್ಪರ್ಧೆಯನ್ನು ನಿಲ್ಲಿಸುವಂತೆ ಮಾಡಿದರು. ಇದರಿಂದ ಜಾಯ್ ಶ್ರೀ ದೇವಿ ಸುಲಭವಾಗಿ ಅಂತಿಮ ಹಂತಕ್ಕೆ ಮುನ್ನಡೆದರು.

ಪುರುಷರಲ್ಲಿ: ಪುರುಷರ 50 ಕೆಜಿ ವಿಭಾಗದಲ್ಲಿ ಅಂಬೇಕರ್ ಮೀತ್ರೈ ಉಜ್ಬೇಕಿಸ್ತಾನದ ಅಬ್ದುಗನಿ ಯಾರ್ಕಿಂಜೊನೊವ್ ವಿರುದ್ಧ 50 ಏಕಮತ ತೀರ್ಪಿನಿಂದ ಜಯಗಳಿಸಿ ಅಂತಿಮ ಸುತ್ತಿಗೆ ಪ್ರವೇಶಿಸಿದರು. ಉತ್ತಮ ತಂತ್ರ ಮತ್ತು ವೇಗದ ಮೂಲಕ ಅವರು ಪೈಪೋಟಿಯನ್ನು ಸಂಪೂರ್ಣ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರು. ಇನ್ನೊಂದೆಡೆ ಮಹಿಳೆಯರ 57 ಕೆಜಿ ವಿಭಾಗದಲ್ಲಿ ರಾಧಾಮಣಿ ಲಾಂಗ್ಜಾಮ್ ಕಠಿಣ ಪೈಪೋಟಿ ನಡೆಸಿದರೂ ಅಂತಿಮವಾಗಿ ಸೋಲು ಅನುಭವಿಸಿದರು. ಉಕ್ರೇನ್‌ನ ಯೆವಾಂಹೆಲಿನಾ ಪೆತ್ರುಕ್ ವಿರುದ್ಧ ನಡೆದ ಪಂದ್ಯದಲ್ಲಿ ಅವರು 2–3 ಅಂತರದಲ್ಲಿ ಸೋತರು. ಇದರಿಂದ ರಾಧಾಮಣಿ ಕಂಚಿನ ಪದಕದೊಂದಿಗೆ ತಮ್ಮ ಅಭಿಯಾನವನ್ನು ಮುಗಿಸಿದರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5924

ಎಡದಿಂದ ಬಲಕ್ಕೆ
2.ಮನಸಿನಿಂದ ಮಾಡಿದ ವಂದನೆ (3)
5.ಬಗೆ–ರೀತಿಗಳಲ್ಲಿ ತಿರುಗಿವೆ (2)
7.ದಕ್ಷವ್ಯಕ್ತಿಯ ಕರದಲ್ಲಿರುವ ಪಗಡೆಯ ದಾಳ (2)
8.ತರವಲ್ಲ ಎಂದದ್ದು ಈ ತಂತಿವಾದ್ಯದ ಸ್ವರವನ್ನು (3)
9.ಹದಗೊಳಿಸುವಿಕೆ–ಸ್ವಚ್ಛಗೊಳಿಸುವಿಕೆ (3)
10.ಮಾವನ ಪಕ್ಕದಲ್ಲಿ ಕಂಡ ಕುಳ್ಳವ್ಯಕ್ತಿ (3)
12.ಆಸಕ್ತಿಯಿಲ್ಲದಿರುವಿಕೆ–ಬೇಜಾರು (3)
13. ಇದು ಮನಸ್ಸಿನ ವ್ಯಥೆ–ವಿಷಾದ (2)
14.ಖರೀದಿಸಲು ಬೇಕಾದ ಮಾಧ್ಯಮ ತಿರುಗಿದೆ (2)
16.ಹೊಳೆಯುವ ಗಟ್ಟಿ ಬೆಲೆಬಾಳುವ ಕಲ್ಲು (3)

ಮೇಲಿನಿಂದ ಕೆಳಕ್ಕೆ
1.ಕೋಪದಿಂದ ವಿವೇಕ ಕಳೆದುಕೊಂಡವನು (3)
2.ಪ್ರಹ್ಲಾದನನ್ನು ರಕ್ಷಿಸಿದ ವಿಷ್ಣುವಿನ ರೂಪ (4)
3.ಒಂಬತ್ತು ಬಗೆಯ ಆಕಾಶ ಕಾಯಗಳು (4)
4.ಮುಂದೆ–ಎದುರುಗಡೆಯಿದು (3)
6.ಇದು ತರ್ಕವಿಲ್ಲದ ಚರ್ಚೆ (5)
7.ಇತರರು ಹೇಳಿದಂತೆ ನುಡಿಯುವುದು (5)
11.ಮಾರುತಿಯಿಲ್ಲಿ ತಲೆಕೆಳಗಾಗಿದ್ದಾನೆ (4)
12.ರೋಗಕ್ಕೆ ತುತ್ತಾಗು–ಕಾಯಿಲೆ ಬರು (4)
13.ಆಕಾಶದಲ್ಲಿ ಸಂಚರಿಸುವಂಥಾದ್ದು (3)
15.ಮರ–ಲೋಹದ ತೆಳುವಾದ ಸೀಳು (3)

5923 ಉತ್ತರ

ಎಡದಿಂದ ಬಲಕ್ಕೆ:
2.ಮನಸು 5.ಜ್ಞಾನಪೀಠ
6.ಮದಕರಿ 7.ಗಾಯ
8.ದಯ 10.ತಿದಿ
12.ದುಂಬಿ 13.ಆಚಮನ
15.ಹಾಡುಗಾರ
16.ದಿರಸು

ಮೇಲಿನಿಂದ ಕೆಳಕ್ಕೆ:
1.ಅನನ್ವಯ 2.ಮಠ
3.ಸುಮ 4.ಮಕರಂದ
7.ಗಾಣತಿ 9.ಬಿಳಿಯ
11.ದಿನಚರಿ
12.ದುಂದುಗಾರ 14.ನದಿ
15.ಹಾಸು

ಕಿರುಸುದ್ದಿ

ದ್ವಿತೀಯ ಪಿಯು ಪರೀಕ್ಷಾ ಹಾಜರಾತಿ

ಮಂಗಳೂರು: ದ.ಕ. ಜಿಲ್ಲೆಯಲ್ಲಿ ಶನಿವಾರ ನಡೆದ ದ್ವಿತೀಯ ಪಿ.ಯು.ಸಿ ಅಕೌಂಟೆನ್ಸಿ ಪರೀಕ್ಷೆಗೆ 14830 ವಿದ್ಯಾರ್ಥಿಗಳು ಹಾಜರಾಗಿದ್ದು, 119 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಗಣಿತ ಪರೀಕ್ಷೆಗೆ 18196 ವಿದ್ಯಾರ್ಥಿಗಳು ಹಾಜರಾಗಿದ್ದು, 49 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

ನೇತ್ರಾವತಿ ನದಿಗೆ ಹಾರಿದ ವ್ಯಕ್ತಿಯ ಶವ ಪತ್ತೆ

ಬಂಟ್ವಾಳ: ಶುಕ್ರವಾರ ಬೆಳಿಗ್ಗೆ ನೇತ್ರಾವತಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯ ಮೃತದೇಹ ಶನಿವಾರ ಪತ್ತೆಯಾಗಿದೆ. ಕಾಡಬೆಟ್ಟು ನಿವಾಸಿ ಯಶೋಧರ ಅವರು ಆತ್ಮಹತ್ಯೆ ಮಾಡಿಕೊಂಡವರಾಗಿದ್ದಾರೆ. ಅವರು ಶುಕ್ರವಾರ ಬೆಳಿಗ್ಗೆ ಸರಪಾಡಿ ಸಮೀಪ ನದಿ ಬದಿಯಲ್ಲಿ ಶರ್ಟ್, ಚಪ್ಪಲಿ ಇರಿಸಿ ನೇತ್ರಾವತಿ ನದಿಗೆ ಧುಮುಕಿದ್ದರು. ಇವರ ಪತ್ನಿ ಮನೆ ಮಣಿನಾಲ್ಕೂರು ಗ್ರಾಮದ ಅಂಗರಗಂಡಿಯಲ್ಲಿದ್ದು, ಯಶೋಧರ ಅವರು ಮನೆಯಿಂದ ಹೋದವರು ಸಂಜೆಯಾದರೂ ಮನೆಗೆ ಬಾರದಿದ್ದರಿಂದ ಈ ವೇಳೆ ಶರ್ಟ್, ಚಪ್ಪಲಿ ನದಿ ತೀರದಲ್ಲಿ ಕಂಡುಬಂದಿತ್ತು. ಸ್ಥಳೀಯರು ನದಿಯಲ್ಲಿ ಹುಡುಕಾಡಿದ್ದರೂ ಪತ್ತೆಯಾಗಿರಲಿಲ್ಲ. ಶನಿವಾರ ಬೆಳಿಗ್ಗೆ ಸ್ಥಳೀಯ ನಿವಾಸಿ, ದೋಣಿ ನಾವಿಕ ಇಸಾಕ್ ಎಂಬವರು ಮೃತದೇಹವನ್ನು ಪತ್ತೆಹಚ್ಚಿ, ನದಿಯ ತೀರಕ್ಕೆ ತಂದು ಹಾಕಿದ್ದಾರೆ. ಈಬಗ್ಗೆ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆರೆಯಲ್ಲಿ ಮುಳುಗಿ ಕಾರ್ಮಿಕನ ದುರ್ಮರಣ

ಮಡಿಕೇರಿ: ಕೆರೆಯಲ್ಲಿ ಈಜಲು ತೆರಳಿದ ಕಾರ್ಮಿಕನೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಸಿದ್ದಾಪುರ ಠಾಣಾ ವ್ಯಾಪ್ತಿಯ ಹಾಲುಗುಂದ ಗ್ರಾಮದಲ್ಲಿ ಸಂಭವಿಸಿದೆ. ಹಾಲುಗುಂದ ಗ್ರಾಮದ ನಿವಾಸಿ ಅರುಣ್ ಎಂಬವರ ಕಾಫಿ ತೋಟದಲ್ಲಿ ಕಾರ್ಮಿಕನಾಗಿ ಕೆಲಸ ಮಾಡಿಕೊಂಡಿರುವ ಅಣ್ಣಪ್ಪ (26) ಮೃತ ದುರ್ದೈವಿ. ಗುರುವಾರ ಸಂಜೆ 6.45ರ ಸುಮಾರಿಗೆ ಕಾಫಿ ತೋಟದ ಕೆರೆಯಲ್ಲಿ ಈಜಲು ತೆರಳಿದಾಗ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ್ದಾರೆ. ಈತನೊಂದಿಗೆ ಇದ್ದ ಇತರ ಕಾರ್ಮಿಕರು ಅಣ್ಣಪ್ಪನನ್ನು ಹುಡುಕಾಡಿದಾಗ ಈತ ಪತ್ತೆಯಾಗಿಲ್ಲ. ಬಳಿಕ ಕೆರೆಯ ಒಳಗೆ ಹುಡುಕಾಡಿದಾಗ ಮೃತ ದೇಹ ಪತ್ತೆಯಾಗಿದೆ. ಈ ಬಗ್ಗೆ ಮೃತ ಅಣ್ಣಪ್ಪನ ತಾಯಿ ಕಾಮಿ ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸ್ಥಳಕ್ಕೆ ತೆರಳಿದ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಯುವಕ ಆತ್ಮಹತ್ಯೆ

ಕೊಣಾಜೆ: ಪಾವೂರು ಸಮೀಪದ ನಾಗಮೂಲೆ ಎಂಬಲ್ಲಿ ಯುವಕನೋರ್ವ ನೇಣುಬಿಗಿದು ಆತ್ಮಹತ್ಯೆಗೈದ ಘಟನೆ ಸಂಭವಿಸಿದೆ. ಪಾವೂರು ನಾಗಮೂಲೆ ನಿವಾಸಿ ಗಣೇಶ್ ಎಂಬವರ ಪುತ್ರ ಪುನೀತ್ (28) ಎಂಬಾತನೇ ಆತ್ಮಹತ್ಯೆಗೈದ ಯುವಕನಾಗಿದ್ದಾನೆ. ಈತ ಗುರುವಾರದಿಂದ ಮನೆಯಿಂದ ನಾಪತ್ತೆಯಾಗಿದ್ದು ಶುಕ್ರವಾರ ತಮ್ಮಮನೆ ಸಮೀಪದ ಮರವೊಂದಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ಕಂಡು ಬಂದಿತ್ತು. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಈ ಬಗ್ಗೆ ಕೊಣಾಜೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾರಂಗಿ ಹಿನ್ನೀರಿನಲ್ಲಿ ಮುಳುಗಿ ತಮಿಳುನಾಡು ವಿದ್ಯಾರ್ಥಿ ಸಾವು

ಮಡಿಕೇರಿ/ಸುಂಟಿಕೊಪ್ಪ: ಹಾರಂಗಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಿ ತಮಿಳುನಾಡು ಮೂಲದ ವಿದ್ಯಾರ್ಥಿಯೊಬ್ಬ ಸಾವಿಗೀಡಾಗಿರುವ ಘಟನೆ ಶನಿವಾರ ಪೂರ್ವಾಹ್ನ ಹೇರೂರುವಿನಲ್ಲಿ ನಡೆದಿದೆ. ತಮಿಳುನಾಡು ರಾಜ್ಯದ ಮಧುರೈ ನಿವಾಸಿ, ಪ್ರಸ್ತುತ ಬೆಂಗಳೂರಿನ ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದ ಸುದರ್ಶನ್ (22) ಮೃತ ವಿದ್ಯಾರ್ಥಿ. ಕಾಲೇಜಿನ ತಂಡವೊಂದು ಕೊಡಗು ಜಿಲ್ಲೆಗೆ ಪ್ರವಾಸಕ್ಕೆಂದು ಬಂದಿದ್ದು, ಶನಿವಾರ ಪೂರ್ವಾಹ್ನ ಹೇರೂರಿನಲ್ಲಿ ಹಾರಂಗಿ ಜಲಾಶಯದ ಹಿನ್ನೀರಿನ ವೀಕ್ಷಣೆಗೆ ತೆರಳಿತ್ತು. ಈ ತಂಡದ ಪೈಕಿ ಸುದರ್ಶನ್ ನೀರಿಗೆ ಇಳಿದಿದ್ದು, ನಂತರ ಮೇಲಕ್ಕೆ ಬರಲಾಗದೆ ಉಸಿರು ಚೆಲ್ಲಿದ್ದಾನೆ. ಸ್ಥಳಕ್ಕೆ ಸುಂಟಿಕೊಪ್ಪ ಠಾಣಾಧಿಕಾರಿ ಮೋಹನ್ ರಾಜ್ ಮತ್ತು ಸಿಬ್ಬಂದಿಗಳು ತೆರಳಿ ಪ್ರಕರಣ ದಾಖಲಿಸಿಕೊಂಡಿದ್ದು, ಸ್ಥಳೀಯ ಮುಳುಗು ತಜ್ಞರು, ಪೊಲೀಸರು, ದುಬಾರೆ ರ್‍ಯಾಫ್ಟಿಂಗ್ ತಂಡ, ಅಗ್ನಿಶಾಮಕ ದಳದ ಸಿಬ್ಬಂದಿ ನೆರವಿನಿಂದ ಮೃತದೇಹವನ್ನು ಹೊರಕ್ಕೆ ತೆಗೆಯಲಾಯಿತು. ಸುಂಟಿಕೊಪ್ಪ ಹೋಬಳಿಯ ಹಾದ್ರೆ ಮತ್ತು ಹೇರೂರು ಗ್ರಾಮವು ಮೇಲ್ನೋಟಕ್ಕೆ ಹಾರಂಗಿ ಹಿನ್ನೀರಿನಿಂದಾಗಿ ಅದ್ಭುತವಾದ ಪ್ರವಾಸಿ ತಾಣವಾಗಿದೆ. ಆದರೆ ಪ್ರವಾಸೋದ್ಯಮ ಇಲಾಖೆ, ಕಾವೇರಿ ನೀರಾವರಿ ನಿಗಮ, ಅರಣ್ಯ ಇಲಾಖೆ ಸೇರಿದಂತೆ ಜಿಲ್ಲಾಡಳಿತ ಈ ಪ್ರದೇಶವನ್ನು ಗಮನಿಸದೇ ಇರುವುದರಿಂದ ಸಾಕಷ್ಟು ಅನಾಹುತ ಹಾಗೂ ಪ್ರವಾಸಿಗರ ಜೀವಕ್ಕೆ ಮೃತ್ಯು ಕೂಪವಾಗುತ್ತಿದೆ.


ವಾಣಿಜ್ಯ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ | ಕಂಗಾಲಾಗಿದೆ ಆಹಾರೋದ್ಯಮ ಕ್ಷೇತ್ರ

ಮತ್ತಷ್ಟು ಹೊಟೇಲ್, ಕ್ಯಾಂಟೀನ್ ಬಂದ್

ಮಂಗಳೂರು/ಉಡುಪಿ: ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ತೀವ್ರ ವ್ಯತ್ಯಯ ಉಂಟಾಗಿದ್ದು, ದಕ್ಷಿಣ ಕನ್ನಡ ಉಡುಪಿಯಾದ್ಯಂತ ನೂರಾರು ಹೋಟೆಲ್, ಕ್ಯಾಂಟೀನ್‌ಗಳು ಶಟರ್ ಎಳೆದಿವೆ!.

ಮಂಗಳೂರು ಮತ್ತು ಉಡುಪಿಯಲ್ಲಿ ಶನಿವಾರವೂ ಹಲವು ಕ್ಯಾಂಟೀನ್‌ಗಳು ಮುಚ್ಚಿದ್ದವು. ಈ ನಡುವೆ ಕೆಲವು ಗ್ಯಾಸ್ ಏಜೆನ್ಸಿಗಳು ಕೃತಕ ಅಭಾವ ಸೃಷ್ಟಿಸಿ ಗ್ಯಾಸ್ ಬೆಲೆ ದುಪ್ಪಟ್ಟು ಪಡೆದು ಲಾಭ ಪಡೆಯುತ್ತಿರುವ ಬಗ್ಗೆಯೂ ಆಕ್ರೋಶ ವ್ಯಕ್ತವಾಗಲಾರಂಭಿಸಿದೆ.

ಗ್ಯಾಸ್ ಅಭಾವದಿಂದಾಗಿ ನಗರದಾದ್ಯಂತ ಹಲವೆಡೆ ಹೋಟೆಲ್ ಮುಚ್ಚುತ್ತಿರುವ ಸೂಚನೆಯನ್ನು ಗ್ರಾಹಕರಿಗೆ ನೀಡಲಾಗಿದೆ. ಶುಕ್ರವಾರದವರೆಗೆ ತೆರೆದಿದ್ದ ಬಹುತೇಕ ಕ್ಯಾಂಟೀನ್, ಹೋಟೆಲ್‌ಗಳು ಗ್ಯಾಸ್ ಮುಗಿದ ಕಾರಣದಿಂದಾಗಿ ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿವೆ. ಇದರಿಂದ ದೂರದೂರುಗಳಿಂದ ನಗರಕ್ಕೆ ಬಂದವರು ಪೇಚಿಗೆ ಸಿಲುಕಿದಂತಾಗಿತ್ತು. ಕ್ಯಾಂಟೀನ್‌ಗಳಲ್ಲಿ ಉಪಾಹಾರ ಸೇವಿಸಿ ದಿನಕಳೆಯುತ್ತಿದ್ದ ಬಹುತೇಕ ಕಾರ್ಮಿಕರು, ಪರವೂರಿನಿಂದ ಆಗಮಿಸಿದ ಮಂದಿ ಇದೀಗ ಅನಿವಾರ್ಯವಾಗಿ ದೊಡ್ಡ ಹೋಟೆಲ್‌ಗಳನ್ನು ಅವಲಂಭಿಸುವಂತಾಗಿದೆ. ಮಂಗಳೂರಿನ ಬೀದಿ ಬದಿಯಲ್ಲಿ ನೂರಾರು ಮೊಬೈಲ್ ಕ್ಯಾಂಟೀನ್‌ಗಳು ಕಾರ್ಯಾಚರಿಸುತ್ತಿದ್ದು, ಇದೀಗ ಬಹುತೇಕ ಕ್ಯಾಂಟೀನ್‌ಗಳ ಬಂದ್ ಆಗಿವೆ.



ಹಲವೆಡೆ ಪ್ರತಿಭಟನೆ

ಗ್ಯಾಸ್ ಅಭಾವದಿಂದಾಗಿ ಹಲವೆಡೆ ಪ್ರತಿಭಟನೆಗಳೂ ನಡೆದಿವೆ. ಮಂಗಳೂರಿನಲ್ಲಿ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆದರೆ ಉಡುಪಿಯಲ್ಲಿ ರಿಕ್ಷಾ ಚಾಲಕರು ಪ್ರತಿಭಟನೆ ನಡೆಸಿದ್ದಾರೆ.

ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ರಸ್ತೆ ಬದಿಯಲ್ಲೇ ಕಟ್ಟಿಗೆ ಒಲೆಯ ಮೂಲಕ ಚಹಾ ತಿಂಡಿ ತಯಾರಿಸಿ ದ.ಕ. ಜಿಲ್ಲಾ ಮಹಿಳಾ ಕಾಂಗ್ರೆಸ್‌ನ ನಗರ ಘಟಕದ ವತಿಯಿಂದ ಶನಿವಾರ ನಗರದ ಮಿನಿ ವಿಧಾನಸೌಧದ ಎದುರು ವಿನೂತನ ಪ್ರತಿಭಟನೆ ನಡೆಯಿತು.

> **ಪ್ರಸ್ತುತ ಎಲ್ ಪಿಜಿ ಗ್ಯಾಸ್ ಕೊರತೆ ಪೂರೈಕೆಯಲ್ಲಿ ವ್ಯತ್ಯಯ ಇರುವುದು ನಿಜ. ಒಂದು ಸಿಲಿಂಡರ್ ಖರೀದಿ ಮಾಡಿ 25 ದಿನಗಳ ಅವಧಿಗೆ ಮತ್ತೊಂದು ಸಿಲಿಂಡರ್ ಬುಕ್ಕಿಂಗ್ ಮಾಡಬಾರದು ಎಂದು ಸೂಚಿಸಲಾಗುತ್ತಿದೆ.**
> ■ ಗ್ಯಾಸ್ ಏಜೆನ್ಸಿ ಸಿಬ್ಬಂದಿ, ಉಡುಪಿ

ಖಾಲಿ ಗ್ಯಾಸ್ ಸಿಲಿಂಡರ್‌ಗಳನ್ನು ಒಲೆಯ ಅಕ್ಕಪಕ್ಕ ಇರಿಸಿದ ಪ್ರತಿಭಟನಾಕಾರರು ಧಿಕ್ಕಾರ ಘೋಷಣೆಗಳನ್ನು ಕೂಗುತ್ತಲೇ ಕಟ್ಟಿಗೆ ಒಲೆಯಲ್ಲಿ ಚಹಾ ತಿಂಡಿ ತಯಾರಿಸಿ ಸಾರ್ವಜನಿಕರಿಗೆ ಹಂಚಿದರು.

ಬುಕ್ಕಿಂಗ್ ಸಮಸ್ಯೆ

ಅಡುಗೆ ಅನಿಲ ಬುಕ್ಕಿಂಗ್ ಸಮಸ್ಯೆಯೂ ಇದೀಗ ಹೆಚ್ಚಿನ ಕಡೆ ಜನತೆಯನ್ನು ಕಾಡಲಾರಂಭಿಸಿದೆ. ಗ್ಯಾಸ್ ಬುಕ್ಕಿಂಗ್ ಮಾಡಲು ನಂಬರ್ ಒತ್ತಿದರೆ ನಂಬರ್ ಡಯಲ್‌ಆಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್‌ಪಿಜಿ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯವನ್ನು ಬಂಡವಾಳ ಮಾಡಿಕೊಂಡಿರುವ ಕೆಲವು ಏಜೆನ್ಸಿಗಳು ಜಿಲ್ಲೆಯಲ್ಲಿ 'ಕೃತಕ ಕೊರತೆ' ಸೃಷ್ಟಿಸಿರುವ ಆರೋಪವೂ ವ್ಯಕ್ತವಾಗಿದೆ.

ಉಡುಪಿ ಜಿಲ್ಲೆಯಲ್ಲಿ ಇಂಡೇನ್ ಗ್ಯಾಸ್ ಗ್ರಾಹಕರು ಸುಲಭವಾಗಿ ಗ್ಯಾಸ್ ಬುಕ್ ಮಾಡಲು ಬಳಸುತ್ತಿದ್ದ ಮಿಸ್ಡ್ ಕಾಲ್ ಸಂಖ್ಯೆ ಕಳೆದ ಕೆಲವು ದಿನಗಳಿಂದ ಸಂಪರ್ಕಕ್ಕೆ ಸಿಗುತ್ತಿಲ್ಲ. ಈ ಬಗ್ಗೆ ಗ್ಯಾಸ್ ಏಜೆನ್ಸಿಗಳನ್ನು ಪ್ರಶ್ನಿಸಿದರೆ, ಹಿಂದಿನ ಸಿಲಿಂಡರ್ ಪಡೆದು 45 ದಿನಗಳು ಪೂರ್ಣಗೊಳ್ಳದೆ ಹೊಸ ಬುಕ್ಕಿಂಗ್ ಮಾಡಲು ಸಾಧ್ಯವಿಲ್ಲ ಎಂಬ ವಿಚಿತ್ರ ಉತ್ತರ ಸಿಗುತ್ತಿದೆ. ಸರ್ಕಾರದ ಅಧಿಕೃತ ನಿಯಮಗಳ ಪ್ರಕಾರ ಎರಡು ಸಿಲಿಂಡರ್ ಹೊಂದಿರುವವರಿಗೆ 15 ರಿಂದ 30 ದಿನಗಳ ಅಂತರವಿರಬೇಕು. ಆದರೆ, ಏಜೆನ್ಸಿಗಳು ಸ್ವಯಂಪ್ರೇರಿತವಾಗಿ ಹೇರುತ್ತಿರುವ ಈ 45 ದಿನಗಳ ನಿಯಮವು ಕೃತಕ ಅಭಾವ ಸೃಷ್ಟಿಸುವ ತಂತ್ರವೇ ಎಂಬ ಅನುಮಾನ ಮೂಡಿಸಿದೆ.

ಮಾರುಕಟ್ಟೆಯಲ್ಲಿ ಗ್ಯಾಸ್ ಪೂರೈಕೆಯನ್ನು ನಿಯಂತ್ರಿಸಿ, ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡಲು ಅಥವಾ ಸಣ್ಣ ಹೊಟೇಲ್‌ಗಳಿಗೆ ಅಕ್ರಮವಾಗಿ ವರ್ಗಾಯಿಸಲು ಇಂತಹ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆಯೇ ಎಂಬ ಪ್ರಶ್ನೆ ಉದ್ಭವಿಸಿದೆ.

ಹೊಟೇಲ್ ಉದ್ಯಮಕ್ಕೆ ಭಾರಿ ಪೆಟ್ಟು

ಉಡುಪಿ ಮತ್ತು ದಕ್ಷಿಣ ಕನ್ನಡದ ಪ್ರಮುಖ ಆರ್ಥಿಕ ಮೂಲವಾಗಿರುವ ಹೋಟೆಲ್ ಉದ್ಯಮ ಈ ಬಿಕ್ಕಟ್ಟಿನಿಂದ ಕಂಗಾಲಾಗಿದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆಯಲ್ಲೂ ವಿಳಂಬವಾಗುತ್ತಿರುವುದರಿಂದ, ಹೊಟೇಲ್ ಮಾಲೀಕರು ಅಡುಗೆ ತಯಾರಿಕೆಗೆ ಪರದಾಡುತ್ತಿದ್ದಾರೆ. ಇದು ಮುಂದುವರಿದಲ್ಲಿ ಹೊಟೇಲ್ ತಿಂಡಿ-ತಿನಿಸುಗಳ ಬೆಲೆ ಏರಿಕೆಯಾಗುವ ಭೀತಿ ಗ್ರಾಹಕರನ್ನು ಕಾಡುತ್ತಿದೆ.

ಹಿರಿಯ ಪತ್ರಕರ್ತ ಕೆ.ಆನಂದ ಶೆಟ್ಟಿಗೆ ಕೆಯುಡಬ್ಲ್ಯುಜೆ ದತ್ತಿ ಪ್ರಶಸ್ತಿ ಪ್ರದಾನ

ಮಂಗಳೂರು: ಬೆಂಗಳೂರಿನ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಹೊಸ ದಿಗಂತ ಪತ್ರಿಕೆಯ ನಿಕಟಪೂರ್ವ ಮುಖ್ಯ ವರದಿಗಾರ ಕೆ.ಆನಂದ ಶೆಟ್ಟಿ ಅವರಿಗೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕ ಮಾಧ್ಯಮ ಅಕಾಡೆಮಿ ಕೊಡಮಾಡುವ 2025ನೆಯ ಸಾಲಿನ ಕೆಯುಡಬ್ಲ್ಯುಜೆ ದತ್ತಿ ಪ್ರಶಸ್ತಿಯನ್ನು ಪ್ರದಾನ ಮಾಡಿದರು.



ಮಾಧ್ಯಮ ಕ್ಷೇತ್ರದಲ್ಲಿ ಮೂರೂವರೆ ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ಕೆ.ಆನಂದ ಶೆಟ್ಟಿ ಅವರಿಗೆ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ರೋಟರಿ ವಂದನಾ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ವಾರ್ಷಿಕ ಪ್ರಶಸ್ತಿ, ಪ್ರೆಸ್ ಕ್ಲಬ್ ಪುರಸ್ಕಾರ, ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ಪ್ರಶಸ್ತಿ ಸೇರಿದಂತೆ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ.

ನ್ಯಾಯಾಧೀಶರೆದುರು ಸಿಹಿ ಹಂಚಿ, ಹಾರ ಬದಲಿಸಿಕೊಂಡರು

ವಿಚ್ಛೇದನ ಬಯಸಿ ದೂರು ತಂದಿದ್ದ ದಂಪತಿ ಲೋಕ ಅದಾಲತ್‌ನಲ್ಲಿ ರಾಜಿ

ಮಂಗಳೂರು: ವಿಚ್ಛೇದನ ಬಯಸಿ ನ್ಯಾಯಾಲಯದ ಮೊರೆ ಹೋಗಿದ್ದ ಜೋಡಿಯೊಂದು ಲೋಕ ಅದಾಲತ್‌ನಲ್ಲಿ ಸಂಧಾನದ ಮೂಲಕ ರಾಜಿಗೊಂಡು ಮರಳಿ ದಾಂಪತ್ಯ ಜೀವನಕ್ಕೆ ಮರಳಿದ ಘಟನೆಯೊಂದಕ್ಕೆ ಶನಿವಾರ ಮಂಗಳೂರಿನ ನ್ಯಾಯಾಲಯ ಸಾಕ್ಷಿಯಾಯಿತು.

ಪರಸ್ಪರ ಹೊಂದಾಣಿಕೆಯ ಕೊರತೆಯಿಂದ ಉಂಟಾದ ಸಮಸ್ಯೆಯಿಂದ 10 ವರ್ಷಗಳ ವೈವಾಹಿಕ ಜೀವನದಿಂದ ವಿಚ್ಛೇದನಕ್ಕೆ ಮುಂದಾಗಿದ್ದ ಜೋಡಿ ನ್ಯಾಯಾಧೀಶರ ಎದುರು ಹಾರ ಬದಲಾಯಿಸಿಕೊಂಡು, ಸಿಹಿ ತಿನ್ನಿಸುವ ಮೂಲಕ ಮತ್ತೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು.

ದ.ಕ. ಜಿಲ್ಲಾ ನ್ಯಾಯಾಲಯದಲ್ಲಿ ಆಯೋಜಿಸಲಾದ ಲೋಕ ಅದಾಲತ್‌ನಲ್ಲಿ ಮಂಗಳೂರಿನ ಈ ಜೋಡಿ ನ್ಯಾಯಾಧೀಶರಾದ ಲಕ್ಷ್ಮೀ ನಾರಾಯಣ ಭಟ್ ಅವರ ಸಮ್ಮುಖದಲ್ಲಿ ರಾಜೀ ಸಂಧಾನದ ಮೂಲಕ ದಾಂಪತ್ಯ ಜೀವನದಲ್ಲಿ ಮುಂದುವರಿಯಲು ಒಪ್ಪಿಕೊಂಡಿತು.

ಲೇಡಿಗೋಷನ್-ನಿರ್ಮಿತ ಕೇಂದ್ರ ವಿವಾದ ಇತ್ಯರ್ಥ

ಲೇಡಿಗೋಶನ್‌ನ ನೂತನ ಕಟ್ಟಡ ನಿರ್ಮಾಣ ಸಂದರ್ಭ ನಿರ್ಮಿತಿ ಕೇಂದ್ರದಿಂದಗುತ್ತಿಗೆದಾರರಿಗೆಪಾವತಿಯಾಗಬೇಕಿದ್ದ ಬಾಕಿ ಮೊತ್ತಕ್ಕೆ ಸಂಬಂಧಿಸಿದ ವಿವಾದವು ಲೋಕ ಅದಾಲತ್‌ನಲ್ಲಿ ರಾಜಿಯಲ್ಲಿ ಇತ್ಯರ್ಥಗೊಂಡಿದೆ.

ಬಡ್ಡಿ ಸೇರಿದಂತೆ ಗುತ್ತಿಗೆದಾರರಿಗೆ ನಿರ್ಮಿತಿ ಕೇಂದ್ರದಿಂದ ಕಕ್ಷಿದಾರ ಗುತ್ತಿಗೆದಾರರಿಗೆ ನೀಡಬೇಕಾಗಿದ್ದ ಸುಮಾರು 4 ಕೋಟಿ ರೂ. ಮೊತ್ತದ ಪರಿಹಾರ ಮೊತ್ತದ ಹಣವನ್ನು ರಾಜೀ ಸಂಧಾನದ ಮೂಲಕ ಸುಮಾರು 2 ಕೋಟಿಗೆ ಸೀಮಿತಗೊಳಿಸಿ ನೀಡುವ ಮೂಲಕ ಸಾರ್ವಜನಿಕ ಹಣ ಉಳಿತಾಯದ ಮೂಲಕ ಪ್ರಕಣವನ್ನು ಸುಖಾಂತ್ಯಗೊಳಿಸಲಾಯಿತು.

ಲೇಡಿಗೋಶನ್ ಆಸ್ಪತ್ರೆಯ ನೂತನ ಕಟ್ಟಡದ ನಿರ್ಮಾಣ (2012-13ರ ಅವಧಿಯಲ್ಲಿ)ದ ವಿಚಾರದಲ್ಲಿ ಗುತ್ತಿಗೆದಾರರು ಹಾಗೂ ನಿರ್ಮಿತಿ ಕೇಂದ್ರದ ನಡುವೆ ವಿವಾದ ಏರ್ಪಟ್ಟು, ಇದನ್ನು ಮಧ್ಯಸ್ಥಿಕೆ (ಆಬ್ರಿಟ್ರೇಶನ್) ಮೂಲಕ ಬಗೆಹರಿಸಲು ವಾದಿ ಹಾಗೂ ಪ್ರತಿವಾದಿಗಳು ಬಯಸಿದ್ದರು. ಅದರಂತೆ ಜಿಲ್ಲಾ ನ್ಯಾಯಾಲಯದಲ್ಲಿ ಆಬ್ರಿಟ್ರೇಶನ್ ಮತ್ತು ಕನ್ಸಿಲೇಶನ್ ಕಾಯ್ದೆಯ ಕಲಂ 34ರ ಅಡಿ ಪರಿಶೀಲನೆಗೊಂಡು ಪ್ರಕರಣವು ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನಕ್ಕೆ ಸಲ್ಲಿಕೆಯಾಗಿತ್ತು.

'ರಾಜೀ ಇತ್ಯರ್ಥದಲ್ಲಿ ಪ್ರಕರಣ ಬಗೆಹರಿಸಲು ಉಭಯ ವಕೀಲರ ಮೂಲಕ ನಾವು ಮುಂದಾಗಿದ್ದು, ಅದರಂತೆ ದ.ಕ. ಜಿಲ್ಲಾಧಿಕಾರಿಯವರು ಕೂಡಾ ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ ಪರಿಹಾರ ಮೊತ್ತವನ್ನು 1,83,23,040 ರೂ.ಗಳೊಂದಿಗೆ ರಾಜಿ ಮಾಡಿಕೊಳ್ಳಲಾಗಿದೆ. ಗುತ್ತಿಗೆದಾರರಿಗೆ ನೀಡಬೇಕಾಗಿದ್ದ ಮೊತ್ತ ಸುಮಾರು 4 ಕೋಟಿ ರೂ.ಗಳಷ್ಟಿದ್ದು, ರಾಜಿಯಿಂದಾಗಿ ಅದನ್ನು ಅರ್ಧಕ್ಕೆ ಇಳಿಕೆ ಮಾಡಿರುವುದರಿಂದ ಸರಕಾರಕ್ಕೂ ಅನುಕೂಲವಾಗಿ ಪರಿಣಮಿಸಿದೆ' ಎಂದು ಲೋಕ ಅದಾಲತ್‌ನಲ್ಲಿ ಶನಿವಾರ ವಿವಾದವನ್ನು ಬಗೆಹರಿಸಿದ ನಾಲ್ಕನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಶ್ರೀಧರ್ ಗೋಪಾಲಕೃಷ್ಣ ಭಟ್ ತಿಳಿಸಿದರು.

'ರಾಜೀಸಂಧಾನದಮೂಲಕಉಭಯ ಕಕ್ಷಿದಾರರು ಒಪ್ಪಿಕೊಳ್ಳುವ ಮೂಲಕ ಪ್ರಕರಣ ಬಗೆಹರಿದಿರುವುದಲ್ಲದೆ, ಸರಕಾರದ ಸಾರ್ವಜನಿಕ ಹಣವೂ ಅರ್ಧಕರ್ಧ ಉಳಿದಿದೆ. ಇದೊಂದು ವಿಶೇಷ ಪ್ರಕರಣವಾಗಿದೆ' ಎಂದು ಪ್ರಧಾನ ಜಿಲ್ಲಾ ನ್ಯಾಯಾಧೀಶ ಬಸವರಾಜು ತಿಳಿಸಿದರು.

ಲೋಕ ಅದಾಲತ್‌ನಲ್ಲಿ ಶನಿವಾರ ಚೆಕ್ ಬೌನ್ಸ್ ಪ್ರಕರಣ, ಮೋಟಾರು ವಾಹನ ಅಪಘಾತ ವಿಮೆ ಪ್ರಕರಣ ಸೇರಿದಂತೆ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಮೂಡುಬಿದಿರೆ ಹಾಗೂ ಸುಳ್ಯ ನ್ಯಾಯಾಲಯಗಳ ಆವರಣದಲ್ಲಿ ರಾಜಿ ಮಾಡಬಹುದಾದ ಸುಮಾರು 4000ದಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲು ಕೈಗೆತ್ತಿಕೊಳ್ಳಲಾಗಿದೆ ಎಂದು ನ್ಯಾ.ಜೈಬುನ್ನಿಸಾ ತಿಳಿಸಿದ್ದಾರೆ.

ಬಂಟ್ವಾಳದ ಪ್ರತಿಭಾವಂತ ಛಾಯಾಗ್ರಾಹಕ ರಕ್ಷಿತ್ ಶೆಟ್ಟಿ ಭೀಕರ ರಸ್ತೆ ಅಪಘಾತಕ್ಕೆ ಬಲಿ

ಬಂಟ್ವಾಳ: ಭಾನುವಾರ (ಮಾ15) ದಂದು ಮಗಳ ಹತ್ತನೇ ವರ್ಷದ ಹುಟ್ಟುಹಬ್ಬದ ಸಂಭ್ರಮಕ್ಕೆ ಸಿದ್ಧತೆ ನಡೆಯಬೇಕಿದ್ದ ಮನೆಯಲ್ಲಿ, ಶನಿವಾರ ತಂದೆಯ ಶವದ ಮುಂದೆ ಪತ್ನಿ, ಮಗಳ ಹಾಗೂ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿದೆ.



ಬಂಟ್ವಾಳದ ಪ್ರತಿಭಾವಂತ ಛಾಯಾಗ್ರಾಹಕ, ಪಾಣೆಮಂಗಳೂರು ಸಮೀಪದ ನಾಟಿ ಎಂಬಲ್ಲಿ ಬಾಡಿಗೆ ಮನೆಯಲ್ಲಿ ವಾಸವಿರುವ ರಕ್ಷಿತ್ ಶೆಟ್ಟಿ (43) ಶುಕ್ರವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತಕ್ಕೆ ಬಲಿಯಾಗಿದ್ದಾರೆ.

ಪಾಣೆಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ಬೈಕ್‌ಗಳ ಮಧ್ಯೆ ನಡೆದ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಬೈಕ್ ಸವಾರ ರಕ್ಷಿತ್ ಶೆಟ್ಟಿ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಬಳಿಕ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಶನಿವಾರ ಬೆಳಿಗ್ಗೆ ಕೊನೆಯುಸಿರೆಳೆದಿದ್ದಾರೆ.

ರಕ್ಷಿತ್ ಶೆಟ್ಟಿ ಅವರು ಸೌತ್ ಕೆನರಾ ಪೋಟೋಗ್ರಾಫರ್ ಅಸೋಸಿಯೇಶನ್‌ನ ಸಕ್ರಿಯ ಸದಸ್ಯರು ಕೂಡ ಆಗಿದ್ದರು. ಇವರ ಅಕಾಲಿಕ ಸಾವಿಗೆ ಅಸೋಸಿಯೇಶನ್ ಕಂಬನಿಮಿಡಿದಿದೆ. ಮಂಗಳೂರಿನ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಪಾರ್ಥಿವ ಶರೀರ ಬರುತ್ತಿದ್ದಾಗ ಬಿ.ಸಿ. ರೋಡಿನ ವೃತ್ತ ಬಳಿ ಪುರಸಭೆ ಸಿಬಂದಿಗಳು ಅಂತಿಮ ದರ್ಶನ ಪಡೆದರು.

ಬಂಟ್ವಾಳ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ.

ಸಂಭ್ರಮದ ಹೊಸ್ತಿಲಲ್ಲಿ ಸೂತಕ

ಭಾನುವಾರ ಮಗಳ ಸಂಭ್ರಮದ ದಿನಕ್ಕಾಗಿ ತಂದೆ ರಕ್ಷಿತ್ ಅವರು ಸಿದ್ಧತೆ ಮಾಡಿಕೊಂಡಿದ್ದರು. ಆದರೆ ಆ ಸಂಭ್ರಮದ ಕ್ಷಣಗಳು ಹತ್ತಿರ ಬರುವ ಮೊದಲೇ ಸಾವು ಇವರನ್ನು ಹಿಂಬಾಲಿಸಿಕೊಂಡು ಬಂದಿದೆ. ಮಗಳ ಬದುಕಿನಲ್ಲಿ ಬೆಳಕು ತುಂಬಬೇಕಿದ್ದ ತಂದೆ, ಈಗ ವಿಧಿಯಾಟಕ್ಕೆ ಮರೆಯಾಗಿದ್ದಾರೆ. ಸಂಭ್ರಮದ ಹೊಸ್ತಿಲಲ್ಲಿದ್ದ ಮನೆಗೆ ಈಗ ಸೂತಕ ಆವರಿಸಿದೆ.

ಆಧಾರ ಸ್ತಂಭವಾಗಿದ್ದರು...

ರಕ್ಷಿತ್ ಅವರ ಕುಟುಂಬಕ್ಕೆ ಹಣೆಬರಹದ ಹೊಡೆತ ಇದೇ ಮೊದಲಲ್ಲ. ಈಗಾಗಲೇ ಇವರ ಸಹೋದರ ರಂಜಿತ್ ಅವರು ಅಪಘಾತಕ್ಕೀಡಾಗಿ ಹಾಸಿಗೆ ಹಿಡಿದಿದ್ದಾರೆ. ಇಡೀ ಮನೆಯ ಆಧಾರಸ್ತಂಭವಾಗಿದ್ದ ರಕ್ಷಿತ್ ಅವರೇ ಇಹಲೋಕ ತ್ಯಜಿಸಿರುವುದು ಆ ಬಡ ಕುಟುಂಬಕ್ಕೆ ದಿಕ್ಕುತೋಚದಂತ ಪರಿಸ್ಥಿತಿ ಎದುರಾಗಿದೆ. ರಕ್ಷಿತ್ ಪತ್ನಿ ಬಂಟ್ವಾಳ ಪುರಸಭೆಯಲ್ಲಿ ಗುತ್ತಿಗೆಯಾಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ.

- ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ಬೈಕ್‌ಗಳ ಮಧ್ಯೆ ನಡೆದ ಅಪಘಾತ
- ಸೌತ್ ಕೆನರಾ ಪೋಟೋಗ್ರಾಫರ್ ಅಸೋಸಿಯೇಶನ್‌ನ ಸಕ್ರಿಯ ಸದಸ್ಯ



ಕಾರ್ಕಳ ತಾಲೂಕಿನ ನಲ್ಲೂರು ಗ್ರಾಮದ ದೇವಿಕೃಪಾ ಶಿಲ್ಪ ಕೇಂದ್ರದಲ್ಲಿ ಕೆತ್ತನೆ ಮಾಡಲಾದ ಶ್ರೀ ಕ್ಷೇತ್ರ ಶಂಕರಪುರದಲ್ಲಿ ನೆಲೆಯಾಗಲಿರುವ ಶ್ರೀ ಮುಖ್ಯಪ್ರಾಣ ದೇವರ 19 ಅಡಿ ಎತ್ತರದ ಏಕ ಶಿಲಾಮೂರ್ತಿಯ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಪ್ರಯುಕ್ತ ಶನಿವಾರ ನಡೆದ 'ಭಜರಂಗಿ ಪ್ರವೇಶ' ಬೃಹತ್ ಮೆರವಣಿಗೆ ಜಾಥಾಕ್ಕೆ ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ನಲ್ಲೂರು ಗ್ರಾಮದ ದೇವಿಕೃಪಾ ಶಿಲ್ಪಕೇಂದ್ರದಿಂದ ಚಾಲನೆ ನೀಡಿದರು.

ಅಭಿವೃದ್ಧಿಗೆ ಮಂಡಿಯೂರಿ ಇನ್ನು ಕೆಲವೇ ದಿನಗಳಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಿದೆ ಬೆಳ್ತಂಗಡಿಗೆ ಬೇರೆ ಬೇರೆ ಭಾಗಗಳನ್ನು ಬೆಸೆಯುತ್ತಿದ್ದ ಕೊಂಡಿ

ಇತಿಹಾಸ ಪುಟದತ್ತ ಹೆಜ್ಜೆಯಿಟ್ಟ 70 ವರ್ಷದ ಹಿರಿಯ 'ಬೆಳ್ತಂಗಡಿ ಸೇತುವೆ'

ಬೆಳ್ತಂಗಡಿ: ಬೆಳ್ತಂಗಡಿ ಸೇತುವೆ ಎಂದೇ ಹೆಸರುವಾಸಿಯಾಗಿದ್ದ ನಿರ್ಮಾಣವೊಂದು ಇತಿಹಾಸ ಪುಟ ಸೇರಲು ಸಿದ್ಧವಾಗಿದೆ. ಇಲ್ಲಿನ ಸೋಮಾವತಿ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಸುಮಾರು 70 ವರ್ಷ ಸಂಚಾರ ಸೇವೆಯನ್ನು ನೀಡಿರುವ ಸೇತುವೆಯು ರಾಷ್ಟ್ರೀಯ ಹೆದ್ದಾರಿ ವಿಸ್ತರಣಾ ನಿಮಿತ್ತ ಶೀಘ್ರದಲ್ಲಿ ತೆರವಾಗಲಿದೆ.

ಬೆಳ್ತಂಗಡಿ ನಗರ ಹಾಗೂ ಗ್ರಾಮೀಣ ಪ್ರದೇಶವನ್ನು ಸಂಪರ್ಕಿಸುವ ದೃಷ್ಟಿ ಯಿಂದ 1957ರಲ್ಲಿ ಈ ಸೇತುವೆ ಕಟ್ಟಲಾಗಿತ್ತು. ಬೆಳ್ತಂಗಡಿಗೆ ಬೇರೆ ಬೇರೆ ಭಾಗಗಳನ್ನು ಬೆಸೆಯುವ ಕೊಂಡಿಯಾಗಿದ್ದ ಸೇತುವೆ ಕೆಲವೇ ದಿನಗಳಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಿದೆ. ಬೆಳ್ತಂಗಡಿಯ ಪ್ರಮುಖ ಸೇತುವೆ ಎನಿಸಿ ಕೊಂಡಿದ್ದ ಇದು ಪುಂಜಾಲಕಟ್ಟೆ- ಚಾರ್ಮಾಡಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯ ಅಂಗವಾಗಿ ಮುಖ್ಯ ಹೆದ್ದಾರಿ ಬದಿ ಸರ್ವೀಸ್ ರಸ್ತೆ ನಿರ್ಮಾಣಕ್ಕಾಗಿ ಮತ್ತೊಂದು ಸೇತುವೆ ನಿರ್ಮಾಣದ ದೃಷ್ಟಿಯಿಂದ ಶೀಘ್ರದಲ್ಲಿ ಹಳೆ ಸೇತುವೆ ತೆರವಾಗಲಿದೆ.





ಈ ಹಳೆಯ ಸೇತುವೆಯ ನಾಲ್ಕು ಮೂಲೆಗಳಲ್ಲಿ ಕಂಬಗಳನ್ನು ನಿರ್ಮಿಸಿ ಅದರ ಮೇಲೆ ಅಶೋಕ ಸ್ತಂಭವನ್ನು ಅಳವಡಿಸಲಾಗಿತ್ತು. ಕಂಬದಲ್ಲಿರುವ ಅಮೃತ ಶಿಲೆಯ ಮಾಹಿತಿ ಪ್ರಕಾರ 1957ರ ಜುಲೈ 8 ರಂದು ಮೈಸೂರು ರಾಜ್ಯದ ಇಲಾಖೆಯ ಲೋಕೋಪಯೋಗಿ ಸಚಿವರಾಗಿದ್ದ ಎಚ್.ಕೆ.ವೀರಣ್ಣ ಗೌಡ ಸೇತುವೆ ಉದ್ಘಾಟಿಸಿದ್ದರು. 70 ವರ್ಷ ವಾದರೂ ಕೆಲವು ಕಡೆ ಶೈಥಿಲ್ಯ ಬಿಟ್ಟರೆ ಗಟ್ಟಿಯಾಗಿಯೇ ಇದೆ. ಆದರೆ ಇಂದಿನ ವಾಹನ ದಟ್ಟಣೆಯಿಂದಾಗಿ ಇದು ಕಿರಿದಾಗಿ ಕಾಣುತ್ತಿದೆ. ಕಾಮಗಾರಿಯ ದೃಷ್ಟಿಯಿಂದ ಹೊಸ ಸೇತುವೆ ನಿರ್ಮಾಣಕ್ಕಾಗಿ ಹಳೆಯ ಸೇತುವೆಯನ್ನು ತೆರವು ಮಾಡುವುದು ಅನಿವಾರ್ಯವಾಗಿದೆ.

ಈ ಭಾಗದಲ್ಲಿ ಮುಖ್ಯ ಹೆದ್ದಾರಿಯ ಜತೆಗೆ ಎರಡೂ ಬದಿಗಳಲ್ಲಿ ಸರ್ವೀಸ್ ರಸ್ತೆಗಳು ನಿರ್ಮಾಣವಾಗುತ್ತಿದ್ದು, ಈಗಾಗಲೇ ಮುಖ್ಯ ಸೇತುವೆ ಹಾಗೂ ಒಂದು ಬದಿಯ ಸರ್ವೀಸ್ ರಸ್ತೆಯ ಸೇತುವೆಯ ಕಾಮಗಾರಿ ಪೂರ್ಣಗೊಂಡಿದೆ. ಇದೀಗ ಮತ್ತೊಂದು ಸೇತುವೆ ನಿರ್ಮಿಸಬೇಕಾದರೆ ಹಳೆಯ ಸೇತುವೆ ತೆರವು ಅನಿವಾರ್ಯವಾಗಿದೆ. ಬೆಳ್ತಂಗಡಿ ನಗರ ಹಾಗೂ ಲಾಯಿಲ ಎರಡೂ ಕಡೆಯಲ್ಲೂ ಹಳೆಯ ಸೇತುವೆ ಸಂಪರ್ಕ ರಸ್ತೆಗಳು ಇಳಿಜಾರಿನಿಂದ ಕೂಡಿದ್ದು ಅಂದಿನ ವ್ಯವಸ್ಥೆಗೆ ಅದು ಸೂಕ್ತವಾಗಿತ್ತು.

ಆದರೆ ಈಗಿನ ಹೆದ್ದಾರಿಯು ಇಳಿಜಾರನ್ನು ತಪ್ಪಿಸಿ ನೇರವಾಗಿ ಸಾಗಬೇಕಿರುವುದರಿಂದ ಪ್ರಸ್ತುತ ಹೊಸದಾಗಿ ನಿರ್ಮಾಣಗೊಂಡಿರುವ ಸೇತುವೆಗಳು ಸಾಕಷ್ಟು ಎತ್ತರದಲ್ಲಿ ನಿರ್ಮಾಣಗೊಂಡಿದ್ದು, ಮತ್ತೊಂದು ಸೇತುವೆ ಕೂಡ ಅಷ್ಟೇ ಎತ್ತರ ಪ್ರದೇಶದಲ್ಲಿ ನಿರ್ಮಾಣವಾಗಲಿದೆ. ಪ್ರಸ್ತುತ ಬೆಳ್ತಂಗಡಿ ಭಾಗದಿಂದ ಲಾಯಿಲ ಕಡೆಗೆ ತೆರಳುವ ವಾಹನಗಳು ಹಳೆ ಸೇತುವೆಯಲ್ಲಿ ಸಾಗುತ್ತಿದ್ದು ಬೆಳ್ತಂಗಡಿ ನಗರಕ್ಕೆ ಆಗಮಿಸುವ ವಾಹನಗಳು ಹೊಸ ಸೇತುವೆಯ ಮೂಲಕ ಸಂಚರಿಸುತ್ತಿದೆ. ಮುಂದೆ ಎರಡೂ ಬದಿಯ ವಾಹನಗಳು ಹೊಸ ಸೇತುವೆಯಲ್ಲೇ ಸಂಚರಿಸಿದ ಬಳಿಕ ಹಳೆ ಸೇತುವೆಯ ತೆರವು ಕಾರ್ಯ ನಡೆಯಲಿದೆ.

ಪುಂಜಾಲಕಟ್ಟೆ-ಚಾರ್ಮಾಡಿ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ವೇಗವಾಗಿ ಸಾಗುತ್ತಿದೆ. ಮಡಂತ್ಯಾರು, ಗುರುವಾಯನಕೆರೆ, ಬೆಳ್ತಂಗಡಿ, ಉಜಿರೆ ಮೊದಲಾದ ಜಂಕ್ಷನ್ ಪ್ರದೇಶಗಳಲ್ಲಿ ಕಾಮಗಾರಿ ಬಾಕಿ ಇದೆ. ಟೆಂಡರ್ ಅವಧಿಯ ಪ್ರಕಾರ 2026ರ ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಮುಗಿಯಬೇಕಾಗಿದೆ. ಆದರೆ ಜೂನ್ ಬಳಿಕ ಮಳೆಯಿಂದ ಕಾಮಗಾರಿ ನಡೆಸುವುದು ಕಷ್ಟಸಾಧ್ಯವಾಗಿರುವುದರಿಂದ ಬಹುತೇಕ ಕಾಮಗಾರಿಗಳನ್ನು ಜೂನ್ ತಿಂಗಳೊಳಗೆ ಮುಗಿಸುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ಇಲಾಖೆ ಮೂಲಗಳು ತಿಳಿಸಿದೆ.

ಹೊಸ ಸೇತುವೆ

> **ಸರ್ವೀಸ್ ರಸ್ತೆಯ ನಿರ್ಮಾಣಕ್ಕಾಗಿ ಹೊಸ ಸೇತುವೆ ನಿರ್ಮಾಣಗೊಳ್ಳಬೇಕಿರುವುದರಿಂದ ಬೆಳ್ತಂಗಡಿಯ ಹಳೆ ಸೇತುವೆಯನ್ನು ತೆರವು ಮಾಡಲಾಗುತ್ತಿದ್ದು, ಅಲ್ಲಿ ಹೊಸ ಸೇತುವೆ ನಿರ್ಮಾಣಗೊಳ್ಳುತ್ತದೆ.**
> ■ ಕೆ.ಟಿ.ಚಂದ್ರಶೇಖರ್, ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಇಲಾಖೆ, ಮಂಗಳೂರು

ಹಳೆ ಸೇತುವೆ ತೆರವು

ಪ್ರಸ್ತುತ ಪುಂಜಾಲಕಟ್ಟೆ-ಚಾರ್ಮಾಡಿ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯು ಶೇ. 80ರಷ್ಟು ಪೂರ್ತಿಗೊಂಡಿದ್ದು, ಈ ವರ್ಷಾಂತ್ಯದೊಳಗೆ ಪೂರ್ಣಗೊಳ್ಳಬೇಕಿದೆ. ಈ ವರ್ಷದ ಜೂನ್ ತಿಂಗಳೊಳಗೆ ಬಹುತೇಕ ಕಾಮಗಾರಿಯನ್ನು ಪೂರ್ಣಗೊಳಿಸುವ ದೃಷ್ಟಿಯಿಂದ ವೇಗವಾಗಿ ಕೆಲಸಗಳು ನಡೆಸಲಾಗುತ್ತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 15, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ 34° 24° | ಉಡುಪಿ 32° 25°



ಪುಟ 3

ಆಮೆಗತಿಯಲ್ಲಿ ಸಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ!



ಪುಟ 6

ಸಿದ್ದಾಪುರ: ಅಗ್ನಿಶಾಮಕ ಠಾಣೆ ನಿರ್ಮಾಣಕ್ಕೆ 1 ಎಕ್ರೆ ಜಾಗ ಮಂಜೂರು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮಣ್ಣು ಸಾಗಾಟ ಲಾರಿ ಆಟಾಟೋಪಕ್ಕೆ ಒಂದೇ ಸಾಲಿನಲ್ಲಿದ್ದ ಮೂರು ಅಂಗಡಿಗಳು ಧೂಳೀಪಟ



ಮಂಗಳೂರು-ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯ ಗುರುಪುರ-ಕೈಕಂಬ ಕಡೆಯಿಂದ ಮಂಗಳೂರಿನತ್ತ ಕೆಂಪು ಮಣ್ಣು ಸಾಗಾಟ ಮಾಡುತ್ತಿದ್ದ ಬೃಹತ್ ಲಾರಿ, ಚಾಲಕನ ನಿಯಂತ್ರಣ ತಪ್ಪಿ ಗುರುಪುರ ಜಂಕ್ಷನ್‌ನಲ್ಲಿ ಒಂದೇ ಸಾಲಿನಲ್ಲಿದ್ದ ಮೂರು ಅಂಗಡಿಗಳಿಗೆ ಡಿಕ್ಕಿಯಾಗಿದ್ದು, ಅಪಘಾತದಲ್ಲಿ ಲಾರಿ ಚಾಲಕ, ನಿರ್ವಾಹಕ ಹಾಗೂ ಸ್ಥಳೀಯ ಇಬ್ಬರು ಗಾಯಗೊಂಡಿದ್ದಾರೆ. (ವಿವರ ಪುಟ 4)

ಸುತ್ತಮುತ್ತ

ಎಲ್‌ಪಿಜಿ ಪೂರೈಕೆ ವ್ಯತ್ಯಯ: ಮತ್ತಷ್ಟು ಹೊಟೇಲ್‌ಗಳಿಗೆ 'ರಜೆ'

ಮಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆಯಲ್ಲಿ ಆಗಿರುವ ವ್ಯತ್ಯಯದ ಹಿನ್ನೆಲೆಯಲ್ಲಿ ಹೊಟೇಲ್‌ಗಳು ಸಂಕಷ್ಟಕ್ಕೆ ಸಿಲುಕಿವೆ.

'ಗ್ಯಾಸ್' ಇಲ್ಲದೆ ವ್ಯವಹಾರ ಸ್ಥಗಿತ

ನಗರದಲ್ಲಿ ಶುಕ್ರವಾರ ಕೆಲವೊಂದು ಹೊಟೇಲ್‌ಗಳು ಬಾಗಿಲು ಎಳೆದುಕೊಂಡಿದ್ದರೆ ಶನಿವಾರ ಮತ್ತಷ್ಟು ಹೊಟೇಲ್‌ಗಳು ವ್ಯವಹಾರ ಸ್ಥಗಿತಗೊಳಿಸಿವೆ. ಇನ್ನು ಕೆಲವು ಹೊಟೇಲ್‌ಗಳು ಎಲ್‌ಪಿಜಿ ದಾಸ್ತಾನು ಇರುವ ತನಕ ವ್ಯಾಪಾರ ಮುಂದುವರಿಸಲು ಚಿಂತಿಸಿವೆ.

ಹೂ, ಹಣ್ಣು, ಮೀನು ರಫ್ತಿಗೂ ಕೊಳ್ಳಿಯಿಟ್ಟಿದೆ ಕೊಲ್ಲಿಯ ಯುದ್ಧ

ಮಂಗಳೂರು: ಕೊಲ್ಲಿ ಯುದ್ಧ ಪ್ರವಾಸೋದ್ಯಮದ ಮೇಲಷ್ಟೇ ಅಲ್ಲ, ಕರಾವಳಿಯ ವಾಣಿಜ್ಯ ವ್ಯವಹಾರಗಳ ಮೇಲೂ ಅಡ್ಡಪರಿಣಾಮ ಬೀರುತ್ತಿದೆ. ಕೊಲ್ಲಿ ರಾಷ್ಟ್ರಗಳಿಗೆ ಕರಾವಳಿ ಭಾಗದಿಂದ ಹೂವು, ಹಣ್ಣು, ಮೀನುಗಳ ರಫ್ತು ಬಹುತೇಕವಾಗಿ ಸ್ಥಗಿತಗೊಂಡಿದ್ದು, ಏಜೆನ್ಸಿಗಳು, ಕಸ್ಟಮ್, ಕೃಷಿಕರು, ಕಾರ್ಮಿಕರ ಮೇಲೆ ಇದು ನೇರ ಪರಿಣಾಮ ಬೀರುತ್ತಿದೆ. ಕಾರ್ಗೋ ವ್ಯವಸ್ಥೆ ಸಂಪೂರ್ಣ ಸ್ಥಗಿತಗೊಂಡಿದ್ದು, ಸಮಸ್ಯೆ ಸೃಷ್ಟಿಸುತ್ತಿದೆ.

ಕಾರ್ಕಳ ಪರಿಸರದಲ್ಲಿ ಕೂಡಾ ಮಳೆ: ಇಳೆ ತಂಪು ತಂಪು ಕೂಲ್ ಕೂಲ್!

ಮಂಗಳೂರು: ಉಡುಪಿ ಜಿಲ್ಲೆಯ ಕಾರ್ಕಳ ಪರಿಸರದಲ್ಲಿ ಶನಿವಾರ ಸಂಜೆಯ ಬಳಿಕ ಮಳೆಯಾಗಿದೆ. ಸುಡು ಬಿಸಿಲಿಗೆ ನಿಗಿನಿಗಿ ಕೆಂಡವಾಗಿದ್ದ ಇಳೆಗೆ ವಾರಾಂತ್ಯದಲ್ಲಿ ಸುರಿದ ಮಳೆ ತುಸು ತಂಪೆರೆದಿದೆ. ಸತತವಾಗಿ ಏರಿಕೆಯಾಗುತ್ತಿದ್ದ ವಾತಾವರಣ ಉಷ್ಣಾಂಶದಿಂದ ಹೈರಾಣಾಗಿದ್ದ ಜನತೆ ಬೇಸಿಗೆ ಮಳೆಯ ನಿರೀಕ್ಷೆಯಲ್ಲಿದ್ದರು. ಶನಿವಾರ ಕೆಲವು ಹೊತ್ತು ಸುರಿದ ಮಳೆ ನಾಗರಿಕರು, ಕೃಷಿಕ ವಲಯದಲ್ಲಿ ಸಂತಸ ಮೂಡಿಸಿದೆ.

ಕಾಸರಗೋಡು ಜಿಲ್ಲೆಯ ಬಾಯಾರು ಪರಿಸರದಲ್ಲಿ ಇಳೆಗೆ ತಂಪೆರೆದ ಮಳೆ

ಕಾಸರಗೋಡು: ಜಿಲ್ಲೆಯ ಬಾಯಾರು ಪರಿಸರದಲ್ಲಿ ಶನಿವಾರ ಸಂಜೆಯ ಬಳಿಕ ಕೆಲಕಾಲ ಸಾಧಾರಣ ಮಳೆಯಾಗಿದೆ. ಬೇಸಿಗೆ ಮಳೆಯ ನಿರೀಕ್ಷೆಯಲ್ಲಿದ್ದ ಈ ಭಾಗದ ಕೃಷಿಕರಿಗೆ, ನಾಗರಿಕರಿಗೆ ವಾರಾಂತ್ಯದ ಈ ಮಳೆ ಒಂದಿಷ್ಟು ನೆಮ್ಮದಿಯನ್ನು ನೀಡಿದೆ.

ಪಶ್ಚಿಮಘಟ್ಟದ ತಪ್ಪಲಿಗೆ ತಂಪೆರೆದ ಮಳೆ

ವೀಕೆಂಡ್ ಕೂಲ್!

ಕಾಜೂರು, ಕಿಲ್ಲೂರಿನಲ್ಲಿ 'ಗುಡುಗು'

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮಘಟ್ಟದ ತಪ್ಪಲು ಭಾಗದ ಕೆಲವೆಡೆ ಶನಿವಾರ ಸಂಜೆಯ ಬಳಿಕ ತುಂತುರು, ಕೆಲವೆಡೆ ಉತ್ತಮ ಮಳೆಯಾಗಿದೆ.

ಕಳೆದ ಕೆಲವು ದಿನಗಳಿಂದ ಸತತವಾಗಿ ಏರಿಕೆಯಗುತ್ತಿರುವ ವಾತಾವರಣದ ಉಷ್ಣಾಂಶಕ್ಕೆ ವಾರಾಂತ್ಯದಲ್ಲಿ ಸುರಿದ ಈ ಮಳೆ ಅಲ್ಪ ಪ್ರಮಾಣದಲ್ಲಿ ತಂಪೆರೆದಿದೆ.

ಬೆಳ್ತಂಡಿಯಲ್ಲಿ ಉತ್ತಮ ಮಳೆ

ಬೆಳ್ತಂಗಡಿ ತಾಲೂಕಿನ ಉಜಿರೆ, ಧರ್ಮಸ್ಥಳದಲ್ಲಿ ಶನಿವಾರ ಸಂಜೆ ಮಳೆ ಸುರಿದಿದ್ದು, ಬಿಸಿಲಿನ ಬೇಗೆಗೆ ಬಸವಳಿದಿದ್ದ ಜನತೆಗೆ ಮಳೆ ತಂಪೆರೆದಿದೆ. ಮುಂಡಾಜೆ, ಗುರುವಾಯನಕೆರೆ ಮೊದಲಾದೆಡೆ ಹನಿ ಹನಿಯಾಗಿ ಬಿದ್ದಿದೆ. ಉಜಿರೆ, ಧರ್ಮಸ್ಥಳದಲ್ಲಿ ಸುಮಾರು ಅರ್ಧ ಗಂಟೆ ಗುಡುಗು ಸಿಡಿಲು ಇಲ್ಲದೆ ಉತ್ತಮ ಮಳೆ ಸುರಿದಿದೆ. ಗುರುವಾಯನಕರೆ ಪ್ರದೇಶದಲ್ಲಿ ಸಂಜೆ ವೇಳೆ ಮೋಡ ಕವಿದ ವಾತಾವರಣವಿತ್ತು ಬಳಿಕ ಮಳೆ ಸುರಿದಿದೆ. ಕಾಜೂರು -ಕಿಲ್ಲೂರು ಕಡೆ ಗುಡುಗು ಸಿಡಿಲು ಮಾತ್ರ ಇತ್ತು. ಶುಕ್ರವಾರ ಸಂಜೆ ನಾರಾವಿ ಸುತ್ತಮುತ್ತ ಉತ್ತಮ ಮಳೆ ಸುರಿದಿತ್ತು

ಕುಕ್ಕೆ ಪರಿಸರಕ್ಕೆ ತುಂತುರು ಮಳೆ

ಕುಕ್ಕೆ ಸುಬ್ರಹ್ಮಣ್ಯ ಹಾಗೂ ಆಸುಪಾಸಿನಲ್ಲಿ ಶನಿವಾರ ಸಂಜೆಯ ಬಳಿಕ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದ್ದು, ಸುಬ್ರಹ್ಮಣ್ಯ ಹಾಗೂ ಕೊಲ್ಲಮೊಗ್ರ ಸೇರಿದಂತೆ ಇತರೆ ಭಾಗದಲ್ಲಿ ಸಂಜೆ ವೇಳೆಯಲ್ಲಿ ಸುಮಾರು 15 ನಿಮಿಷಗಳ ಕಾಲ ಹನಿಹನಿ ಮಳೆಯಾದರೆ ಇತ್ತ ಸುಳ್ಯ ತಾಲೂಕಿನಾದ್ಯಂತ ಮೋಡ ಕವಿದ ವಾತಾವರಣ ಮಾತ್ರ ಕಾಣಿಸಿಕೊಂಡಿತ್ತು.



ದಕ್ಷಿಣ ಕನಡದಲ್ಲಿ 38 ಡಿಗ್ರಿ ಸೆಲ್ಸಿಯೆಸ್!

ಕರಾವಳಿಯಲ್ಲಿ ತಾಪಮಾನ ಏರಿಕೆ ಮುಂದುವರಿದಿದ್ದು, ಬಿಸಿ ಹಾಗೂ ಆರ್ದ್ರ ವಾತಾವರಣ ಮುಂದುವರಿದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ ತಾಪಮಾನ ಬರೋಬ್ಬರಿ 38 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿದ್ದು, ಕಳೆದ ಕೆಲವು ದಿನಗಳಲ್ಲಿ ಇದು ಅತ್ಯಧಿಕ.

ಗುಡುಗು ಸಹಿತ ಮಳೆಯ ಎಚ್ಚರಿಕೆ

ಕಾಸರಗೋಡು ಜಿಲ್ಲೆ ಸಹಿತ ಕೇರಳದ ವಿವಿಧ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ ಮಾ.16 ಮತ್ತು 17 ರಂದು ಮಿಂಚು, ಗುಡುಗು ಸಹಿತ ಬಿರುಸಿನ ಮಳೆಯಾಗುವ ಸಾಧ್ಯತೆಯಿದೆ ಎಂದು ತಿರುವನಂತಪುರದ ಕೇಂದ್ರ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಈ ಹಿನ್ನೆಲೆಯಲ್ಲಿ ಜನರು ಗರಿಷ್ಠ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಗಿದೆ. ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ. ಕರಾವಳಿ ಭಾಗದ ಜನರು ಜಾಗರೂಕತೆ ಪಾಲಿಸಬೇಕು. ಅಲೆಗಳು ಎತ್ತರಕ್ಕೆ ಅಬ್ಬರಿಸುವ ಲಕ್ಷಣಗಳಿದ್ದು, ಮೀನುಗಾರರು, ಪ್ರವಾಸಿಗರು ಮುನ್ನೆಚ್ಚರಿಕೆಯಿಂದ ಇರಬೇಕು ಎಂದು ಉಲ್ಲೇಖಿಸಲಾಗಿದೆ.

ಬೆಳ್ತಂಗಡಿಗೆ ಮತ್ತೆ ಕಾಡಾನೆ ಆತಂಕ

ಕರೆಂಟ್ ಬೇಲಿಗೂ ಡೋಂಟ್ ಕೇರ್!

ಕೃಷಿಗೆ ಹಾನಿ | ಪೈಪ್‌ಲೈನ್ ಚಿಂದಿ

ಬೆಳ್ತಂಗಡಿ: ಇಲ್ಲಿನ ಮಿತ್ತಬಾಗಿಲು ಗ್ರಾಮದಲ್ಲಿ ಚಾಲು ಸ್ಥಿತಿಯಲ್ಲಿದ್ದ ಸೋಲಾರ್ ಬೇಲಿಯನ್ನು ಮುರಿದು ಕಾಡಾನೆಗಳು ತೋಟಕ್ಕೆ ನುಗ್ಗಿ ಕೃಷಿ ಹಾನಿ ಉಂಟು ಮಾಡಿದ ಘಟನೆ ನಡೆದಿದೆ. ಗ್ರಾಮದ ಮಲಜೋಡಿಯ ನಿವಾಸಿ ಆನಂದ ನಾರಾಯಣ ಎಂಬವರ ತೋಟದ ಸೋಲಾರ್ ಬೇಲಿಯನ್ನು ಮುರಿದ ದೊಡ್ಡ ಆನೆ ಹಾಗೂ ಮರಿಯಾನೆ ಒಳಗೆ ನುಗ್ಗಿ ಹತ್ತಕ್ಕಿಂತ ಅಧಿಕ ಅಡಕೆ ಗಿಡ, ಎರಡು ತೆಂಗಿನ ಮರ ಅಲ್ಲದೆ ತೋಟದ ನೀರಾವರಿ ಪೈಪ್ ಲೈನ್ ಗೂ ಹಾನಿ ಉಂಟುಮಾಡಿವೆ.

ಸೋಲಾರ್ ಬೇಲಿ ಮುರಿದವು

ಮೊದಲಿಗೆ ಒಂದೆಡೆ ಸೋಲಾರ್ ಬೇಲಿ ಮುರಿದು ಒಳ ನುಗ್ಗಿದ ಕಾಡಾನೆಗಳು ಬಳಿಕ ಇನ್ನೊಂದು ಕಡೆಯಿಂದ ಬೇಲಿ ಮುರಿದು ಹೊರ ಹೋಗಿವೆ. ಈ ವೇಳೆ ಹತ್ತು ಸೋಲಾರ್ ಬೇಲಿ ಕಂಬಗಳಿಗೆ, ಬೇಲಿಯ ವ್ಯವಸ್ಥೆಗೆ ಹಾನಿ ಉಂಟಾಗಿದೆ. ಶುಕ್ರವಾರ ಅವರ ಮನೆಯಿಂದ ಸುಮಾರು 100 ಮೀ. ದೂರದಲ್ಲಿ ಆನೆಗಳು ನಿರಂತರ ಘೀಳಿಡುವುದು ಕೇಳಿ ಬರುತ್ತಿದ್ದು ಸ್ಥಳೀಯರಲ್ಲಿ ಭಾರೀ ಭೀತಿಯ ವಾತಾವರಣ ಉಂಟಾಗಿದೆ. ಕಳೆದ ವರ್ಷವೂ ಇವರ ತೋಟಕ್ಕೆ ನುಗ್ಗಿದ ಕಾಡಾನೆ ಅಪಾರ ಹಾನಿ ಮಾಡಿತ್ತು.



ಊರು ಸಮಸ್ಯೆಗಳು ನೂರು

ವಿವಿಧೆಡೆ ಹೆಚ್ಚುತ್ತಿರುವ ವನ್ಯ ಜೀವಿಗಳ ಆಗಮನ

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಈಗ ವನ್ಯ ಜೀವಿಗಳ 'ಗ್ರಾಮ ಭೇಟಿ' ಹೆಚ್ಚಳವಾಗುತ್ತಿದೆ. ಕಾಡಾನೆ, ಕಾಡುಹಂದಿ, ಮುಳ್ಳುಹಂದಿ ಆಗಾಗ ನಾಡಿಗೆ ಭೇಟಿ ನೀಡಿ ಅಪಾರ ಪ್ರಮಾಣದಲ್ಲಿ ಕೃಷಿನಾಶ ಉಂಟುಮಾಡುತ್ತಿವೆ. ಇದಲ್ಲದೆ ಚಿರತೆಗಳ ಹಾವಳಿ ಕೂಡಾ ಹೆಚ್ಚುತ್ತಿದೆ.

ಪುಣ್ಯ ಕ್ಷಣಕ್ಕೆ ಸಾಕ್ಷಿಯಾದ ಪುತ್ತೂರು ಲಕ್ಷ್ಮೀದೇವಿ ಬೆಟ್ಟದ ಶ್ರೀ ಮಹಾಲಕ್ಷ್ಮೀ ಕ್ಷೇತ್ರ

ದೇವಿ ಬಿಂಬಕ್ಕೆ ಸೂರ್ಯನ ಕಿರಣಗಳ ಸ್ಪರ್ಶ!

ಪುತ್ತೂರು: ಇಲ್ಲಿನ ರೈಲು ನಿಲ್ದಾಣದ ಬಳಿಯಲ್ಲಿರುವ ಲಕ್ಷ್ಮೀದೇವಿ ಬೆಟ್ಟದ ಶ್ರೀ ಮಹಾಲಕ್ಷ್ಮೀ ಕ್ಷೇತ್ರದಲ್ಲಿ ಮೀನ ಸಂಕ್ರಮಣದ ದಿನವಾದ ಶನಿವಾರದ ಮುಂಜಾನೆ ವೇಳೆ ಸೂರ್ಯ ಕಿರಣಗಳು ಶ್ರೀಕ್ಷೇತ್ರದ ಮೂರೂ ಬಾಗಿಲುಗಳನ್ನು ದಾಟಿಗರ್ಭಗುಡಿಯಲ್ಲಿನೆಲೆಯಾಗಿರುವ ದೇವಿಯ ಬಿಂಬಕ್ಕೆ ಸ್ಪರ್ಶವಾಯಿತು.

ದೇವಿಗೆ ವಿಶೇಷ ಪೂಜೆ ಅರ್ಪಣೆ

ಶ್ರೀಕ್ಷೇತ್ರದಲ್ಲಿ ಪ್ರತೀ ವರ್ಷದಂತೆ ಈ ವರ್ಷವೂ ಪುಣ್ಯ ಘಟನೆ ನಡೆದಿದ್ದು, ಈ ಸಂದರ್ಭದಲ್ಲಿ ಕ್ಷೇತ್ರದ ಧರ್ಮದರ್ಶಿ ಎನ್. ಐತ್ತಪ್ಪ ಸಪಲ್ಯ ಅವರ ನೇತೃತ್ವದಲ್ಲಿ ಶ್ರೀ ಮಹಾಲಕ್ಷ್ಮೀ ದೇವಿಗೆ ವಿಶೇಷ ಪೂಜೆ ಪುನಸ್ಕಾರಗಳು ನೆರವೇರಿತು. »ಪುಟ 6



ವೇದ, ಘೋಷ ಮಂತ್ರ, ಭಜನಾ ಸಂಕೀರ್ತನೆ

ಶನಿವಾರದ ಮುಂಜಾನೆ ವೇಳೆ ಸೂರ್ಯ ಕಿರಣಗಳು ಶ್ರೀಕ್ಷೇತ್ರದ ಮೂರೂ ಬಾಗಿಲುಗಳನ್ನು ದಾಟಿ ಗರ್ಭಗುಡಿ ಯಲ್ಲಿ ನೆಲೆಯಾಗಿರುವ ದೇವಿಯ ಬಿಂಬಕ್ಕೆ ಸ್ಪರ್ಶವಾದ ವೇಳೆ ವೈದಿಕರಿಂದ ವೇದ, ಘೋಷ ಮಂತ್ರ ಮೊಳಗಿದರೆ ಮಹಿಳೆಯರಿಂದ ಭಜನಾ ಸಂಕೀರ್ತಣೆ ನಡೆಯಿತು. ನೂರಾರು ಮಂದಿ ಭಕ್ತಾದಿಗಳು ಈ ಅಪೂರ್ವ ಕ್ಷಣವನ್ನು ಕಣ್ತುಂಬಿಕೊಂಡು, ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಪುನೀತರಾದರು.

ಇದಕ್ಕೆ ರಾಜ್ಯದ ಏಕೈಕ ದೇವಳ ಎಂಬ ಹೆಗ್ಗಳಿಕೆ

ಮೀನ ಸಂಕ್ರಮಣದ ದಿನ ಗರ್ಭಗುಡಿಯಲ್ಲಿ ನೆಲೆಸಿರುವ ಶ್ರೀ ದೇವಿಯ ಬಿಂಬಕ್ಕೆ ಸೂರ್ಯನ ಕಿರಣಗಳು ಮುಂಜಾನೆಯಲ್ಲಿ ಸ್ಪರ್ಶಿಸುವ ರಾಜ್ಯದ ಏಕೈಕ ದೇವಸ್ಥಾನ ಇದಾಗಿದೆ ಎನ್ನಲಾಗುತ್ತಿದೆ. ಇದಲ್ಲದೆ ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಸ್ಥಾನದಲ್ಲಿ ಮಕರ ಸಂಕ್ರಮಣದ ದಿನ ಸಂಜೆಯ ವೇಳೆಗೆ ಸೂರ್ಯನ ರಶ್ಮಿಯು ಬಿಂಬವನ್ನು ಸ್ಪರ್ಶಿಸುತ್ತದೆ.

ರಸ್ತೆಯಲ್ಲೇ ಕಾಡುಕೋಣಗಳು ಪ್ರತ್ಯಕ್ಷ



ಸವಣೂರು ಸಮೀಪದ ದೇವಶ್ಯ ಕಜೆಯಲ್ಲಿ ಹಾಡಹಗಲು ಕಾಡುಕೋಣಗಳು ಸಾರ್ವಜನಿಕ ರಸ್ತೆಯಲ್ಲಿ ಕಾಣಿಸಿಕೊಂಡಿದ್ದು ಆತಂಕಕ್ಕೆ ಕಾರಣವಾಗಿದೆ. ಸಾರ್ವಜನಿಕರು, ವಿದ್ಯಾರ್ಥಿಗಳು ಸಂಚರಿಸುವ ಈ ರಸ್ತೆಯಲ್ಲಿ ಸುಮಾರು ಎಂಟು ಕಾಡುಕೋಣಗಳಿರುವ ಹಿಂಡು ಸಂಚರಿಸುತ್ತಿದೆ.

ಸಂಕಷ್ಟದಲ್ಲಿ ವಾಣಿಜ್ಯ ಬೆಳೆ | ಮಾರ್ಚ್ ಮಧ್ಯಭಾಗ ಸಮೀಪಿಸಿದರೂ ಬಿದ್ದಿಲ್ಲ ಹನಿ

ಮಳೆಗಾಗಿ ಕಾತರಿಸಿದೆ ಮಲೆನಾಡು ಕೃಷಿಕ್ಷೇತ್ರ

ಕಾಸರಗೋಡು: ಜಿಲ್ಲೆಯಲ್ಲಿ ಈಗ ಉಷ್ಣತೆ ಇನ್ನಷ್ಟು ತೀವ್ರಗೊಳ್ಳುತ್ತಿದ್ದು, ಬೇಸಿಗೆ ಮಳೆ ಲಕ್ಷಣ ಗೋಚರಿಸುತ್ತಿಲ್ಲ, ಮಾರ್ಚ್ ಅರ್ಧ ತಿಂಗಳಾದರೂ ಬೇಸಿಗೆ ಮಳೆ ಸುರಿಯದ ಕಾರಣ ಜಿಲ್ಲೆಯ ಮಲೆನಾಡು ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿಂದಾಗಿ ಕೃಷಿ ಕ್ಷೇತ್ರಕ್ಕೆ ತೀವ್ರ ಪ್ರತಿಕೂಲ ಪರಿಣಾಮ ಎದುರಾಗಿದೆ.

ಕೃಷಿ ಬೆಳೆ ಉತ್ಪಾದನೆ ಕುಂಠಿತ

ತೋಡು, ಹೊಳೆ, ಕೆರೆ, ಕೊಳವೆಬಾವಿ ಮೊದಲಾದ ಜಲಮೂಲಗಳಲ್ಲದೆ ಕೃಷಿಗೆ ಅಗತ್ಯ ನೀರು ಒದಗಿಸುವ ತೆರೆದ ಬಾವಿಗಳು ಕೂಡಾ ಬತ್ತಲಾರಂಭಿಸಿವೆ. ಇದರಿಂದಾಗಿ ಇಲ್ಲಿನ ಮಲೆನಾಡು ಭಾಗದ ಬಹುತೇಕ ಕೃಷಿ ಪ್ರದೇಶ ನಿಧಾನವಾಗಿ ಒಣಗಲಾರಂಭಿಸಿದೆ. ಇದರ ಪರಿಣಾಮವಾಗಿ ಎಲ್ಲೆಡೆ ತೆಂಗು, ಅಡಿಕೆ, ಕಾಳುಮೆಣಸು, ಬಾಳೆ ಮೊದಲಾದ ಕೃಷಿ ಬೆಳೆಗಳ ಉತ್ಪಾದನೆ ಗಣನೀಯ ಕುಂಠಿತ ಗೊಂಡಿದೆ. ಇದಲ್ಲದೆ ತರಕಾರಿಗಳು, ಹಣ್ಣು ಹಂಪಲು ಕೃಷಿ ನಾಶದ ಅಂಚಿಗೆ ಬಂದಿದೆ.



ಸಂಗಮ ವಿಶೇಷ

ರಬ್ಬರ್‌ಗೂ ಸಂಕಷ್ಟ

ರಬ್ಬರನ್ನೇ ಆಶ್ರಯಿಸಿದ ಕೃಷಿಕರು ಕೂಡಾ ಸಂದಿಗ್ಧತೆಯಲ್ಲಿದ್ದಾರೆ. ಬಿಸಿಲಿನ ತಾಪಕ್ಕೆ ಹಾಲು ಕಡಿಮೆಯಾಗಿ ರಬ್ಬರ್ ಟ್ಯಾಪಿಂಗ್ ಕೆಲಸ ಕೆಲವೆಡೆ ನಿಲುಗಡೆಗೊಳಿಸಲಾಗಿದೆ. ಬಿಸಿಲಿನ ತೀವ್ರತೆಗೆ ಟ್ಯಾಪಿಂಗ್‌ಗೆ ಕಾರ್ಮಿಕರು ಕೂಡಾ ಬರುತ್ತಿಲ್ಲ.

ಗೇರು ಕೃಷಿಗೂ ತಟ್ಟಿದ ತಾಪಕೋಪ

ಗೇರು ಕೃಷಿಗೂ ಹವಾಮಾನ ವೈಪರೀತ್ಯ ತೀವ್ರ ಹೊಡೆತ ನೀಡಿದೆ. 35 ಡಿಗ್ರಿಗಿಂತ ಹೆಚ್ಚು ಉಷ್ಣತೆ ಗೇರು ಕೃಷಿಗೆ ದೋಷಕರವಾಗುತ್ತದೆ ಎಂದು ಕೃಷಿ ತಜ್ಞರು ಅಭಿಪ್ರಾಯಪಡುತ್ತಾರೆ.

ಸಂಕಷ್ಟಗಳ ನಡುವೆಯೇ ಏರುಹಾದಿಯಲ್ಲಿ ಗೇರು

ಗೇರಿಗೆ ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಗೇರುಬೀಜಕ್ಕೆ ಉತ್ತಮ ಬೆಲೆಯಿದೆ. ಕಳೆದ ವರ್ಷ ಇದೇ ಸಮಯದಲ್ಲಿ ಕಿಲೋವೊಂದಕ್ಕೆ 140 ರೂ. ಇದ್ದ ಗೇರುಬೀಜಕ್ಕೆ ಈ ವರ್ಷ 180ರೂ. ದರವಿದೆ. ಆದರೆ ಫಸಲು ಇಲ್ಲದಿರುವುದು ಕೃಷಿಕರಿಗೆ ಪ್ರಯೋಜನ ಇಲ್ಲದಂತಾಗಿದೆ. ಮಾರ್ಚ್ ತಿಂಗಳ ಅಂತ್ಯದಲ್ಲಾದರೂ ಬೇಸಿಗೆ ಮಳೆ ಸುರಿಯಬಹುದೆಂಬ ನಿರೀಕ್ಷೆ ಮಲೆನಾಡು ಭಾಗದ ಕೃಷಿಕರದ್ದಾಗಿದೆ. ಇಲ್ಲದಿದ್ದಲ್ಲಿ ಕೃಷಿ ಕ್ಷೇತ್ರವನ್ನೇ ಕೈಬಿಡಬೇಕಾದ ಸನ್ನಿವೇಶ ಎದುರಾಗಬಹುದು.

ರಸ್ತೆಬದಿ ಹಸಿರಿಗೆ ಟ್ಯಾಂಕರ್ ನೀರು: ಪ್ರಕೃತಿ ಕಾಳಜಿಗೆ ಭೇಷ್ ಎಂದ ಜನ!

ಉಳ್ಳಾಲದಲ್ಲಿ ಕಂಡಿತು ಧಾರ್ಮಿಕ ಪರಿಷತ್ ಸದಸ್ಯರ ಶ್ರಮ

ಉಳ್ಳಾಲ: ತೊಕ್ಕೊಟ್ಟು ಓವರ್ ಬ್ರಿಡ್ಜ್ ನಿಂದ ಉಳ್ಳಾಲ ಅಬ್ಬಕ್ಕ ಸರ್ಕಲ್ ಸಂಪರ್ಕದ ರಾಜ ರಸ್ತೆಯ ಇಕ್ಕೆಡೆಗಳಲ್ಲಿ ಬೆಳೆಸಲಾದ ಮರಗಳಿಗೆ ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರು, ಉಳ್ಳಾಲ ಶ್ರೀ ಚೀರುಂಭ ಭಗವತೀ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಸುರೇಶ್ ಭಟ್ನಗರ ಅವರು ಟ್ಯಾಂಕರ್ ನಿಂದ ನೀರು ಹಾಯಿಸಿ ಮಾದರಿ ಕಾರ್ಯ ನಡೆಸಿದ್ದಾರೆ.

ಬೇಸಿಗೆ ಬಿಸಿಲಿನ ತಾಪಕ್ಕೆ ಮನುಷ್ಯರೇ ಕಂಗೆಟ್ಟು ಹೋಗಿದ್ದಾರೆ. ಇಂತಹ ವೇಳೆ ಪ್ರಕೃತಿಯ ಅವಿಭಾಜ್ಯ ಅಂಗ ಪ್ರಾಣಿ, ಪಕ್ಷಿ, ಸಸ್ಯರಾಶಿ ದಣಿವಿಂದ ತತ್ತರಿಸದಂತೆ ಅದಕ್ಕೆ ನೀರುಣಿಸುವುದು ನಮ್ಮ ಕರ್ತವ್ಯವೆಂದು ಗ್ರಹಿಸಿದ ಸುರೇಶ್ ಭಟ್ನಗರ ಅವರು ಈ ಬಗ್ಗೆ ಶ್ರಮವಹಿಸಿದ್ದು, ನಾಗರಿಕರು ಪರಿಸರ ಕಾಳಜಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಸಹಕಾರ ನೀಡುವೆ ಎಂದ ಸ್ಪೀಕರ್ ಖಾದರ್

ಮುಂದಿನ ಎಪ್ರಿಲ್, ಮೇ ತಿಂಗಳಲ್ಲಿ ವಾರಕ್ಕೆ ಒಮ್ಮೆ ಈ ಮರಗಳಿಗೆ ನೀರುಣಿಸುವ ಕಾರ್ಯವನ್ನು ಮುಂದುವರಿಸಲಿದ್ದೇನೆ. ಸ್ಥಳೀಯ ಶಾಸಕ, ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್, ನಮ್ಮೊಂದಿಗೆ ಸಹಕರಿಸುವುದಾಗಿ ತಿಳಿಸಿದ್ದಾರೆಂದು ಸುರೇಶ್ ಭಟ್ನಗರ ಹೇಳಿದ್ದಾರೆ.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಭಾನುವಾರ 15, ಮಾರ್ಚ್ 2026

ಸುತ್ತಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಬೈಕಂಪಾಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಮಾ.15ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಬೈಕಂಪಾಡಿ ಇಂಡಸ್ಟ್ರಿಯಲ್ ಏರಿಯಾ, ಪಣಂಬೂರು, ಕುಳಾಯಿ, ಕೋಡಿಕೆರೆ, ತೋಕೂರು, ಹೊಸಬೆಟ್ಟು, ಜೋಕಟ್ಟೆ, ಯುಪಿಸಿಎಲ್, ಎನ್ಎಂಪಿಎ, ಚೆಟ್ಟಿನಾಡು, ಮಂಗಳೂರು ಕೋಲ್ಡ್ ಟರ್ಮಿನಲ್, ಆದಾನಿ, ಕೋಸ್ಟಲ್ ಚಿಪ್ ಬೋರ್ಡ್, ಸಂತೋಷಿಮಾತಾ, ಅಂಬುಜಾ ಸೀಲಾರ್ಡ್, ಎಲ್ಲಾ ಹೆಚ್.ಪಿ.ಸಿ.ಎಲ್ ಸ್ಥಾವರಗಳು, ಬಿ.ಎ.ಎಸ್.ಎಫ್, ಸ್ಟೀಲ್ ಬ್ಯಾರೆಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಯುವ ಮೋರ್ಚಾ: ಜಿಲ್ಲಾ ಕಾರ್ಯದರ್ಶಿಯಾಗಿ ಶಿವಕಿರಣ್ ಬೈಪದವು

ಪುತ್ತೂರು: ಭಾರತೀಯ ಜನತಾ ಪಾರ್ಟಿ ದಕ್ಷಿಣ ಕನ್ನಡ ಯುವ ಮೋರ್ಚಾದ ಜಿಲ್ಲಾ ಕಾರ್ಯದರ್ಶಿಯಾಗಿ ಶಿವಕಿರಣ್ ಬೈಪದವು ಆಯ್ಕೆಯಾಗಿದ್ದಾರೆ.



ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಆದೇಶದ ಮೇರೆಗೆ, ದ.ಕ. ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ ಆಯ್ಕೆ ಮಾಡಿದ್ದಾರೆ. ಅವರು ಇಡ್ಕಿದು ಸೇವಾ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಗೋಪಾಲಕೃಷ್ಣ ಭಟ್ ಬೈಪದವು ಅವರ ಪುತ್ರ.

ಮಾ. 17: ಮೆಸ್ಕಾಂ ಜನಸಂಪರ್ಕ ಸಭೆ

ಮೂಡಬಿದಿರೆ: ಮೆಸ್ಕಾಂ ಮೂಡಬಿದ್ರೆ ಉಪವಿಭಾಗ ಕಛೇರಿಯಲ್ಲಿ ಮಾ. 17ರಂದು ಸಮಯ ಬೆಳಿಗ್ಗೆ 11ರಿಂದ 12 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಗ್ರಾಹಕರು ದೂರವಾಣಿ ಸಂಖ್ಯೆ 08258-295051ರ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಗೋಪಾಲಕೃಷ್ಣ ಪಾಂಡುರಂಗ ಸನ್ನಿಧಿ: ಪ್ರತಿಷ್ಠಾ ವರ್ಧಂತ್ಯುತ್ಸವ

ಮುಲ್ಕಿ: ಹಳೆಯಂಗಡಿ ಸಮೀಪದ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ನಾಗವ್ರಜ ಕ್ಷೇತ್ರದ ಶ್ರೀ ಗೋಪಾಲಕೃಷ್ಣ ಪಾಂಡುರಂಗ ಸನ್ನಿಧಿಯಲ್ಲಿ ಪ್ರತಿಷ್ಠಾ ವರ್ಧಂತ್ಯುತ್ಸವದ ಅಂಗವಾಗಿ ಶ್ರೀ ದೇವರಿಗೆ ವಿವಿಧ ಧಾರ್ಮಿಕ ಸೇವಾ ಕಾರ್ಯಕ್ರಮಗಳು ಬೆಳಿಗ್ಗೆ 6.30 ರಿಂದ ಸಂಜೆ 6.30 ರವರೆಗೆ ನಡೆಯಿತು.



ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಪ್ರಾತಃಕಾಲ ಕ್ಷೇತ್ರದ ಅರ್ಚಕರ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಬೆಳಿಗ್ಗೆ 6 ಗಂಟೆಗೆ ನವಕಪ್ರಧಾನ ಕಲಶಾಭಿಷೇಕ, ನಿತ್ಯ ಪೂಜೆ ನಡೆಯಿತು. ಬಳಿಕ ಶ್ರೀ ಗೋಪಾಲಕೃಷ್ಣ ಪಾಂಡುರಂಗ ದೇವರಿಗೆ ವಿಶೇಷ ಅಲಂಕಾರಗಳ ಅಂಗವಾಗಿ ತುಳಸಿ ಅಲಂಕಾರ ಭಕ್ಷ್ಯಾಲಂಕಾರ,ಶುಷ್ಕ ಫಲಗಳಿಂದ ಅಲಂಕಾರ ಮಧ್ಯಾಹ್ನ ಯಕ್ಷಗಾನ ವೇಷಾಲಂಕಾರ, ಶ್ರೀ ಕೃಷ್ಣ ಜನ್ಮಸ್ಥಾನ ಮಥುರೆಯಿಂದ ತಂದ ವಸ್ತ್ರದಿಂದ ವಸ್ತ್ರಾಲಂಕಾರ ನಡೆಯಿತು. ಶ್ರೀ ದೇವರಿಗೆವಿಶೇಷ ಆರಾಧನೆಗಳ ಅಂಗವಾಗಿ ಬೆಳಿಗ್ಗೆ ಸಾಮವೇದ ಪಾರಾಯಣ, ಭಗವದ್ಗೀತೆ ಪಾರಾಯಣ (18 ಅಧ್ಯಾಯ), ಮಧ್ಯಾಹ್ನ - 12ರಿಂದ ಯಕ್ಷಗಾನಾರ್ಚನೆ,ಮಧ್ಯಾಹ್ನ 1.30ರಿಂದ - ಭಜನೆ ಮತ್ತು ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 4.30ರಿಂದ ವರೆಗೆ - ವೇಣುವಾದನ ಸಂಜೆ 6 ರಿಂದ ಶ್ರೀ ಗೋಪಾಲಕೃಷ್ಣ ಪಾಂಡುರಂಗಸ್ವಾಮಿಗೆ ಅಷ್ಟಾವಧಾನ ಸೇವೆ ಸಹಿತ ಮಹಾಪೂಜೆ, ಪ್ರಸಾದ ವಿನಿಯೋಗ ನಡೆಯಿತು. ಈ ಸಂದರ್ಭ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು

ಪುತ್ತೂರಿನ ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಬೇಡ: ಕಾಂಗ್ರೆಸ್

ಉಪ್ಪಿನಂಗಡಿ: ಅವಿಭಜಿತ ದ.ಕ ಜಿಲ್ಲೆಯಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಈವರೆಗೂ ಬಂದಿಲ್ಲ. ಮೆಡಿಕಲ್ ಲಾಬಿ ಕಡೆಗಣಿಸಿ ಮುಖ್ಯಮಂತ್ರಿಗಳಿಗೆ ದಂಬಾಲು ಬಿದ್ದು ತನ್ನ ಶಾಸಕತ್ವ ಪಣಕ್ಕಿಟ್ಟು ಪುತ್ತೂರಿಗೆ ಮೆಡಿಕಲ್ ಕಾಲೇಜು ಲಭಿಸುವಂತೆ ಮಾಡಿರುವುದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈಯವರು ಎಂದು ಉಪ್ಪಿನಂಗಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಯು. ಟಿ. ತೌಷಿಫ್ ಹೇಳಿದರು.

ಅವರು ಉಪ್ಪಿನಂಗಡಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಯಾವುದೇ ಭರವಸೆ ನೀಡಿದರೂ ಅದರ ಅನುಷ್ಠಾನಕ್ಕೆ ಸಂಬಂಧಿಸಿ ಯೋಜನಾಬದ್ಧವಾಗಿ ಕಾರ್ಯತತ್ಪರತೆಯನ್ನು ಶಾಸಕರು ಹೊಂದಿದ್ದಾರೆ. ಪುತ್ತೂರಿನ ಅಭಿವೃದ್ಧಿಯ ವಿಚಾರದಲ್ಲಿ ರಾಜಕೀಯ ಸಲ್ಲದು. ಪುತ್ತೂರಿನ ಸೇಡಿಯಾಪು ಎಂಬಲ್ಲಿ ಮೆಡಿಕಲ್ ಕಾಲೇಜಿಗಾಗಿ ಮೀಸಲಿಟ್ಟ 40 ಎಕ್ರೆ ಭೂಮಿಯಲ್ಲಿ ಕಾಲೇಜಿಗೆ ಪೂರಕವಾಗಿ ಆಸ್ಪತ್ರೆಯ ನಿರ್ಮಾಣಕ್ಕೆ ಶಾಸಕರು ಮುಂದಾದರೆ, ಅಲ್ಲಿ ಆಸ್ಪತ್ರೆ ಬೇಡ ಎಂದು ಪುತ್ತೂರಿನ ಬಿಜೆಪಿ ನಾಯಕರು ಯೋಜನೆಗೆ ಅಡ್ಡಗಾಲು ಹಾಕುತ್ತಿರುವುದು ಖೇದಕರ ವಿದ್ಯಮಾನ. ಅಭಿವೃದ್ಧಿಯ ವಿಚಾರದಲ್ಲಿ ರಾಜಕೀಯ ಮರೆತು ಎಲ್ಲರೂ ಒಗ್ಗೂಡಿ ಪರಸ್ಪರ ಕೈಜೋಡಿಸಬೇಕಾದ ಕರ್ತವ್ಯ ಬದ್ಧತೆಯನ್ನು ತೋರಬೇಕಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಮುರಳೀಧರ್ ರೈ ಮಠಂತಬೆಟ್ಟು, ಡಾ. ರಾಜಾರಾಮ ಕೆ.ಬಿ., ವಿಕ್ರಂ ಶೆಟ್ಟಿ ಅಂತರ, ಸೇಸಪ್ಪ ನೆಕ್ಕಿಲು, ಗಣೇಶ್ ಬಿಳಿಯೂರು ಉಪಸ್ಥಿತರಿದ್ದರು.

ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ 2.56 ಕೋ.ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಯುಜಿಡಿಗೆ 60 ಕೋ.ರೂ. ಅನುದಾನ ಬಿಡುಗಡೆ: ಶಾಸಕ ನಾಯ್ಕ್

ಬಂಟ್ವಾಳ: ಅಮೃತ ನಗರೋತ್ಥಾನ ಯೋಜನೆ (ಹಂತ-4)ಯಡಿಯಲ್ಲಿ ಬಂಟ್ವಾಳ ಪುರಸಭಾ ವ್ಯಾಪ್ತಿಯಲ್ಲಿ 2.56 ಕೋ.ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪ್ಪಾಡಿ ಅವರು ಬಂಟ್ವಾಳ ಬಡ್ಡಕಟ್ಟೆ ಹಿಂದೂ ರುದ್ರ ಭೂಮಿಯ ಹಿಂಭಾಗ ನೇತ್ರಾವತಿ ನದಿಕಿನಾರೆಯ ಬಳಿ ಸಸಿ ನೆಡುವ ಮೂಲಕ ಚಾಲನೆ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕರು, ಬಿಜೆಪಿ ಸರಕಾರದ ಅವಧಿಯಲ್ಲಿ ಅಮೃತ ನಗರೋತ್ತರಾನ ಯೋಜನೆಯಡಿ 100 ಕೋ.ರೂ. ಅನುದಾನ ಬಿಡುಗಡೆಯಾಗಿದ್ದು,ಈ ಅನುದಾನದ 4ನೇ ಹಂತದಲ್ಲಿ 2.56 ಕೋ.ರೂ.ವಿನ ಕ್ರಿಯಾ ಯೋಜನೆಗೆ ಪುರಸಭೆ ಅನುಮೋದನೆ ನೀಡಲಾದ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದು ಹೇಳಿದರು.

ಬಂಟ್ವಾಳ ಪುರಸಭಾ ವ್ಯಾಪತಿಯಲ್ಲಿ ಸಮಗ್ರ ಒಳ ಚರಂಡಿ ಯೋಜನೆ (ಯುಜಿಡಿ)ಗೆ ಪುರಸಭೆಗೆ 60 ಕೋ.ರೂ. ಅನುದಾನ ಬಿಡುಗಡೆಯಾಗಿದ್ದು, ಜಾಗದ ಸಮಸ್ಯೆಯಿಂದಾಗಿ ಅನುಷ್ಠಾನಕ್ಕೆ ಕೊಂಚ ವಿಳಂಬವಾಗಿದ್ದು ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿದೆ. ಶೀಘ್ರವೇ ಜಮೀನಿನ ಸಮಸ್ಯೆ ಇತ್ಯರ್ಥವಾಗಲಿದ್ದು ಬಳಿಕ ಯೋಜನೆಗೆ ಅನುಷ್ಠಾನಕ್ಕೆ ವೇಗ ಸಿಗಲಿದೆ. ಪುರಸಭಾ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳ ಸಹಿತ ವಿವಿಧ ಸಮಸ್ಯೆಗಳ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಅತೀ ಶೀಘ್ರದಲ್ಲೇ ಆಡಳಿತಾಧಿಕಾರಿ, ಪುರಸಭೆಯ ಅಧಿಕಾರಿಗಳು ಹಾಗೂ ನಿಕಟ ಪೂರ್ವ ಸದಸ್ಯರನ್ನೊಳಗೊಂಡ ಸಭೆ ಕರೆದು ಚರ್ಚಿಸಲಾಗುವುದು ಎಂದರು.



ಕಾಮಗಾರಿಗಳ ವಿವರ

57.59 ಲ.ರೂ. ವೆಚ್ಚದಲ್ಲಿ ಬಡ್ಡಕಟ್ಟೆ ಹಿಂದೂ ರುದ್ರಭೂಮಿ ಅಭಿವೃದ್ಧಿ ಹಾಗೂ ಉದ್ಯಾನವನ ನಿರ್ಮಾಣ, 29.77 ಲ.ರೂ.ವೆಚ್ಚದಲ್ಲಿ ಪುರಸಭೆಯ ಪರಿಶಿಷ್ಟ ಜಾತಿ ಖಾಯಂ, ನೇರಪಾವತಿ ಪೌರ ಕಾರ್ಮಿಕರಿಗೆ ವಾಸ್ತವ್ಯದ ವಸತಿ ಸಮುಚ್ಚಯ ನಿರ್ಮಾಣ, 71.46 ಲಕ್ಷ ಬಿ- ಮೂಡ ಗ್ರಾಮದ ಭಂಡಾರಿಬೆಟ್ಟು- ಮೈರಾನಪಾದೆ ಪರಿಶಿಷ್ಟ ಜಾತಿ ಸಮುದಾಯಭವನ ಅಭಿವೃದ್ಧಿ, ಗಾಂದೋಡಿ ಸಂಪರ್ಕ ಕಾಲುಸಂಕ ಹಾಗೂ ರಸ್ತೆ ಅಭಿವೃದ್ಧಿ, ಬಿ.ಕಸ್ಬಾ ಗ್ರಾಮದ ಮುಗ್ದಾಲ್ ಪ್ರದೇಶದಲ್ಲಿ ಚರಂಡಿ ರಚನೆ, ಚಂಡ್ತಿಮಾರ್ ಸಮುದಾಯ ಭವನ ಅಭಿವೃದ್ಧಿ ಕಾಮಗಾರಿ ನಡೆಯಲಿದೆ. 47.26 ಲ.ರೂ.ವೆಚ್ಚದಲ್ಲಿ ಪಾಣೆಮಂಗಳೂರು ಗ್ರಾಮದ ಬೊಂಡಾಲ ಮಹಮ್ಮಾಯಿ ದೇವಸ್ಥಾನದ ರಸ್ತೆ ಅಭಿವೃದ್ಧಿ, ಬೊಂಡಾಲ-ಕಲ್ಲಡ್ಕ- ಗುಂಡೂರು ಸಂಪರ್ಕ ರಸ್ತೆ ಅಭಿವೃದ್ಧಿ, ಬಿ. ಮೂಡ ಗ್ರಾಮದ ಚೆಂಡಾಡಿ-ಅಲೆತ್ತೂರು ರಸ್ತೆ ಅಭಿವೃದ್ಧಿ ಹಾಗೂ ಕಸ್ಬಾ ಗ್ರಾಮದ ಆಗ್ರಾರ್ ರಸ್ತೆ ಬದಿ ತಡೆಗೋಡೆ ನಿರ್ಮಾಣಗೊಳ್ಳಲಿದೆ. 50.00 ಲ.ರೂ. ಪುರಸಭಾ ವ್ಯಾಪ್ತಿಯ ಬಿ. ಮೂಡ, ಬಿ.ಕಸ್ಬಾ ಹಾಗೂ ಪಾಣೆ ಮಂಗಳೂರು ಗ್ರಾಮದ ವಿವಿಧ ಪ್ರದೇಶಗಳಲ್ಲಿ ದಾರಿದೀಪ ವಿಸ್ತರಣೆ ಕಂಬಗಳ ಅಳವಡಿಕೆ ಹಾಗೂ ವಿವಿಧ ಕಡೆ ಸೆಮಿ ಹೈಮಾಸ್ಟ್ ಬೀದಿದೀಪ ಅಳವಡಿಕೆ ಕಾರ್ಯ ನಡೆಯಲಿದೆ

> ಜಕ್ರಿಬೆಟ್ಟುವಿನಲ್ಲಿ 1.25 ಕೋ. ರೂ. ವೆಚ್ಚದಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ ಡ್ಯಾಮ್ ಕಮ್ ಬ್ಯಾರೇಜ್ ನಿರ್ಮಾಣವಾದ ಬಳಿಕ ಪುರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಇಲ್ಲ, ಹಾಗೆಯೇ ಡ್ಯಾಂನಿಂದ ಅಂತರ್ಜಲವು ವೃದ್ಧಿಯಾಗಿದೆ.
> ● ರಾಜೇಶ್ ನ್ಯಾಕ್, ಶಾಸಕ

ಬಿಜೆಪಿ ಬಂಟ್ವಾಳ ಮಂಡಲದ ಅಧ್ಯಕ್ಷ ಚೆನ್ನಪ್ಪ ಆರ್. ಕೋಟ್ಯಾನ್, ಪುರಸಭಾ ಸದಸ್ಯರಾದ ಗೋವಿಂದಪ್ರಭು, ಶಶಿಕಲಾ, ದೇವಕಿ, ಮೀನಾಕ್ಷಿ ಗೌಡ, ಮಾಜಿ ಅಧ್ಯಕ್ಷ ದಿನೇಶ್ ಭಂಡಾರಿ, ಮಾಜಿ ಸದಸ್ಯರಾದ ಸುರೇಶ್ ಕುಲಾಲ್, ಜನಾರ್ದನ ಬೊಂಡಾಲ, ಭಾಸ್ಕರ ಟೈಲರ್ ಬಿ.ಸಿ.ರೋಡು, ಗಂಗಾಧರ ಪೂಜಾರಿ ಬಂಟ್ವಾಳ, ಬಿಜೆಪಿ ಪ್ರಮುಖರಾದ ರಾಮದಾಸ್ ಬಂಟ್ವಾಳ, ಕರುಣೇಂದ್ರ ಪೂಜಾರಿ, ವಸಂತ ಭಂಡಾರಿ, ವಿಶ್ವನಾಥ ಚೆಂಡ್ತಿಮಾರ್, ಪ್ರಣಾಮ್ ಅಜ್ಜಿಬೆಟ್ಟು, ಜಯರಾಮ ರೈ ಕಲ್ಲಡ್ಕ, ವಸಂತ ಮಣಿಹಳ್ಳ ಪ್ರಕಾಶ್ ಅಂಚನ್, ಮಚ್ಚೇಂದ್ರ ಸಾಲ್ಯಾನ್, ಪ್ರಮುಖರಾದ ಡಾ. ವಸಂತ ಬಾಳಿಗಾ, ಅಜಯ್ ಕೊಂಬ್ರಬೈಲ್, ಇಂಜಿನಿಯರ್ ಡೊಮಿನಿಕ್ ಡಿಮೆಲ್ಲೋ ಮೊದಲಾದವರಿದ್ದರು. ಪುರಸಭಾ ಸದಸ್ಯ ಹರಿಪ್ರಸಾದ್ ಭಂಡಾರಿಬೆಟ್ಟು ಸ್ವಾಗತಿಸಿ, ಪ್ರಸ್ತಾವನೆಗೈದರು.

ಹಬ್ಬಾಚರಣೆ ಹಿನ್ನಲೆಯಲ್ಲಿ ಸುಳ್ಯ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ



ಸುಳ್ಯ: ರಂಜಾನ್ ಹಬ್ಬದ ಈದುಲ್ ಫಿತರ್ ಪ್ರಯುಕ್ತ ಸುಳ್ಯ ಪೊಲೀಸ್ ಠಾಣೆಯಲ್ಲಿ ಪ್ರಮುಖ ನಾಯಕರ ಉಪಸ್ಥಿತಿಯಲ್ಲಿ ಶಾಂತಿ ಸಭೆಯು ಉಪನಿರೀಕ್ಷಕ ಸಂತೋಷ್ ಬಿ.ಪಿ. ನೇತೃತ್ವದಲ್ಲಿ ಶನಿವಾರ ನಡೆಯಿತು.

ಸಭೆಯಲ್ಲಿ ಸಂತೋಷ್ ಬಿ.ಪಿ. ಮಾತನಾಡಿ, ಸುಳ್ಯದ ಜನತೆ ಪರಸ್ಪರ ಸಹೋದರತ್ವ ಬಾಂಧವರಾಗಿದ್ದು, ಈವರೆಗೆ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದವನ್ನು ನೀಡಿಲ್ಲ, ಈ ಹಿಂದಿನಂತೆಯೇ ಮುಂದಿನ ವಾರದಲ್ಲಿ ಬರುವ ರಂಜಾನ್ ಹಬ್ಬದಂದು ಕೂಡ ಪರಸ್ಪರ ಪ್ರೀತಿ ಮತ್ತು ಸೌಹಾರ್ದತೆಯಿಂದ ಶಾಂತಿಯುತವಾಗಿ ಹಬ್ಬ ಆಚರಣೆ ಮಾಡಿಕೊಳ್ಳುವಂತೆ ವಿನಂತಿಸಿದರು.

ಅಲ್ಲದೆ ಮುಖ್ಯ ರಸ್ತೆಗಳಲ್ಲಿರುವ ಮಸೀದಿಗಳಿಗೆ ನಮಾಜಿಗೆ ಬರುವ ವೃದ್ಧರು ಹಾಗೂ ಮಕ್ಕಳು ರಸ್ತೆ ದಾಟುವ ಸಂದರ್ಭದಲ್ಲಿ ಜಾಗೃತರಾಗಿರಬೇಕು ಎಂದು ತಿಳಿಸಿದರು. ಯಾವುದೇ ಅಹಿತಕರ ವಿಷಯಗಳು ಕಂಡು ಬಂದಲ್ಲಿ ಕೂಡಲೇ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಿದರಲ್ಲದೇ ಸರಕಾರ ಹಾಗೂ ಪೊಲೀಸ್ ಇಲಾಖೆಯೊಂದಿಗೆ ಸಹಕರಿಸುವಂತೆ ಕೋರಿದರು.

ಸಭೆಯಲ್ಲಿ ಪ್ರಮುಖರಾದ ಸುನೀಲ್ ಕೇರ್ಪಳ, ಸುದರ್ಶನ್ ಪಾತಿಕಲ್ಲು, ಮಹಮ್ಮದ್ ಕುಂಞ ಗೂನಡ್ಕ, ಜಿ.ಕೆ. ಹಮೀದ್ ಗೂನಡ್ಕ, ಕೆ.ಎಸ್. ಉಮ್ಮರ್, ಲತೀಫ್ ಅಡ್ಕಾರ್, ಕಿರಣ್ ಕೆ., ರವಿಚಂದ್ರ, ಮೋಹನ, ದಿನೇಶ್ ಡಿ.ಕೆ., ಫೈಸಲ್, ಎಸ್.ಕೆ. ಮಹಮ್ಮದ್ ಹನೀಫ್, ಜಿ. ಅಬೂಬಕ್ಕರ್, ಹಸನ್ ಅರ್ಲಡ್ಕ ಮತ್ತಿತರರು ಭಾಗವಹಿಸಿದ್ದರು. ಎಎಸ್ಐ ತಾರನಾಥ್ ಸಹಕರಿಸಿದರು.

ಮುಲ್ಕಿ ಸುಂದರ ರಾಮ ಶೆಟ್ಟಿ ಟ್ರಸ್ಟ್‌ನಿಂದ ಅಶಕ್ತರ ಬಾಳಿಗೆ ಬೆಳಕು: ಡಾ. ಪ್ರಕಾಶ್ ಶೆಟ್ಟಿ



ಮುಲ್ಕಿ: ಮುಲ್ಕಿ ಸುಂದರ ರಾಮ ಶೆಟ್ಟಿ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸಹಾಯ ಹಸ್ತ ಪ್ರದಾನ ಸಮಾರಂಭ ಶನಿವಾರ ಮುಲ್ಕಿ ಸುಂದರ ರಾಮ ಶೆಟ್ಟಿ ಸಭಾಭವನದಲ್ಲಿ ನಡೆಯಿತು.

ಮುಲ್ಕಿ ಸುಂದರ ರಾಮ ಶೆಟ್ಟಿ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ನ ಅಧ್ಯಕ್ಷ ಡಾ.ಕೆ. ಪ್ರಕಾಶ್ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ, ಮುಲ್ಕಿ ಸುಂದರ ರಾಮ ಶೆಟ್ಟಿ ಯವರ ಸಹಾಯ ಹಸ್ತದಿಂದ ಸಮಾಜದ ಅದೆಷ್ಟೋ ಮನೆಗಳಲ್ಲಿ ದೀಪ ಬೆಳಗುತ್ತಿದ್ದು, ಸಹಾಯ ಹಸ್ತ ಪಡೆದವರು ಮುಂದಿನ ದಿನಗಳಲ್ಲಿಸಮಾಜಕ್ಕೆ ದಾರಿದೀಪವಾಗಬೇಕು ಎಂದು ಸಲಹೆ ನೀಡಿದರು.

ನೆರವಾದವರ ಮರೆಯದಿರಿ

ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಜೀವನದಲ್ಲಿ ಸಹಾಯಹಸ್ತ ಎನ್ನುವುದು ಎಲ್ಲರಿಗೂ ಅವಶ್ಯಕ. ಜೀವನದಲ್ಲಿ ಸೋತಾಗ ನೊಂದಾಗ ಯಾರಾದರೂ ನಮಗೆ ನೆರವು ನೀಡಬೇಕು ಎನ್ನುವ ಆಶಯವಿರುತ್ತದೆ. ಆಗ ನಮ್ಮನ್ನು ಕೈಹಿಡಿದು ಮೇಲಕ್ಕೆ ಎತ್ತಿದವರನ್ನು ಯಾವತ್ತೂ ಮರೆಯಬಾರದು ಎಂದರು.

ಶಾಸಕ ಎ.ಉಮಾನಾಥ್ ಕೋಟ್ಯಾನ್ ಮಾತನಾಡಿದರು. ಪತ್ರಕರ್ತ ವಾಲ್ಟರ್ ನಂದಳಿಕೆ ಮಾತನಾಡಿ, ಸುಂದರ ರಾಮ ಶೆಟ್ಟಿಯವರಂತೆಯೇ ಪ್ರಕಾಶ್ ಶೆಟ್ಟಿ ಬದುಕುತಿದ್ದಾರೆ. ಅವರದ್ದು ಅಪರೂಪದ ವ್ಯಕ್ತಿತ್ವ. ಇಂದಿಲ್ಲಿ ಸಹಾಯಹಸ್ತ ಪಡೆದ ವಿದ್ಯಾರ್ಥಿಗಳು ಮುಂದೆ ಜೀವನದಲ್ಲಿ ಸಾಧನೆಯನ್ನು ಮಾಡಿ ಸಮಾಜದ ಇನ್ನಷ್ಟು ಜನರಿಗೆ ನೆರವಾಗಬೇಕು ಎಂದರು.

> **ಹೃದಯ ಶ್ರೀಮಂತ**
> ಪ್ರಕಾಶ್ ಶೆಟ್ಟಿ ಅವರು ಶ್ರೀಮಂತರೆನ್ನುವುದಕ್ಕಿಂತ ಜಾಸ್ತಿ ಹೃದಯ ಶ್ರೀಮಂತಿಕೆ ಉಳ್ಳವರು. ಸದಾಕಾಲ ತಮ್ಮ ಊರಿನ ಜನರ ಸಂಕಷ್ಟಕ್ಕೆ ಮಿಡಿಯುವ ಅವರಿಗೆ ದೇವರು ಆಯುಷ್ಯ, ಆರೋಗ್ಯ ಕೊಟ್ಟು ಕಾಪಾಡಬೇಕು.
> ● ಎ.ಉಮಾನಾಥ್ ಕೋಟ್ಯಾನ್

ಕಾಪು ಶಾಸಕ ಸುರೇಶ್ ಶೆಟ್ಟಿ ಗುರ್ಮೆ, ಮೂಲ್ಕಿ ಸುಂದರ ರಾಮ ಶೆಟ್ಟಿ ಅವರ ಸುಪುತ್ರ ಹರಿಪ್ರಸಾದ್ ಶೆಟ್ಟಿ ಮತ್ತಿತರರು ಇದ್ದರು. ಟ್ರಸ್ಟ್‌ನ ಟ್ರಸ್ಟಿ ಬಾಲಕೃಷ್ಣ ಹೆಗ್ಡೆ ಸ್ವಾಗತಿಸಿದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ನಿತೇಶ್ ಶೆಟ್ಟಿ ಎಕ್ಕಾರ್ ಹಾಗೂ ನಿತಿನ್ ಸಾಲ್ಯಾನ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಟ್ರಸ್ಟ್ ವತಿಯಿಂದ 300 ಕುಟುಂಬಗಳಿಗೆ ಹಾಗೂ ವಿದ್ಯಾಸಂಸ್ಥೆಗಳಿಗೆ ಒಟ್ಟು 50 ಲಕ್ಷ ರೂಪಾಯಿಗಳ ಸಹಾಯ ಧನವನ್ನು ವಿತರಿಸಲಾಯಿತು.

ವಿದ್ಯುತ್ ಘಟಕ ಉದ್ಘಾಟನೆಗೆ ಅರಣ್ಯ ಇಲಾಖೆಯಿಂದ ಆಕ್ಷೇಪಣೆ

ಬೆಳ್ತಂಗಡಿ: 2025 ಮಾ.17ರ ಕಾರ್ಯಾದೇಶದಂತೆ ಬೆಳ್ತಂಗಡಿ ತಾಲೂಕು ಉಜಿರೆ ಗ್ರಾಮದ ವಿದ್ಯುತ್ ಘಟಕವನ್ನು 2026 ಮಾ.16ರೊಳಗೆ ಲೋಕಾರ್ಪಣೆ ಮಾಡಬೇಕಾಗಿದ್ದು, ಅರಣ್ಯ ಇಲಾಖೆಯ ಅನುಮತಿ ದೊರೆಯದ ಕಾರಣ ವಿಳಂಬ ವಾಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

ಪ್ರತಾಪಸಿಂಹ ಪ್ರಶ್ನೆ



ಅವರು ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಅವರು ಮಾ.9ರಂದು ಸದನದಲ್ಲಿ ಉಜಿರೆ ಗ್ರಾಮ ದಲ್ಲಿನ 33 ಕೆ.ವಿ. ವಿದ್ಯುತ್ ಘಟಕವನ್ನು ಯಾವ ಕಾಲಮಿತಿಯೊಳಗೆ ಲೋಕಾರ್ಪಣೆಗೊಳಿಸಲಾಗುವುದು ಎಂದು ಕೇಳಿದ ಚುಕ್ಕೆ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಉಜಿರೆ ಗ್ರಾಮದಲ್ಲಿ 33ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪಿಸಲು 2025 ಮಾ. 17ರಂದು ಗುತ್ತಿಗೆ ಆದೇಶ ನೀಡಲಾಗಿದೆ. ಉಪಕೇಂದ್ರದ ಸ್ಥಾಪನೆಗೆ ಮಂಜೂರಾಗಿರುವ ಸರ್ಕಾರಿ ಜಮೀನಿನಲ್ಲಿರುವ ಕೆಲವೊಂದು ಮರು-ಗಿಡಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆಯಿಂದ ಆಕ್ಷೇಪಣೆ ಇರುವುದರಿಂದ, ಇಲಾಖೆಯ ಮಂಜೂರಾತಿಗಾಗಿ 21.11.2025ರಂದು ಪ್ರಸ್ತಾವನೆ ಸಲ್ಲಿಸಲಾಗಿದೆ. ಅರಣ್ಯ ಇಲಾಖೆಯ ಮಂಜೂರಾತಿ ದೊರೆತನಂತರ ಉಪಕೇಂದ್ರದ ಕಾಮಗಾರಿ ಪ್ರಾರಂಭಿಸಬೇಕಿದೆ ಎಂದರು. ಮೆಸ್ಕಾಂನ ಕಾಮಗಾರಿ ಯೋಜನೆಯಡಿ ಕಾಮಗಾರಿಗೆ ಪರಿಷ್ಕೃತ ಅಂದಾಜು ವೆಚ್ಚದಂತೆ ರೂ.2636.32 ಲಕ್ಷ ನಿಗದಿಪಡಿಸಲಾಗಿದ್ದು, ಜನವರಿ 2026 ರ ಅಂತ್ಯಕ್ಕೆ ರೂ. 489.13 ಲಕ್ಷ ವಿನಿಯೋಗಿಸಲಾಗಿದೆ. ಕಾಮಗಾರಿಯಲ್ಲಿ ಉಪಕೇಂದ್ರ ಸ್ಥಾಪನೆಗೆ ಬೇಕಾಗಿರುವ ಜಾಗವನ್ನು ಈಗಾಗಲೇ ನಿಗದಿ ಪಡಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ಲಿಖಿತ ಉತ್ತರ ನೀಡಿದ್ದಾರೆ.

ಎಸ್‌ಡಿಎಂ ಕಾನೂನು ಕಾಲೇಜಿನ ಪೂರ್ವ ವಿದ್ಯಾರ್ಥಿ ಸಂಘದ ಪದಗ್ರಹಣ



ಮಂಗಳೂರು: ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನ ಪೂರ್ವ ವಿದ್ಯಾರ್ಥಿ ಸಂಘದ 2026 - 28ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ವಿದ್ಯಾರ್ಥಿ ಗಳಿಗೆ ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಬಸವರಾಜ್ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳು ನಾಯಕತ್ವ ಗುಣವನ್ನು ಮೈಗೂಡಿಸಿಕೊಳ್ಳಬೇಕು. ಇದು ಭವಿಷ್ಯದ ನಿರ್ಮಾಣಕ್ಕೆ ಸಹಕಾರಿಯಾಗಬಲ್ಲದು ಎಂದು ಹೇಳಿದರು.

ವಿದ್ಯಾರ್ಥಿ ವೇತನ ವಿತರಣೆ

ಹೈಕೋರ್ಟ್ ವಕೀಲ ಪಿ.ಪಿ. ಹೆಗ್ಡೆ ಅವರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಿದರು. ಸುಪ್ರೀಂ ಕೋರ್ಟ್ ವಕೀಲ ರೋಹಿತ್ ರಾವ್ ಪೂರ್ವ ವಿದ್ಯಾರ್ಥಿ ಸಂಘದ ಲಾಂಛನ ಅನಾವರಣಗೊಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ತಾರಾನಾಥ ಅವರು ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎಂಎಲ್‌ಸಿ ಐವನ್ ಡಿಸೋಜಾ, ಮಂಗಳೂರು ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ ಎಚ್. ವಿ., ಪೂರ್ವ ವಿದ್ಯಾರ್ಥಿ ಸಂಘದ ನಿಕಟ ಪೂರ್ವ ಅಧ್ಯಕ್ಷ ಡಾ. ದೇವರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ದಿನಕರ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷ ಉಮೇಶ್ ಗಟ್ಟಿ ಜತೆ ಕಾರ್ಯದರ್ಶಿ ಜಯಶ್ರೀ ಹಟ್ಟಿಹಳ್ಳಿ ಸಂಚಾಲಕ ವಿನೋದ್ ಕುಮಾರ್, ಸಂಘದ ಸಂಯೋಜಕಿ ಡಾ.ಅನ್ನಪೂರ್ಣ ಶೇಟ್ ಉಪಸ್ಥಿತರಿದ್ದರು . ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಘವೇಂದ್ರ ರಾವ್ ಸ್ವಾಗತಿಸಿ,ಸಂಚಾಲಕ ಅಶ್ವಿನ್ ವಂದಿಸಿದರು.

ಲಯನ್ಸ್ ಕ್ಲಬ್‌ನಿಂದ ನಿರ್ಮಿಸಿದ ಸುಳ್ಯ ಆ್ಯಂಬುಲೆನ್ಸ್ ನಿಲ್ದಾಣ ಉದ್ಘಾಟನೆ



ಸುಳ್ಯ: ಸುಳ್ಯ ಲಯನ್ಸ್ ಕ್ಲಬ್ ವತಿಯಿಂದ ಲಯನ್ಸ್ ಶಾಶ್ವತ ಯೋಜನೆ ಅಡಿಯಲ್ಲಿ ನಿರ್ಮಾಣಗೊಂಡ ಸುಳ್ಯ ಪಟ್ಟಣದಲ್ಲಿ ಅಂಬ್ಯುಲೆನ್ಸ್ ವಾಹನ ಪಾರ್ಕಿಂಗ್ ನಿಲ್ದಾಣ ಸುಳ್ಯ ಜ್ಯೋತಿ ಸರ್ಕಲ್ ಬಳಿ ಶನಿವಾರ ಲೋಕಾರ್ಪಣೆಗೊಂಡಿತು.

ನೂತನ ನಿಲ್ದಾಣವನ್ನು ಲಯನ್ಸ್ ಜಿಲ್ಲೆ 347 ಡಿ ಜಿಲ್ಲಾ ರಾಜ್ಯಪಾಲ ಕುಡ್ಪಿ ಅರವಿಂದ ಶೆಣೈ ಉದ್ಘಾಟಿಸಿ ಶುಭ ಹಾರೈಸಿದರು. ಸುಳ್ಯ ಯೋಜನಾ ಪ್ರಾಕಾರ ಅಧ್ಯಕ್ಷ ಕೆ.ಎಂ. ಮುಸ್ತಫಾ ಅತಿಥಿಯಾಗಿದ್ದರು.

ವೇದಿಕೆಯಲ್ಲಿ ಚಂದ್ರಶೇಖರ್ ನಂಜೆ, ಪಿ.ಎಂ. ರಂಗನಾಥ್, ರಾಮಕೃಷ್ಣ ರೈ, ಜೀವನ್ ರೈ, ಲಯನ್ಸ್ ಕಾರ್ಯದರ್ಶಿ ಮಲ್ಲಿಕಾರ್ಜುನ ಪ್ರಸಾದ್, ಕೋಶಾಕಾರಿ ಜತ್ತಪ್ಪ ರೈ, ಅಂಬ್ಯುಲೆನ್ಸ್ ಸಂಘದ ಅಧ್ಯಕ್ಷ ಶರತ್, ಗೌರವಧ್ಯಕ್ಷ ಶಿವ ಉಪಸ್ಥಿತರಿದ್ದರು. ಅಧ್ಯಕ್ಷತೆ ವಹಿಸಿದ್ದ ಲಯನ್ಸ್ ಕ್ಲಬ್ ಅಧ್ಯಕ್ಷ ದೀಪಕ್ ಕುತ್ತಮೊಟ್ಟೆ ಸ್ವಾಗತಿಸಿ, ಜಯರಾಂ ದೇರಪ್ಪಜನ ಮನೆ ನಿರ್ವಹಿಸಿದರು.

ಬಂಟ್ವಾಳದಲ್ಲಿ ಲೋಕಾ ಅದಾಲತ್: ಒಟ್ಟು 7063 ಪ್ರಕರಣಗಳು ಇತ್ಯರ್ಥ



ಬಂಟ್ವಾಳ: ಇಲ್ಲಿನ ತಾಲೂಕು ಕಾನೂನು ಸೇವೆಗಳ ಸಮಿತಿ ಆಶ್ರಯದಲ್ಲಿ ಬಂಟ್ವಾಳ ನ್ಯಾಯಾಲಯದಲ್ಲಿ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ 7063 ಪ್ರಕರಣ ಇತ್ಯರ್ಥ ಗೊಂಡಿದ್ದು ವಿವಿಧ ಪ್ರಕರಣಗಳಲ್ಲಿ ಒಟ್ಟು ರೂ.1,90,89,540 ರೂ. ನಗದು ವಸೂಲಾಗಿದೆ ಎಂದು ಬಂಟ್ವಾಳ ತಾಲೂಕು ಕಾನೂನು ಸೇವೆಗಳ ಸಮಿತಿಯ ಪ್ರಕಟಣೆ ತಿಳಿಸಿದೆ.

24 ಸಿವಿಲ್ ಪ್ರಕರಣ ಇತ್ಯರ್ಥವಾಗಿದ್ದು 39,44,445 ರೂ. ವಸೂಲಾಗಿದೆ.664 ಕ್ರಿಮಿನಲ್ ಪ್ರಕರಣ ಇತ್ಯರ್ಥ ವಾಗಿದ್ದು 50,96,095 ರೂ.ವಸುಇಲಾಗಿದೆ. ಅದೇ ರೀತಿ 6375 ಪಿಎಲ್‌ಸಿ ಪ್ರಕರಣಗಳು (ದಾವಾ ಪೂರ್ವ ಪ್ರಕರಣ) ಇತ್ಯರ್ಥ ಗೊಂಡಿದ್ದು 1,90,48,000 ರೂ. ಮೊತ್ತ ವಸೂಲಿಯಾಗಿದೆ. ವಿವಿಧ ಶುಲ್ಕ ಪ್ರಕರಣಗಳು, ಎಂಎಂಆರ್‌ಡಿ, ಚೆಕ್ ಬೌನ್ಸ್ ಮೋಟಾರು ವಾಹನ ಪ್ರಕರಣಗಳು ಇತರ ರಾಜಿಯೋಗ್ಯ ಕ್ರಿಮಿನಲ್ ಪ್ರಕರಣಗಳನ್ನು ಪರಿಹರಿಸಿಕೊಳ್ಳಲಾಯಿತು.

ಬಂಟ್ವಾಳ ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷರು, ಬಂಟ್ವಾಳ ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಲಯದ ಅನಿಲ್ ಪ್ರಕಾಶ್ ಎಂ.ಪಿ. ಹಾಗೂ ಸದಸ್ಯ ಕಾರ್ಯದರ್ಶಿ ಹಾಗೂ ಹೆಚ್ಚುವರಿ ಸಿವಿಲ್ ಜೆಎಂಎಫ್ ನ್ಯಾಯಾಲಯದ ನ್ಯಾಯಾಶ ರಾಜೇಂದ್ರ ಪ್ರಸಾದ್ ಸಮಕ್ಷಮದಲ್ಲಿ ಪ್ರಕರಣಗಳು ಇತ್ಯರ್ಥಗೊಂಡವು.

ಎಪಿಪಿಗಳಾದ ಸರಸ್ವತಿ,ಹರಿಣಿ ಕುಮಾರಿ ಡಿ.,ಎಜಿಪಿ ಬಿ. ವೆಂಕಟ ರಮಣ ಶೆಣೈ, ವಕೀಲರ ಸಂಘದ ಅಧ್ಯಕ್ಷ ರಿಚರ್ಡ್ ಕೋಸ್ತ ಎಂ. ಹಾಗೂ ಸಂಘದ ಪದಾಧಿಕಾರಿಗಳು ಸದಸ್ಯರು ಉಪಸ್ಥಿತರಿದ್ದರು. ಅದಾಲತ್‌ಗೆ ವಕೀಲರ ಸಂಘ ಬಂಟ್ವಾಳ, ಕಂದಾಯ ಇಲಾಖೆ, ಪುರಸಭೆ, ಪೊಲೀಸ್ ಇಲಾಖೆ, ಬ್ಯಾಂಕುಗಳು ಮತ್ತು ಸಹಕಾರಿ ಸಂಸ್ಥೆಗಳು ಸಹಕರಿಸಿದವು.

ದ.ಕ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪುತ್ತೂರು ವಕೀಲರ ಸಂಘದಿಂದ ಮಹಿಳಾ ದಿನಾಚರಣೆ | ಸಾಧಕರಿಗೆ ಸನ್ಮಾನ

ಲಿಂಗ ತಾರತಮ್ಯ ಪಿಡುಗು ತೊಲಗಬೇಕಿದೆ: ಪ್ರಕೃತಿ ಕಲ್ಯಾಣಪುರ ಅಭಿಪ್ರಾಯ

ಪುತ್ತೂರು: ಲಿಂಗ ತಾರತಮ್ಯತೆಯ ಪಿಡುಗು ಸಮಾಜದಿಂದ ಇನ್ನೂ ಪೂರ್ಣ ಪ್ರಮಾಣದಲ್ಲಿ ತೊಲಗಿಲ್ಲ, ಇದನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕು ಎಂದು ಪ್ರಧಾನ ಹಿರಿಯ ವ್ಯವಾಹಾರಿಕ ನ್ಯಾಯಾಧೀಶೆ, ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷೆ ಪ್ರಕೃತಿ ಕಲ್ಯಾಣಪುರ ಹೇಳಿದರು.

ಸಂಸ್ಕೃತಿಯ ರೂಪ

ದ.ಕ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ ಪುತ್ತೂರು, ಹಾಗೂ ಅವ್ಯಕ್ತ ಪರಿಷತ್ ಪುತ್ತೂರು ಇದರ ಆಶ್ರಯದಲ್ಲಿ ವಕೀಲರ ಸಂಘದ ಸಭಾಂಗಣದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ವಿಶ್ವ ಮಹಿಳಾ ದಿನಾಚರಣೆ ಅಂದರೆ ಮಹಿಳೆಯರ ಅಸ್ಮಿತೆ, ಹೋರಾಟದ ಸ್ಮರಣೆಯ ಸಂದರ್ಭ. ಸ್ತ್ರೀ ಭಾರತೀಯ ಸಂಸ್ಕೃತಿಯ ರೂಪ ಎಂದ ಅವರು, ಹಸಿವು, ಬಡತನ, ಸಾಮಾಜಿಕ ಅಸಮಾನತೆಯ ವಿರುದ್ಧದ ಆಕೆಯ ಹೋರಾಟಕ್ಕೆ ನಾವೆಲ್ಲರೂ ಜತೆಯಾಗಬೇಕು ಎಂದು ಅವರು ಸಲಹೆ ನೀಡಿದರು.



ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಅಧ್ಯಕ್ಷ ಜಿ. ಜಗನ್ನಾಥ ರೈ ಮಾತನಾಡಿ, ಮಹಿಳೆಯರು ಎಲ್ಲ ಕ್ಷೇತ್ರದಲ್ಲಿ ಸಮರ್ಪಣ ಭಾವದಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ವಿಶ್ವ ಮಹಿಳಟ ದಿನಾಚರಣೆ ಮೂಲಕ ಅವರನ್ನು ನೆನಪಿಸುವುದು ಉತ್ತಮ ಕಾರ್ಯ ಎಂದರು.

ವೇದಿಕೆಯಲ್ಲಿ ಹೆಚ್ಚುವರಿ ಹಿರಿಯ ವ್ಯವಾಹಾರಿಕ ನ್ಯಾಯೇಶ ದೇವರಾಜ್ ವೈ.ಎಚ್., ಪ್ರಧಾನ ವ್ಯವಾಹಾರಿಕ ನ್ಯಾಯೇಶರ ಶಿವಣ್ಣ ಎಚ್.ಆರ್., ಸರಕಾರಿ ಅಭಿಯೋಜಕಿ ಜಯಂತಿ, ಅವ್ಯಕ್ತ ಪರಿಷತ್ ಅಧ್ಯಕ್ಷ ಜಯಪ್ರಕಾಶ್ ಎನ್., ವಕೀಲರ ಸಂಘದ ಉಪಾಧ್ಯಕ್ಷ ಮೋನಪ್ಪ ಎಂ.., ಪ್ರಧಾನ ಕಾರ್ಯದರ್ಶಿ ಚಿನ್ಮಯ ರೈ,. ಜತೆ ಕಾರ್ಯದರ್ಶಿ ಮಮತಾ ಸುವರ್ಣ, ಕ್ರೀಡಾ ಕಾರ್ಯದರ್ಶಿ ರಾಕೇಶ್ ಜೆ. ಮಸ್ಕರೇನ್ಹಸ್, ಶಿರೆಸ್ತಾದಾರೆ ಅನಿತಾ ಉಪಸ್ಥಿತರಿದ್ದರು. ಈ ಸಂದರ್ಭ ನಾಟಿ ವೈದ್ಯರಾದ ಮೋನಕ್ಕ ಉದರಡ್ಕ, ಕಮಲ ಶಾಂತಪ್ಪ ಪೂಜಾರಿ, ಯಮುನಾ ಪುರುಷರಕಟ್ಟೆ, ಕ್ರೀಡಾಪಟು ವಸಂತಿ ಮೆದು, ಪೌರ ಕಾರ್ಮಿಕೆ ಯಶೋಧಾ, ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷೆ ಪ್ರಕೃತಿ ಕಲ್ಯಾಣಪುರ, ಸರಕಾರಿ ಅಭಿಯೋಜಕಿ ಜಯಂತಿ, ವಕೀಲರ ಸಂಘದ ಜತೆ ಕಾರ್ಯದರ್ಶಿ ಮಮತಾ ಸುವರ್ಣ, 5ನೇ ಹೆಚ್ಚುವರಿ ಮತ್ತು ಸತ್ರ ನ್ಯಾಯಾಲಯದ ಶಿರೆಸ್ತಾದಾರೆ ಅನಿತಾ, ವಿದ್ಯಾ ಅವರನ್ನು ಸಮ್ಮಾನಿಸಲಾಯಿತು. ವಕೀಲರ ಸಂಘದ ಕೋಶಾಕಾರಿ ಮಹೇಶ್ ಕೆ. ಸವಣೂರು ಸನ್ಮಾನ ಪತ್ರ ವಾಚಿಸಿದರು.

ಪ್ರಧಾನವ್ಯವಹಾರಿಕನ್ಯಾಯೇಶ ಶಿವಣ್ಣ ಎಚ್.ಆರ್., ಉಮೇಶ್ ಮತ್ತು ತಂಡ ಮಾತೃಗೀತೆ ಹಾಡಿದರು. ವಕೀಲರ ಸಂಘದ ಮಾಜಿ ಜತೆ ಕಾರ್ಯದರ್ಶಿ ಸೀಮಾ ನಾಗರಾಜ್ ಸ್ವಾಗತಿಸಿ, ವಕೀಲರ ಸಂಘದ ಸದಸ್ಯೆ ಹೀರಾ ಉದಯ್ ವಂದಿಸಿದರು. ಅವ್ಯಕ್ತ ಪರಿಷತ್ ಕಾರ್ಯದರ್ಶಿ ದೀಪಕ್ ಬೊಳುವಾರು ಕಾರ್ಯಕ್ರಮ ನಿರ್ವಹಿಸಿದರು.

ಸುತ್ತ ಮುತ್ತ

ಇಂದು ಶುಭವರ್ಣ ಪುಸ್ತಕ ಮನೆ ಆರಂಭ

ಮಂಗಳೂರು: ಶುಭವರ್ಣ ಯಕ್ಷ ಸಂಪದ ಮರಕಡ ಮಂಗಳೂರು ಇದರ ಆಶ್ರಯದಲ್ಲಿ ಶುಭವರ್ಣ ಪುಸ್ತಕ ಮನೆ ಓದುಗರಿಗೊಂದು ಪುಟ್ಟ ನೆಲೆ ಆರಂಭ ಸಂಭ್ರಮ ಕಾರ್ಯಕ್ರಮ ಮಾ.15 ರಂದು ಬೆಳಿಗ್ಗೆ 10ಕ್ಕೆ ಮರಕಡ ಕುಮೇರು ಮನೆ ಶ್ರೀಮತಿ ಲಿಂಗಮ್ಮ ತನಿಯಪ್ಪ ಕೋಟ್ಯಾನ್ ಸ್ಮೃತಿ ಸೌಧದಲ್ಲಿ ನಡೆಯಲಿದೆ.

ಪ್ರಮುಖರಾದ ರವಿಚಂದ್ರ ಡಿ.ಶೆಟ್ಟಿ ಐಕಳಬಾವ, ಹಿರಿಯ ಯಕ್ಷಗುರು ಶಿವರಾಮ ಪಣಂಬೂರು, ಕೊಟ್ಟಾರದ ಎ .ಜೆ.ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಪ್ರಾಂಶುಪಾಲ ಡಾ.ವಿಜಯ ಕುಮಾರ್, ಉಪನ್ಯಾಸಕ ಹಾಗೂ ಕಟೀಲು ಮೇಳದ ಕಲಾವಿದ ಡಾ.ಶ್ರುತಕೀರ್ತಿರಾಜ ಉಜಿರೆ, ಕುಳಾಯಿ ಯಕ್ಷ ಮಂಜೂಷ ನಿರ್ದೇಶಕಿ ವಿದ್ಯಾ ಕೋಳ್ಯೂರು, ಛಾಂದಸ, ಕಟೀಲು ಮೇಳದ ಭಾಗವತ ಅಂಡಾಲ ದೇವಿಪ್ರಸಾದ ಶೆಟ್ಟಿ, ಯಕ್ಷ ಸುಧಾಂಶು ಕುಲಶೇಖರ ನಿರ್ದೇಶಕ ಸುಧಾಕರ ಸಾಲ್ಯಾನ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಮಾ.17: ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ ವಿಚಾರಸಂಕಿರಣ

ಕೊಣಾಜೆ: ಮಂಗಳೂರು ವಿವಿಯ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಹಾಗೂ ಗಿಳಿವಿಂಡು ಮಂಗಳೂರು ಇದರ ವತಿಯಿಂದ ಎಂ.ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ ವಿಚಾರಸಂಕಿರಣವು ಮಾ.17 ರಂದು ಮಂಗಳೂರು ವಿವಿಯ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ.ವಿವೇಕ್ ರೈ ವಿಚಾರ ವೇದಿಕೆಯಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಮಂಗಳೂರು ವಿವಿಯ ಕುಲಪತಿ ಪ್ರೊ.ಪಿ.ಎಲ್.ಧರ್ಮ ಉದ್ಘಾಟಿಸಲಿದ್ದು, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ.ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಅಕ್ಕಮಹಾದೇವಿ ವಿವಿಯ ವಿಶ್ರಾಂತ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಅಕಾಡೆಮಿ ಸದಸ್ಯ ಸಂಚಾಲಕರಾದ ಪ್ರೊ.ಜಯಪ್ರಕಾಶ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಲಿದ್ದು, ಗಿಳಿವಿಂಡು ಅಧ್ಯಕ್ಷರಾದ ಪ್ರೊ. ಶಿವರಾಮ ಶೆಟ್ಟಿ, ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಪ್ರೊ.ನಾಗಪ್ಪ ಗೌಡ, ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್ ಉಪಸ್ಥಿತರಿರಲಿದ್ದಾರೆ. ಬಳಿಕ ನಡೆಯುವ ವಿಚಾರಗೋಷ್ಠಿಯಲ್ಲಿ ವಿವಿಧ ಗಣ್ಯರು ವಿಚಾರ ಮಂಡಿಸಲಿದ್ದು, ಸಮಾರೋಪ ಸಮಾರಂಭದಲ್ಲಿ ಬೆಂಗಳೂರು ವಿವಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಡೊಮಿನಿಕ್ ಸಮಾರೋಪ ಭಾಷಣ ಮಾಡಲಿದ್ದು, ಮಂಗಳೂರು ವಿವಿ ಕುಲಸಚಿವರಾದ ಪ್ರೊ.ಗಣೇಶ್ ಸಂಜೀವ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಪ್ರೊ . ನಾಗಪ್ಪ ಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಕಾಸರಗೋಡು: ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಚೇರಿಯ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಯಿತು. ಕಾಸರಗೋಡು ಆರ್‌ಕೆ ಮಾಲ್‌ನ ಗ್ರ್ಯಾಂಡಿಯರ್ ಹಾಲ್‌ನಲ್ಲಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾಸರಗೋಡು ಎಎಸ್‌ಪಿ ಅಚ್ಯುತ್ ಅಶೋಕ್ ಕಾರ್ಯಕ್ರಮ ಉದ್ಘಾಟಿಸಿದರು. ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಲಾದ ಚರ್ಚಾ ಸ್ಪರ್ಧೆ ಮತ್ತು ಪೋಸ್ಟರ್ ತಯಾರಿಕೆ ಸ್ಪರ್ಧೆಯ ವಿಜೇತರನ್ನು ಮತ್ತು ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಸನ್ಮಾನಿಸಲಾಯಿತು ಮತ್ತು ಬಹುಮಾನಗಳನ್ನು ನೀಡಲಾಯಿತು. ಕಾಸರಗೋಡು ಹೆಚ್ಚುವರಿ ಐಸಿಡಿಎಸ್ ಸಿಡಿಪಿಒ ಶ್ರೀಲತಾ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಚೇರಿಯ ಕಿರಿಯ ಸೂಪರಿಂ ಟೆಂಡೆಂಟ್ ರಾಜೀಶ್ ಕೆ., ಹಿರಿಯ ಗುಮಾಸ್ತ ರಾಜಿ ಚಾಕೋ, ಮಿಷನ್ ಶಕ್ತಿ ಸಂಯೋಜಕಿ ಅಮಲಾ ಮ್ಯಾಥ್ಯೂ ಮುಂತಾದವರು ಮಾತನಾಡಿದರು. ಬಳಿಕ ಇಲಾಖೆ ನೌಕರರ ನೇತೃತ್ವದಲ್ಲಿ ಜುಂಬಾ ಫಿಟ್‌ನೆಸ್ ತರಗತಿ ಮತ್ತು ಕಲಾ ಕಾರ್ಯಕ್ರಮಗಳು ನಡೆದವು. ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಅಧ್ಯಕ್ಷತೆಯಲ್ಲಿ ಜರಗಿದ ಕಾರ್ಯಕ್ರಮದಲ್ಲಿ ಮಹಿಳಾ ರಕ್ಷಣಾ ಅಧಿಕಾರಿ ಸವಿತಾ ಸ್ವಾಗತಿಸಿ, ವಂದಿಸಿದರು.

ಅರ್ಜಿಗಳ ಆಹ್ವಾನ

ಕಾಸರಗೋಡು: ಕೇರಳ ರಾಜ್ಯ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುವ ಮೊಗ್ರಾಲ್ ಪುತ್ತೂರು ಸರಕಾರಿ ತಾಂತ್ರಿಕ ಪ್ರೌಢಶಾಲೆ 8ನೇ ತರಗತಿಗೆ ಪ್ರವೇಶ ಪ್ರಾರಂಭಿಸಲಾಗಿದೆ. ಆನ್‌ಲೈನ್ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ ಏಪ್ರಿಲ್ 6 ಆಗಿದೆ. ಮಾಹಿತಿಗೆ 9946852459 ಕರೆ ಮಾಡಬಹುದು.

ಪುಲ್ಕೇರಿ ಬೈಪಾಸ್ ಸರ್ಕಲ್‌ನಿಂದ ಮಂಗಳೂರಿನ ಬಿಕರ್ನಕಟ್ಟೆವರೆಗಿನ ಚತುಷ್ಪಥ ರಸ್ತೆ

ಆಮೆಗತಿಯಲ್ಲಿ ಸಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ!

▸ ಗಣೇಶ್ ನಾಯಕ್, ಸಾಣೂರು

ಕಾರ್ಕಳ : ಕಾರ್ಕಳ ತಾಲೂಕು ಸಾಣೂರು ಗ್ರಾ.ಪಂ. ವ್ಯಾಪ್ತಿಯ ಪುಲ್ಕೇರಿ ಬೈಪಾಸ್ ಸರ್ಕಲ್‌ನಿಂದ ಮಂಗಳೂರಿನ ಬಿಕರ್ನಕಟ್ಟೆಯವರೆಗೆ 45 ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ 169 ಚತುಷ್ಪಥ ಕಾಮಗಾರಿ ಪ್ರಾರಂಭವಾಗಿ 5 ವರ್ಷಗಳು ಕಳೆದಿವೆ.

ತೀರಾ ಅವೈಜ್ಞಾನಿಕವಾಗಿ ನಡೆಯುತ್ತಿರುವ ಅರೆಬರೆ ಕಾಮಗಾರಿಗಳು ರಸ್ತೆಯಲ್ಲಿ ಓಡಾಡುವ ಜನರ ವಾಹನ, ಸ್ಥಳೀಯ ನಾಗರಿಕರಿಗೆ ತೀರಾ ಸಂಕಷ್ಟ ತಂದೊಡ್ಡಿದೆ. ಭೂಸ್ವಾಧೀನ ಪ್ರಕ್ರಿಯೆ ತೀರ ವಿಳಂಬವಾಗಿ, ಭೂ ಮಾಲಕರಿಗೆ ನ್ಯಾಯಯುತ ಪರಿಹಾರ ದೊರಕಿಸಿಕೊಡಲು ವಿಫಲವಾಗಿ, ಜನರು ಹೈಕೋರ್ಟ್‌ನ ಮೊರೆ ಹೋಗಿರುವುದರಿಂದ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಸಂಪೂರ್ಣವಾಗಿಲ್ಲ.

ಹೆದ್ದಾರಿ ಯೋಜನೆಗೆ ದೊಡ್ಡ ಹಿನ್ನಡೆ

ಭೂಸ್ವಾಧೀನಾಧಿಕಾರಿಗಳು, ಹೆದ್ದಾರಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನ್ಯಾಯಯುತ ಪರಿಹಾರ ಶೀಘ್ರವಾಗಿ ದೊರಕಿಸಿಕೊಟ್ಟರೆ ಈ ಯೋಜನೆ ಸಂಪೂರ್ಣಗೊಂಡು ಎರಡು ವರ್ಷಗಳೇ ಕಳೆದು ಹೋಗುತ್ತಿದ್ದವು. ಟೋಲ್ ಗೇಟ್ ನಿರ್ಮಾಣ ಮಾಡಿ ಟೋಲ್ ಸಂಗ್ರಹಿಸಲು



ತೋರಿಸುವ ಉತ್ಸಾಹ... ಕಾಮಗಾರಿಯನ್ನು ಸಮಯಬದ್ಧವಾಗಿ ನಿರ್ವಹಿಸಿ ಗುಣಮಟ್ಟದ ಹೆದ್ದಾರಿ ನಿರ್ಮಾಣ ಮಾಡುವಲ್ಲಿ ತೋರದೆ ಇರುವುದು ವ್ಯವಸ್ಥೆಯ ವಿಪರ್ಯಾಸ.

ಕಾರ್ಕಳ ಪುಲ್ಕೇರಿ ಬೈಪಾಸ್ ಸರ್ಕಲ್‌ನಿಂದ ಮಾಳಾ ಗೇಟ್ ವರೆಗೆ 18 ಕಿ.ಮೀ. ಹೆದ್ದಾರಿ ಕಾಮಗಾರಿ ಕೂಡ ಭೂ ಮಾಲಕರಿಗೆ ನ್ಯಾಯಯುತ ಪರಿಹಾರ ಕೊಡುವಲ್ಲಿ ಸಂಪೂರ್ಣ ವಿಫಲವಾಗಿದ್ದು ಅತಿ ಹೆಚ್ಚು ಸರಕಾರಿ ಜಾಗವಿದ್ದರೂ ಒಂದಷ್ಟು ಜನ ಖಾಸಗಿ ಭೂಮಾಲಕರಿಗೆ ನ್ಯಾಯಯುತ ಪರಿಹಾರ ಕೊಡಲು ಮೀನ ಮೇಷ ಎಣಿಸುತ್ತಿರುವುದು ಹೆದ್ದಾರಿ ಕಾಮಗಾರಿ ವಿಳಂಬಕ್ಕೆ ಪ್ರಮುಖ ಕಾರಣವಾಗಿದೆ.

ಡೈವರ್ಶನ್‌ಗಳು ತೀರ ಅಪಾಯಕಾರಿಯಾಗಿ ಈಗಾಗಲೇ ಹಲವಾರು ಅಪಘಾತಗಳು ಸಂಭವಿಸಿ, ಬಹಳಷ್ಟು ಸಾವು ನೋವು ಘಟಿಸಿರುವುದು ದುರ್ದೈವಕರ.

ಅಭಿವೃದ್ಧಿ ಹೆಸರಿನಲ್ಲಿ ಜನರ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕೆ ಆದ್ಯತೆ ನೀಡದಿರುವುದು ಹೆದ್ದಾರಿ ಯೋಜನೆ ಬಹುದೊಡ್ಡ ಆತಂಕಕಾರಿ ಸಂಗತಿಯಾಗಿದೆ. ಹಳೆ ಬಸ್ಸು ತಂಗುದಾಣ ಕೆಡವಿ 4 ವರ್ಷಗಳಾಯಿತು. ಐದಾರು ತಿಂಗಳು ಭಾರಿ ಮಳೆ ಮತ್ತು 3 ತಿಂಗಳು ಪ್ರಖರ ಬಿಸಿಲಿಗೆ ರಸ್ತೆ ಮಧ್ಯದಲ್ಲಿಯೇ ಅಪಾಯಕಾರಿಯಾಗಿ ಬಸ್ಸು ಕಾಯಬೇಕಾದ ದುರ್ಗತಿ. ಹೆದ್ದಾರಿ ಕಾಮಗಾರಿಯಿಂದ ಜನಸಾಮಾನ್ಯರು ಹೈರಾಣರಾಗಿದ್ದಾರೆ.

ಕಾಮಗಾರಿ ನಡೆಯುವಾಗ ಆಗಾಗ ಕುಡಿಯುವ ನೀರಿನ ಪೈಪ್ ಹಾನಿಯಾಗಿ ವಾರಗಟ್ಟಲೆ ಮನೆಗಳಿಗೆ ನೀರು ಸರಬರಾಜಾಗದೆ ಜನತೆ ಹೆದ್ದಾರಿ ಇಲಾಖೆ ಮತ್ತು ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುವಂತಾಗಿದೆ.

> **ಪ್ರಯೋಜನವಾಗಿಲ್ಲ**
>
> ರಾಷ್ಟ್ರೀಯ ಹೆದ್ದಾರಿ 169ಯ ರಸ್ತೆ ಕಾಮಗಾರಿ ಹೆದ್ದಾರಿ ಇಲಾಖೆಯ ನಿಧಾನ ಗತಿ , ಬೇಜವಾಬ್ದಾರಿಯ ನಡವಳಿಕೆಗೆ ನಾಗರಿಕರಲ್ಲಿ ಆಕ್ರೋಶ ಮಡುಗಟ್ಟಿದೆ. ತೀರಾ ಅವೈಜ್ಞಾನಿಕವಾಗಿ ಕಳಪೆ ಗುಣಮಟ್ಟದ ಕಾಮಗಾರಿ ನಡೆಯುತ್ತಿದ್ದರೂ, ಈ ಬಗ್ಗೆ ಹೆದ್ದಾರಿ ಇಲಾಖೆಗೆ ಗುತ್ತಿಗೆದಾರರಿಗೆ ಮತ್ತು ಜನಪ್ರತಿನಿಧಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ.
>
> ● ನರಸಿಂಹ ಕಾಮತ್ ಸಾಣೂರು, ರಾ.ಹೆ.ಹೋರಾಟ ಸಮಿತಿ ಪ್ರಮುಖರು

ಹೆದ್ದಾರಿ ನಿರ್ಮಾಣ ಮಾಡುವ ಮೊದಲು ಸ್ಥಳೀಯ ಜನರಿಗೆ ಮುಕ್ತವಾಗಿ ಓಡಾಡಲು ಸರ್ವಿಸ್ ರಸ್ತೆ ನಿರ್ಮಾಣವಾಗದೆ ಇದ್ದ ರಸ್ತೆ ಅಗೆದು ತೆಗೆದು, ಬೇಸಿಗೆಯಲ್ಲಿ ಪ್ರತಿನಿತ್ಯ ಧೂಳಿನ ಅಭಿಷೇಕ ಮಳೆಗಾಲದಲ್ಲಿ ರಸ್ತೆ ರಾಡಿಯಾಗಿ ಜಾರಿ ಬೀಳುವ ದುರ್ಗತಿ ಕಳೆದ ಮೂರು ನಾಲ್ಕು ವರ್ಷಗಳಿಂದ ಹೆದ್ದಾರಿ ಪ್ರದೇಶದ ಜನರಿಗೆ ಅನುಭವಿಸಿ ಸಾಕಾಗಿದೆ.

ಬೀದಿ ದೀಪಗಳ ಕಂಬಗಳನ್ನು ಸ್ಥಳಾಂತರಿಸಿ ಮೂರು ವರ್ಷಗಳು ಕಳೆದರೂ ಇನ್ನೂ ಹೊಸ ಬೀದಿ ದೀಪಗಳಿಗೆ ಚಾಲನೆ ನೀಡದೆ ಇರುವುದರಿಂದ ರಾತ್ರಿ ಇಡೀ ಕಗ್ಗತ್ತಲಿನಲ್ಲಿ ಹಲವಾರು ಅಪಘಾತಗಳು ಸಂಭವಿಸಿ ಭಾರಿ ಸಾವು ನೋವುಗಳು ಆಗಿ ಜನ ಬೇಸತ್ತಿದ್ದಾರೆ.

ಜನರ ಸುರಕ್ಷತೆಗೆ ಆದ್ಯತೆ ನೀಡಿ ಗುಣಮಟ್ಟದ ಕಾಮಗಾರಿ ನಡೆಸುವಲ್ಲಿ ಜಿಲ್ಲಾಡಳಿತ, ಜನಪ್ರತಿನಿಧಿಗಳು ಸಂಪೂರ್ಣ ವಿಫಲರಾಗಿದ್ದಾರೆ. ರಸ್ತೆ ನಿರ್ಮಾಣ ಸಂದರ್ಭ ಗುಡ್ಡಗಳನ್ನು ಇಳಿಜಾರಾಗಿ ಕಡಿಯದೆ ನೇರ ಕಡಿದು ಗುಡ್ಡ ಜರಿದು ಮಣ್ಣು ರಸ್ತೆಗೆ ಬಿದ್ದು ಹಲವಾರು ಅಪಾಯಕಾರಿ ಸನ್ನಿವೇಶ ಆತಂಕ ಸೃಷ್ಟಿಸಿವೆ.

ಗುಡ್ಡಜರಿದ ಭಾಗಕ್ಕೆ ತಡೆಗೋಡೆ ನಿರ್ಮಾಣ ಮಾಡಲು ಹಿಂದೇಟು ಹಾಕುವ ಹೆದ್ದಾರಿ ಇಲಾಖೆ, ಪ್ರಭಾವಿಗಳ ಆಮಿಷಕ್ಕೆ ಒಳಗಾಗಿ ರಸ್ತೆಯ ಅಲೈನ್ಮೆಂಟ್ ಬದಲಿಸಿ ಕೋಟ್ಯಾಂತರ ರೂಪಾಯಿ ಅನಾವಶ್ಯಕವಾಗಿ ಪೋಲು ಆಗುವಂತೆ ಮಾಡುತ್ತಿರುವುದು ದುರದೃಷ್ಟಕರ.

ಯೋಜನೆಗೆ ಕಾರ್ಯ ಆದೇಶವಾಗಿ ನಿಯಮದ ಪ್ರಕಾರ 2 ವರ್ಷದೊಳಗೆ ಕಾಮಗಾರಿ ಮುಗಿಸಿ ಕೊಡಬೇಕಾದ ಗುತ್ತಿಗೆದಾರ ಕಂಪನಿ, ಭೂಸ್ವಾಧೀನ ಪ್ರಕ್ರಿಯೆ ವಿಳಂಬಗೊಂಡಿರುವುದರಿಂದ ಮತ್ತೆರಡು ವರ್ಷ ಹೆಚ್ಚುವರಿಯಾಗಿ ಕೇಳಿ ಪಡೆದುಕೊಂಡಿದ್ದರೂ ಸಂಪೂರ್ಣಗೊಳಿಸಲಾಗದೆ ಇನ್ನೆರಡು ವರ್ಷ ಕಾಮಗಾರಿಗಳು ಮುಂದುವರೆಯುವ ಸಾಧ್ಯತೆ ಹೆಚ್ಚಿದೆ.

ಶ್ರೀ ಕ್ಷೇತ್ರ ಅರ್ಕುಳ ದೈವಸ್ಥಾನದ ಪಶ್ಚಿಮ, ದಕ್ಷಿಣ ಗೋಪುರ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ



ಬಂಟ್ವಾಳ: ಶ್ರೀ ಕ್ಷೇತ್ರ ಅರ್ಕುಳ ಉಳ್ಳಾಕ್ಲು ಮಗ್ರಂತಾಯಿ ದೈವಸ್ಥಾನದ ಪಶ್ಚಿಮ ಹಾಗೂ ದಕ್ಷಿಣ ಗೋಪುರಗಳ ನಿರ್ಮಾಣ ಕಾರ್ಯ ಕ್ಷೇತ್ರದ ಇತಿಹಾಸದಲ್ಲಿ ಮಹತ್ವದ ಧಾರ್ಮಿಕ ಮತ್ತು ಸಾಂಸ್ಕೃತಿಕ ಘಟ್ಟವಾಗಿ ಗುರುತಿಸಲ್ಪಡುವುದಾಗಿ ಅರ್ಕುಳ ಬೀಡು ವಜ್ರನಾಭ ಶೆಟ್ಟಿಯವರು ತಿಳಿಸಿದ್ದಾರೆ.

ಶ್ರೀ ಕ್ಷೇತ್ರ ಅರ್ಕುಳದಲ್ಲಿ ಗೋಪುರ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಅವರು, ಈ ಪುಣ್ಯ ಕಾರ್ಯ ಮುಂದಿನ ದಿನಗಳಲ್ಲಿ ಕ್ಷೇತ್ರದ ವೈಭವವನ್ನು ಮತ್ತಷ್ಟು ವೃದ್ಧಿಸುವುದರ ಜೊತೆಗೆ ಭಕ್ತರ ಭಕ್ತಿ ಹಾಗೂ ಶ್ರದ್ಧೆಗೆ ಹೊಸ ಪ್ರೇರಣೆಯಾಗಲಿದೆ ಎಂದು ಹೇಳಿದರು.

ಅತಿಥಿಯಾಗಿದ್ದ ಸಂಸ್ಕಾರ ಭಾರತಿಯ ಜಿಲ್ಲಾಧ್ಯಕ್ಷ ತಾರಾನಾಥ ಕೊಟ್ಟಾರಿ ಮಾತನಾಡಿದರು. ಅರ್ಕುಳ ಬೀಡು ರತ್ನರಾಜ ಶೆಟ್ಟಿ, ಎ.ಬಿ. ಅಜಿತ್ ಕುಮಾರ್, ಪ್ರಮುಖರಾದ ಕಂಪ ಸದಾನಂದ ಆಳ್ವ,

> **ಚೈತನ್ಯ ಮೂಡಿಸುತ್ತದೆ**
>
> ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಕ್ತರ ಸಕ್ರಿಯ ಭಾಗವಹಿಸುವಿಕೆ ಹೊಸ ಚೈತನ್ಯ ಮೂಡಿಸುವುದರ ಜೊತೆಗೆ ಧಾರ್ಮಿಕ -ಸಾಂಸ್ಕೃತಿಕ ಪರಂಪರೆ ಮುಂದಿನ ಪೀಳಿಗೆಗಳಿಗೆ ಪಸರಿಸಲು ಮಹತ್ವದ ಪಾತ್ರ ವಹಿಸುತ್ತದೆ.
>
> ● ತಾರಾನಾಥ ಕೊಟ್ಟಾರಿ

ಟಿ. ಪುನೀತ್ ಸೇಮಿತ, ಉಳಿದೊಟ್ಟು ಮನೋಜ್, ಮಂಟಮೆ ದಿನಕರ ಕರ್ಕೇರಾ, ಕುಚ್ಚೂರು ಲೋಕಯ್ಯ ಪೂಜಾರಿ, ಪ್ರವೀಣ್ ಅಂಚನ್, ಟಿ. ರಘುನಾಥ ಪೂಜಾರಿ, ಅರ್ಕುಳ ಬೈಲ್ ಮೋನಪ್ಪ ಪೂಜಾರಿ, ಅರ್ಕುಳ ಬಸದಿ ಪುಷ್ಪರಾಜ ಇಂದ್ರ, ತುಪ್ಪೆಕಲ್ಲು ಮನೋಜ್ ಬಂಗೇರಾ ಮತ್ತಿತರರು ಉಪಸ್ಥಿತರಿದ್ದರು.

ಡಾ.ಎ.ಜಯಕುಮಾರ ಶೆಟ್ಟಿ ಸ್ವಾಗತಿಸಿದರು. ತುಪ್ಪೆಕಲ್ಲು ನಾಗರಾಜ ಶೆಟ್ಟಿ ವಂದಿಸಿದರು.

ಸರಕಾರಿ ಸವಲತ್ತುಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ಕಾರ್ಯ ನಿರಂತರ: ಕೋಟ್ಯಾನ್



ಮುಲ್ಕಿ: ಗ್ರಾಮೀಣ ಭಾಗದ ಜನರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಜನಪ್ರತಿನಿಧಿಗಳ ಆದ್ಯ ಕರ್ತವ್ಯ. ಅಭಿವೃದ್ಧಿ ಹಾಗೂ ಸಾಮಾಜಿಕ ಸಹಾಯ ಹಸ್ತದ ಕಾರ್ಯಕ್ರಮಗಳ ಮೂಲಕ ಸರಕಾರದ ಸವಲತ್ತುಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೆ ತಲುಪಿಸುವ ಕಾರ್ಯ ನಿರಂತರ ನಡೆಯಲಿದೆ ಶಾಸಕ ಉಮಾನಾಥ ಕೋಟ್ಯಾನ್ ಹೇಳಿದ್ದಾರೆ.

ಅವರು ಸುಮಾರು ರೂ.50 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡ ಮುಲ್ಕಿ ತಾಲೂಕಿನ ಅತಿಕಾರಿಬೆಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ನಡಿಬೆಟ್ಟು ಶ್ರೀ ಧೂಮಾವತಿ ದೈವಸ್ಥಾನದ ರಸ್ತೆ ಅಭಿವೃದ್ಧಿ, ಕಾಂಕ್ರೀಟೀಕರಣ ಕಾಮಗಾರಿ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭ ಅರ್ಚಕ ಸುಬ್ರಹ್ಮಣ್ಯ ಭಟ್ ದೇಂದಡ್ಕ, ದೈವಸ್ಥಾನದ ಆಡಳಿತ ಮೊಕ್ತೇಸರ ದೆಪ್ಪುಣಿ ಗುತ್ತು ಸುಧಾಕರ ಶೆಟ್ಟಿ, ಅರ್ಚಕ ಶೇಖರ ಪೂಜಾರಿ, ಜಗದೀಶ್ ಪ್ರಭು ಪನಿಕೆರೆ, ಶಿವಚಂದ್ರ ಶೆಟ್ಟಿ, ರಾಮದಾಸ ಶೆಟ್ಟಿ ಬಾಳಿಕೆ ಮನೆ, ಜನಾನಂದ ಶೆಟ್ಟಿ ತಿಂಗೊಳೆ ಮನೆ, ಗಣೇಶ್ ಶೆಟ್ಟಿ ಐಕಳ, ನವೀನ್ ಚಂದ್ರ ಪ್ರಭು ಮೈಲೊಟ್ಟು , ಗಂಗಾಧರ ಶೆಟ್ಟಿ ಬರ್ಕೆ ತೋಟ, ಚೇತನ್ ಶೆಟ್ಟಿ, ರಂಗನಾಥ ಶೆಟ್ಟಿ, ಉದಯ ಅಮೀನ್ ಮಟ್ಟು, ಮುಲ್ಕಿ ನ.ಪಂ ಮಾಜಿ ಅಧ್ಯಕ್ಷ ಸತೀಶ್ ಅಂಚನ್, ಸುಭಾಷ್ ಶೆಟ್ಟಿ, ಭಾನುಮತಿ ಶೆಟ್ಟಿ ಕಕ್ವಗುತ್ತು ಅತಿಕಾರಿಬೆಟ್ಟು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಶಶಿಕಲಾ, ಮನೋಹರ ಕೋಟ್ಯಾನ್, ಮಾಜಿ ಉಪಾಧ್ಯಕ್ಷ ಕಿಶೋರ್ ಶೆಟ್ಟಿ ದೆಪ್ಪುಣಿಗುತ್ತು, ಸದಸ್ಯರಾದ ಹರೀಶ್ ಶೆಟ್ಟಿ, ಜಯಕುಮಾರ್ ಮಟ್ಟು, ಗೀತಾ, ಸ್ಥಳೀಯರಾದ ವಿಜಯಕುಮಾರ್ ಶೆಟ್ಟಿ , ಉತ್ತಮ್ ಪೂಜಾರಿ ಮೈಲೊಟ್ಟು, ದಿನೇಶ್ಚಂದ್ರ ಅಜಿಲ, ಸಾಧು ಅಂಚನ್ ಮಟ್ಟು, ಕರುಣಾಕರ ಪೂಜಾರಿ, ಮಾಧವ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಮನೋಹರ ಕೋಟ್ಯಾನ್ ನಿರೂಪಿಸಿದರು.

ಶೌರ್ಯ ವಿಪತ್ತು ನಿರ್ವಹಣಾ ಘಟಕ: ಅಪಾಯಕಾರಿ ಮರ ತೆರವು



ನಿಡ್ಪಳ್ಳಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪುತ್ತೂರು ಬೆಟ್ಟಂಪಾಡಿ ವಲಯದ ಶೌರ್ಯ ವಿಪತ್ತು ನಿರ್ವಹಣಾ ಘಟಕದ ವತಿಯಿಂದ ಬೆಟ್ಟಂಪಾಡಿ ಸರಕಾರಿ ಪ್ರೌಢ ಶಾಲಾ ವಠಾರದಲ್ಲಿ ಮರಗಳ ತೆರವು ಕಾರ್ಯಾಚರಣೆ ನಡೆಯಿತು.

ಪ್ರೌಢ ಶಾಲಾ ಸುತ್ತ ಮುತ್ತ ಶಾಲೆಗೆ ಮತ್ತು ವಿದ್ಯುತ್ ಕಂಬಗಳಿಗೆ ಅಪಾಯಕಾರಿ ಸ್ಥಿತಿಯಲ್ಲಿ ಒಣಗಿ ನಿಂತ ಮರಗಳನ್ನು ತೆರವುಗೊಳಿಸಲಾಯಿತು. ಸ್ವಯಂ ಸೇವಕರಾದ ಸುಬ್ರಹ್ಮಣ್ಯ, ಅಶೋಕ, ದಿನೇಶ, ಉಮೇಶ, ಸತೀಶ್ ಪದ್ಮಾವತಿ, ಗೀತಾ ಜನಾರ್ದನ ಮೊದಲಾದವರು ಪಾಲ್ಗೊಂಡರು.

ಶಾಲೆಯ ಮುಖ್ಯ ಗುರು ವಿಜಯ ಕುಮಾರ್ ತಮ್ಮ ಸೇವೆಯನ್ನು ಗುರುತಿಸಿ ಪ್ರಶಂಶಿಸಿದರು. ಬೆಟ್ಟಂಪಾಡಿ ವಲಯ ಮೇಲ್ವಿಚಾರಕ ಸೋಹನ್ ಜಿ. ಭೇಟಿ ನೀಡಿ ಶುಭ ಹಾರೈಸಿದರು.

ಅಮ್ಮ ಕೊಡವ ಸಮಾಜ ಅಭಿವೃದ್ಧಿಗೆ ಶಾಸಕರಿಂದ ರೂ.20ಲ.ಚೆಕ್ ವಿತರಣೆ



ನಾಪೋಕ್ಲು: ಕೊಡಗು ಅಖಿಲ ಅಮ್ಮಕೊಡವ ಸಮಾಜದ ಅಭಿವೃದ್ಧಿಗೆ ಶಾಸಕ ಎ.ಎಸ್.ಪೊನ್ನಣ್ಣ ಶುಕ್ರವಾರ ಸಮಾಜದ ಅಧ್ಯಕ್ಷ ಬಾನಂಡ ಪ್ರಥ್ಯು ಅವರಿಗೆ ಚೆಕ್ಕನ್ನು ಹಸ್ತಾಂತರಿಸಿದರು.

ಕೊಡಗು ಅಖಿಲ ಅಮ್ಮ ಕೊಡವ ಸಮಾಜ ಅಭಿವೃದ್ಧಿಗೆ ಸರ್ಕಾರದಿಂದ ಬಿಡುಗಡೆಯಾದ 20 ಲಕ್ಷ ರೂ.ಗಳ ಚೆಕ್‌ನ್ನು ವೀರಾಜಪೇಟೆ ಕ್ಷೇತ್ರ ಶಾಸಕರಾದ ಪೊನ್ನಣ್ಣನವರು ಸಮಾಜದ ಅಧ್ಯಕ್ಷರಿಗೆ ವಿಧಾನ ಸೌಧದಲ್ಲಿ ಶುಕ್ರವಾರ ಹಸ್ತಾಂತರ ಮಾಡಿದರು.

ಅಮ್ಮ ಕೊಡವ ಸಮಾಜದ ಪ್ರಮುಖರಾದ ಪುತ್ತಾಮನೆ ಅನಿಲ್ ಪ್ರಸಾದ್, ನೇರಿಯಂಡಮ್ಮನ ಸುಬ್ರಮಣಿ, ಜನಾರ್ದನ, ಬಾನಂಡ ಸುನೀತ್, ಸೂದನ್, ಹೆಮ್ಮಚ್ಚಿಮನೆ ಎನ್. ಹರೀಶ್, ಎಚ್.ಎಂ.ಹರೀಶ್, ಮನ್ನಕಮನೆ ಎ. ಬಾಲಕೃಷ್ಣ, ಎಂ.ಎಂ. ಬಾಲಕೃಷ್ಣ, ಎಚ್.ಆರ್.ಮದನ್, ಪುತ್ತಾಮನೆ ಪರ್ವತ್, ಯತೀಶ್, ಎಚ್.ಎಂ.ಪ್ರಶಾಂತ್,ಕೊಡಿಂಜಮ್ಮನ ಬಾಲಕೃಷ್ಣ, ಶರಣು, ವಿಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬೈಂದೂರು ಸರ್ಕಾರಿ ಪಿಯು ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಉಪ್ಪುಂದ: ಹೆಣ್ಣು ಒಂದು ಶಕ್ತಿಯಾಗಿದ್ದು, ಆಕೆ ಮನಸ್ಸು ಮಾಡಿದರೆ ಏನನ್ನೂ ಬೇಕಾದರೂ ಸಾಧಿಸಬಹುದು, ಆಧುನಿಕ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾಳೆ, ಯಾವುದೇ ಕ್ಷೇತ್ರವಾಗಲಿ ಪುರುಷರಿಗೆ ಮಾತ್ರ ಸೀಮಿತವಲ್ಲ ಎಂಬುದನ್ನು ಸಾಧಿಸಿ ತೋರಿದ್ದಾಳೆ. ಬಲಿಷ್ಠ ಮಹಿಳಾ ಸಮಾಜ ಹಾಗೂ ನಾಯಕತ್ವವನ್ನು ಪ್ರೇರಿಪಿಸಿದ್ದಲ್ಲಿ ಸ್ತ್ರೀಕುಲದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಉದ್ಯಮಿ ಸವಿತಾ ದಿನೇಶ್ ಹೇಳಿದರು.

ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನದ ಗೌರವ ಸ್ವೀಕರಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ನಾಗರಾಜ ಶೆಟ್ಟಿ ಮಾತನಾಡಿ, ಕುಟುಂಬದ ಕೇಂದ್ರಬಿಂದುವಾಗಿರುವ ಮಹಿಳೆಗೆ ಸೂಕ್ತ ಸ್ಥಾನ, ಮಾನ ಗೌರವದ ಜತೆಗೆ ಪೂಜ್ಯಭಾವನೆಯಿಂದ ಕಾಣುವ ಸಂಸ್ಕೃತಿ ನಮ್ಮದು. ಸ್ವಾವಲಂಬಿ ಜೀವನದ ಕಡೆಗೆ ಸ್ತ್ರೀಯರು ಮನ ಮಾಡುವುದರಿಂದ ವನಿತೆಯರು ಸಬಲರಾಗಲು ಸಾಧ್ಯ. ಮಹಿಳೆಯರು ಸಮಾಜಸೇವೆ ಮಾಡುವ ಮೂಲಕ ಸಮಷ್ಟಿಯ ಹಿತ ಕಾಪಾಡುವ ಜವಾಬ್ದಾರಿಯ ಜ್ಞಾನ ಬೆಳೆಯುತ್ತದೆ. ಸರ್ವರ ಹಿತ ಕಾಪಾಡುವ ಮನಸು ಮಾತೆಯಲ್ಲಿದೆ ಎಂದರು.

ಮಹಿಳಾ ಸಮಿತಿ ಸಂಚಾಲಕಿ ಸವಿತ ಎಸ್, ಕಾಲೇಜಿನ ಬೋಧಕ ಬೋಧಕೇತರ ಸಿಬ್ಬಂದಿ ವರ್ಗ ಮತ್ತು ಎಲ್ಲಾ ವಿದ್ಯಾರ್ಥಿಗಳು ಹಾಜರಿದ್ದರು. ಅನುಷಾ ಜೋಸೆಫ್ , ಮೇಘನಾ ನಿರೂಪಿಸಿದರು. ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸೃಜನಶೀಲ ವಸ್ತು ಪ್ರದರ್ಶನ ನಡೆಯಿತು.

ಇಂದು ಕೊಡಗಿನಲ್ಲಿ ಜಿಲ್ಲಾಮಟ್ಟದ ಸಿರಿಧಾನ್ಯ ಹಬ್ಬ, ವಸ್ತು ಪ್ರದರ್ಶನ

ಮಡಿಕೇರಿ: ಕೇಂದ್ರ ಸರಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಹಾಗೂ ಕರ್ನಾಟಕ ಸರ್ಕಾರ, ಕೊಡಗು ಜಿಲ್ಲಾಡಳಿತ, ಜಿ.ಪಂ. ಮತ್ತು ಕೃಷಿ ಇಲಾಖೆ ವತಿಯಿಂದ ಆತ್ಮ ಯೋಜನೆ, ದೇಸಿ ತಳಿಗಳ ಸಂರಕ್ಷಣೆ ಹಾಗೂ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಅಂಗವಾಗಿ ಉತ್ಪಾದ ನೋತ್ತರ ಕೃಷಿ-ರೈತರ ಸಬಲೀಕರಣ ಶೀರ್ಷಿಕೆಯೊಂದಿಗೆ ಮಾ.15 ರಂದು ಬೆಳಿಗ್ಗೆ 9.30ಕ್ಕೆ ನಗರದ ಗಾಂಧಿ ಮೈದಾನದಲ್ಲಿ ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ, ದೇಸಿ ತಳಿಗಳ ಸಂರಕ್ಷಣೆ ಕಾರ್ಯಾಗಾರ ಮತ್ತು ಕಿಸಾನ್ ಮೇಳ , ವಸ್ತು ಪ್ರದರ್ಶನ ನಡೆಯಲಿದೆ.

ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕೃಷಿ ಹಾಗೂ ಕೃಷಿ ಸಂಬಂಧಿತ ಎಲ್ಲಾ ಇಲಾಖೆಗಳಿಂದ ಜಿಲ್ಲೆಯ ರೈತರಿಗೆ ಮಾಹಿತಿ ನೀಡುವ ವಸ್ತು ಪ್ರದರ್ಶನ, ಭಾರತ ಸರ್ಕಾರದ ಪಿಎಂಎಫ್ ಎಂಇ ಯೋಜನೆಯ ಫಲಾನುಭವಿ ಉದ್ಯಮಿಗಳಿಂದ ವಸ್ತು ಪ್ರದರ್ಶನ ಹಾಗೂ ಮಾರಾಟ, ರೈತರಿಗೆ ಸಹಾಯಧನದಲ್ಲಿ ಕೃಷಿ ಯಂತ್ರೋಪಕರಣಗಳ ವಿತರಣೆ, ಕೃಷಿ ವಿಜ್ಞಾನಿಗಳು ಹಾಗೂ ತಜ್ಞರಿಂದ ರೈತರೊಂದಿಗೆ ತಾಂತ್ರಿಕ ಅಧಿವೇಶನ ಹಾಗೂ ಚರ್ಚೆ, ಮಂಡ್ಯ ಜಿಲ್ಲಾ ಸಾವಯವ ಬೆಲ್ಲ ಉತ್ಪಾದಕರ ಸಂಘದವರಿಂದ ಮಾರಾಟ ಹಾಗೂ ಇತರ ಚಟುವಟಿಕೆಗಳನ್ನು ಆಯೋಜಿಸಲಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಚಂದ್ರಶೇಖರ್ ತಿಳಿಸಿದ್ದಾರೆ.

ಖಾದಿ ಬಟ್ಟೆ ಖರೀದಿಗೆ ಅವಕಾಶ

ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ ಸಂಸ್ಥೆಗಳು/ ನಿಗಮ/ ಮಂಡಳಿ/ ಸ್ವಾಯತ್ತ ಸಂಸ್ಥೆಗಳು/ ವಿಶ್ವವಿದ್ಯಾಲಯಗಳ ಅಧಿಕಾರಿ/ ನೌಕರರು 'ಸ್ವಯಂ ಪ್ರೇರಣೆಯಿಂದ' ಪ್ರತಿ ತಿಂಗಳ ಮೊದಲ ಶನಿವಾರ ಖಾದಿ ಉಡುಪು ಧರಿಸುವಂತೆ ಸರ್ಕಾರ ಸೂಚನೆ ನೀಡಿದೆ.

ಆದರಂತೆ ಎಲ್ಲಾ ಸರ್ಕಾರಿ ಅಧಿಕಾರಿ/ ನೌಕರರುಗಳಿಗೆ ಖಾದಿ ಬಟ್ಟೆಗಳ ಖರೀದಿಸಲು ಸುಲಭವಾಗಿ ಲಭ್ಯವಾಗುವಂತೆ ಮಾ.15ರಂದು ಕೃಷಿ ಇಲಾಖೆಯಿಂದ ಆಯೋಜಿಸಿರುವ ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ ಕಾರ್ಯಕ್ರಮದಲ್ಲಿ ಕೃಷಿ ವಸ್ತು ಪ್ರದರ್ಶನದ ಜೊತೆಗೆ ಬೆಳಿಗ್ಗೆ 9.30 ರಿಂದ ಸಂಜೆ 5ರವರೆಗೆ ಮಡಿಕೇರಿ ಗಾಂಧಿ ಮೈದಾನದಲ್ಲಿ ತಾತ್ಕಾಲಿಕ ಖಾದಿ ಮಳಿಗೆ ತೆರೆಯಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಖಾದಿ- ಗ್ರಾಮೋದ್ಯೋಗ ಮಂಡಳಿಯ ಕೊಡಗು ಜಿಲ್ಲಾ ಅಭಿವೃದ್ಧಿ ಅಧಿಕಾರಿ ಎಚ್. ಆರ್.ಸುಧಾಮ ತಿಳಿಸಿದ್ದಾರೆ.



ಭಾರತೀಯ ಸೇನೆಗೆ ಆಯ್ಕೆಯಾದ ನೀರ್ಚಾಲು ಸಮೀಪದ ದೇವರಮೆಟ್ಟು ನಿವಾಸಿ ಮಧುರಾಜ್ ರನ್ನು ಬದಿಯಡ್ಕ ಜೀನಿಯಸ್ ಕಾಲೇಜಿನಲ್ಲಿ ಅಭಿನಂದಿಸಲಾಯಿತು. ಕಾಲೇಜಿನ ಹಳೆ ವಿದ್ಯಾರ್ಥಿಯಾದ ಅವರನ್ನು ಪ್ರಾಂಶುಪಾಲ ಪ್ರಕಾಶ್, ಸಹಾಯಕ ಪ್ರಾಂಶುಪಾಲೆ ಜಯಲಕ್ಷ್ಮೀ, ಪ್ರಾಧ್ಯಾಪಕರಾದ ಸೌಮ್ಯಾ, ಶೀಜಾ, ಶ್ಯಾಮ್, ವಿದ್ಯಾರ್ಥಿಗಳು ಜೊತೆಗೂಡಿ ಸನ್ಮಾನಿಸಿದರು.

ಸುಗ್ಗಿಕಟ್ಟೆಗಳ ಅಭಿವೃದ್ಧಿಗೆ 80 ಲಕ್ಷ ರೂ.ಗಳ ಅನುದಾನ: ಶಾಸಕ ಮಂಥರ್

ಸೋಮವಾರಪೇಟೆ: ತಾಲೂಕಿನ ಸುಗ್ಗಿಕಟ್ಟೆಗಳ ಅಭಿವೃದ್ಧಿಗೆ 80 ಲಕ್ಷ ರೂ.ಗಳ ಅನುದಾನ ಕಲ್ಪಿಸಲಾಗಿದೆ ಎಂದು ಶಾಸಕ ಡಾ. ಮಂಥರ್ ಗೌಡ ಹೇಳಿದರು.

ತಾಲೂಕಿನ ಯಡೂರು ಗ್ರಾಮದ ಶ್ರೀ ಸುಬ್ಬಮ್ಮ ದೇವಿ ಸುಗ್ಗಿಕಟ್ಟೆಯಲ್ಲಿ 8 ಗ್ರಾಮಗಳ ಸುಗ್ಗಿಕಟ್ಟೆಗಳ ಅಭಿವೃದ್ಧಿ ಕಾಮಗಾರಿಗೆ ಶನಿವಾರ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಅಭಿವೃದ್ಧಿ ಪಡಿಸಲಾಗುವುದು

ತಾಲೂಕಿನ ಹಲವು ಗ್ರಾಮಗಳಲ್ಲಿ ಸುಗ್ಗಿಕಟ್ಟೆಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಮೂಲಭೂತ ಸೌಕರ್ಯಗಳ ಕಲ್ಪಿಸಬೇಕಿದೆ. ಮೊದಲ ಹಂತದಲ್ಲಿ ಯಡೂರು, ಹಾನಗಲ್ ಶೆಟ್ಟಳ್ಳಿ, ತಾಕೇರಿ, ತಲ್ತಾರೆಶೆಟ್ಟಳ್ಳಿ, ನಗರಳ್ಳಿ, ಕುಮಾರಳ್ಳಿ, ತೋಳೂರುಶೆಟ್ಟಳ್ಳಿ, ಚೌಡ್ಲು ಗ್ರಾಮಗಳ ಸುಗ್ಗಿಕಟ್ಟೆಗಳಿಗೆ ತಲಾ 10 ಲಕ್ಷ ರೂ.ಗಳನ್ನು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇತರ ಗ್ರಾಮಗಳಿಗೂ ನೀಡಲಾಗುವುದು ಎಂದು ಹೇಳಿದರು.

ಮುಖ್ಯಮಂತ್ರಿಗಳು ತಮ್ಮ ವಿಶೇಷ ಅನುದಾನದಲ್ಲಿ 50 ಕೋ.ರೂ.ಗಳನ್ನು ನನ್ನ ಕ್ಷೇತ್ರಕ್ಕೆ ನೀಡಿದ್ದಾರೆ. ಸುಗ್ಗಿಕಟ್ಟೆ ಅಭಿವೃದ್ಧಿಗೆ 1 ಕೋಟಿ ರೂ.ಗಳಷ್ಟು ಹಣವನ್ನು ನೀಡಿದ್ದೇನೆ. ಸೋಮವಾರಪೇಟೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಭವನ ಕಾಮಗಾರಿ ಪೂರ್ಣಗೊಳಿಸಲು 2 ಕೋಟಿ ರೂ. ಅನುದಾನವನ್ನು ಕಲ್ಪಿಸಲಾಗಿದೆ. ಇನ್ನು ವಿವಿಧ ಕಾಮಗಾರಿಗಳಿಗೆ ಅನುದಾನ ಕಲ್ಪಿಸಲಾಗಿದೆ ಎಂದರು. ಗ್ರಾಮೀಣ ಭಾಗಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ರಸ್ತೆ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಹಲವು ಗ್ರಾಮೀಣ ರಸ್ತೆಗಳಿಗೆ ಡಾಮರೀಕರಣ ಹಾಗೂ ಕಾಂಕ್ರೀಟೀಕರಣ ಈಗಾಗಲೇ ಪ್ರಗತಿಯಲ್ಲಿದ್ದು, ಜನರ ಸಂಚಾರ ಸುಗಮವಾಗಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.



ಎಲ್ಲಾ ಗ್ರಾಮಗಳ ಅಭಿವೃದ್ಧಿ

ಮುಂದಿನ ದಿನದಲ್ಲಿ ಕ್ಷೇತ್ರಕ್ಕೆ ಇನ್ನು ಹೆಚ್ಚಿನ ಅನುದಾನ ತಂದು ಎಲ್ಲಾ ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಿ ತೋರಿಸುತ್ತೇವೆ ಎಂದು ಭರವಸೆಯ ಮಾತನಾಡಿದರು.

ಯಡೂರು ಗ್ರಾಮಾಭಿವೃದ್ಧಿ ಮಂಡಳಿ ಅಧ್ಯಕ್ಷ ಮೋಹನ್ ಕುಮಾರ್, ತೋಳೂರುಶೆಟ್ಟಳ್ಳಿ ಮಂಡಳಿ ಅಧ್ಯಕ್ಷ ರಾಜಗೋಪಾಲ್, ನಗರಳ್ಳಿ ಗ್ರಾಮದ ಅಧ್ಯಕ್ಷ ಜಗದೀಶ್, ಹಾನಗಲ್ಲು ಗ್ರಾಮದ ಅಧ್ಯಕ್ಷ ಉಲ್ಲಾಸ್, ಶಾಂತಳ್ಳಿ ಗ್ರಾಮದ ಉಪಾಧ್ಯಕ್ಷ ಸುರೇಶ್, ಕುಮಾರಳ್ಳಿ ಗ್ರಾಮದ ಅಧ್ಯಕ್ಷ ದೇಶ್‌ರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಬಿ.ಸತೀಶ್, ತಾ.ಪಂ. ಮಾಜಿ ಅಧ್ಯಕ್ಷ ಲೋಕೇಶ್ ಕುಮಾರ್, ವಲಯ ಕಾಂಗ್ರೆಸ್ ಅಧ್ಯಕ್ಷ ಪ್ರದೀಪ್, ಪ್ರಮುಖರಾದ ಸಿ.ಆರ್.ಸತೀಶ್, ಬಸವರಾಜ್, ಯಡೂರು ನಾಗರಾಜ್ ಮತ್ತಿತರರಿದ್ದರು.

ಸೇವಾಧಾಮ: ಗಾಲಿ ಕುರ್ಚಿ ವಿತರಣೆ

ಬೆಳ್ತಂಗಡಿ: ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆ ಹೊಂದಿದ್ದು, ಅದರಂತೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು.

ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದ್ದು ಅರ್ಹ ಫಲಾನುಭವಿ ರಾಣೆಬೆನ್ನೂರಿನ ಚೈತ್ರಾ ಅವರಿಗೆ ಸೌತಡ್ಕ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ಸಂಸ್ಥೆಯ ಹಿತೈಷಿ ಮತ್ತು ದಾನಿಗಳಾದ ಕೊಕ್ಕಡದ ಗಣೇಶ್ ಪಿ. ಐತಾಳ್ ಅವರು ಗಾಲಿಕುರ್ಚಿಯನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಶ್ರೀಯುತರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಒಂದು ಹೊತ್ತಿನ ಊಟದ ದೇಣಿಗೆ ನೀಡಿ ಸಹಕರಿಸಿದರು.



ಸೇವಾಭಾರತಿಯ ಉಪಾಧ್ಯಕ್ಷರಾದ ಬಾಲಕೃಷ್ಣ ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

ಸುತ್ತಮುತ್ತ

ನಂದಳಿಕೆ ಸಿರಿ ಜಾತ್ರೆ: ಇಂದು ದೇವಳದಲ್ಲಿ ಪೂರ್ವಭಾವಿ ಸಭೆ

ಕಾರ್ಕಳ: ನಾಲ್ಕುಸ್ಥಾನ ನಂದಳಿಕೆ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಏ.2ರಂದು ಗುರುವಾರ ನಡೆಯಲಿರುವ ನಂದಳಿಕೆ ಆಯನೋತ್ಸವ ಸಿರಿಜಾತ್ರಾ ಮಹೋತ್ಸವದ ಕುರಿತಾಗಿ ರೂಪರೇಷೆಗಳನ್ನು ನಿರ್ಧರಿಸುವ ಕುರಿತು ಸ್ವಯಂ ಸೇವಕರ ಮತ್ತು ದೇವಳದ ಸಿಬ್ಬಂದಿ ವರ್ಗದವರ ಪೂರ್ವಭಾವಿ ಸಭೆಯನ್ನು ಮಾ.15ಕ್ಕೆ ಸಂಜೆ 4ಕ್ಕೆ ದೇವಳ ಸಭಾಂಗಣದಲ್ಲಿ ಕರೆಯಲಾಗಿದೆ. ಸಭೆಯಲ್ಲಿ ಸಂಬಂಧಪಟ್ಟ ದೇವಳದ ಎಲ್ಲಾ ಸ್ವಯಂ ಸೇವಕರು, ಸಿಬ್ಬಂದಿ ವರ್ಗ, ಸ್ಥಳೀಯ ಸಂಘ ಸಂಸ್ಥೆಗಳ ಪದಾಧಿಕಾರಿಗಳು ತಪ್ಪದೇ ಹಾಜರಿದ್ದು ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕಾಗಿ ನಂದಳಿಕೆ ಚಾವಡಿ ಅರಮನೆ ಸುಹಾಸ್ ಹೆಗ್ಡೆ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಬ್ರೇಕ್ ವೈಫಲ್ಯ ಗುರುಪುರ ಅಂಗಡಿಗಳಿಗೆ ನುಗ್ಗಿದ ಲಾರಿ: ನಾಲ್ವರಿಗೆ ಗಾಯ

ಕೈಕಂಬ: ಮಂಗಳೂರು–ಮೂಡಬಿದ್ರಿ ರಾಷ್ಟ್ರೀಯ ಹೆದ್ದಾರಿಯ ಗುರುಪುರ–ಕೈಕಂಬ ಕಡೆಯಿಂದ ಮಂಗಳೂರಿನತ್ತ ಕೆಂಪು ಮಣ್ಣು ಸಾಗಾಟ ಮಾಡುತ್ತಿದ್ದ 16 ಚಕ್ರಗಳ ಬೃಹತ್ ಲಾರಿಯೊಂದು ಚಾಲಕನ ನಿಯಂತ್ರಣ ಕಳೆದುಕೊಂಡು ಗುರುಪುರ ಜಂಕ್ಷನ್ ನಲ್ಲಿ ಒಂದೇ ಸಾಲಿನಲ್ಲಿದ್ದ ಮೂರು ಅಂಗಡಿಗಳಿಗೆ ಗುದ್ದಿದ್ದು ಅಪಘಾತದಲ್ಲಿ ಲಾರಿ ಚಾಲಕ, ನಿರ್ವಾಹಕ ಹಾಗೂ ಸ್ಥಳೀಯ ಇಬ್ಬರು ಗಾಯಗೊಂಡ ಘಟನೆ ಶುಕ್ರವಾರ ಸಂಜೆ ನಡೆದಿದೆ. ಮಂಗಳೂರಿನತ್ತ ಸಾಗುತ್ತಿದ್ದ ಲಾರಿ ಗುರುಪುರ ಜಂಕ್ಷನ್ ಬಳಿ ಬರುತ್ತಿದ್ದಂತೆ ಬ್ರೇಕ್ ವೈಫಲ್ಯಗೊಂಡು, ಚಾಲಕನ ನಿಯಂತ್ರಣ ತಪ್ಪಿ ಮೂರು ಅಂಗಡಿಗಳಿಗೆ ಡಿಕ್ಕಿ ಹೊಡೆದಿದೆ. ರಮೇಶ್ ಮತ್ತು ಉಮೇಶ್ ಎಂಬವರ ಅಂಗಡಿಗಳು ಸಂಪೂರ್ಣ ಜಖಂಗೊಂಡಿವೆ. ಉಮೇಶ್ ಅವರ ಅಂಗಡಿಯೊಳಗಿದ್ದ ಇಲೆಕ್ಟ್ರಾನಿಕ್ಸ್ ಸೊತ್ತುಗಳು ಪುಡಿಪುಡಿಯಾಗಿದೆ. ಮತ್ತೆರಡು ಅಂಗಡಿಗಳಲ್ಲಿದ್ದ ಬೇಕರಿ ವಸ್ತುಗಳು ನಷ್ಟವಾಗಿವೆ. ಆಂಧ್ರ ಪ್ರದೇಶ ಮೂಲದ ಲಾರಿ ಇದಾಗಿದೆ. ಲಾರಿ ಚಾಲಕ, ನಿರ್ವಾಹಕ ಹಾಗೂ ಮತ್ತೊಬ್ಬರನ್ನು ಗುರುಪುರದ ಆ್ಯಂಬುಲೆನ್ಸ್ ಮೂಲಕ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ಕೊಂಡೊಯ್ಯಲಾಗಿದೆ. ಲಾರಿ ಡಿಕ್ಕಿ ಹೊಡೆದ ರಭಸಕ್ಕೆ ರಸ್ತೆ ಬದಿಯಲ್ಲಿದ್ದ ಕೆಲವು ವಿದ್ಯುತ್ ಕಂಬಗಳು ತುಂಡಾಗಿ ಬಿದ್ದ ಪರಿಣಾಮ, ಗುರುಪುರ ಆಸುಪಾಸಿನಲ್ಲಿ ವಿದ್ಯುತ್ ಸ್ಥಗಿತಗೊಂಡಿತ್ತು. ಬಜಪೆ ಪೊಲೀಸರು ಸ್ಥಳಕ್ಕಾಗಮಿಸಿದ್ದು, ಸುಗಮ ವಾಹನ ಸಂಚಾರಕ್ಕೆ ಕ್ರಮ ಕೈಗೊಂಡಿದ್ದಾರೆ. ಕೆಲವು ವಾಹನಗಳು ಬಂಡಸಾಲೆ ಒಳ ರಸ್ತೆ ಮೂಲಕ ಗುರುಪುರ ಕೈಕಂಬ ಹಾಗೂ ಮಂಗಳೂರಿನತ್ತ ಸಂಚರಿಸಿದವು. ಗುರುಪುರ ಹೆದ್ದಾರಿಯಲ್ಲಿ ಕಳೆದ ಒಂದೆರಡು ವರ್ಷಗಳ ಅವಧಿಯಲ್ಲಿ ಕೆಂಪು ಮಣ್ಣು ಸಾಗಾಟದ ಮೂರು ಲಾರಿಗಳು ಅಪಘಾತಕ್ಕೀಡಾಗಿವೆ. ಅಪಘಾತದ ವೇಳೆ ಅಂಗಡಿ ಮಾಲಕರು ಅಂಗಡಿಯೊಳಗಿದ್ದರೂ ಅದೃಷ್ಟವಶಾತ್ ಪಾರಾಗಿದ್ದಾರೆ.

ಹೆರಿಟೇಜ್ ಸೆಂಟರ್ ಕಾಮಗಾರಿಗೆ ಅನುದಾನ ಬಿಡುಗಡೆ ಮನವಿ

ಮಡಿಕೇರಿ: ಕಳೆದ ಹದಿನೇಳು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಗೆ 5 ಕೋ.ರೂ.ಗಳನ್ನು ನೀಡಲು ರಾಜ್ಯ ಸರಕಾರ ಅನುಮೋದನೆ ನೀಡಿದೆ.




ನನೆಗುದಿಗೆ ಬಿದ್ದಿತ್ತು!

ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರು ವಿಧಾನ ಸಭೆಯಲ್ಲಿ ನಿಯಮ 73 ರಡಿ ಕೇಳಿದ ಪ್ರಶ್ನೆಗೆ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು ಈ ಸ್ಪಷ್ಟನೆ ನೀಡಿದ್ದಾರೆ. ಕಳೆದ 2009–10ರಲ್ಲಿ ಆರಂಭಗೊಂಡ ಈ ಯೋಜನೆ ಹತ್ತು ಹಲವು ವಿವಾದಗಳನ್ನು ಸೃಷ್ಟಿಸಿ ಪೂರ್ಣಗೊಳ್ಳದಿದ್ದುದರಿಂದ ಕೊಡಗಿನ ಸಾರ್ವಜನಿಕರು ನಿರಾಶರಾಗಿದ್ದರು. ಕೊಡವ ಸಂಸ್ಕೃತಿಗೆ ಸಂಬಂಧಿಸಿದ ಐನ್ ಮನೆ, ಉಂಬಳ ಮನೆ, ಕನ್ನಿಕೋಂಬರೆ, ಬಾಡೆ ಮುಂತಾದವುಗಳ ಮಹತ್ವವನ್ನು ಜಗತ್ತಿಗೆ ಪರಿಚಯಿಸುವ ದೃಷ್ಟಿಯಿಂದ ಆರಂಭಗೊಂಡ ಈ ಯೋಜನೆ ಅಧಿಕಾರಿಗಳು ಹಾಗೂ ಸರಕಾರಗಳ ಇಚ್ಛಾಶಕ್ತಿಯ ಕೊರತೆಯಿಂದ ಹದಿನೇಳು ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ಈ ಕುರಿತು ಶಾಸಕ ಡಾ.ಮಂಥರ್ ಗೌಡ ಅವರು ಸರಕಾರದ ಗಮನಸೆಳೆದ ಹಿನ್ನೆಲೆಯಲ್ಲಿ ಇದೀಗ ಕೊಡವ ಹೆರಿಟೇಜ್ ಸೆಂಟರ್‌ನ ಕಾಮಗಾರಿಗೆ 5 ಕೋ.ರೂ.ಗಳನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಿದ್ದು, ಶಾಸಕರ ಸತತ ಪ್ರಯತ್ನದ ಫಲವಾಗಿ ಕೊನೆಗೂ ಈ ಕೇಂದ್ರ ಲೋಕಾರ್ಪಣೆಗೊಳ್ಳುವ ನಿರೀಕ್ಷೆಯಿದೆ. ಶಾಸಕರ ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ.

ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ನಿತಿನ್ ಚಕ್ಕಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ

ಪ್ರವಾಸಿ ಸ್ಥಳದಲ್ಲಿ ಇಂದು 'ಸ್ವಚ್ಛ-ಸುಂದರ ಕೊಡಗು' ಅಭಿಯಾನ

ಮಡಿಕೇರಿ: ಸ್ವಚ್ಛ ಕೊಡಗು–ಸುಂದರ ಕೊಡಗು ಹೆಸರಿನಲ್ಲಿ ಪುಣ್ಯಕ್ಷೇತ್ರಗಳು, ಪ್ರವಾಸಿ ಸ್ಥಳಗಳು, ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲು ಉಪ ವಿಭಾಗಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ನಿತಿನ್ ಚಕ್ಕಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.



ನಗರದ ಉಪ ವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾ.16ರಂದು ಜಿಲ್ಲೆಯಾದ್ಯಂತ ಎಲ್ಲಾ ಪ್ರವಾಸಿ ಸ್ಥಳಗಳು ಹಾಗೂ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಸ್ವಚ್ಛ ಕೊಡಗು–ಸುಂದರ ಕೊಡಗು ಹೆಸರಿನಲ್ಲಿ ಶುಚಿತ್ವಕ್ಕೆ ಒತ್ತು ನೀಡಲು ತೀರ್ಮಾನಿಸಲಾಯಿತು.

ಮಾ.16ಕ್ಕೆ ಪ್ರಸಿದ್ಧ ಪುಣ್ಯ ಕ್ಷೇತ್ರಗಳಾದ ತಲಕಾವೇರಿ, ಓಂಕಾರೇಶ್ವರ ದೇವಸ್ಥಾನ, ಭಾಗಮಂಡಲ, ಪ್ರವಾಸಿ ಸ್ಥಳಗಳಾದ ಮಡಿಕೇರಿ ತಾಲೂಕಿನ ಅಬ್ಬಿ ಜಲಪಾತ, ನಾಲ್ಕುನಾಡು ಅರಮನೆ, ರಾಜರ ಗದ್ದುಗೆ, ರಾಜಾಸೀಟು, ಕೋಟೆ, ಅಬ್ಬಿ ಜಲಪಾತ, ಚೇಲಾವರ ಜಲಪಾತ, ಕುಶಾಲನಗರ ತಾಲೂಕಿನ ದುಬಾರೆ ರಿವರ್ ರ‍್ಯಾಫ್ಟಿಂಗ್, ಕಾವೇರಿ ನಿಸರ್ಗಧಾಮ, ಹಾರಂಗಿ ಜಲಾಶಯ, ಹಾರಂಗಿ ಉದ್ಯಾನವನ ಆನೆ ಶಿಬಿರ ಮತ್ತು ಹಿನ್ನೀರಿನ ಸಾಹಸ ಕ್ರೀಡೆ ಸ್ಥಳಗಳು, ಚಿಕ್ಲಿ ಹೊಳೆ, ಸೋಮವಾರಪೇಟೆ ತಾಲೂಕಿನ ಹೊನ್ನಮ್ಮನ ಕೆರೆ, ಮಕ್ಕಳ ಗುಡಿ ಬೆಟ್ಟ, ಕೋಟೆ ಬೆಟ್ಟ, ಸೂರ್ಲಬ್ಬಿ ಜಲಪಾತ ಮತ್ತು ಮಲ್ಲಳ್ಳಿ ಜಲಪಾತ, ಪೊನ್ನಂಪೇಟೆ ತಾಲೂಕಿನ ಬರಪೊಳೆ ರಿವರ್ ರ‍್ಯಾಫ್ಟಿಂಗ್ ಮತ್ತು ಇರ್ಪು ಜಲಪಾತಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಯಲಿದೆ. ಹಾಗೆಯೇ ಮಡಿಕೇರಿ ನಗರದಲ್ಲಿ ವೀರಾಜಪೇಟೆ ರಸ್ತೆ, ಭಾಗಮಂಡಲ– ತಲಕಾವೇರಿ ರಸ್ತೆ (ಮಂಗಳೂರು ರಸ್ತೆ), ಮಡಿಕೇರಿ–ಸಿದ್ದಾಪುರ ರಸ್ತೆ ಮತ್ತು ಮಡಿಕೇರಿ–ಮೈಸೂರು ರಸ್ತೆ ವ್ಯಾಪ್ತಿಯ 2 ಕಿ,.ಮೀ.ವರೆಗೆ ಸ್ವಚ್ಛತಾ ಅಭಿಯಾನ ನಡೆಯಲಿದೆ.

ಕುಶಾಲನಗರದಲ್ಲಿ ಕೊಪ್ಪ ಗೇಟ್‌ನಿಂದ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದವರೆಗೆ, ಸೋಮೇಶ್ವರ ದೇವಸ್ಥಾನದಿಂದ ಕೋಣಮಾರಮ್ಮ ದೇವಸ್ಥಾನ ವೃತ್ತದ ಮುಖಾಂತರ ಐಬಿ ರಸ್ತೆಗಾಗಿ ಕೆಎಸ್‌ಆರ್ಟಿಸಿ ಬಸ್ ನಿಲ್ದಾಣದವರೆಗೆ, ತಾವರೆಕೆರೆಯಿಂದ ಕೆಎಸ್ ಆರ್ಟಿಸಿ ಬಸ್ ನಿಲ್ದಾಣದವರೆಗೆ ಮತ್ತು ಅಯ್ಯಪ್ಪ ಸ್ವಾಮಿ ದೇವಸ್ಥಾನದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೆ ಸ್ವಚ್ಛ ಕೊಡಗು–ಸುಂದರ ಕೊಡಗು ಹೆಸರಿನಲ್ಲಿ ಸ್ವಚ್ಛತಾ ಅಭಿಯಾನ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಉಪ ವಿಭಾಗಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾಗಿರುವ ನಿತಿನ್ ಚಕ್ಕಿ ಅವರು, ಸ್ವಚ್ಛ ಹಾಗೂ ಸುಂದರ ಕೊಡಗು ಹೆಸರಿನಲ್ಲಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಸೇರಿದಂತೆ ಹಲವರ ಸಹಕಾರದಿಂದ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಸ್ಥಳೀಯ ಮಟ್ಟದಲ್ಲಿ ಎಲ್ಲರೂ ಕೈಜೋಡಿಸುವಂತೆ ಮನವಿ ಮಾಡಿದರು.

ಮಾರುಕಟ್ಟೆಗೆ ಹೋಗುವಾಗ ಸ್ವತಃ ಮನೆಯಿಂದ ಬ್ಯಾಗ್‌ಗಳನ್ನು ತೆಗೆದುಕೊಂಡು ಹೋಗುವುದರಿಂದ ಅಂಗಡಿ ಮಾಲಕರು ನೀಡುವ ಪ್ಲಾಸ್ಟಿಕ್ ಬ್ಯಾಗ್ ಗಳನ್ನು ಹಂತ ಹಂತವಾಗಿ ಕಡಿಮೆ ಮಾಡಬಹುದು. ಇದು ಎಲ್ಲರ ಸ್ವಯಂ ಪ್ರೇರಣೆಯಿಂದ ಮಾಡಿದಲ್ಲಿ ಮಾತ್ರ ಪ್ಲಾಸ್ಟಿಕ್ ನಿಯಂತ್ರಿಸಲು ಸಾಧ್ಯ ಎಂದು ಉಪ ವಿಭಾಗಾಧಿಕಾರಿ ಅಭಿಪ್ರಾಯಪಟ್ಟರು.

ಕೂರ್ಗ್ ಹೋಟೆಲ್ ಮತ್ತು ರೆಸಾರ್ಟ್ ಅಸೋಷಿಯೇಷನ್ ಅಧ್ಯಕ್ಷ ದಿನೇಶ್ ಕಾರ್ಯಪ್ಪ ಅವರು ಮಾತನಾಡಿ, ಜಿಲ್ಲೆಯ ಪ್ರವಾಸಿ ಸ್ಥಳಗಳಲ್ಲಿ ಸ್ವಚ್ಛ ಕೊಡಗು ಮತ್ತು ಸುಂದರ ಕೊಡಗು ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಹೋಂ ಸ್ಟೇ ಅಸೋಷಿಯೇಷನ್ ಅಧ್ಯಕ್ಷೆ ಮೋಂತಿ ಗಣೇಶ್ ಮಾತನಾಡಿ, ಮಡಿಕೇರಿ ನಗರದ ಹಲವು ಕಡೆಗಳಲ್ಲಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಳ್ಳಲಾಗುತ್ತದೆ ಎಂದರು. ಟೂರ್ ಅಂಡ್ ಟ್ರಾವೆಲ್ ಅಸೋಸಿಯೇಷನ್ ಅಧ್ಯಕ್ಷವಸಂತ ಅವರು ಮಾತನಾಡಿ, ಪ್ರಸಿದ್ಧಪುಣ್ಯಕ್ಷೇತ್ರಗಳಾದಭಾಗಮಂಡಲ ಮತ್ತು ತಲಕಾವೇರಿ ದೇವಾಲಯಗಳಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದರು.

ಚೇಂಬರ್ ಆಫ್ ಕಾಮರ್ಸ್ ಜಿಲ್ಲಾ ಅಧ್ಯಕ್ಷ ನಾಗೇಂದ್ರ ಪ್ರಸಾದ್ ಅವರು, ಮಾ.16 ರಂದು ಸ್ಥಳೀಯ ಸಂಸ್ಥೆಗಳು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಜೊತೆಗೂಡಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದ್ದು, ಎಲ್ಲರೂ ಸಹಕರಿಸುವಂತೆ ಕೋರಿದರು. ತಹಶೀಲ್ದಾರ್ ಶ್ರೀಧರ, ಎಫ್‌ಎಂಸಿ ಕಾಲೇಜಿನ ಪ್ರಾಂಶುಪಾಲ ರಾಘವ, ದುಬಾರೆ ರಿವರ್ ರ‍್ಯಾಫ್ಟಿಂಗ್ ಅಸೋಷಿಯೇಷನ್ ಅಧ್ಯಕ್ಷ ಉತ್ತಪ್ಪ, ಪ್ರವಾಸೋದ್ಯಮ ಇಲಾಖೆಯ ಸಮಾಲೋಚಕ ಜತಿನ್, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಪಂ. ಅಭಿವೃದ್ಧಿ ಅಧಿಕಾರಿಗಳು, ವಿವಿಧ ಕಾಲೇಜಿನ ಪ್ರಾಂಶುಪಾಲರು, ವಿವಿಧ ದೇವಾಲಯಗಳ ಕಾರ್ಯ ನಿರ್ವಹಣಾಧಿಕಾರಿಗಳು ಇತರರು ಇದ್ದರು.

ಫಿಲೋಮಿನಾ ಕಾಲೇಜಿನಲ್ಲಿ ಐಟಿ ಫೆಸ್ಟ್‌ನಲ್ಲಿ ಡಾ. ಆ್ಯಂಟನಿ ಸಲಹೆ

ಔದ್ಯೋಗಿಕ ಕ್ಷೇತ್ರದಲ್ಲಿ ಸಮಯ ಪಾಲನೆ ಮುಖ್ಯ

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ ಗಣಕವಿಜ್ಞಾನ ವಿಭಾಗ ಹಾಗೂ ಪಿನ್ನಾಕಲ್ ಐಟಿ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಕಾಲೇಜಿನ ಗಣಕವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗಾಗಿ 'ವಿಶನ್–2ಕೆ26' ಐಟಿ ಫೆಸ್ಟ್ ಆಯೋಜಿಸಲಾಯಿತು.



ಕಾಲೇಜಿನ ಪ್ರಾಂಶುಪಾಲ ಫಾ. ಡಾ. ಆ್ಯಂಟನಿ ಪ್ರಕಾಶ್ ಮೊಂತೇರೊ ಈ ಕಾರ್ಯಕ್ರಮ ಉದ್ಘಾಟಿಸಿ, ಔದ್ಯೋಗಿಕ ಜಗತ್ತಿಗೆ ಕಾಲಿರಿಸಿದಾಗ ನಿಮ್ಮ ಮುಂದೆ ಡೆಡ್‌ಲೈನ್ ಅಥವಾ ಗಡುವು ಮಾತ್ರವೇ ಇರುತ್ತದೆ. ಗಡುವು ಮೀರದಂತೆ ಕರ್ತವ್ಯ ನಿರ್ವಹಿಸಲು ಶಿಸ್ತು ಹಾಗೂ ಸಮಯ ಪರಿಪಾಲನೆ ಅತ್ಯಂತ ಮುಖ್ಯ. ಒಂದು ಕೆಲಸವನ್ನು ನಿರ್ದಿಷ್ಟ ಸಮಯದಲ್ಲಿ ಉತ್ತಮ ರೀತಿಯಲ್ಲಿ ನಡೆಸಿ ಕೊಡುವಲ್ಲಿ ಇಂತಹ ಸ್ಪರ್ಧೆಗಳು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಕೌಶಲ್ಯ ವೃದ್ಧಿಗೆ ವೇದಿಕೆ

ಕಾಲೇಜಿನ ಗಣಗವಿಜ್ಞಾನ ವಿಭಾಗದ ಡೀನ್ ಡಾ. ವಿನಯಚಂದ್ರ ಮಾತನಾಡಿ, ಕಾಲೇಜಿನಲ್ಲಿ 2012ರಿಂದ ವಿಶನ್ ಇಂಟ್ರಾ ಡಿಪಾರ್ಟ್‌ಮೆಂಟ್ ಐಟಿ ಫೆಸ್ಟ್ ಆಯೋಜಿಸಲಾಗುತ್ತಿದ್ದು, ಇದು ವಿದ್ಯಾರ್ಥಿಗಳಿಗೆ ಪಠ್ಯ ಅಧ್ಯಯನದ ಜೊತೆಗೆ ತಮ್ಮ ಅಡಗಿರುವ ಪ್ರತಿಭೆಯನ್ನು ಹೊರ ಹಾಕುವ ವಿಶಿಷ್ಟ ಅವಕಾಶವನ್ನು ಒದಗಿಸುತ್ತಿದೆ.

> **ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣ: ಸನ್ಮಾನ**
>
> ಕೆ–ಸೆಟ್ ಮತ್ತು ಎನ್‌ಇಟಿ ಪರೀಕ್ಷೆಗಳಲ್ಲಿ ಅರ್ಹತೆಯನ್ನು ಪಡೆದ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಫಾತಿಮತ್ ಸಾನಿದ ಹಾಗೂ ಸಮೀದ ಅವರನ್ನು ಈ ಸಂದರ್ಭ ಸನ್ಮಾನಿಸಲಾಯಿತು. ಸಹಾಯಕ ಪ್ರಾಧ್ಯಾಪಕಿ ಡಾ. ಗೀತಾ ಪೂರ್ಣಿಮಾ ಕೆ. ಸನ್ಮಾನ ಭಾಷಣ ಮಾಡಿದರು.

ಗಣಕ ವಿಜ್ಞಾನ ವಿಭಾಗದ ಆಶ್ರಯದಲ್ಲಿ ನಡೆಯುವ ವಿಷನ್ ಕಾರ್ಯಕ್ರಮವು ನವೀನ ಆಲೋಚನೆಗಳಿಗೆ ಉತ್ತೇಜನ ನೀಡುವ ಹಾಗೂ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ತಾಂತ್ರಿಕ ಕೌಶಲ್ಯಗಳನ್ನು ಬೆಳೆಸುವ ಸಕ್ರಿಯ ವೇದಿಕೆಯಾಗಿದೆ. ವಿಶನ್ ಸ್ಪರ್ಧೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಸ್ಪರ್ಧಾತ್ಮಕ ಮನೋಭಾವ, ಆತ್ಮವಿಶ್ವಾಸ ಮತ್ತು ತಂಡ ಸ್ಪೂರ್ತಿ ಬೆಳೆದು ಬರುತ್ತವೆ ಎಂದು ಹೇಳಿದರು.

ಸುರಭಿ ಮತ್ತು ಬಳಗ ಪ್ರಾರ್ಥಿಸಿದರು. ಪಿನ್ನಾಕಲ್ ಐಟಿ ಕ್ಲಬ್‌ನ ಅಧ್ಯಕ್ಷ ಯೂಸುಫ್ ಅಲಿ ಸಲೀಲ್ ಸ್ವಾಗತಿಸಿ, ಉಪಾಧ್ಯಕ್ಷೆ ದೀಕ್ಷಾ ವಂದಿಸಿದರು. ದ್ವಿತೀಯ ಬಿಸಿಎ(ಎಐ ಎಂಡ್ ಎಂಎಲ್) ವಿದ್ಯಾರ್ಥಿನಿ ಶೀತಲ್ ಕಾರ್ಯಕ್ರಮ ನಿರ್ವಹಿಸಿದರು. ಪಿನ್ನಾಕಲ್ ಐಟಿ ಕ್ಲಬ್‌ನ ಕಾರ್ಯದರ್ಶಿ ತೀಕ್ಷಣ್, ತೃತೀಯ ಬಿಸಿಎ ವಿದ್ಯಾರ್ಥಿನಿ ಸೃಜನಾ ಹಾಗೂ ಪ್ರಥಮ ಬಿಸಿಎ ವಿದ್ಯಾರ್ಥಿನಿ ಪ್ರತ್ಯಕ್ಷಾ ಸಹಕಾರ ನೀಡಿದರು.

ಅಂತಿಮ ಸುತ್ತಿನ ಸ್ಪರ್ಧೆ

'ವಿಶನ್–2ಕೆ26'ನಲ್ಲಿ ಒಟ್ಟು 15 ಸ್ಪರ್ಧೆಗಳಿದ್ದು, ಹಲವು ಸ್ಪರ್ಧೆಗಳ ಅರ್ಹತಾ ಸುತ್ತುಗಳನ್ನು ಈಗಾಗಲೇ ನಡೆಸಲಾಗಿದೆ. ಅಂತಿಮ ಸುತ್ತುಗಳನ್ನು ಈ ಸಂದರ್ಭ ನಡೆಸಲಾಯಿತು.

ನೂತನ ಪದಾಧಿಕಾರಿಗಳಿಗೆ ಶಿವಾನಂದ ತಗಡೂರು ಶುಭಹಾರೈಕೆ

ಕುಂದಾಪುರ ಪತ್ರಕರ್ತರ ಸಂಘದ ಪದಗ್ರಹಣ

ಕುಂದಾಪುರ: ಕುಂದಾಮರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪದಗ್ರಹಣ ಸಮಾರಂಭ ಉಡುಪಿ ಬ್ರಹ್ಮಗಿರಿಯ ಐಎಂಎ ಭವನದಲ್ಲಿ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನೇತೃತ್ವದಲ್ಲಿ ಜರುಗಿತು.



ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ 2ನೇ ಬಾರಿಗೆ ಆಯ್ಕೆಯಾದ ನಾಗರಾಜ ರಾಯಪ್ಪನ ಮಠ ಮತ್ತು ಪ್ರಧಾನ ಗಣೇಶ್ ಎಸ್. ಬೀಜಾಡಿ ಇವರ ನೂತನ ಪದಾಧಿಕಾರಿಗಳಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಇವರು ಪದಪ್ರಧಾನ ನೆರವೇರಿಸಿ ಶುಭ ಹಾರೈಸಿದರು. ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಜಿಲ್ಲಾಧ್ಯಕ್ಷ ಸುಬ್ರಹ್ಮಣ್ಯ ಜಿ. ಕುರ್ಯ ಅಧ್ಯಕ್ಷತೆ ವಹಿಸಿದ್ದರು.

ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಸಂತೋಷ್ ಕುಂದೇಶ್ವರ ಮತ್ತು ಸತೀಶ್ ಆಚಾರ್ ಸಿದ್ದಾಪುರ, ಕೋಶಾಧಿಕಾರಿ ಶ್ರೀಕಾಂತ್ ಹೆಮ್ಮಾಡಿ, ಕಾರ್ಯದರ್ಶಿಗಳಾದ ಜನ್ನಾಡಿ ಮಂಜುನಾಥ ಶೆಣೈ ಮತ್ತು ರಾಘವೇಂದ್ರ ಬಳ್ಕೂರು, ಕಾರ್ಯಕಾರಿ ಸಮಿತಿ ಸದಸ್ಯರಾದ ವಿನಯ ಪಾಯಸ್, ಪ್ರಶಾಂತ್ ಪಾದೆ, ನಾಗರಾಜ ವಂಡ್ಸೆ, ಶ್ರೀಕರ ಎಸ್., ಸತೀಶ್ ಎಂ. ಬಿ, ಎಂ. ನಿತ್ಯಾನಂದ ಗಾಣಿಗ, ಸಂತೋಷ್ ಶೆಟ್ಟಿ ಗೋಳಿಯಂಗಡಿ, ಜಗದೀಶ್ ದೇವಾಡಿಗ ಮುಳ್ಳಿಕಟ್ಟೆ, ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಾಗಿ ಆಯ್ಕೆಯಾದ ಜಿಲ್ಲಾ ಕಾರ್ಯದರ್ಶಿ ಟಿ. ಲೋಕೇಶ್ ಆಚಾರ್ಯ ತೆಕ್ಕಟ್ಟೆ, ಕಾರ್ಯಕಾರಿ ಸಮಿತಿ ಸದಸ್ಯರಾದ ಚಂದ್ರಮ ತಲ್ಲೂರು, ಬಿ. ರಾಘವೇಂದ್ರ ಪೈ, ಯೋಗೀಶ್ ಕುಂಭಾಸಿ ಉಪಸ್ಥಿತರಿದ್ದರು.

> ■ ಉಡುಪಿ ಬ್ರಹ್ಮಗಿರಿಯ ಐಎಂಎ ಭವನದಲ್ಲಿ ನಡೆದ ಕಾರ್ಯಕ್ರಮ
>
> ■ ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಎಲ್ಲಾ ಪದಾಧಿಕಾರಿಗಳು ಭಾಗಿ

ಜಿಲ್ಲಾ ಸಂಘದ ಉಸ್ತುವಾರಿ ಹಾಗೂ ರಾಜ್ಯ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ಉಡುಪಿ ಜಿಲ್ಲಾ ವಾರ್ತಾಧಿಕಾರಿ ಮಂಜುನಾಥ್, ಸಂಘದ ನಿಕಟಪೂರ್ವ ಅಧ್ಯಕ್ಷ ರಾಜೇಶ್ ಶೆಟ್ಟಿ ಅಲೆವೂರು, ರಾಜ್ಯ ಸಮಿತಿ ಸದಸ್ಯ ಆಸ್ಟ್ರೋ ಮೋಹನ್, ರಾಷ್ಟ್ರೀಯ ಸಮಿತಿ ಸದಸ್ಯ ಅರುಣ್ ಕುಮಾರ್ ಶಿರೂರು ಹಾಗೂ ಜಿಲ್ಲಾ ಸಂಘದ ಕೋಶಾಧಿಕಾರಿ ಹರೀಶ್ ಕುಂದರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ನಝೀರ್ ಪೊಲ್ಯ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ನೂತನ ಪದಾಧಿಕಾರಿಗಳ ಪಟ್ಟಿಯನ್ನು ಅಜಿತ್ ಆರಾಡಿ ವಾಚಿಸಿದರು. ಪತ್ರಕರ್ತ ರಹೀಂ ಉಜಿರೆ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಚೇತನ್ ಮಟಪಾಡಿ ವಂದಿಸಿದರು.

ಮಜ್ಜಾರು ದೈವಸ್ಥಾನದ ಪುನರ್ ಪ್ರತಿಷ್ಠೆ: ಆಮಂತ್ರಣ ಪತ್ರಿಕೆ ಬಿಡುಗಡೆ



ಕಡಬ: ಕೋಡಿಂಬಾಳ ಗ್ರಾಮದ ಮಜ್ಜಾರು ಶ್ರೀ ಉಳ್ಳಾಕ್ಲು, ರಾಜನ್, ಸಪರಿವಾರ ದೈವಗಳ ದೈವಸ್ಥಾನ ಪುನಃ ಪ್ರತಿಷ್ಠೆ ಹಾಗೂ ವಾರ್ಷಿಕ ನೇಮ ಕಾರ್ಯಕ್ರಮ ಏ.20ರಿಂದ ಏ.25ರವರೆಗೆ ನಡೆಯಲಿದ್ದು, ಈ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ಕೋಡಿಂಬಾಳ ಶ್ರೀಮಹಾವಿಷ್ಣು ದೈವಸ್ಥಾನದಲ್ಲಿ ಜರಗಿತು.

ಈ ಸಂದರ್ಭ ಆಡಳಿತ ಮೊಕ್ತೇಸರ ಕೆ. ಕೃಷ್ಣಪ್ರಸಾದ ಭಟ್ ಎಡಪತ್ಯ, ಅರ್ಚಕ ಎಂ. ವಿಕ್ರಾಂತ್ ರಾಜ್, ಆಡಳಿತ ಸಮಿತಿಯ ಅಧ್ಯಕ್ಷ ಚಿದಾನಂದ ಗೌಡ ಪಡೆಜ್ಜಾರು, ಕಾರ್ಯದರ್ಶಿ ಕೇಶವ ಬೇರಿಕೆ, ಕೋಶಾಕಾರಿ ಮಾಧವ ಕೋಲ್ಪೆ ಉತ್ಸವ ಸಮಿತಿಯ ಅಧ್ಯಕ್ಷ ಜಯರಾಮ ಗಟ್ಟಿಗಾರು, ಕಾರ್ಯದರ್ಶಿ ಸುರೇಶ್ ಕೋಡಿಂಬಾಳ, ಕೋಶಾಕಾರಿ ಜಗನ್ನಾಥ ಪಲ್ಲತ್ತಡ್ಕ, ದೈವ ಪರಿಚಾರಕರಾದ ಲಕ್ಷ್ಮಣ ಗೌಡ ಪಡೆಜ್ಜಾರು, ಪ್ರಮುಖರಾದ ದಾಮೋದರ ಗೌಡ, ಗಿರಿಯಪ್ಪ ಗೌಡ, ಗಣೇಶ್ ಮಜ್ಜಾರು, ಗಿರೀಶ ದೇಂತಾರು, ಅಜಿತ್ ಪಡೆಜ್ಜಾರು, ಮೋಹನ ದೊಳ್ತಿಲ ಪುಷ್ಪಾ ದೇವಿಪ್ರಸಾದ್ ಬೇರಿಕೆ, ಪ್ರಕಾಶ್ ಬೇರಿಕೆ, ಮೋಹನ್ ಕೋಡಿಂಬಾಳ, ಸೀತಾರಾಮ ದೇಂತಾರು, ನಾರಾಯಣ ದೇಂತಾರು, ರಾಜೇಶ್ ಗುಂಡಿಮಜಲು, ಪುನಿತ್ ಕೋಲ್ಪೆ, ಪದ್ಮನಾಭ ಪಲ್ಲತ್ತಡ್ಕ, ಕರುಣಾಕರ ಪಲ್ಲತ್ತಡ್ಕ, ಸುಂದರ ಮಜ್ಜಾರು, ವಿಜಯ ಮಜ್ಜಾರು, ಹರಿಯಪ್ಪ ಗುಂಡಿಮಜಲು, ಕಾರ್ತಿಕ್ ಮಜ್ಜಾರು, ನಾಗೇಶ್ ಮಾಸ್ತಿಮನೆ ಮತ್ತಿತರರು ಉಪಸ್ಥಿತರಿದ್ದರು.

ಸೇಡಿಯಾಪಿನಲ್ಲಿ ಮೆಡಿಕಲ್ ಕಾಲೇಜಿಗೆ ವಿರೋಧ ಸಲ್ಲ: ವಿಟ್ಲ ಕಾಂಗ್ರೆಸ್ ಹೇಳಿಕೆ

ವಿಟ್ಲ: ಸೇಡಿಯಾಪಿನಲ್ಲಿ ವೈದ್ಯಕೀಯ ಕಾಲೇಜಿಗೆ ಸಂಬಂಧಿಸಿದ 300 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ ಈಗಾಗಲೇ ರೂ.180 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಮೂಲಸೌಕರ್ಯಗಳ ದೃಷ್ಟಿಯಿಂದ ಸೇಡಿಯಾಪಿನ ಜಾಗ ಹೆಚ್ಚು ಸೂಕ್ತವಾಗಿದೆ. ಗ್ರಾಮೀಣ ಜನರಿಗೆ ಹೆಚ್ಚಿನ ಅವಕಾಶಗಳಾಗುತ್ತದೆ. 4 ಕಡೆಯಿಂದ ಸಂಪರ್ಕ ರಸ್ತೆಗಳಾಗಲಿದ್ದು, ಸಂಪರ್ಕ ವ್ಯವಸ್ಥೆಯೂ ಸುಲಭವಾಗಲಿದೆ. ಶಾಸಕರ ಅಭಿವೃದ್ಧಿ ಕಾರ್ಯಗಳನ್ನು ಸಹಿಸಲಾಗದ ವಿಘ್ನ ಸಂತೋಷಿಗಳು ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ವಿಟ್ಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪದ್ಮನಾಭ ಪೂಜಾರಿ ಸಣ್ಣಗುತ್ತು ಹೇಳಿದರು.


ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಗಾಗಲೇ ಇರುವ ಆಸ್ಪತ್ರೆಯ ಬಳಿಯಲ್ಲಿ 300 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ ಅಸಾಧ್ಯ ಎಂಬುದನ್ನು ಹಿಂದಿನ ಶಾಸಕರ ಅವಧಿಯಲ್ಲೇ ಆರೋಗ್ಯ ಇಲಾಖೆ ವರದಿ ನೀಡಿತ್ತು. ಮೆಡಿಕಲ್ ಕಾಲೇಜಿಗೆ 40 ಎಕ್ರೆ ಮೀಸಲು ಇಡುವ ವ್ಯವಸ್ಥೆಯನ್ನು ಶಾಸಕಿಯಾಗಿದ್ದ ಶಕುಂತಳಾ ಟಿ. ಶೆಟ್ಟಿ ಅವಧಿಯಲ್ಲಿ ಮಾಡಲಾಗಿದ್ದು, ಈಗ ಶಾಸಕರು ಅದಕ್ಕೆ ಬೇಕಾದ ಅನುದಾನಗಳನ್ನು ಅವಿರತ ಶ್ರಮದ ಮೂಲಕ ತರಿಸಿದ್ದಾರೆ. ಸೇಡಿಯಾಪಿನಲ್ಲಿ ಆಯುಷ್ ಆಯುರ್ವೇದ ಕಾಲೇಜ್ ಸ್ಥಾಪನೆಗೂ ಅಗತ್ಯ ವ್ಯವಸ್ಥೆಯನ್ನು ಶಾಸಕರು ಮಾಡಿದ್ದಾರೆ. ಈಗ ಕೈಯಲ್ಲಾಗದವರು ಮೈ ಎಲ್ಲಾ ಪರಚಿಕೊಂಡರೆಂಬಂತೆ ವರ್ತಿಸಿ, ಯೋಜನೆಗೆ ಅಡ್ಡಿಪಡಿಸುವುದು ಸರಿಯಲ್ಲ ಎಂದು ತಿಳಿಸಿದರು.

ಜಾಲತಾಣದಲ್ಲಿ ಯಾರು ಬೇಕಾದರೂ ಸವಾಲುಗಳನ್ನು ಹಾಕ ಬಹುದು. ಕಾನೂನಾತ್ಮಕವಾಗಿರುವ ವಿಚಾರಗಳ ತೀರ್ಮಾನ ಕೈಗೊಳ್ಳುವುದಕ್ಕೆ ಅಧಿಕಾರಿಗಳು ಸರ್ಕಾರವಿದೆ. ಖಂಡಿತವಾಗಿ ಕಾನೂನಾತ್ಮಕವಾಗಿರುವ ವಿಚಾರಕ್ಕೆ ಬೇಕಾದ ವ್ಯವಸ್ಥೆಯನ್ನು ಶಾಸಕರು ಅಧಿಕಾರಿಗಳ ಮೂಲಕ ಮಾಡಲಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಾಕಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದು ಕೊಳ್ಳಲಾಗುವುದು ಎಂದರು.

ಹಿರಿಯ ಮುಖಂಡ ಎಂ.ಎಸ್. ಮಹಮ್ಮದ್ ಮಾತನಾಡಿ ಕಾಮಗಾರಿಗೆ ಪ್ರಸ್ತಾವನೆಗಳನ್ನು ಕಳುಹಿಸಿದರೆ, ಅದನ್ನು ಸಂಬಂಧಪಟ್ಟ ಅಧಿಕಾರಿಗಳ, ಇಲಾಖೆಯ ಮೂಲಕ ಅನುದಾನ ತರಿಸುವ ಕಾರ್ಯ ನಡೆಯಬೇಕು. ಅದನ್ನು ಶಾಸಕ ಅಶೋಕ್ ಕುಮಾರ್ ರೈ ಸರಿಯಾಗಿ ಮಾಡುತ್ತಿದ್ದಾರೆ. ಅಭಿವೃದ್ಧಿಯ ಮನಸ್ಸು ಇಲ್ಲದಿದ್ದರೆ ಸುಮ್ಮನೆ ಕೂರುವ ಕೆಲಸವಾದರೂ ಮಾಡಬೇಕು ಎಂದರು. ಪ್ರಮುಖರಾದ ರಮಾನಾಥ ವಿಟ್ಲ, ಪ್ರವೀಣ್ ಚಂದ್ರ ಆಳ್ವ ಹಂಝ ವಿಟ್ಲ ಉಪಸ್ಥಿತರಿದ್ದರು.



ಬಂಟ್ವಾಳ ತಾಲೂಕಿನ ಸಜೀಪ ಮಾಗಣೆ ಆಲಾಡಿಖಾನ ಅಗರಿ ಮಾಡದ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವದ ಆಮಂತ್ರಣವನ್ನು ಸಜೀಪ ಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್ ಕ್ಷೇತ್ರದಲ್ಲಿ ಬಿಡುಗಡೆಗೊಳಿಸಿದರು. ಪ್ರಮುಖರಾದ ಹರೀಶ್ ರೈ,ಜೀವನ್ ಆಳ್ವ ಮೊದಲಾದವರು ಉಪಸ್ಥಿತರಿದ್ದರು. ಏಪ್ರಿಲ್ 2,3ರಂದು ಬ್ರಹ್ಮಶ್ರೀ ನೀಲೇಶ್ವರ ಕೆ ಉಚ್ಚಿಲತಾಯ ಪದ್ಮನಾಭ ತಂತ್ರಿಗಳ ಮಾರ್ಗದರ್ಶನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಜರುಗಲಿವೆ.



ಬೆಳ್ಳಿ ಗ್ರಾ.ಪಂ. ವ್ಯಾಪ್ತಿಯ ಸಡಂಬೈಲು ಸಾಗು ಸಮೀಪದ ಮರಳು ಧೂಮಾವತಿ ದೈವಸ್ಥಾನದ ಜೀರ್ಣೋದ್ಧಾರ ನಿಟ್ಟಿನಲ್ಲಿ ಶುಕ್ರವಾರ ಅರ್ಚಕ ರವಿಚಂದ್ರ ಭಟ್ ಅವರ ನೇತೃತ್ವದಲ್ಲಿ ಶಿಲಾನ್ಯಾಸ ಕಾರ್ಯಕ್ರಮ ನಡೆಯಿತು. ಹಿರಿಯರಾದ ಸಡಂಬೈಲು ಹೆಬ್ಬಾಗಿಲು ಕೃಷ್ಣವಾಗ್ಲೆ, ಸುನೀತಾ ದಂಪತಿಗಳು, ಉದ್ಯಮಿ ಸಂಜಯ್ ನಾಯಕ್, ಅನಂತರಾಮ ವಾಗ್ಲೆ, ಶೇಖರ ಕೊಂಬೈಲು, ವಿಠಲ ಮೂಲ್ಯ, ಶೇಖರ ಮೂಲ್ಯ, ಕೇಶವ ಪಾಟ್ಕರ್, ಸುಬ್ರಹ್ಮಣ್ಯ ವಾಗ್ಲೆ, ಅನುಪ್ ನಾಯಕ್, ಶಿವಾನಂದ ವಾಗ್ಲೆ, ವಿಶ್ವನಾಥ್ ಬಾಂದೇಲ್ಕರ್, ಪದೀಪ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಅಧಿವೇಶನದಲ್ಲಿ ರಾಜ್ಯ ಸರ್ಕಾರಕ್ಕೆ ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಮನವಿ ಸಲ್ಲಿಕೆ

ಗ್ರಾಮ ಮಟ್ಟದಲ್ಲಿ ಮರಳು ತೆಗೆಯಲು ನೀತಿ ಸರಳೀಕರಣಗೊಳಿಸಿ

ಬೆಳ್ತಂಗಡಿ: ಮರಳಿನ ಅಭಾವದಿಂದ ಮನೆ ನಿರ್ಮಾಣದ ಕನಸು ಕುಸಿಯುತ್ತಿದೆ. ಹೀಗಾಗಿ ಮರಳಿನ ಸರಬರಾಜು ತಕ್ಷಣ ಆರಂಭವಾಗಬೇಕು ಎಂದು ಶಾಸಕ ಹರೀಶ್ ಪೂಂಜ ವಿಧಾನಸಭೆಯಲ್ಲಿ ಶುಕ್ರವಾರ ಒತ್ತಾಯಿಸಿದ್ದಾರೆ.

2019ರಲ್ಲಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮರಳು ತೆಗೆಯಲು ನೀಡಿದ ಸರಳ ಪರವಾನಿಗೆ ವ್ಯವಸ್ಥೆ ದಕ್ಷಿಣ ಕನ್ನಡ–ಉಡುಪಿ ಜಿಲ್ಲೆಗಳಲ್ಲಿ ಜಾರಿಗೆ ಬರದೇ ಇರುವುದರ ಬಗ್ಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಂಟಾಗಿರುವ ಮರಳಿನ ತೀವ್ರ ಅಭಾವದ ಕುರಿತು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಚಿವರ ಗಮನ ಸೆಳೆದರು.



> ಇನ್ನೂ ಕೆಲವು ತಿಂಗಳಲ್ಲೇ ಮಳೆಗಾಲ ಆರಂಭವಾಗಲಿರುವ ಹಿನ್ನೆಲೆಯಲ್ಲಿ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಮರಳು ತೆಗೆದು ವಿಲೇವಾರಿ ಮಾಡುವ ಪ್ರಕ್ರಿಯೆ ಮತ್ತೆ ಮುಂದೂಡಲ್ಪಡುವ ಸಾಧ್ಯತೆ ಇದೆ. ಹೀಗಾಗಿ ಸರ್ಕಾರವು ದ.ಕ. ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮರಳಿನ ಸಮಸ್ಯೆಗೆ ಸೂಕ್ತ ಮತ್ತು ಶಾಶ್ವತ ಪರಿಹಾರ ಒದಗಿಸುವಂತೆ ತಕ್ಷಣ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು.
>
> ● ಹರೀಶ್ ಪೂಂಜ, ಶಾಸಕ

ಸರ್ಕಾರವು 2019ರಲ್ಲಿ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ಥಳೀಯ ಕಟ್ಟಡ ನಿರ್ಮಾಣ ಮಾಡುವ ಮಾಲೀಕರಿಗೆ ಅತ್ಯಂತ ಸರಳ ವಿಧಾನದಲ್ಲಿ ಸ್ಥಳೀಯ ಮೂಲಗಳಿಂದ ಮರಳು ತೆಗೆಯಲು ಪರವಾನಿಗೆ ನೀಡುವ ಆದೇಶವನ್ನು ಜಾರಿಗೆ ತಂದಿದ್ದರೂ ಸಹ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ಆದೇಶ ಸಮರ್ಪಕವಾಗಿ ಜಾರಿಗೆ ಬರದೇ ಇರುವುದಕ್ಕೆ ಸರ್ಕಾರದ ನಿರ್ಲಕ್ಷ್ಯ ಕಾರಣವಾಗಿರುವ ಬಗ್ಗೆ ಪ್ರಸ್ತಾವಿಸಿದರು. ಇದಕ್ಕುತ್ತರಿಸಿದ ಸಚಿವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 11 ಮರಳು ನಿಕ್ಷೇಪ ಪ್ರದೇಶಗಳನ್ನು ಗುರುತಿಸಿ ಸಂಬಂಧಪಟ್ಟ ಗ್ರಾ.ಪಂ.ಗಳಿಗೆ ಮರಳು ತೆಗೆದು ವಿಲೇವಾರಿ ಮಾಡಲು ಕಾರ್ಯಾದೇಶ ನೀಡಲಾಗಿದೆ ಎಂದಾಗ ಆದರೆ ಆ ಪ್ರದೇಶಗಳಲ್ಲಿ ಮರಳು ತೆಗೆದು ವಿಲೇವಾರಿ ಮಾಡುವ ಕಾರ್ಯ ಇನ್ನೂ ಪ್ರಾರಂಭವಾಗಿಲ್ಲ ಎಂಬುದು ವಿಷಾದನೀಯ ಸಂಗತಿ ಎಂದು ಶಾಸಕರು ಹೇಳಿದರು. ಇಂದಿನ ಪರಿಸ್ಥಿತಿಯಲ್ಲಿ ಒಂದು ಲೋಡ್ ಮರಳಿಗೆ ಸುಮಾರು 20,000 ರಿಂದ 21,000 ರೂ. ವರೆಗೆ ದರವಾಗಿದ್ದು, ಸಾಮಾನ್ಯ ಜನರಿಗೆ ಮನೆ ನಿರ್ಮಾಣ ಮಾಡಿಕೊಳ್ಳುವುದು ಅತ್ಯಂತ ಕಷ್ಟಕರವಾಗಿದೆ. ಕೆಲವು ಕಡೆಗಳಲ್ಲಿ ಅದರ ದರವು 60,000 ರಿಂದ ರೂ. 65,000 ವರೆಗೆ ಏರಿಕೆಯಾಗಿದೆ. ಇದರ ಪರಿಣಾಮವಾಗಿ ಗ್ರಾಮೀಣ ಪ್ರದೇಶದ ಜನರು ಮನೆ ನಿರ್ಮಾಣ ಮಾಡುವುದು ದುಸ್ತರವಾಗಿದೆ ಎಂದರು.

ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದಲ್ಲಿ ಗುರುತಿಸಲಾದ ಸುಮಾರು 4 ಮರಳು ನಿಕ್ಷೇಪ ಪ್ರದೇಶಗಳಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಸಹ ಇವತ್ತಿನವರೆಗೆ ಮರಳು ತೆಗೆದು ವಿಲೇವಾರಿ ಮಾಡುವ ಕಾರ್ಯಾರಂಭವಾಗಿಲ್ಲ ಎಂದು ಅವರು ಸರ್ಕಾರದ ಗಮನಕ್ಕೆ ತಂದರು. ಇದೇ ವೇಳೆ ಸಭಾಪತಿಗಳು ಮಧ್ಯಪ್ರವೇಶಿಸಿ ಅಧಿವೇಶನ ಮುಕ್ತಾಯವಾಗುವುದರೊಳಗಾಗಿ ಉಭಯ ಜಿಲ್ಲೆಗಳ ಶಾಸಕರು ಹಾಗೂ ಅಧಿಕಾರಿಗಳ ಸಭೆ ಕರೆದು ಅಂತಿಮ ಕ್ರಮ ಕೈಗೊಳ್ಳುವಂತೆ ಗಣಿ ಮತ್ತು ಭೂವಿಜ್ಞಾನ ಸಚಿವರಿಗೆ ಸೂಚನೆ ನೀಡಿದರು.

ಹೊಸ ನ್ಯಾಯಾಂಗ ಕಟ್ಟಡ ನಿರ್ಮಾಣಕ್ಕೆ ಗಂಟಿಹೊಳೆ ಮನವಿ

ಬಾಡಿಗೆ ಕಟ್ಟಡದಲ್ಲಿ ಕೋರ್ಟ್ ಕಲಾಪ

ಬೈಂದೂರು: ಅಧಿವೇಶನದಲ್ಲಿ ಶಾಸಕ ಗುರುರಾಜ್ ಗಂಟಿಹೊಳೆ ಅವರು ಬೈಂದೂರು ತಾಲೂಕು ನ್ಯಾಯಾಲಯಗಳ ಸಂಕೀರ್ಣ ಕಟ್ಟಡವು ಪ್ರಸ್ತುತ ಬಾಡಿಗೆ ಕಟ್ಟಡದಲ್ಲಿದ್ದು, ಕೋರ್ಟ್ ಕಾರ್ಯಕಲಾಪ ಹಾಗೂ ಕಚೇರಿ ಸಹಿತ ಇನ್ನಿತರ ಅಗತ್ಯ ಮೂಲ ಸೌಕರ್ಯಗಳ ಕೊರತೆ ಇರುವುದರಿಂದ ಹೊಸ ಕಟ್ಟಡ ಮಂಜೂರು ಮಾಡಲು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಕಾನೂನು ಸಚಿವರಾದ ಎಚ್. ಕೆ ಪಾಟೀಲ್ ಉತ್ತರಿಸಿದ್ದಾರೆ.



ಬೈಂದೂರು ತಾಲೂಕು ನ್ಯಾಯಾಲಯ ಸಂಕೀರ್ಣಕ್ಕೆ ಹೊಸ ಕಟ್ಟಡದ ಬೇಡಿಕೆ ಇರುವ ವಿಚಾರ ಸರ್ಕಾರದ ಗಮನದಲ್ಲಿದ್ದು, ಯಡ್ತರೆ ಗ್ರಾಮದಲ್ಲಿ ಸರ್ವೇ ನಂ. 334/1ಎ32ಎ, 334/1ಎ33ಎ, 334/1ಎ3ಎ1 ಮತ್ತು 334/1ಎ3ಬಿ ಯಲ್ಲಿರುವ 2.32 ಎಕ್ರೆ ಜಾಗದಲ್ಲಿ 03 ನ್ಯಾಯಾಂಗ ಸಭಾಂಗಣಗಳಿಗೆ ಅವಕಾಶ ಕಲ್ಪಿಸಲು ಬೈಂದೂರಿನಲ್ಲಿ ಹೊಸ ನ್ಯಾಯಾಂಗ ಕಟ್ಟಡ ನಿರ್ಮಾಣಕ್ಕಾಗಿ ವಿನ್ಯಾಸ ಯೋಜನೆ ಮತ್ತು ರೇಖಾಚಿತ್ರಕ್ಕೆ ಉಚ್ಚ ನ್ಯಾಯಾಲಯ ಅನುಮತಿ ನೀಡಿದೆ. ಅಲ್ಲದೇ ಹೊಸ ನ್ಯಾಯಾಂಗ ಕಟ್ಟಡ ನಿರ್ಮಾಣಕ್ಕಾಗಿ ರೂ.17 ಕೋ. ಅನುದಾನ ಮಂಜೂರು ಮಾಡುವಂತೆ ಪ್ರಧಾನ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆ ಇವರಿಗೆ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಇವರು 23–09–2024 ಮತ್ತು 11–02–2025 ರಂದು ಪತ್ರ ಹಾಗೂ ದಿನಾಂಕ : 24–03–2025 ರಂದು ಆದ್ಯತಾ ಪಟ್ಟಿಯೊಂದಿಗೆ ಪತ್ರ ಬರೆಯಲಾಗಿದೆ. ಸದರಿ ಇಲಾಖೆಯಿಂದ ಅನುದಾನ ಬಿಡುಗಡೆಗೆ ಬಾಕಿಯಿರುತ್ತದೆ ಎಂದು ಶಾಸಕರ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ.

ಸುತ್ತ ಮುತ್ತ

ಮಂದ್ರಬೈಲ್ ಶ್ರೀ ಕೊರಗ ತನಿಯ ಸೇವಾ ಸಮಿತಿ ರಚನೆ

ಮಂಜೇಶ್ವರ: ವರ್ಕಾಡಿ ಮಂದ್ರಬೈಲ್ ಶ್ರೀ ಕೊರಗ ತನಿಯ ಸೇವಾ ಸಮಿತಿಯ ನೂತನ ಆಡಳಿತ ಮಂಡಳಿ ರೂಪಿಸಲಾಯಿತು. ಅಧ್ಯಕ್ಷರಾಗಿ ಪ್ರಮೋದ್ ಕಾಪ್ರಿ, ಉಪಾಧ್ಯಕ್ಷರಾಗಿ ರಾಜ ವಲಸರಿ, ಕಾರ್ಯದರ್ಶಿಯಾಗಿ ಸಂದೀಪ್ ಟಿ., ಜೊತೆ ಕಾರ್ಯದರ್ಶಿಯಾಗಿ ಆರುಣಾ ಕುದ್ಕೊಳಿ, ಕೋಶಾಧಿಕಾರಿಯಾಗಿ ನವೀನ ಟಿ., ಲೆಕ್ಕ ಪರಿಶೋಧಕರಾಗಿ ರತೇಶ್ ಬೆಟ್ಟುಗದ್ದೆ, ಆಗೇಲು ಸೇವೆ ನೋಂದಾವಣೆ ಪ್ರಮುಖರಾಗಿ ಪುಷ್ಪರಾಜ್ ಮಂದ್ರಬೈಲ್ ಹಾಗೂ ಹರಕೆ ಕೋಲ ಸೇವೆ ನೋಂದಾವಣೆ ಪ್ರಮುಖರಾಗಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನು ಆಯ್ಕೆ ಮಾಡಲಾಗಿದೆ.

ನಾಳೆ ಸೋಂಕಾಲಿನಲ್ಲಿ ಎನ್‌ಡಿಎ ಚುನಾವಣಾ ಕಚೇರಿ ಉದ್ಘಾಟನೆ

ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಚುನಾವಣಾ ಕಚೇರಿ ಉದ್ಘಾಟನಾ ಸಮಾರಂಭ, ಬೂತ್ ಮಟ್ಟದ ಕಾರ್ಯಕರ್ತರ ಸಮಾವೇಶ ಮಂಗಲ್ಪಾಡಿ ಗ್ರಾ. ಪಂ. ವ್ಯಾಪ್ತಿಯ ಸೋಂಕಾಲಿನಲ್ಲಿ ಮಾ.16 ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ. ಚುನಾವಣಾ ಕಚೇರಿಯನ್ನು ಕೇಂದ್ರ ಕಾರ್ಮಿಕ, ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಖಾತೆ ರಾಜ್ಯ ಸಚಿವೆ ಹಾಗೂ ವಿಧಾನ ಸಭಾ ಚುನಾವಣಾ ಕೇರಳ ರಾಜ್ಯ ಸಹ ಪ್ರಭಾರಿ ಶೋಭಾ ಕರಂದ್ಲಾಜೆ ಉದ್ಘಾಟಿಸುವರು. ಕರ್ನಾಟಕ, ಕೇರಳ ರಾಜ್ಯ ಬಿಜೆಪಿ ಮುಖಂಡರು, ಜಿಲ್ಲಾ, ಮಂಡಲ, ಪಂ. ಪ್ರಮುಖರು ಭಾಗವಹಿ ಸುವರು. ಸಮಾರಂ ಭದ ಬಳಿಕ ವಿಧಾನಸಭಾ ವ್ಯಾಪ್ತಿಯಲ್ಲಿರುವ ಬೂತ್ ಮಟ್ಟದ ಕಾರ್ಯಕರ್ತರ ಸಮಾವೇಶಜರಗಲಿದೆ. ಕಾರ್ಯಕರ್ತರು ಭಾಗವ ಹಿಸಿ ಯಶಸ್ವಿಗೊಳಿಸಬೇಕೆಂದು ಬಿಜೆಪಿ ಮುಖಂಡ ವಸಂತಕುಮಾರ್ ಮಯ್ಯ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಬೋವಿಕ್ಕಾನದಲ್ಲಿ ಮೋರಿಸಂಕ ನಿರ್ಮಾಣ: ಸಂಚಾರ ನಿಯಂತ್ರಣ

ಕಾಸರಗೋಡು: ಚೆರ್ಕಳ – ಜಾಲ್ಸೂರು ರಾಜ್ಯ ಹೆದ್ದಾರಿಯ ಬೋವಿಕ್ಕಾನ ಪೇಟೆಯಲ್ಲಿ ಮೋರಿಸಂಕ ಪುನರ್ ನಿರ್ಮಾಣಕ್ಕೆ ಸಂಬಂಧಿಸಿ ಜೂನ್ 7ರ ವರೆಗೆ ಸಾರಿಗೆ ನಿಯಂತ್ರಣ ಏರ್ಪಡಿಸಲಾಗಿದೆ. ನಿರ್ಮಾಣ ಕಾಮಗಾರಿ ನಡೆಯುವ ಸ್ಥಳದ ಇಕ್ಕೆಲಗಳಲ್ಲಿ ರಸ್ತೆ ನಿರ್ಮಿಸಿ ವಾಹನಗಳಿಗೆ ಸಂಚರಿಸಲು ವ್ಯವಸ್ಥೆ ಮಾಡಲಾಗಿದೆ. ಈ ಮೂಲಕ ವೇಗ ಕಡಿಮೆಗೊಳಿಸಿ ವಾಹನಗಳು ಸಂಚರಿಸಬೇಕೆಂದು ಲೋಕೋಪಯೋಗಿ ಇಲಾಖೆಯ ರಸ್ತೆ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚು ಪಿಎಂ ಮನ್ ಕೀ ಬಾತ್ ಆಲಿಕೆ: ಬೆಳ್ಳೂರಿನ ಬೂತ್ ಅಧ್ಯಕ್ಷರಿಗೆ ಅಭಿನಂದನೆ

ಕಾಸರಗೋಡು: ಅತೀ ಹೆಚ್ಚು ಸಲ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮನ್ ಕೀ ಬಾತ್ ವೀಕ್ಷಿಸಿದ ಬೂತ್ ಅಧ್ಯಕ್ಷರನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ಅಭಿನಂದಿಸಿದ್ದಾರೆ. ಬೆಳ್ಳೂರು ಗ್ರಾ.ಪಂ.ನ ಹಳೆಯ ಬೂತ್ 94ನೇ (ಹೊಸ 104ನೇ) ಅಧ್ಯಕ್ಷ, ಪುಳಿತ್ತಡಿ ನಡುವೆ ನಿವಾಸಿ ಪ್ರದೀಪ್ ಕುಮಾರ್ ಅವರನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ನೇರವಾಗಿ ಅಭಿನಂದಿಸಿದ್ದಾರೆ. ಕೃಷಿಕರಾದ ಪ್ರದೀಪ್ ಕುಮಾರ್ ಅವರು ನಿರಂತರ 1 ವರ್ಷಗಳ ಕಾಲ ತನ್ನ ಬೂತ್‌ನಲ್ಲಿ ಇತರ ಕಾರ್ಯಕರ್ತರ ಜೊತೆ ಸೇರಿ ಮನ್ ಕೀ ಬಾತ್ ವೀಕ್ಷಿಸಿದ್ದು, ಇದರ ಚಿತ್ರವನ್ನು ಸರಳ್ ಆ್ಯಪ್ ಮೂಲಕ ಅಪ್ ಲೋಡ್ ಮಾಡಲಾಗಿತ್ತು. ಅದನ್ನು ಮನಗಂಡ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ಅಭಿನಂದನೆ ಪತ್ರ ಕಳುಹಿಸಿದ್ದಾರೆ. ಅಭಿನಂದನೆಯ ಜೊತೆ ಒಂದು ಶಾಲು ಕಳುಹಿಸಲಾಗಿದೆ.

ಎಡನಾಡು ಹಾ.ಉ. ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನೆ

ಕುಂಬಳೆ: ಪುತ್ತಿಗೆ ಗ್ರಾ.ಪಂ.ವ್ಯಾಪ್ತಿಯ ಎಡನಾಡು ಹಾಲು ಉತ್ಪಾದಕರ ಸಹಕಾರ ಸಂಘಕ್ಕಾಗಿ ನಿರ್ಮಿಸಲಾದ ನೂತನ ಕಟ್ಟಡವನ್ನು ಶುಭಾರಂಭಗೊಳಿಸಲಾಯಿತು. ಮಂಜೇಶ್ವರ ಶಾಸಕರ ಆಸ್ತಿ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿ ನಿರ್ಮಿಸಲಾದ ಈ ಕಟ್ಟಡವನ್ನು ಶಾಸಕ ಎ.ಕೆ.ಎಂ.ಅಶ್ರಫ್ ಉದ್ಘಾಟಿಸಿದರು. ಪುತ್ತಿಗೆ ಗ್ರಾ.ಪಂ. ಅಧ್ಯಕ್ಷೆ ಫಿದಾ ಊಜಂಪದವು ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಜಿ.ಪಂ. ಸದಸ್ಯ ಸೋಮಶೇಖರ ಜೆ.ಎಸ್., ಗ್ರಾ.ಪಂ. ಉಪಾಧ್ಯಕ್ಷ ಇ.ಕೆ.ಮುಹಮ್ಮದ್ ಕುಂಞಿ, ಮಂಜೇಶ್ವರ ಬ್ಲಾಕ್ ಪಂ.ಸದಸ್ಯ ಜುನೈದ್ ಉರುಮಿ, ಗ್ರಾ.ಪಂ.ಸದಸ್ಯೆ ಲಕ್ಷ್ಮೀ ವಿ.ಭಟ್, ಸಹಕಾರಿ ಸಂಘದ ಅಧ್ಯಕ್ಷ ಎಸ್.ಎನ್.ರಾವ್ ಮಾತನಾಡಿದರು.

ನಾಗರಿಕರ ಪ್ರತಿಕ್ರಿಯೆ ಕಾರ್ಯಕ್ರಮ | ಬೇಡಡ್ಕ ಗ್ರಾ.ಪಂನಲ್ಲಿ ಮನೆ ಭೇಟಿ ಯೋಜನೆ ಪೂರ್ಣ

ನವಕೇರಳ ಸೃಷ್ಟಿಯಲ್ಲಿ ನಾಗರಿಕರ ಸ್ಪಂದನೆ ಪ್ರಮುಖವಾದುದು

ಕಾಸರಗೋಡು: ಆಧುನಿಕ ಮತ್ತು ಅಭಿವೃದ್ಧಿ ಹೊಂದಿದ ನವಕೇರಳವನ್ನು ರೂಪಿಸಲು ಜನರಿಂದ ನೇರವಾಗಿ ಅಭಿಪ್ರಾಯ ಮತ್ತು ಸಲಹೆಗಳ ಸ್ವೀಕರಿಸುವ ನಾಗರಿಕರ ಪ್ರತಿಕ್ರಿಯೆ (ಸ್ಪಂದನೆ) ಕಾರ್ಯಕ್ರಮ ನವಕೇರಳದ ಸೃಷ್ಟಿಗೆ ಸಹಾಯ ಮಾಡುತ್ತದೆ ಎಂದು ಉದುಮ ಶಾಸಕ ಸಿ.ಎಚ್.ಕುಂಞಂಬು ಹೇಳಿದ್ದಾರೆ.

ನವಕೇರಳ ಸೃಷ್ಟಿಗೆ ನಾಗರಿಕರ ಪ್ರತಿಕ್ರಿಯೆ ಕಾರ್ಯಕ್ರಮದ ಅಂಗವಾಗಿ ಬೇಡಡ್ಕ ಗ್ರಾ.ಪಂ.ನಲ್ಲಿ ಮನೆ ಭೇಟಿ ಯೋಜನೆ ಪೂರ್ಣಗೊಂಡ ವಿಷಯವನ್ನು ಘೋಷಿಸಿ ಅವರು ಮಾತನಾಡಿದರು.

ಮನೆಗಳ ಭೇಟಿ ಸಂಪೂರ್ಣಗೊಳ್ಳುವುದರೊಂದಿಗೆ ಬೇಡಡ್ಕ ಗ್ರಾ.ಪಂ. ಕಾಸರಗೋಡು ಜಿಲ್ಲೆಯಲ್ಲಿ ಎರಡನೇ ಸ್ಥಾನ ಪಡೆಯುವಂತಾಯಿತು. ಜನರ ಜೀವನ ಮಟ್ಟ ಸುಧಾರಿಸುವ ಮೂಲಕ ಮತ್ತು ಸರಿಯಾದ ಯೋಜನೆಗಳೊಂದಿಗೆ ಮುಂದುವರಿ ಯುವ ನಿಟ್ಟಿನಲ್ಲಿ ಕೇರಳವನ್ನು ಅಭಿವೃದ್ಧಿ ಹೊಂದಿದ ರಾಜ್ಯಗಳೊಂದಿಗೆ ಗುರುತಿಸಲು ಸಾಧ್ಯವಿದೆ. ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಜನತಾ ಯೋಜನೆಯ



ಮುಖೇನ ಗಮನಾರ್ಹವಾಗಿ ಸಾಧ್ಯವಾಗಿದೆ. ಕಳೆದ 10 ವರ್ಷಗಳಲ್ಲಿ ಕೇರಳವು ಮಹತ್ತರ ಬದಲಾವಣೆ ಕಂಡಿದೆ. ಇದರೊಂದಿಗೆ ಪ್ರಗತಿಯ ವೇಗವು ಇನ್ನಷ್ಟು ಸಾಧಿಸಿದೆ ಎಂದರು.

ವಿಶೇಷ ಅತಿಥಿಯಾಗಿದ್ದ ರಾಜ್ಯ ಕಾರ್ಯಕಾರಿ ಸಮಿತಿ ಉಸ್ತುವಾರಿ ವಹಿಸಿರುವ ಕೆಐಎಲ್‌ನ ಮಾಜಿ ನಿರ್ದೇಶಕ ಜಾಯ್ ಇಲಾಮನ್ ಮಾತನಾಡಿ, ನವಕೇರಳವನ್ನು ರಚಿಸುವ ಹಿನ್ನೆಲೆಯಲ್ಲಿ ಕ್ರಿಯಾ ಸೇನೆಯ ಸದಸ್ಯರ ಕಾರ್ಯ ಶ್ಲಾಘನೀಯ ಎಂದರು. ಜಿಲ್ಲಾ, ಕ್ಷೇತ್ರ ಮತ್ತು ಪಂ.ಮಟ್ಟದ ಕಾರ್ಯಕಾರಿ ಸಮಿತಿಗಳ ಕೆಲಸವೂ ಉತ್ತಮ ಸ್ಥಿತಿಯಲ್ಲಿದೆ ಎಂದರು. ಈ ಯೋಜನೆಗೆ ಕುಟುಂಬಶ್ರೀ ರಾಜ್ಯಾದ್ಯಂತ ಸಹಕರಿಸುತ್ತಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೇಡಡ್ಕ ಗ್ರಾ.ಪಂ.ಅಧ್ಯಕ್ಷ ಇ.ಕುಂಞಿರಾಮನ್ ಅಧ್ಯಕ್ಷತೆ ವಹಿಸಿದ್ದರು. ನಾಗರಿಕರ ಪ್ರತಿಕ್ರಿಯೆ ಕಾರ್ಯಕ್ರಮದ ಜಿಲ್ಲಾ ಸಂಚಾಲಕ ಮತ್ತು ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಅಭಿನಂದನಾ ಭಾಷಣ ಮಾಡಿದರು. ನಾಗರಿಕರ ಪ್ರತಿಕ್ರಿಯೆ ಕಾರ್ಯಕ್ರಮದ ಉದುಮ ಕ್ಷೇತ್ರದ ಉಸ್ತುವಾರಿ ಹಾಗೂ ನವಕೇರಳ ಸಂಪನ್ಮೂಲ ವ್ಯಕ್ತಿ ಪಿ.ಕೆ.ಲೋಹಿತಾಕ್ಷನ್, ಪಂ.ಮಟ್ಟದ ಕಾರ್ಯಕಾರಿ ಸಮಿತಿ ಸದಸ್ಯರಾದ ಪಿ.ವಿ.ಶಶಿ, ಬಾಲಕೃಷ್ಣನ್, ಗ್ರಾ.ಪಂ. ಉಪಾಧ್ಯಕ್ಷೆ ರಾಧಾ ರವಿ, ಕ್ರಿಯಾ ಸೇನಾ ಸದಸ್ಯರು, ಗ್ರಾ.ಪಂ.ಸದಸ್ಯರು, ಕುಟುಂಬಶ್ರೀ ಸಿಡಿಎಸ್ ಸದಸ್ಯೆಯರು ಮಾತನಾಡಿದರು.

> **ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಕೊಳ್ಳಲು ಸಹಕಾರಿ**
>
> **ಕೇರಳವು ಬಹಳ ತ್ವರಿತವಾಗಿ ಅಭಿವೃದ್ಧಿಯಾಗುತ್ತಿದೆ. ರಾಜ್ಯದ ಭವಿಷ್ಯಕ್ಕಾಗಿ ಜನರ ಅಗತ್ಯತೆಗಳ ಬಗ್ಗೆ ಕೇಳಲು ಮತ್ತು ಅಭಿವೃದ್ಧಿ ಹಾಗೂ ಕಲ್ಯಾಣ ಚಟುವಟಿಕೆಗಳನ್ನು ಜನರಿಗೆ ತಲುಪಿಸಲು ನಡೆಸಲಾಗುತ್ತಿರುವ ನಾಗರಿಕರ ಪ್ರತಿಕ್ರಿಯೆ ಕಾರ್ಯಕ್ರಮ ಜನರನ್ನು ಅಭಿವೃದ್ಧಿ ಯೋಜನೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡುತ್ತಿದೆ.**
>
> ● ಸಿ.ಎಚ್.ಕುಂಞಂಬು, ಶಾಸಕ

ಪಂ. ಮಟ್ಟದ ಕಾರ್ಯಕಾರಿ ಸಮಿತಿ ಸದಸ್ಯ ರತ್ನಾಕರನ್ ಸ್ವಾಗತಿಸಿ, ಕಿಲಾ ವಿಷಯಾಧಾರಿತ ತಜ್ಞೆ ಎಸ್.ಬಿ.ಶ್ರುತಿ ವಂದಿಸಿದರು.

ಗ್ರಾಪಂ ವ್ಯಾಪ್ತಿಯ 8100 ಮನೆಗಳಿಗೆ ಭೇಟಿ

ಬೇಡಡ್ಕ ಗ್ರಾ.ಪಂ.ನ 19 ವಾರ್ಡ್‌ಗಳ 74 ಕ್ರಿಯಾ ಸೇನಾ ಸದಸ್ಯರು ಪ್ರತೀ ಮನೆಗೆ ಭೇಟಿ ನೀಡಿ ಮಾಹಿತಿ ದಾಖಲಿಸಿಕೊಂಡಿದ್ದರು. ಜನವರಿ 1 ರಂದು ಪ್ರಾರಂಭವಾದ ಮನೆಗಳಿಗೆ ಭೇಟಿ ಇದೀಗ ಪೂರ್ಣಗೊಂಡಿದೆ. ಪಂ.ವ್ಯಾಪ್ತಿಯಲ್ಲಿರುವ ಎಲ್ಲಾ 8100 ಮನೆಗಳಿಗೆ ಭೇಟಿ ನೀಡುವ ಮೂಲಕ ಈ ಸಾಧನೆ ಸಾಧಿಸಲಾಗಿದೆ. ಈ ನಿಟ್ಟಿನಲ್ಲಿ ಉದುಮ ಶಾಸಕ ಸಿ.ಎಚ್.ಕುಂಞಂಬು ಅವರು ಬೇಡಡ್ಕ ಗ್ರಾ.ಪಂ.ಅಧ್ಯಕ್ಷ ಇ.ಕುಂಞಿರಾಮನ್ ಅವರಿಗೆ ಉಡುಗೊರೆ ನೀಡಿದರು. ಮನೆ ಭೇಟಿ ನಡೆಸಿದ ಕ್ರಿಯಾ ಸೇನಾ ಸದಸ್ಯರಿಗೂ ಉಡುಗೊರೆ ವಿತರಿಸಲಾಯಿತು. ಇದೇ ವೇಳೆ ನಾಗರಿಕರ ಪ್ರತಿಕ್ರಿಯೆ ಕಾರ್ಯಕ್ರಮದ ಅಂಗವಾಗಿ ಮನೆಗಳಿಗೆ ಭೇಟಿ ಪೂರ್ಣಗೊಳಿಸಿದ ಜಿಲ್ಲೆಯ ಪ್ರಥಮ ಗ್ರಾ.ಪಂ. ಆಗಿ ಪಿಲಿಕೋಡ್ ಗ್ರಾ.ಪಂ.ನ್ನು ಈ ಮೊದಲೇ ಘೋಷಿಸಲಾಗಿತ್ತು.

ಕಾಸರಗೋಡು ಶ್ರೀ ಮಲ್ಲಿಕಾರ್ಜುನ ದೇವಳದಲ್ಲಿ ಪ್ರತಿಷ್ಠಾ ವಾರ್ಷಿಕ ಉತ್ಸವ



ಕಾಸರಗೋಡು: ಇತಿಹಾಸ ಪ್ರಸಿದ್ಧ ಕಾಸರಗೋಡು ನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ 7ನೇ ಪ್ರತಿಷ್ಠಾ ವಾರ್ಷಿಕ ಉತ್ಸವವು ಶುಕ್ರವಾರ ವಿವಿಧ ಕಾರ್ಯಕ್ರಮಗಳೊಂದಿಗೆ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡಿತು. ವಾರ್ಷಿಕ ಉತ್ಸವದ ಅಂಗವಾಗಿ ವಿವಿಧ ವಿಧಿ ವಿಧಾನಗಳನ್ನು ಭಕ್ತಜನರ ಸಮ್ಮುಖದಲ್ಲಿ ಹಮ್ಮಿಕೊಳ್ಳಲಾಯಿತು.

ಶ್ರೀ ಕ್ಷೇತ್ರದಲ್ಲಿ ಬೆಳಿಗ್ಗೆ ರುದ್ರಾಭಿಷೇಕ, ಕ್ಷೀರಾಭಿಷೇಕ, ಉಷಃಪೂಜೆ, ಮಧ್ಯಾಹ್ನ ನವಕಾಭಿಷೇಕ, ವಿಶೇಷ ಮಹಾಪೂಜೆ ಮುಂತಾದ ಕಾರ್ಯಕ್ರಮಗಳು ತಂತ್ರಿವರ್ಯ ಬ್ರಹ್ಮಶ್ರೀ ಉಚ್ಚಿಲತ್ತಾಯ ಪದ್ಮನಾಭ ತಂತ್ರಿ ಅವರ ನಿರ್ದೇಶನದಲ್ಲಿ ಜರಗಿತು.

ಸಂಜೆ ದೀಪಾರಾಧನೆ, ಶ್ರೀ ವೆಂಕಟ್ರಮಣ ಬಾಲಗೋಕುಲದ ಮಕ್ಕಳಿಂದ ಭಜನೆ ಹಾಗೂ ಕುಣಿತ ಭಜನೆ ನಂತರ ಮಹಾಪೂಜೆ

> **ವಿವಿಧ ಪೂಜೆ**
>
> **ಪ್ರತಿಷ್ಠಾ ದಿನದ ಅಂಗವಾಗಿ ಶ್ರೀ ಕ್ಷೇತ್ರದಲ್ಲಿ ರುದ್ರಾಭಿಷೇಕ, ಕ್ಷೀರಾಭಿಷೇಕ, ಉಷಃಪೂಜೆ, ನವಕಾಭಿಷೇಕ, ವಿಶೇಷ ಮಹಾಪೂಜೆ ನಡೆಯಿತು.**

ಬಳಿಕ ಕ್ಷೇತ್ರದ ಮುಖ್ಯ ಅರ್ಚಕ ಶಿವಶಂಕರ ಅಡಿಗ ಅವರು ಬಾಲಗೋಕುಲದ ಮಕ್ಕಳಿಗೆ ವಿಶೇಷ ಪ್ರಾರ್ಥನೆಗೈದು ಪ್ರಸಾದವನ್ನು ನೀಡಿದರು.

ಬಾಲಗೋಕುಲದ ಅಧ್ಯಾಪಿಕೆ ಶ್ರೀಲತಾ ಟೀಚರ್, ಪ್ರಮುಖ ರಾದ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ, ನಗರಸಭಾ ಸದಸ್ಯ ಕೆ.ಎನ್.ರಾಮಕೃಷ್ಣ ಹೊಳ್ಳ, ಕಿಶೋರ್ ಎಸ್.ವಿ.ಟಿ., ಶಂಕರನಾರಾಯಣ ಹೊಳ್ಳ, ರವಿ ಕೇಸರಿ, ವಸಂತ ಕೆರೆಮನೆ, ಸವಿತಾ, ಪ್ರೇಮಾ, ಶ್ರೀವಳ್ಳಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಭಾರತೀಯ ಅಭಿಭಾಷಕ ಪರಿಷತ್‌ನ ಕಾಸರಗೋಡು ಜಿಲ್ಲಾ ಸಮಾವೇಶ



ಕಾಸರಗೋಡು: ಜ್ಯೂನಿಯರ್ ವಕೀಲರುಗಳಿಗೆ ಘೋಷಿಸಿರುವ 5ಸಾವಿರ ರೂ. ಪ್ರತೀ ತಿಂಗಳ ಸ್ಟೈಫಂಡ್ ಕೂಡಲೇ ನೀಡಲು ಕ್ರಮ ಕೈಗೊಳ್ಳಬೇಕೆಂದು ಭಾರತೀಯ ಅಭಿಭಾಷಕ (ವಕೀಲರ) ಪರಿಷತ್‌ನ ಕಾಸರಗೋಡು ಜಿಲ್ಲಾ ಸಮಾವೇಶ ಠರಾವು ಮೂಲಕ ಒತ್ತಾಯಿಸಿದೆ.

ವಕಾಲತ್‌ಗಳಿಗೆ 25ರೂ.ಗಳ ಸ್ಟೈಫಂಡ್ ಸ್ಟಾಂಪ್ ಕಡ್ಡಾಯಗೊಳಿಸಲಾಗಿದೆ. ವೆಲ್ಫೇರ್ ಫಂಡ್ ಸ್ಟಾಂಪ್ 25ರೂ.ನಿಂದ 100 ರೂ. ಆಗಿ ಹೆಚ್ಚಿಸಲಾಗಿದೆ. ಲೀಗಲ್ ಬೆನಿಫಿಟ್ ಫಂಡ್ ಸ್ಟಾಂಪ್ ರೂಪದಲ್ಲಿ ಲಭಿಸುವ ಬೃಹತ್ ಮೊತ್ತ ಕೇರಳ ಸರಕಾರದ ಟ್ರಷರಿ ಅಕೌಂಟ್‌ಗೆ ಬಡ್ಡಿರಹಿತ ಬದಲಾವಣೆಯಾಗುತ್ತಿದೆ. ಈ ಮೊತ್ತಕ್ಕೆ ಸರಿಯಾದ ಬಡ್ಡಿ ನೀಡಲು ಸರಕಾರ ಸಿದ್ಧವಾಗಬೇಕು. ಅಲ್ಲದೆ ಈ ಮೊತ್ತದಿಂದ ಸ್ಟೈಫಂಡ್ ವಿತರಿಸಲು, ಹೆಚ್ಚಿಸಿದ ಶುಲ್ಕ ಹಿಂತೆಗೆಯಲು ಆಗ್ರಹಿಸಲಾಯಿತು.

ಕಾಸರಗೋಡಿನಲ್ಲಿ ಜರಗಿದ ಸಮಾರಂಭವನ್ನು ರಾಜ್ಯ ಕಾರ್ಯದರ್ಶಿ, ವಕೀಲ ಸಂದೀಪ್ ಕುಮಾರ್ ಉದ್ಘಾಟಿಸಿದರು. ಜಿಲ್ಲಾಧ್ಯಕ್ಷ, ವಕೀಲ ಎ.ಸಿ. ಅಶೋಕ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಉಪಾಧ್ಯಕ್ಷ ಬಿ. ರವೀಂದ್ರನ್, ಕೆ.ಕರುಣಾಕರನ್ ನಂಬ್ಯಾರ್, ಪಿ.ಮುರಳೀಧರನ್, ಕುಸುಮಾ ಎಂ., ಅನಿಲ್ ಕೆ.ಜಿ., ಹರ್ಷಿತಾ, ಬೀನಾ ಕೆ.ಎಂ., ಗಿರೀಶ್ ರಾವ್, ವಕೀಲ ನವೀನ್‌ರಾಜ್ ಕೆ.ಜೆ., ವಕೀಲ ಮಣಿಕಂಠನ್ ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳ ಆಯ್ಕೆ

ಇದೇ ವೇಳೆ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಎ.ಸಿ. ಅಶೋಕ್ ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ನವೀನ್‌ರಾಜ್ ಕೆ.ಜೆ., ಕೋಶಾಧಿಕಾರಿಯಾಗಿ ಹರ್ಷಿತಾ, ಉಪಾಧ್ಯಕ್ಷರಾಗಿ ಅನಂತರಾಮ ಪಿ., ಅನಿಲ್ ಕೆ.ಜಿ., ಕುಸುಮಾ ಎಂ., ಕಾರ್ಯದರ್ಶಿಗಳಾಗಿ ಸಚಿನ್ ಶೆಣೈ, ಪ್ರಜಿತ್ ಎಸ್.ಕೆ., ಅಕ್ಷತಾ ಮನೋಜ್ ಅವರನ್ನು ಆಯ್ಕೆ ಮಾಡಲಾಯಿತು.

ಅಮ್ಮೈ ಭಜನಾ ಮಂದಿರ ರಜತ ಸಂಭ್ರಮ: ಧರ್ಮಸ್ಥಳದಿಂದ ರೂ.25 ಸಾವಿರ ನೆರವು



ಕಾಸರಗೋಡು: ಕಾಸರಗೋಡು ನಗರದ ಅಮ್ಮೈ ಶ್ರೀಕೃಷ್ಣ ಭಜನಾ ಮಂದಿರದ ರಜತ ಮಹೋತ್ಸವ ಸಮಿತಿ ವತಿಯಿಂದ ಜರಗಲಿರುವ ಭಜನಾ ಮಂದಿರದ ರಜತ ಸಂಭ್ರಮ ಮಹೋತ್ಸವದ ಆಮಂತ್ರಣ ಪತ್ರಿಕೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ರಾಜರ್ಷಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ನೀಡಲಾಯಿತು.

ಈ ಸಂದರ್ಭ ಶ್ರೀ ಕ್ಷೇತ್ರದಿಂದ ಪ್ರಸಾದ ರೂಪವಾಗಿ ಕೊಡಮಾಡಿದ 25,000 ರೂ. ಮೊತ್ತವನ್ನು ಧರ್ಮಸ್ಥಳ ಬಿ.ಸಿ.ಟ್ರಸ್ಟ್‌ನ ಯೋಜನಾಧಿಕಾರಿ ದಿನೇಶ್, ಶ್ರೀ ಕ್ಷೇತ್ರ ಧರ್ಮಸ್ಥಳ ಭಜನಾ ಪರಿಷತ್‌ನ ಕಾಸರಗೋಡು ತಾಲೂಕು ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಕಾಸರಗೋಡು ವಲಯ ಮೇಲ್ವಿಚಾರಕ ಗೋಪಾಲಕೃಷ್ಣ, ಸೇವಾ ಪ್ರತಿನಿಧಿ ಶೋಭಾ ಅವರು ಭಜನಾ ಮಂದಿರಕ್ಕೆ ಭೇಟಿ ನೀಡಿ ರಜತ ಮಹೋತ್ಸವ ಸಮಿತಿಯ ಅಧ್ಯಕ್ಷ ಕೆ.ಸದಾಶಿವ ಮಲ್ಯ ಅವರಿಗೆ ಹಸ್ತಾಂತರಿಸಿದರು.

ಈ ವೇಳೆ ರಜತ ಮಹೋತ್ಸವ ಸಮಿತಿ ಪ್ರಧಾನಕಾರ್ಯದರ್ಶಿ ಗುಣಪಾಲ ಅಮ್ಮೈ, ನಗರಸಭಾ ಸದಸ್ಯ ರಾಜೇಶ್ ಅಮ್ಮೈ, ಮಂದಿರ ಉಪಾಧ್ಯಕ್ಷೆ ಪುಷ್ಪಾ, ಕೋಶಾಧಿಕಾರಿ ಮನೋಹರ, ಪದ್ಮಾವತಿ, ಗಂಗಾವತಿ ಉಪಸ್ಥಿತರಿದ್ದರು.

ಎನ್‌ಟಿಯು ವನಿತಾ ವಿಭಾಗ: ಮಹಿಳಾ ದಿನಾಚರಣೆ, ಪಾಕತಜ್ಞೆಯರಿಗೆ ಸನ್ಮಾನ



ಕಾಸರಗೋಡು: ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ದೇಶೀಯ ಅಧ್ಯಾಪಕ ಪರಿಷತ್ (ಎನ್‌ಟಿಯು)ನ ವನಿತಾ ವಿಭಾಗ ಕಾಸರಗೋಡು ಇದರ ಆಶ್ರಯದಲ್ಲಿ ಮಹಿಳಾ ಪಾಕತಜ್ಞೆಯರನ್ನು ಗೌರವಿಸುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಶಾಲಾ ಅಧ್ಯಾಪಿಕೆ ವಿಶಾಲಾಕ್ಷಿ ಟೀಚರ್ ಪ್ರಾರ್ಥನೆ ಹಾಡಿದರು. ಸಭಾ ಕಾರ್ಯಕ್ರಮದಲ್ಲಿ ಶಾಲಾ ಪ್ರಾಂಶುಪಾಲ ಕೆ.ಪಿ.ರಾಜೇಶ್‌ಚಂದ್ರ ಅಧ್ಯಕ್ಷತೆ ವಹಿಸಿ ಶುಭಕೋರಿದರು. ಮುಖ್ಯೋಪಾಧ್ಯಾಯ ಗಣೇಶ್ ಮಾಸ್ಟರ್, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಹರೀಶ್ ಕೆ.ಆರ್., ಎಸ್‌ಎಂಸಿ ಅಧ್ಯಕ್ಷ ಡಾಕೆ.ಎನ್.ವೆಂಕಟ್ರಮಣ ಹೊಳ್ಳ ಮುಂತಾದವರು ಮಾತನಾಡಿ, ಸನ್ಮಾನಿತರ ಸೇವೆಯನ್ನು ಶ್ಲಾಘಿಸಿದರು.

> **ಗೌರವ**
>
> **ಆರೋಗ್ಯಕರ ಬೆಳವಣಿಗೆಗೆ ಪೌಷ್ಠಿಕ, ರುಚಿಕರ ಆಹಾರವನ್ನು ಪ್ರತಿದಿನವೂ ಶಾಲೆಯಲ್ಲಿ ಸಿದ್ಧಪಡಿಸುತ್ತಿರುವ ಕಾಸರಗೋಡು ನಗರದ ಬಿಇಎಂ ಹೈಯರ್ ಸೆಕೆಂಡರಿ ಶಾಲೆ ಸಿಬ್ಬಂದಿಗಳಾದ ಪುಷ್ಪಲತಾ, ಜಯಲತಾ ಅವರನ್ನು ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ ಗೌರವಿಸಲಾಯಿತು.**

ಎನ್‌ಟಿಯು ಕಾಸರಗೋಡು ಉಪಜಿಲ್ಲಾ ಅಧ್ಯಕ್ಷೆ ವಿದ್ಯಾ ಟೀಚರ್ ಸ್ವಾಗತಿಸಿ, ಕಾರ್ಯಕ್ರಮಕ್ಕೆ ನೇತೃತ್ವ ನೀಡಿದರು. ಎನ್‌ಟಿಯು ಸಂಚಾಲಕಿ ವೀಣಾ ಟೀಚರ್ ವಂದಿಸಿದರು. ಈ ಸಂದರ್ಭ ವಿವಿಧ ಕಾರ್ಯಕ್ರಮ ಏರ್ಪಡಿಸಲಾಯಿತು.

ಕಾಸರಗೋಡು ಗಡಿನಾಡ ಶಾಖೆಯಿಂದ ಮನೆಯಂಗಳದಲ್ಲಿ ಸಾಹಿತ್ಯ ಅಭಿಯಾನ



ಮಂಜೇಶ್ವರ: ಮಂಗಲ್ಪಾಡಿ ಸಾಕ್ಷಾತ್ಕಾರ ನಿವಾಸದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ಗಡಿನಾಡ ಶಾಖೆಯ ವತಿಯಿಂದ ಮನೆಯಂಗಳದಲ್ಲಿ ಸಾಹಿತ್ಯ ಅಭಿಯಾನ ಕಾರ್ಯಕ್ರಮ ಜರಗಿತು. ಇದರ ಅಂಗವಾಗಿ ಕಾಸರಗೋಡಿನ ದೇವಾಲಯಗಳ ಶಿಲ್ಪ ವೈಭವದ ಕುರಿತು ಕಾಸರಗೋಡು ಸರಕಾರಿ ಕಾಲೇಜಿನ ಸಹ ಪ್ರಾಧ್ಯಾಪಕ ಬಾಲಕೃಷ್ಣ ಹೊಸಂಗಡಿ ವಿಚಾರ ಸಂಕಿರಣವನ್ನು ನಡೆಸಿಕೊಟ್ಟರು.

ಪ್ರತಿಫಲನವಿದೆ

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಸರಗೋಡಿನ ದೇವಾಲಯಗಳ ಶಿಲ್ಪ ಕಲೆಗಳಲ್ಲಿ ಬಹು ನಾಗರಿಕತೆಗಳ ಪ್ರತಿಫಲನವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ದೈವ ಕ್ಷೇತ್ರ, ದೇವಾಲಯ, ಮಸೀದಿಗಳ ರಚನೆಗಳ ನಿರ್ಮಾಣ ವೈಶಿಷ್ಟ್ಯಗಳ ಕುರಿತು ಅವರು ಸಮಗ್ರವಾಗಿ ವಿವರಿಸಿದರು. ಅಲ್ಲದೆ ಈ ನಿಟ್ಟಿನಲ್ಲಿ ಅಧ್ಯಯನ ನಡೆಸಬೇಕಾದ ಅಗತ್ಯವನ್ನು ತಿಳಿಸಿದರು.

ಸಮಾರಂಭದಲ್ಲಿ ಜಯಲಕ್ಷ್ಮೀ ಕಾರಂತ ಮಂಗಲ್ಪಾಡಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕಲಾಕುಂಚ ಗಡಿನಾಡ ಘಟಕದ ಗೌರವಾಧ್ಯಕ್ಷ ವಿ.ಬಿ.ಕುಳಮರ್ವ, ಅಧ್ಯಕ್ಷೆ ರಾಧಾಮಣಿ ಮೊದಲಾದವರು ಉಪಸ್ಥಿತರಿದ್ದರು.

ದಿವ್ಯಾ ಕಾರಂತ ಪ್ರಾರ್ಥನಾ ಗೀತೆ ಹಾಡಿದರು. ಕಾರ್ತಿಕ್ ಪಡ್ರೆ ಸ್ವಾಗತಿಸಿ, ಜಯಲಕ್ಷ್ಮೀ ಆರ್.ಹೊಳ್ಳ ವಂದಿಸಿದರು. ವೇದಾಂತ್ ಕಾರಂತ ಹಾಗೂ ಪ್ರಣವ್ ಕೃಷ್ಣ ಅವರ ಹಾಡುಗಾರಿಕೆ ಕಾರ್ಯಕ್ರಮಕ್ಕೆ ಮೆರಗು ತಂದಿತು. ರಾಜಾರಾಮ ರಾವ್ ಮೀಯಪದವು ನಿರೂಪಿಸಿದರು.

ಮಲ್ಲ ಶ್ರೀ ದೇವಸ್ಥಾನದ ವಾರ್ಷಿಕ ಉತ್ಸವ: ಸಾಹಿತ್ಯ ಗಾನ ನೃತ್ಯ ವೈಭವ



ಕಾಸರಗೋಡು: ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ಜರಗಿತು. ಉತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಯುಕ್ತ ಡಾ.ವಾಣಿಶ್ರೀ ಕಾಸರಗೋಡು ಅವರ ಸಾರಥ್ಯದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ಸಾಹಿತ್ಯ ನೃತ್ಯ ಗಾನಾಮೃತ ಕಾರ್ಯಕ್ರಮವು ಅತ್ಯಂತ ಅದ್ಭುತವಾಗಿ ನೆರವೇರಿತು.

ಡಾ.ವಾಣಿಶ್ರೀ ಅವರು ಕನ್ನಡ ಸಾಹಿತ್ಯ ಸಾದರಪಡಿಸಿದರು. ತನುಷ, ಮಾನ್ವಿ, ಮೋಕ್ಷ ಹಾಗೂ ಮುಕ್ತಿ ಅವರ ಯೋಗನೃತ್ಯವು ಯಶಸ್ವಿಯಾಗಿ ಮೂಡಿಬಂದು ಮಲ್ಲ ಪ್ರದೇಶದ ಪ್ರೇಕ್ಷಕರಿಂದ ಅಭಿನಂದನೆ ಪಡೆಯಿತು. ಸೀತಾರಾಮ ಹಾಗೂ ಅಮೃತ್ ಅವರ ಭಕ್ತಿಗಾನಾಮೃತದ ಹಾಡುಗಳು ಕಲಾರಸಿಕರ ಮೆಚ್ಚುಗೆ ಗಳಿಸಿದವು.

ಕನ್ನಡ ಮಕ್ಕಳಾದ ಆತ್ಮಿಕ, ಜಾಹ್ನವಿ, ಹರ್ಷಿಶ್, ಯಶಸ್ವಿನಿ, ಗ್ರೀಷ್ಮ, ಮುಕ್ತಿ ಬಿ.ಆರ್., ಮೋಕ್ಷ ಬಿ.ಆರ್., ಐಶ್ವರ್ಯ ಮಲ್ಲ, ಅಮೃತ ಮಲ್ಲ, ತೇಜಸ್ವಿನಿ, ಸೌಮ್ಯ ರಿಷಂತ್, ಆದ್ಯಾ ಮೊದಲಾದ ಕಲಾ ಕಣ್ಮಣಿಗಳ ನಾಟ್ಯಗಳು ನೋಡುಗರ ಮನರಂಜಿಸಿತು.

ಕಲಾವಿದರಿಗೆ ಗೌರವ

ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ 186ನೇ ಕಾರ್ಯಕ್ರಮದ ಈ ಸಂಭ್ರಮವನ್ನು ಡಾ.ವಾಣಿಶ್ರೀಯವರು ನಿರ್ದೇಶಿಸಿ ಪ್ರಸ್ತುತಪಡಿಸಿದರು. ಎಲ್ಲಾ ಕಲಾವಿದರಿಗೆ ಗೌರವ ಸ್ಮರಣಿಕೆ ಹಾಗೂ ಗೌರವಧನ ನೀಡಿ ಪುರಸ್ಕರಿಸಲಾಯಿತು. ಡಾ.ವಾಣಿಶ್ರೀ ಅವರನ್ನು ಶಾಲು ಹೊದೆಸಿ ಹಾರ ಹಾಕಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಗಣ್ಯರಾದ ವಿದ್ಯಾಧರ ಮಲ್ಲ, ಉಮೇಶ್ ಪಟ್ಟಾಜೆ, ಸೌಮ್ಯಾ ಮಲ್ಲ, ರೋಹಿತ್ ಮಲ್ಲ, ಅಚ್ಯುತ ಭಟ್, ಶಶಿಕಲಾ, ರೇಖಾ ಸುದರ್ಶನ, ವೆಂಕಟೇಶ್ವರಿ ಮುಂತಾದವರು ಉಪಸ್ಥಿತರಿದ್ದರು.

ಅಜಾನೂರಿನಲ್ಲಿ ಕಾರ್ಯಾರಂಭ | ಶಾಸಕ ಚಂದ್ರಶೇಖರನ್ ಉದ್ಘಾಟನೆ

ಕುಟುಂಬಶ್ರೀ ಕೇರಳ ಚಿಕನ್‌ನ ಪ್ರಥಮ ಮಳಿಗೆ ಆರಂಭ

ಕಾಸರಗೋಡು: ಅಡುಗೆ ಮನೆಯ ಬಜೆಟ್‌ಗೆ ಅಡ್ಡಿಯುಂಟು ಮಾಡುತ್ತಿರುವ ಕೋಳಿ ಮಾಂಸದ ಬೆಲೆಯೇರಿಕೆ ತಡೆಯಲು ಕುಟುಂಬಶ್ರೀ ನೇತೃತ್ವದಲ್ಲಿ ಕೇರಳ ಚಿಕನ್ ಇನ್ನು ಮುಂದೆ ಕಾಸರಗೋಡಿನಲ್ಲಿ ಲಭ್ಯವಿದೆ. ಕಡಿಮೆ ಬೆಲೆಗೆ ಶುದ್ಧ ಕೋಳಿ ಮಾಂಸ ಒದಗಿಸುವ ರಾಜ್ಯ ಸರಕಾರ ಯೋಜನೆ ಜಿಲ್ಲೆಯಲ್ಲಿ ಆರಂಭವಾಗಿದೆ.

ಅಜಾನೂರು ಗ್ರಾ.ಪಂ. ಕುಟುಂಬಶ್ರೀ ಸಿಡಿಎಸ್ ಆಶ್ರಯದಲ್ಲಿ ಇಟ್ಟಮ್ಮಾಳ್ ಜಂಕ್ಷನ್‌ನಲ್ಲಿ ಪ್ರಾರಂಭಿಸಲಾದ ಜಿಲ್ಲೆಯ ಮೊದಲ ಔಟ್ಲೆಟ್ (ಮಳಿಗೆ)ಯನ್ನು ಕಾಞಂಗಾಡು ಶಾಸಕ ಇ.ಚಂದ್ರಶೇಖರನ್ ಉದ್ಘಾಟಿಸಿದರು.

ಕೋಳಿ ಮಾಂಸವನ್ನು ಕುಟುಂಬಶ್ರೀ ಮಳಿಗೆಗಳಲ್ಲಿ



ಪ್ರಸ್ತುತ ಮಾರುಕಟ್ಟೆ ಬೆಲೆಗಿಂತ ಕೆ.ಜಿ.ಗೆ 10 ರೂ. ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದು. ಎಂದು ಅವರು ಹೇಳಿದರು.

ಅಜಾನೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ವಿ.ತುಳಸಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕುಟುಂಬಶ್ರೀ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ದಿನೇಶನ್ ಪ್ರಥಮ ಮಾರಾಟ ನಡೆಸಿಕೊಟ್ಟರು. ಅತಿಥಿಯಾಗಿ ಕಾಞಂಗಾಡು ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಕೆ.ಸುಜಾತ ಭಾಗವಹಿಸಿದ್ದರು. ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಕುಮಾರ್ ಪಿಲಿಕೋಡ್ ಯೋಜನೆ ಬಗ್ಗೆ ವಿವರಿಸಿದರು.

> **ಉತ್ತಮ ಗುಣಮಟ್ಟ**
>
> **ಇಲ್ಲಿ ನೀಡುವ ಮಾಂಸವನ್ನು ನಮ್ಮ ದೇಶದ ಸಾಕಣೆ ಕೇಂದ್ರಗಳಲ್ಲಿ ವೈಜ್ಞಾನಿಕವಾಗಿ ಬೆಳೆಸಿದ ಗುಣಮಟ್ಟದ ಕೋಳಿಗಳಿಂದ ತಯಾರಿಸಲಾಗುತ್ತದೆ.**
>
> ● ಶಾಸಕ ಇ.ಚಂದ್ರಶೇಖರನ್

ಪಂ. ಸದಸ್ಯರಾದ ಸಿ.ಕುಂಞಮಿನ, ಡಿ. ಸುಮಿತಾ, ಕೆ.ಅಪರ್ಣ, ಜಿಲ್ಲಾ ಮಿಷನ್ ಸಹಾಯಕ ಸಂಯೋಜಕ ಡಿ.ಹರಿದಾಸ್, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ವಿ.ಎಸ್.ಸಫಾ ಮೂರ್ಷಿದಾ ಮಾತನಾಡಿದರು. ಪಂ. ಸಿಡಿಎಸ್ ಅಧ್ಯಕ್ಷೆ ಕೆ.ಅಶ್ವಿನಿ ಸ್ವಾಗತಿಸಿ, ಉದ್ಯಮಿ ಎಲ್.ಆಶಿಫಾ ವಂದಿಸಿದರು.

ನೆಲ್ಲಿಕುಂಜೆ ಶ್ರೀ ದೇವಳದ ಬ್ರಹ್ಮಕಲಶ: ಶ್ರಮದಾನ

ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯ ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಮಾರ್ಚ್ 29ರಿಂದ ಏಪ್ರಿಲ್ 3ರ ತನಕ ಬ್ರಹ್ಮಕಲಶ ವಿಜೃಂಭಣೆಯಿಂದ ನಡೆಯಲಿದ್ದು, ಈ ಕಾರ್ಯಕ್ರಮದ ಪೂರ್ವಭಾವಿಯಾಗಿ ವಾರ್ಡ್ ಸದಸ್ಯ ಮಧುಸೂದನ ಉಕ್ಕಿನಡ್ಕ ನೇತೃತ್ವದಲ್ಲಿ ಶ್ರಮದಾನದ ಮೂಲಕ ಶುಚಿತ್ವ ಕಾರ್ಯವನ್ನು ನೆರವೇರಿಸಲಾಯಿತು.

ಕಾಡುಪೊದೆಗಳ ತೆರವು

ಉಕ್ಕಿನಡ್ಕದಿಂದ ದೇವಸ್ಥಾನಕ್ಕೆ ಸಾಗುವ ರಸ್ತೆಯ ಎರಡೂ ಬದಿಗಳ ಕಾಡುಪೊದೆಗಳನ್ನು ಸಂಪೂರ್ಣವಾಗಿ ತೆರವುಗೊಳಿಸಿದ ಕಾರ್ಯಕರ್ತರು ಹಾಗೂ ಭಕ್ತಜನರು ಪ್ಲಾಸ್ಟಿಕ್ ಮತ್ತು ಇನ್ನಿತರ ವಸ್ತುಗಳನ್ನು ಸಂಗ್ರಹಿಸಿದರು.



ಈ ಸಂದರ್ಭದಲ್ಲಿ ಜನಪ್ರತಿನಿಧಿಗಳು ಸ್ಥಳಕ್ಕೆ ಭೇಟಿ ನೀಡಿದರು. ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ. ಆಗಮಿಸಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಕಾಸರಗೋಡು ಜಿಲ್ಲಾ ಪಂಚಾಯತ್ ಸದಸ್ಯ ಎಂ.ಪಿ.ರಾಮಪ್ಪ ಮಂಜೇಶ್ವರ, ಬ್ಲಾಕ್ ಪಂಚಾಯತ್ ಸದಸ್ಯ ಮಹೇಶ್ ವಳಕ್ಕುಂಜ, ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ರಜನಿ ಸಂದೀಪ್, ವಿವಿಧ ವಾರ್ಡ್‌ಗಳ ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಮೇಗಿನಕಡಾರು, ಉಷಾ ಪಳ್ಳತ್ತಡ್ಕ, ಶ್ಯಾಮಪ್ರಸಾದ ಸರಳಿ, ಪ್ರಮುಖರಾದ ನಾರಾಯಣ ಪೆರಡಾಲ ಜೊತೆಗಿದ್ದರು. ವಾರ್ಡ್ ಸದಸ್ಯ ಮಧುಸೂದನ ಕಂಗಿಲ ಸ್ವಾಗತಿಸಿ, ವಂದಿಸಿದರು.

ಸುತ್ತಮುತ್ತ

ಕುಂದಾಪುರದ ನ್ಯಾಯಾಲಯದಲ್ಲಿ 891 ಪ್ರಕರಣಗಳು ಇತ್ಯರ್ಥ

ಕುಂದಾಪುರ: ತ್ವರಿತವಾಗಿ ಪ್ರಕರಣಗಳನ್ನು ವಿಲೇವಾರಿ ಮಾಡುವ ನಿಟ್ಟಿನಲ್ಲಿ ಹಮ್ಮಿಕೊಂಡ ಲೋಕ ಆದಾಲತ್ ನಲ್ಲಿ ಶನಿವಾರ ಕುಂದಾಪುರದ ನ್ಯಾಯಾಲಯದಲ್ಲಿ ಒಟ್ಟು 891 ಪ್ರಕರಣಗಳು ಇತ್ಯರ್ಥಗೊಂಡಿದ್ದು 5.39 ಕೋ.ರೂ. ಮೊತ್ತವನ್ನು ಪರಿಹಾರ ರೂಪದಲ್ಲಿ ಪಾವತಿಸುವಂತೆ ಆದೇಶಿಸಲಾಗಿದೆ. 17,973 ವ್ಯಾಜ್ಯ ಪೂರ್ವ ಪ್ರಕರಣವನ್ನು ಆದಾಲತ್‌ನಲ್ಲಿ ಇತ್ಯರ್ಥಪಡಿಸಿದ್ದು, ಅದರಲ್ಲಿ ಪರಿಹಾರ ರೂಪದಲ್ಲಿ 95.44 ಲಕ್ಷ ರೂ. ನೀಡುವಂತೆ ಸೂಚಿಸಲಾಗಿದೆ. ಇನ್ನು ಕುಂದಾಪುರದ 891 ಪ್ರಕರಣಗಳ ಪೈಕಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 17 ಪ್ರಕರಣ ಇತ್ಯರ್ಥಗೊಂಡು, 89.65 ಲಕ್ಷ ರೂ. ಪರಿಹಾರ, ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ 54 ಇತ್ಯರ್ಥಗೊಂಡು, 2.56 ಕೋ.ರೂ. ಪರಿಹಾರ, ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ – 100 ಇತ್ಯರ್ಥಗೊಂಡು, 89.28 ಲಕ್ಷ ಪರಿಹಾರ, ಎರಡನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 208 ಇತ್ಯರ್ಥಗೊಂಡು, 58.86 ಲಕ್ಷ ರೂ. ಪರಿಹಾರ ಹಾಗೂ ಒಂದನೇ ಹೆಚ್ಚವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 512 ಪ್ರಕರಣ ಇತ್ಯರ್ಥಗೊಂಡಿದ್ದು 44.73 ಲಕ್ಷ ರೂ. ಪರಿಹಾರ ನೀಡುವಂತೆ ಆದೇಶಿಸಲಾಗಿದೆ.

ಮಾ.18-21: ನಾಗಮಂಡಲೋತ್ಸವ, ಪ್ರತಿಷ್ಠಾ ವರ್ಧಂತ್ಯುತ್ಸವ

ಕುಂದಾಪುರ : ಗುಜ್ಜಾಡಿ ಬೆಣ್ಗೆರೆ ಶ್ರೀ ನಾಗ ದೇವಸ್ಥಾನದಲ್ಲಿ 51ನೇ ನಾಗಮಂಡಲೋತ್ಸವ ಹಾಗೂ ಅಷ್ಟಬಂಧ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಮಾ. 18 ರಿಂದ 21ರವರೆಗೆ ನಡೆಯಲಿದೆ. ಮಾ. 18ರಂದು ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆಯೊಂದಿಗೆ ಧಾರ್ಮಿಕ ವಿಧಿವಿಧಾನಗಳು ಪ್ರಾರಂಭಗೊಳ್ಳಲಿದ್ದು, ಸಂಜೆ 6ಕ್ಕೆ ಸಾಮೂಹಿಕ ಪಂಚದುರ್ಗಾ ದೀಪ ನಮಸ್ಕಾರ ಪೂಜೆ, ಮಂಗಳಾರತಿ ನಡೆಯಲಿದೆ. 19ರಂದು ಸಾರ್ವತ್ರಿಕ ಪವಮಾನ ಕಲಶ ಸ್ಥಾಪನೆ, ಅಭಿಷೇಕ ಪೂಜೆ, ಮಹಾಮಂಗಳಾರತಿ, ಸಂಜೆ ನವೋತ್ತರ ಶತದ್ರವ್ಯಪೂರಿತ ಬ್ರಹ್ಮಕಲಶ ಸ್ಥಾಪನೆ ನಡೆಯಲಿದೆ. 20 ರಂದು ಬೆಳಿಗ್ಗೆ ಸಂಹಿತಾ ಕಲಶ ಸ್ಥಾಪನೆ, ಪಾರಾಯಣ, ಅಧಿವಾಸ ಹೋಮ, ಕಲಶಾಭಿಷೇಕ, ಮಹಾಮಂಗಳಾರತಿ, ನಾಗದರ್ಶನ, ತುಲಾಭಾರ ಸೇವೆ ಇತ್ಯಾದಿಗಳು ನಡೆಯಲಿದ್ದು, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಮಹಾಮಂಗಳಾರತಿ, ಸಾರ್ವಜನಿಕ ಮಹಾ ಅನ್ನಸಂತರ್ಪಣೆ, ಸಂಜೆ 5 ಗಂಟೆಯಿಂದ ರಂಗಪೂಜೆ, ದರ್ಶನ, ನಾಗಮಂಡಲೋತ್ಸವ, ರಾತ್ರಿ 8ಕ್ಕೆ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. 21 ರಂದು ಬೆಳಿಗ್ಗೆ ಸಾರ್ವಜನಿಕ ಶುದ್ಧ ಕಲಶಾಭಿಷೇಕ, ಪೂಜೆ, ಮಹಾಮಂಗಳಾರತಿ ಮೊದಲಾದ ಕಾರ್ಯಕ್ರಮಗಳು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಿರಿಯ ನಾಗರಿಕರ ವೇದಿಕೆ ಕಚೇರಿ ಭೇಟಿ ಸಮಯ ನಿಗದಿ

ಕೋಟ: ಕೋಟ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಟ, ಮಣೂರು, ಗಿಳಿಯಾರು ಗ್ರಾಮಗಳ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮಾಹಿತಿ ಮತ್ತು ನೋಂದಣಿಗಾಗಿ ಕೋಟ ಗ್ರಾಮ ಪಂಚಾಯತ್ ಆವರಣದ ಕೊಠಡಿಯಲ್ಲಿ ವಿಕಲಚೇತನರ ಮತ್ತು ಹಿರಿಯ ನಾಗರಿಕರಿಗೆ ಮಾಹಿತಿ ಮತ್ತು ನೋಂದಣಿಗಾಗಿ ವಾರದ ಸೋಮವಾರ ಮತ್ತು ಗುರುವಾರ ಮಧ್ಯಾಹ್ನ 4 ರಿಂದ 5 ರವರೆಗೆ ಕೇಂದ್ರ ತೆರೆದಿದ್ದು, ಹಿರಿಯ ನಾಗರಿಕರು ಕೇಂದ್ರವನ್ನು ಸಂಪರ್ಕಿಸಿ ಇದರ ಪ್ರಯೋಜನ ಪಡೆದುಕೊಳ್ಳಬೇಕಾಗಿ ವೇದಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಮಾ.17-18: ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ಕಬಡ್ಡಿ

ಕುಂದಾಪುರ : ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ಕಬಡ್ಡಿ (ಉಡುಪಿ ವಲಯ) ಪಂದ್ಯಾವಳಿ ಮಾ.17ಮತ್ತು 18ರಂದು ನಡೆಯಲಿದೆ. ಮಾ.17 ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ವಿಶ್ವಸ್ಥ ಮಂಡಳಿಯ ಉಪಾಧ್ಯಕ್ಷ ಕೆ.ಶಾಂತಾರಾಮ್ ಪ್ರಭು ವಹಿಸಲಿದ್ದಾರೆ. ಉದ್ಯಮಿ ಚಂದ್ರಶೇಖರ ಶೆಟ್ಟಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮಾ. 18ರಂದು ಸಂಜೆ 4.30ಕ್ಕೆ ಬಹುಮಾನ ವಿತರಣೆ ಮತ್ತು ಸಮಾರೋಪ ಸಮಾರಂಭ ನಡೆಯಲಿದ್ದು, ಕಾಲೇಜಿನ ವಿಶ್ವಸ್ಥ ಮಂಡಳಿಯ ಉಪಾಧ್ಯಕ್ಷ ಕೆ.ಶಾಂತಾರಾಮ್ ಪ್ರಭು ಬಹುಮಾನ ವಿತರಣೆ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಂಡಾರ್ಕಾರ್ಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಶುಭಕರಾಚಾರಿ ವಹಿಸಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಸೂರ್ಯನ ಕಿರಣ

ವರ್ಷದ ಕೊನೆಯ ಮಾಸವಾಗಿರುವ ಮೀನ ಸಂಕ್ರಮಣದಂದು ಸೂರ್ಯ ತನ್ನ ಪಥ ಬದಲಿಸುವ ಮಹತ್ವದ ಘಟ್ಟ. ಮೀನ ಸಂಕ್ರಮಣದಂದು ಇಲ್ಲಿ ಸೂರ್ಯನ ರಶ್ಮಿ ದೇವಳದ ಗರ್ಭಗುಡಿ ಸ್ಪರ್ಶಿಸುವ ಪುಣ್ಯದಿನವಾಗಿದೆ. ದೇವಾಲಯದ ಪ್ರಮುಖರಾದ ಜನಾರ್ದನ ಬೆಟ್ಟಿ, ಕೃಷ್ಣಪ್ರಸಾದ್ ಬೆಟ್ಟಿ, ಲಕ್ಷ್ಮೀ ಪ್ರಸಾದ್ ಬೆಟ್ಟಿ, ಲಕ್ಷ್ಮೀ ಅರ್ಪಣ್, ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾಧ್ಯಕ್ಷ ಡಾ.ಕೃಷ್ಣಪ್ರಸನ್ನ ಮತ್ತಿತರರು ದೇವರ ಪುಣ್ಯಕಾರ್ಯದಲ್ಲಿ ಭಾಗಿಯಾದರು.

ಉಡುಪಿ ಜಿಲ್ಲಾಧಿಕಾರಿಗಳಿಂದ ಆದೇಶ | ಸಿದ್ದಾಪುರದಲ್ಲಿ ಠಾಣೆ ನಿರ್ಮಿಸಬೇಕೆಂಬ ಬೇಡಿಕೆಗೆ ಮನ್ನಣೆ

ಅಗ್ನಿಶಾಮಕ ಠಾಣೆ ನಿರ್ಮಾಣಕ್ಕೆ 1 ಎಕ್ರೆ ಜಾಗ ಮಂಜೂರು

ಕುಂದಾಪುರ: ಗ್ರಾಮೀಣ ಪ್ರದೇಶದ ಹತ್ತಾರು ಗ್ರಾಮಗಳಿಗೆ ತುರ್ತು ಸಂದರ್ಭದಲ್ಲಿ ಸೇವೆ ದೊರಕಲು ಸಿದ್ದಾಪುರದಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪಿಸಬೇಕೆಂಬ ಹಲವು ವರ್ಷಗಳ ಬೇಡಿಕೆಗೆ ಇದೀಗ ಈಡೇರಿದೆ. ಹೊಸ ಅಗ್ನಿಶಾಮಕ ದಳ ಠಾಣೆ ನಿರ್ಮಾಣಕ್ಕಾಗಿ ಸಿದ್ದಾಪುರದಲ್ಲಿ ಒಂದು ಎಕರೆ ಜಾಗ ಮಂಜೂರುಗೊಳಿಸಿ, ಉಡುಪಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಹೆಚ್ಚುತ್ತಿದೆ ಅಗ್ನಿ ಅವಘಡಗಳು

ಜಿಲ್ಲೆಯ ಪ್ರಮುಖ ತಾಲೂಕು ಕೇಂದ್ರಗಳಾದ ಕುಂದಾಪುರ, ಬೈಂದೂರು, ಹೆಬ್ರಿ ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಅಗ್ನಿ ಅವಘಡಗಳು ಹೆಚ್ಚುತ್ತಿವೆ. ಕುಂದಾಪುರ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಅಗ್ನಿ ಶಾಮಕ ಠಾಣೆ ನಿರ್ಮಿಸಬೇಕು. ಇದರಿಂದ ಈ ವ್ಯಾಪ್ತಿಯಲ್ಲಿ ಯಾವುದೇ ಆಕಸ್ಮಿಕ ಅವಘಡಗಳಾದಲ್ಲಿ ಶೀಘ್ರ ಸ್ಪಂದನೆ ಸಾಧ್ಯವಿದೆ ಎಂಬ ಕೂಗು ಹಲವು ವರ್ಷಗಳದ್ದಾಗಿತ್ತು. ಈ ಬಗ್ಗೆ ಮಂಗಳೂರು ವಲಯ ಪ್ರಾದೇಶಿಕ ಅಗ್ನಿ ಶಾಮಕ ಅಧಿಕಾರಿಗಳು 2024ರಲ್ಲಿ ಜಾಗಕ್ಕೆ ಬೇಡಿಕೆಯಿರಿಸಿ



ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದರು. ಪ್ರಸ್ತುತ ಸಿದ್ದಾಪುರ ಗ್ರಾಮದ ಸರ್ವೇ ನಂಬರ್ 244 ರಲ್ಲಿ 1 ಎಕರೆ ಜಮೀನನ್ನು ಅಗ್ನಿಶಾಮಕ ಠಾಣೆ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯ ಹೆಸರಿನಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71 ರನ್ವಯ ಜಿಲ್ಲಾಧಿಕಾರಿಗಳು ಜಾಗ ಮಂಜೂರುಗೊಳಿಸಿದ್ದು ಶೀಘ್ರ ಠಾಣೆ ನಿರ್ಮಾಣವಾದಲ್ಲಿ ಈ ಭಾಗದ ಹತ್ತಾರು ಊರುಗಳಿಗೆ ಪ್ರಯೋಜನವಾಗಲಿದೆ.



> ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಮಲೆನಾಡು ತಪ್ಪಲು ಪ್ರದೇಶವಾದ ಸಿದ್ದಾಪುರ ಭಾಗದಲ್ಲಿ ಬಹು ಬೇಡಿಕೆ ಇದ್ದ ಅಗ್ನಿ ಶಾಮಕ ಠಾಣೆಗೆ ಜಿಲ್ಲಾಧಿಕಾರಿಗಳ ಮೂಲಕ ಜಾಗ ಮಂಜೂರು ಮಾಡಲಾಗಿದೆ ಹಾಗೂ ಮುಂದಿನ ದಿನಗಳಲ್ಲಿ ಆ ಭಾಗದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸುಸಜ್ಜಿತವಾದ ಅಗ್ನಿ ಶಾಮಕ ಠಾಣೆ ನಿರ್ಮಾಣಕ್ಕೆ ಪ್ರಯತ್ನಿಸಲಾಗುವುದು.
> ● **ಗುರುರಾಜ್ ಶೆಟ್ಟಿ ಗಂಟಿಹೊಳೆ,** ಶಾಸಕರು, ಬೈಂದೂರು ವಿಧಾನಸಭಾ ಕ್ಷೇತ್ರ

ಸಿದ್ದಾಪುರ, ಹೊಸಂಗಡಿ, ಬಾಳೆಬರೆ ಘಾಟಿ ಪ್ರದೇಶ, ಹಾಲಾಡಿ, ಅಮಾಸೆಬೈಲು, ಬೆಳ್ವೆ, ಗೋಳಿಯಂಗಡಿ ಭಾಗದಲ್ಲಿ ಏನಾದರೂ ಅವಘಡಗಳಾದರೆ 25–30 ಕಿ.ಮೀ. ಅಂತರವಿರುವ ಕುಂದಾಪುರ (ಕೋಣಿ)

> ಅಗ್ನಿಶಾಮಕ ಠಾಣೆಗೆ ಕಾಯ್ದಿರಿಸಿದ ಜಾಗವು ಸಿದ್ದಾಪುರ ಪೇಟೆಯಿಂದ 350-400 ಮೀಟರ್ ಅಂತರದಲ್ಲಿದೆ. ಇಲ್ಲಿ ತುರ್ತು ಸೇವೆಗಳ ಅಗ್ನಿಶಾಮಕ ಠಾಣೆಯಾವುದರಿಂದ ಹಲವು ಗ್ರಾಮಗಳಿಗೆ ಅನುಕೂಲವಾಗುತ್ತದೆ. ಅಲ್ಲದೆ ಕರಾವಳಿ-ಮಲೆನಾಡು ಸಂಪರ್ಕ ಕೊಂಡಿಯಾದ ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಬಾಳೆಬರೆ ಘಾಟಿ ಇನ್ನೂ ಅನೇಕ ಕಡೆಗಳಿಗೆ ಅಗತ್ಯ ಸಂದರ್ಭದಲ್ಲಿ ಸೇವೆ ಸಿಗಲಿದೆ. ಶೀಘ್ರ ಠಾಣೆ ನಿರ್ಮಾಣ ಕಾರ್ಯ ನಡೆಯಬೇಕು.
> ● **ಸುದರ್ಶನ್ ಶೆಟ್ಟಿ ಸಿದ್ದಾಪುರ,** ಸಾಮಾಜಿಕ ಕಾರ್ಯಕರ್ತರು

ಅಥವಾ ದೂರದ ಕಾರ್ಕಳದಿಂದ ಬರಬೇಕು. ಸಿದ್ದಾಪುರದಲ್ಲಿ ಅಗ್ನಿಶಾಮಕ ಠಾಣೆಯಾಗುವುದರಿಂದ ಅವಿಭಜಿತ ಕುಂದಾಪುರ ತಾಲೂಕಿನ ಬೆಳೆಯುತ್ತಿರುವ ಪೇಟೆಯಾದ ಸಿದ್ದಾಪುರ ಸಹಿತ ಹೊಸಂಗಡಿ, ಅಜ್ರಿ, ಹಳ್ಳಿಹೊಳೆ, ಕಮಲಶಿಲೆ, ಎಡಮೊಗ್ಗೆ, ಅಮಾಸೆಬೈಲು, ಗೋಳಿಯಂಗಡಿ, ಬೆಳ್ವೆ, ಉಳ್ಳೂರು 74, ಅಂಪಾರು, ಹಾಲಾಡಿ, ಶಂಕರನಾರಾಯಣ, ಮಡಾಮಕ್ಕಿ ಮೊದಲಾದ ಕಡೆಗಳಿಗೆ ಹಾಗೂ ಹೆಬ್ರಿ ತಾಲೂಕಿನ ಹಲವು ಗ್ರಾಮಗಳಿಗೆ ಅನುಕೂಲ.

ಸರ್ಕಾರಕ್ಕೆ ಶಾಸಕರಿಂದ ಒತ್ತಾಯದ ಫಲ

ಈ ಭಾಗದಲ್ಲಿ ಗೇರು ಬೀಜ, ಹಂಚಿನ ಕಾರ್ಖಾನೆಗಳು, ಅಡಿಕೆ ಗೋದಾಮುಗಳು, ಆಯಿಲ್ ಮಿಲ್‌ಗಳು ಕಾರ್ಯಾಚರಿಸುತ್ತಿದೆ. ಕೆಲ ತಿಂಗಳ ಹಿಂದೆ ಸಿದ್ದಾಪುರದಲ್ಲಿನ ಎಣ್ಣೆ ಮಿಲ್ಲಿನಲ್ಲಿ ಬೆಂಕಿ ಆಕಸ್ಮಿಕ ಘಟನೆ ಸಂಭವಿಸಿ ಅಪಾರ ನಷ್ಟವಾಗಿತ್ತು. ಬಳಿಕ ಗ್ರಾಮೀಣ ಭಾಗಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಅಗ್ನಿಶಾಮಕ ಠಾಣೆ ನಿರ್ಮಿಸಬೇಕೆಂಬ ಕೂಗು ಮುನ್ನೆಲೆಗೆ ಬಂದಿತ್ತು. ಕಳೆದ ಜನವರಿಯಲ್ಲಿ ನಡೆದ ವಿಧಾನ ವಿಶೇಷ ಅಧಿವೇಶನದಲ್ಲಿ ಅಗ್ನಿ ಶಾಮಕ ದಳವನ್ನು ಮೇಲ್ದರ್ಜೆಗೇರಿಸಲು ಹಾಗೂ ಹೊಸ ಅಗ್ನಿ ಶಾಮಕ ಠಾಣೆಗಳ ಬೇಡಿಕೆ ಪೂರೈಸಲು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಸರಕಾರವನ್ನು ಒತ್ತಾಯಿಸಿದ್ದರು.

'ಆದಿದ್ವಾರ ಜಾಬ್ ಹಬ್ಬ' ಉದ್ಘಾಟಿಸಿ ಶಾಸಕ ಗುರುರಾಜ್ ಸಲಹೆ

ಜೀವನ ಸುಧಾರಣೆಗೆ ತಾಂತ್ರಿಕ ಜ್ಞಾನ ಅಗತ್ಯ

ಕುಂದಾಪುರ: ಇತ್ತೀಚಿನ ದಿನಗಳಲ್ಲಿ ತಾಂತ್ರಿಕತೆ ಬಹಳಷ್ಟು ಬೆಳವಣಿಗೆ ಆಗುತ್ತಿದೆ. ತಂತ್ರಜ್ಞಾನ ಬಂದಾಗ ನಮ್ಮ ಕೊರತೆ ಕಡಿಮೆಯಾಗುತ್ತಾ ಹೋಗಬೇಕು. ತಂತ್ರಜ್ಞಾನದ ಸಹಾಯ ಪಡೆದುಕೊಂಡು ನಮ್ಮ ಜೀವನ ಸುಧಾರಿಸಿಕೊಳ್ಳಬೇಕು. ತಾಂತ್ರಿಕ ಜ್ಞಾನ ಅತೀ ಅಗತ್ಯವಾಗಿದ್ದು ಅದರ ಸದುಪಯೋಗ ಪಡೆಯಲು ಮುಂದಾಗ ಬೇಕು ಎಂದು ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಹೇಳಿದರು.

ಸಮೃದ್ಧ ಬೈಂದೂರು ಸಹಕಾರದೊಂದಿಗೆ ಅಸಿಸ್ಟ್ ಟೆಕ್ ಫೌಂಡೇಶನ್ ಇವರ ನೇತೃತ್ವದಲ್ಲಿ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕರ್ನಾಟಕ ಸರಕಾರ ಸಹಯೋಗದಲ್ಲಿ ಕುಂದಾಪುರ ಮೂಡ್ಲಕಟ್ಟೆಯ ಎಂಐಟಿ ಕಾಲೇಜಿನಲ್ಲಿ ಶನಿವಾರ ನಡೆದ ವಿಶೇಷಚೇತನರಿಗಾಗಿ ಉದ್ಯೋಗ ಹಬ್ಬ 'ಆದಿದ್ವಾರ ಜಾಬ್ ಹಬ್ಬ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಯೋಗ ದೊರೆಯುತ್ತಿಲ್ಲ

ಅಸಿಸ್ಟ್‌ಟೆಕ್ ಫೌಂಡೇಶನ್‌ನ ಸಿಇಒ ಮತ್ತು ಸಹ ಸಂಸ್ಥಾಪಕ ಪ್ರತೀಕ್ ಮಾಧವ್ ಮಾತನಾಡಿ, ದೇಶದಲ್ಲಿರುವ ಶೇ.70ರಷ್ಟು ವಿಶೇಷಚೇತನರಿಗೆ ಕೌಶಲ್ಯ ಇದ್ದರೂ ಉದ್ಯೋಗ ದೊರೆಯುತ್ತಿಲ್ಲ. ವಿಶೇಷಚೇತನರು ಬೇರೆಯವರ ಮೇಲೆ



> **ಕರುಣೆ ಬೇಡ, ದಾರಿ ತೋರಿಸಿ**
> ವಿಶೇಷಚೇತನರಿಗೆ ಕರುಣೆ ತೋರಿಸಬೇಡಿ ಅವರಿಗೆ ದಾರಿ ತೋರಿಸಿ. ಸಂಸ್ಥೆಗಳು ದಿವ್ಯಾಂಗರಿಗೆ ಉದ್ಯೋಗ ನೀಡುವಂತಾಗಬೇಕು. ದಿವ್ಯಾಂಗರಿಗೆ ಸರಿಯಾದ ಉದ್ಯೋಗ ನೀಡಿದರೆ ಅವರು ಜೀವನದಲ್ಲಿ ಎದ್ದು ನಿಲ್ಲುತ್ತಾರೆ.
> ● **ಗುರುರಾಜ್ ಶೆಟ್ಟಿ ಗಂಟಿಹೊಳೆ ಶಾಸಕ**

ಅವಲಂಬಿತರಾಗದೆ, ಅವರು ಇತರರಿಗೆ ಸಮಾನರಾಗಿ ಸಮಾಜದಲ್ಲಿ ದೇಶದಲ್ಲಿ ಬೆಳೆಯುವಂತಾಗಬೇಕು. ದಿವ್ಯಾಂಗರ ಅಭಿವೃದ್ಧಿಗೆ ಸರಕಾರ ಅನೇಕ ಯೋಜನೆಗಳನ್ನು ರೂಪಿಸಿದ್ದು, ಅವರು ತಂತ್ರಜ್ಞಾನ ಬಳಸಿಕೊಂಡು ಸರಕಾರದ ಯೋಜನೆಗಳ ಸದುಪಯೋಗ ಪಡೆದುಕೊಂಡು ಸದೃಢರಾಗಬೇಕಿದೆ ಎಂದರು.

ಉಡುಪಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಅನುರಾಧ ಹಾದಿಮನೆ, ಉಡುಪಿ ಜಿಲ್ಲಾ ವಿಶೇಷಚೇತನರ ಅಭಿವೃದ್ಧಿ ಇಲಾಖೆ ಅಧಿಕಾರಿ ರತ್ನ, ಸುಮುಖ ಎಜ್ಯುಕೇಶನ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಬಿ.ಎಸ್. ಸುರೇಶ ಶೆಟ್ಟಿ, ಮೂಡ್ಲಕಟ್ಟೆ ಎಂಐಟಿ ಕಾಲೇಜಿನ ಪ್ರಾಂಶುಪಾಲ ಡಾ.ರಾಮಕೃಷ್ಣ ಹೆಗ್ಡೆ, ರೋಬೋಟೆಕ್ ಕೈಯನ್ನು ಕಂಡು ಹಿಡಿದ ರಿಶಿ ಸಹಿತ ಮೊದಲಾದವರು ಉಪಸ್ಥಿತರಿದ್ದರು. ಜ್ಞಾನಜ್ಯೋತಿ ಅಕಾಡೆಮಿ ನಿರ್ದೇಶಕ ಸತ್ಯನಾರಾಯಣ ಸ್ವಾಗತಿಸಿದರು. ಲಾವಣ್ಯ ಮತ್ತು ಆಸ್ತಿಕ ಕಾರ್ಯಕ್ರಮ ನಿರ್ವಹಿಸಿದರು. ಸೂಕ್ಷ್ಮ ಅಡಿಗ ಸಹಕರಿಸಿದರು.

ವಿಶ್ವ ಗ್ರಾಹಕರ ದಿನಾಚರಣೆಯಲ್ಲಿ ಅಬೀದ್ ಗದ್ಯಾಳ ಅಭಿಪ್ರಾಯ

ಪ್ರಶ್ನೆ ಮಾಡುವ ಪ್ರವೃತ್ತಿಯಿಂದ ಪರಿಹಾರ ಸಾಧ್ಯ

ಉಡುಪಿ: ನಿತ್ಯ ಜೀವನದಲ್ಲಿ ಒಂದಲ್ಲ ಒಂದು ಉತ್ಪನ್ನವನ್ನು ಉಪಯೋಗಿಸುವ ನಾವೆಲ್ಲರೂ ಗ್ರಾಹಕರು. ನಾವು ಉಪಯೋಗಿಸುವ ಉತ್ಪನ್ನಗಳಿಂದ ನಮ್ಮ ಮೇಲಾಗುವ ಪರಿಣಾಮಗಳ ಅರಿವು ಇರಬೇಕು. ನಮ್ಮಲ್ಲಿ ಪ್ರಶ್ನೆ ಮಾಡುವ ಪ್ರವೃತ್ತಿ ಹೆಚ್ಚಿದ್ದಾಗ ಪರಿಹಾರ ದೊರೆಯುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ ಹೇಳಿದರು.

ಅವರು ಜಿಲ್ಲಾಡಳಿತ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಬಳಕೆದಾರರ ವೇದಿಕೆ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಕುಂಜಿಬೆಟ್ಟು ವೈಕುಂಠ ಬಾಳಿಗ ಕಾನೂನು ಕಾಲೇಜಿನಲ್ಲಿ ನಡೆದ ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದು ನಾವು ಜಾಹೀರಾತುಗಳ ಪ್ರಭಾವಕ್ಕೆ ಒಳಗಾಗಿ ಅಗತ್ಯವಿಲ್ಲದ ಉತ್ಪನ್ನಗಳನ್ನು ಖರೀದಿಸುತ್ತೇವೆ. ಸೌಂದರ್ಯವರ್ಧಕ ವಸ್ತುಗಳಿಂದ ಯಾರೂ ಬಿಳಿ ಆಗುವುದಿಲ್ಲ ಎಂದು ಗೊತ್ತಿದ್ದರೂ ಅವುಗಳನ್ನು ಖರೀದಿಸುತ್ತೇವೆ. ವ್ಯಕ್ತಿಯ ವ್ಯಕ್ತಿತ್ವ ಆತನ ಆತ್ಮವಿಶ್ವಾಸ ಮುಖ್ಯ ಹೊರತು, ಆತನ ಬಣ್ಣ ಮುಖ್ಯವಲ್ಲ ಎಂದರು.

ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ



ಆಯೋಗದ ಅಧ್ಯಕ್ಷ ಸುನೀಲ ತಿ ಮಾಸರೆಡ್ಡಿ ಮಾತನಾಡಿ, ನ್ಯಾಯಾಂಗ ವ್ಯವಸ್ಥೆಯಲ್ಲಿ ತಮ್ಮ ಭವಿಷ್ಯ ಕಂಡುಕೊಳ್ಳಲು ಹೊರಟಿರುವ ಕಾನೂನು ವಿದ್ಯಾರ್ಥಿಗಳಿಗೆ ಗ್ರಾಹಕ ಕಾನೂನುಗಳ ಬಗ್ಗೆ ಅರಿವು ಇರಬೇಕು. ನಮ್ಮಲ್ಲಿ ಜಾಗೃತಿ ಇದ್ದಾಗ ಪ್ರಶ್ನೆ ಮಾಡುವುದು ಮತ್ತು ಪರಿಹಾರ ದೊರಕಿಸಿ ಕೊಡುವುದು ಸಾಧ್ಯ. ನೈಜ ದೂರುಗಳು ಬಂದಾಗ ಖಂಡಿತವಾಗಿಯೂ ಪರಿಹಾರ ದೊರಕುತ್ತದೆ. ನ್ಯಾಯಾಲಯಕ್ಕೆ ಬಂದ ಪ್ರಕರಣಗಳನ್ನು 90 ದಿನಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಕೆಲವು ತಾಂತ್ರಿಕ ತೊಡಕುಗಳು ಇದ್ದಾಗ ಮಾತ್ರ ವಿಳಂಬವಾಗುತ್ತಿದೆ. ಕಾನೂನುಗಳ ತಿದ್ದುಪಡಿಯಿಂದ ಶೀಘ್ರ ನ್ಯಾಯದಾನ ಸಾಧ್ಯವಾಗಿದೆ ಎಂದ ಅವರು ಉತ್ಪನ್ನ ತಯಾರಕರು ತಮ್ಮ ಉತ್ಪನ್ನಗಳಿಗೆ ಜವಾಬ್ದಾರರು. ಕೆಟ್ಟ ಉತ್ಪನ್ನಗಳಿಂದ ವ್ಯಕ್ತಿ ಅಥವಾ ಆಸ್ತಿಗಳಿಗೆ ಹಾನಿ ಆದಾಗ ಪರಿಹಾರ ಕೇಳುವ ಹಕ್ಕಿದೆ ಎಂದರು.

ಕಾನೂನು ಮಾಪನ ಶಾಸ್ತ್ರ ಇಲಾಖೆ ಸಹಾಯಕ ನಿಯಂತ್ರಕ ದೇವರಾಜ್ ಟಿ. ಎನ್, ಬಳಕೆದಾರರ ವೇದಿಕೆ ಸಂಚಾಲಕ ಯು.ಜಿ. ಕಾಮತ್, ಕಾನೂನು ಅಭಿರಕ್ಷಕ ರಾಜು ಪೂಜಾರಿ, ವೈಕುಂಠ ಬಾಳಿಗ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲೆ ಸುರೇಖಾ ಕೆ., ಆಯೋಗದ ಸದಸ್ಯೆ ಸುಜಾತ ಬಸವರಾಜ ಕೋರಳ್ಳಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಸಹ ಸಂಚಾಲಕ ಪ್ರೊ. ನಾರಾಯಣ ಕೆ. ಪ್ರಾಸ್ತಾವಿಕವಾಗಿಮಾತನಾಡಿದರು. ಆಹಾರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕ ರವೀಂದ್ರ ಸ್ವಾಗತಿಸಿ, ಬಳಕೆದಾರರ ವೇದಿಕೆ ವಿಶ್ವಸ್ಥ ಹರಿಕೃಷ್ಣ ಶಿವತ್ತಾಯ ನಿರೂಪಿಸಿ, ಬಳಕೆದಾರರ ವೇದಿಕೆ ವಿಶ್ವಸ್ಥ ರಾಮ ಭಟ್ ಕಾರ್ಯಕ್ರಮ ವಂದಿಸಿದರು.

ಕಾಪು ದಂಡತೀರ್ಥ ವಿದ್ಯಾಸಂಸ್ಥೆಯಲ್ಲಿ ಸಂಸ್ಥಾಪಕರ 'ಸಂಸ್ಮರಣಾ' ದಿನಾಚರಣೆ



ಕಾಪು: ದಂಡತೀರ್ಥ ವಿದ್ಯಾಸಂಸ್ಥೆಯಲ್ಲಿ ಕನ್ನಡ ಮಾಧ್ಯಮ ಶಾಲೆಯ ಸಂಸ್ಥಾಪಕರಾದ ಕೀರ್ತಿಶೇಷ ಮುದ್ದಣ್ಣ ಶೆಟ್ಟರ ಸಂಸ್ಮರಣಾ ದಿನಾಚರಣೆಯನ್ನು ಆಚರಿಸಲಾಯಿತು.

ವಿದ್ಯಾಸಂಸ್ಥೆಯ ಸಂಚಾಲಕ ಡಾ. ಕೆ. ಪ್ರಶಾಂತ್ ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿ, ಕಾಪು ಗ್ರಾಮೀಣ ಪರಿಸರದಲ್ಲಿ 109 ವರ್ಷಗಳ ಹಿಂದೆ ಪ್ರಾರಂಭಗೊಂಡ ಈ ವಿದ್ಯಾಸಂಸ್ಥೆ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಇದರಿಂದಾಗಿ ಸಂಸ್ಥಾಪಕರು ನಮಗೆ ಆದರ್ಶಪ್ರಾಯರಾಗಿದ್ದಾರೆ. ಅವರ ದೂರದರ್ಶಿತ್ವ ಸಾವಿರಾರು ಮಕ್ಕಳಿಗೆ ಹಾಗೂ ಕುಟುಂಬಗಳಿಗೆ ಆಧಾರಸ್ತಂಭವಾಗಿ ಮೂಡಿ ಬಂದಿದ್ದು ಅವರನ್ನು ಸ್ಮರಿಸುವುದು ನಮ್ಮ ಕರ್ತವ್ಯ ಎಂದರು.

ಪ್ರಾಂಶುಪಾಲರಾದ ನೀಲಾನಂದ ನಾಯ್ಕ್ ಅವರು ಸಂಸ್ಥಾಪಕರ ಜೀವನದ ಆದರ್ಶಗಳನ್ನು ವ್ಯಕ್ತಪಡಿಸಿ, ಅವರ ಜೀವನ ಆದರ್ಶ, ವ್ಯಕ್ತಿತ್ವದ ಬಗ್ಗೆ ಮಾತನಾಡಿದರು.

ಸಮಾರಂಭದಲ್ಲಿ ಕನ್ನಡ ಮಾಧ್ಯಮ ವಿಭಾಗದ ಮುಖ್ಯಸ್ಥೆ ಕೃಪಾ ಅಮ್ಮನ್ನ, ದೈಹಿಕ ಶಿಕ್ಷಣ ಶಿಕ್ಷಕ ಪ್ರಭಾಕರ ಶೆಟ್ಟಿ,ಶಿಕ್ಷಕ ಶಿಕ್ಷಕೇತರರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಆಂಗ್ಲ ಮಾಧ್ಯಮ ಪ್ರಾಥಮಿಕ ವಿಭಾಗದ ಮುಖ್ಯಸ್ಥರಾದ ಗೇಬ್ರಿಯಲ್ ಫ್ರೆಂಕೀ ಮಸ್ಕರೇನ್ಹಸ್ ಇವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಿಕ್ಷಣ ಸಂಯೋಜಕ ಶಿವಣ್ಣ ಬಾಯರ್ ಕಾರ್ಯಕ್ರಮ ವಂದಿಸಿದರು.

ಬೈಂದೂರಿನಲ್ಲಿ ಹೊಸ ಬಸ್ ಡಿಪೋ ನಿರ್ಮಾಣ: ಸಚಿವರಿಂದ ಸಿಕ್ಕಿತು ಭರವಸೆ

ಬೈಂದೂರು: ವಿಧಾನ ಮಂಡಲದ ಬಜೆಟ್ ಅಧಿವೇಶನದಲ್ಲಿ ಶಾಸಕ ಗುರುರಾಜ್ ಗಂಟಿಹೊಳೆ ಅವರು ಬೈಂದೂರು ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದ ಪಕ್ಕ ನಿಗಮದ ಹೆಸರಿನಲ್ಲಿ ಲಭ್ಯವಿರುವ ಜಾಗದಲ್ಲಿ ಬಸ್ ಡಿಪೋ ನಿರ್ಮಾಣದ ಬಗ್ಗೆ ಸಾರ್ವಜನಿಕರು ಬೇಡಿಕೆ ಸಲ್ಲಿಸಿದ್ದು, ಅಲ್ಲದೇ ಬೈಂದೂರು ತಾಲೂಕು ಕೇಂದ್ರದ ಅಭಿವೃದ್ಧಿಯ ದೃಷ್ಟಿಯಿಂದ ಬಸ್ ಡಿಪೋ ಮಂಜೂರು ಮಾಡುವ ಕುರಿತು ಶಾಸಕರು ಸಚಿವರ ಗಮನ ಸೆಳೆದಿದ್ದಾರೆ.

6.32 ಎಕರೆ ಜಾಗ ಲಭ್ಯ

ಶಾಸಕರ ಪ್ರಶ್ನೆಗೆ ಉತ್ತರಿಸಿದ ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಉತ್ತರಿಸಿ, ಬಸ್ ಡಿಪೋ ಬೇಡಿಕೆಯ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಹಾಗೂ ಬೈಂದೂರಿನಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಪಕ್ಕದಲ್ಲಿ 6.32 ಎಕರೆ ಪ್ರದೇಶದಲ್ಲಿ ಹೊಸದಾಗಿ ಸುಸಜ್ಜಿತ ಬಸ್ ಡಿಪೋ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ. ಈ ಪ್ರದೇಶವು ಕರಾವಳಿ ಭಾಗವಾಗಿದ್ದು, ಈ ಸ್ಥಳವು ಸಮುದ್ರದ ಹಿನ್ನೀರಿನಿಂದ ರೂಪುಗೊಂಡ ಪ್ರದೇಶವಾಗಿದೆ. ಮೃದು ಮಣ್ಣಿನಿಂದ ಕೂಡಿದ್ದು ಭಾರ ಹೊರುವ ಸಾಮರ್ಥ್ಯವು ಕಡಿಮೆ ಇರುವುದರಿಂದ ಹಾಗೂ ಬಸ್ ನಿಲ್ದಾಣಕ್ಕೆ ಆರ್‌ಸಿಸಿ ಫೌಂಡೇಶನ್ ಒದಗಿಸಿದಂತೆ ಘಟಕದ ಪ್ರದೇಶಕ್ಕೂ ಇದೇ ರೀತಿಯಾದ ಆರ್‌ಸಿಸಿ ಫೌಂಡೇಶನ್ ಒದಗಿಸಿ ತಗ್ಗು ಪ್ರದೇಶವನ್ನು ರಸ್ತೆಯ ಮಟ್ಟಕ್ಕೆ ಎತ್ತರಿಸಿ ಘಟಕ ನಿರ್ಮಿಸಲು ವಿಸ್ತೃತ ಯೋಜನಾ ವರದಿ ರೂ.25 ಕೋಟಿಗಳಿಗೆ ತಯಾರಿಸಲಾಗಿದೆ. ನಗರ ಭೂಸಾರಿಗೆ ನಿರ್ದೇಶನಾಲಯದಿಂದ ಆರ್ಥಿಕ ನೆರವು ಪಡೆಯಲು ಪ್ರಸ್ತಾವನೆ ಸಲ್ಲಿಸಲಾಗುತ್ತಿದ್ದು, ಆರ್ಥಿಕ ನೆರವು ಮತ್ತು ಸಾರಿಗೆ ಅವಶ್ಯಕತೆಯನ್ನು ಆಧರಿಸಿ ಬಸ್ ಘಟಕ ನಿರ್ಮಾಣ ಮಾಡುವ ಬಗ್ಗೆ ಆದ್ಯತೆಯ ಮೇಲೆ ಪರಿಶೀಲಿಸಲಾಗುವುದು ಎಂದು ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.

> **ಎಲ್ಲಾ ಬಸ್‌ಗಳ ನಿಲುಗಡೆಗೂ ಒತ್ತಾಯ**
> ಪ್ರಸ್ತುತ ನೂತನವಾಗಿ ನಿರ್ಮಾಣಗೊಂಡಿರುವ ಬಸ್ ನಿಲ್ದಾಣಕ್ಕೆ ಮಂಗಳೂರಿನ ಕಡೆಯಿಂದ ಬರುವ ಬಸ್ ನಿಲುಗಡೆ ಆಗದೇ ಪ್ರಯಾಣಿಕರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದ ಶಾಸಕರು ಸರ್ವಿಸ್ ರಸ್ತೆ ಹಾಗೂ ಹೈವೇ ಡಿವೈಡರ್ ಸಮಸ್ಯೆಯನ್ನು ಕೂಡ ಶೀಘ್ರ ಸರಿ ಪಡಿಸಲು ಇದೇ ಸಂದರ್ಭದಲ್ಲಿ ಸಚಿವರಿಗೆ ಅಧಿವೇಶನದಲ್ಲಿ ಶಾಸಕರು ಮನವಿ ಮಾಡಿದರು.

ಪಡುಬಿದ್ರಿ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಶಾಸಕರಿಂದ ಶಿಲಾನ್ಯಾಸ



ಪಡುಬಿದ್ರಿ: ಕಾಪು ವಿಧಾನಸಭಾ ಕ್ಷೇತ್ರದ ಪಡುಬಿದ್ರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧ ರಸ್ತೆ ಅಭಿವೃದ್ಧಿಗೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ 91 ಲ.ರೂ. ಅನುದಾನ ಮಂಜೂರಾಗಿದ್ದು, ರಸ್ತೆ ಅಭಿವೃದ್ಧಿಗೆ ಶನಿವಾರ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

ಪಡುಬಿದ್ರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಪಾದೆಬೆಟ್ಟು ಸುಬ್ರಮಣ್ಯ ದೇವಸ್ಥಾನ ರಸ್ತೆ ಅಭಿವೃದ್ಧಿ (71 ಲಕ್ಷ) ಇದರ ಉದ್ಘಾಟನೆ ನೆರವೇರಿಸಿ ಪಡುಬಿದ್ರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ನಡ್ಸಾಲು ಕನಪುಕೋಟಿಗೆ ಹೋಗುವ ರಸ್ತೆ – 10 ಲಕ್ಷ, ನಡ್ಸಾಲು ಮುರುಡಿ ಬ್ರಹ್ಮಸ್ಥಾನದಿಂದ ಪಡುಹಿತ್ಲು ನಾರಾಯಣಗುರು ಮಂದಿರ ತನಕ ರಸ್ತೆ ಅಭಿವೃದ್ಧಿ – 10 ಲಕ್ಷ ಸೇರಿದಂತೆ ಒಟ್ಟು 20 ಲಕ್ಷ ರೂಪಾಯಿ ವೆಚ್ಚದ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಜಿ.ಪಂ. ಮಾಜಿ ಸದಸ್ಯ ಶಶಿಕಾಂತ್ ಪಡುಬಿದ್ರಿ, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ನೀತಾ ಗುರುರಾಜ್, ಪಡುಬಿದ್ರಿ ಗ್ರಾಮ, ಮುಖಂಡರಾದ ಪ್ರಕಾಶ್ ಶೆಟ್ಟಿ ಪಾದೆಬೆಟ್ಟು, ಮಿಥುನ್ ಹೆಗ್ಡೆ, ಪಡುಬಿದ್ರಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಶಿವಪ್ರಸಾದ್ ಎಲ್ಲದಡಿ ಹಾಗೂ ಪಡುಬಿದ್ರಿ ಗ್ರಾ.ಪಂ. ಮಾಜಿ ಸದಸ್ಯರಾದ ರವಿ ಶೆಟ್ಟಿ, ಶೋಭಾ ಶೆಟ್ಟಿ, ಸಂದೇಶ್ ಶೆಟ್ಟಿ, ಅಶೋಕ್ ಪೂಜಾರಿ, ಯಶೋಧ, ಮಹೇಂದ್ರ, ಗಣೇಶ್ ಕೋಟ್ಯಾನ್ ಹಾಗೂ ಕಾರ್ಯಕರ್ತರು, ಸ್ಥಳೀಯರು ಉಪಸ್ಥಿತರಿದ್ದರು.

ಬಂಟಕಲ್ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ವಿಶ್ವವಲ್ಲಭತೀರ್ಥ ಶ್ರೀಗಳಿಂದ ಸಂದೇಶ

ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಯುವಪೀಳಿಗೆಯ ಕೊಡುಗೆ ಅಮೂಲ್ಯ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯ, ನಿರಾಮಯ ಕಾಲೇಜ್ ಆಫ್ ನರ್ಸಿಂಗ್ ಮತ್ತು ನಿರಾಮಯ ಕಾಲೇಜ್ ಆಫ್ ಹೆಲ್ತೈಡ್ ಹೆಲ್ತ್ ಸೈನ್ಸ್ ಸಂಸ್ಥೆಗಳು ಜಂಟಿಯಾಗಿ ಕಾಲೇಜು ವಾರ್ಷಿಕೋತ್ಸವ ಶುಕ್ರವಾರ ಜರಗಿತು.

ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರು ಸಮಾರಂಭದ ಅಧ್ಯಕ್ಷತೆ ವಹಿಸಿ, ದೂರದೃಷ್ಟಿ ಮತ್ತು ಪರ್ವಭಾವಿ ಯೋಜನೆಯ ಮಹತ್ವವನ್ನು ಮಹಾಭಾರತದ ಕಥೆಯ ಉದಾಹರಣೆ ನೀಡುವ ಮೂಲಕ ವಿವರಿಸಿದರು. ಸೋಮಾರಿತನದಿಂದ ಕಾಲಹರಣ ಮಾಡುವವರಿಗಿಂತ ವ್ಯಕ್ತಿಗಳು ದಾರ್ಶನಿಕರಾಗಲು ಒತ್ತಾಯಿಸಿದರು. ಆತ್ಮನಿರ್ಭರ ಭಾರತವನ್ನು ನಿರ್ಮಿಸುವ ಆಧುನಿಕ ಗುರಿಯೊಂದಿಗೆ



ಯುವಪೀಳಿಗೆಯು ಮುಂದುವರಿಯಬೇಕು ಎಂದು ಕರೆಯಿತ್ತರು.

ತೀರ್ಥಹಳ್ಳಿಯ ಬಾಳಗಾರು ಅಕ್ಷೋಭ್ಯ ಮಹಾಸಂಸ್ಥಾನ ಮಠದ ಕಿರಿಯ ಯತಿ ವರ್ಯ ಶ್ರೀ ಅಕ್ಷೋಭ್ಯ ರಾಮಪ್ರಿಯತೀರ್ಥ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿದರು. ಸಂಸ್ಥೆಯ ಕಾರ್ಯದರ್ಶಿ ರತ್ನಕುಮಾರ್ ಸ್ವಾಗತಿಸಿದರು. ತಾಂತ್ರಿಕ ಕಾಲೇಜಿನ ಪ್ರಾಚಾರ್ಯ ಡಾ. ನಾಗರಾಜ್ ಭಟ್, ನಿರಾಮಯ ಕಾಲೇಜ್ ಆಫ್ ಹೆಲ್ತೈಡ್ ಹೆಲ್ತ್ ಸೈನ್ಸ್ ಪ್ರಾಂಶುಪಾಲ ಶಿವಶಂಕರ್ ಪೈ ಇವರು ಕಾಲೇಜುಗಳ 2025–26ನೇ ಸಾಲಿನ ವಾರ್ಷಿಕ ವರದಿ ಮಂಡಿಸಿದರು.

ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಪ್ರತಿಷ್ಠಾನ, ವಿದ್ಯಾಪ್ರತಿಷ್ಠ ವಿದ್ಯಾರ್ಥಿ ವೇತನ ಹಾಗೂ ಗೌತಮ ಫೌಂಡೇಶನ್‌ನಿಂದ ನೀಡಲ್ಪಟ್ಟ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಅಂತಿಮ ವರ್ಷದ ಉತ್ತಮ ಸಾಧಕ ವಿದ್ಯಾರ್ಥಿಗಳಿಗೆ ಕೊಡುವ 'ಶ್ರೀ ಮಧ್ವ ವಾದಿರಾಜ ಪ್ರಶಸ್ತಿ' ಯನ್ನು ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಅನ್ನಪೂರ್ಣ ಶೆಣೈ, ಗಣಕ ಯಂತ್ರ ವಿಭಾಗದ ನತಾಶ ಲೊಬೋ ಮತ್ತು ಆರ್ಟಿಫೀಶಿಯಲ್ ಇಂಟಲಿಜೆನ್ಸ್ ಮತ್ತು ಮೆಶಿನ್ ಲರ್ನಿಂಗ್ ವಿಭಾಗದ ನಾಗೇಂದ್ರ ಪೈ, ಗಣಕ ಯಂತ್ರ ವಿಭಾಗದ ಸಾತ್ವಿಕ್ ಭಟ್ ಇವರಿಗೆ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ದ್ವಿತೀಯ ಮತ್ತು ತೃತೀಯ ವರ್ಷದ ಉತ್ತಮ ವಿದ್ಯಾರ್ಥಿಗಳಿಗೆ ಹಯವದನ ಪ್ರಶಸ್ತಿಯನ್ನು ನೀಡಲಾಯಿತು. ಡಾಕ್ಟರೇಟ್ ಪದವಿ ಪಡೆದುಕೊಂಡ ಅಧ್ಯಾಪಕರನ್ನು ಗೌರವಿಸಲಾಯಿತು.

ಡಿಸಿ ಎಕ್ಸ್ ಸಂಸ್ಥೆಯ ಮುಖ್ಯಸ್ಥ ಡಾ. ರಾಘವೇಂದ್ರ ರಾವ್, ಸಂಸ್ಥೆಯ ಉಪಾಧ್ಯಕ್ಷ ಶ್ರೀನಿವಾಸ ತಂತ್ರಿ, ಕಾರ್ಯನಿರ್ವಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್ ಐತಾಳ್, ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ರೋಶನಿ ರೊಡ್ರಿಗಸ್, ಕಾಲೇಜಿನ ಪ್ರಾಧ್ಯಾಪಕ ಸಚಿನ್ ಪ್ರಭು, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ರಾಜ ಯತೀಶ್ ಯಾದವ್, ಶೈಕ್ಷಣಿಕ ಡೀನ್ ಡಾ. ಸುದರ್ಶನ್ ರಾವ್ ಮತ್ತು ರಿಸರ್ಚ್ ಡೀನ್ ಡಾ. ಸಚಿನ್ ಭಟ್, ಆಡಳಿತ ಸಲಹಾ ಮಂಡಳಿಯ ಸದಸ್ಯರು , ಇದ್ದರು. ಶರಣ್ಯ ತಂತ್ರಿ ಪ್ರಾರ್ಥಿಸಿದರು. ಪ್ರಾಧ್ಯಾಪಕ ಸುಧೀರ್, ಪ್ರಾಧ್ಯಾಪಕಿ ಕಾವ್ಯಲಕ್ಷ್ಮೀ ನಿರೂಪಿಸಿದರು.